Pandit Teaches the Bible Series

Let's Read OT Poetry and Wisdom books!

Part 2 (Proverbs, Ecclesiastes, Song of Songs, Lamentations)

Kannada Edition

Author: T. Pandit

Translator: R. Prakash Naik

ಕನ್ನಡ ಸತ್ಯವೇದದ ಪುಸ್ತಕಗಳ ಸರಣಿ

ಹಳೇ ಒಡಂಬಡಿಕೆಯ ಪದ್ಯ ಮತ್ತು ಜ್ಞಾನ ಪುಸ್ತಕಗಳನ್ನು ಓದೋಣ!

ಭಾಗ 2

ಪ್ರಧಾನ ಸಂಪಾದಕರು

ಟಿ. ಪಂಡಿತ್

ಲೇಖಕರು

ಟಿ. ಪಂಡಿತ್

ಅನುವಾದಕರು

ಆರ್ ಪ್ರಕಾಶನಾಯ್ಕ್

ಲೇಖಕರ ಪರಿಚಯ

ಓ ಪಂಡಿತ್ ರವರು ಒಬ್ಬ ಶಿಕ್ಷಣತಜ್ಞರಾಗಿಯೂ ಒಬ್ಬ ಸತ್ಯವೇದ ಉಪದೇಶಕರಾಗಿಯೂ ಮತ್ತು ಒಬ್ಬ ಪ್ರಾಂಶುಪಾಲರಾಗಿಯೂ ಅನೇಕ ವರ್ಷಗಳ ಅನುಭವವನ್ನು ಹೊಂದಿದ್ದಾರೆ. ಅವರು ಕನ್ನಡ ಸತ್ಯವೇದ ಮಹಾವಿದ್ಯಾಲಯದೊಂದಿಗೆ, 2006 ರಲ್ಲಿನ ಅದರ ಪ್ರಾರಂಭದಿಂದಲೂ ತಮ್ಮನ್ನು ನಿಕಟವಾಗಿ ತೊಡಗಿಸಿಕೊಂಡಿದ್ದಾರೆ.

ಆರ್. ಪ್ರಕಾಶ್ ನಾಯ್ಕ ರವರು ಒಬ್ಬ ಎಂ.ಎ ಮತ್ತು ಎಂ.ಡಿವ್ ಪದವೀದದರಾಗಿದ್ದು, ಕನ್ನಡ ಸತ್ಯವೇದ ಮಹಾವಿದ್ಯಾಲಯದಲ್ಲಿ 2008 ರಿಂದ ಉಪನ್ಯಾಸಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಅದಲ್ಲದೇ ಅವರು ತಮ್ಮ ಪತ್ನಿ ಪ್ರೇಮಲತಾರೊಂದಿಗೆ ಹೂವಿನ ಹಡಗಲಿಯಲ್ಲಿ ಸಭಾಪಾಲಕರಾಗಿ ದೇವರ ಸೇವೆ ಮಾಡುತ್ತಿದ್ದಾರೆ.

ಈ ಪುಸ್ತಕವು ಮೂಲತಃವಾಗಿ ಆಂಗ್ಲಭಾಷೆಯಲ್ಲಿದ್ದು, ಇದು ಅದರ ಕನ್ನಡದ ತರ್ಜುಮೆಯಾಗಿರುತ್ತದೆ.

ಈ ಪುಸ್ತಕದ ಲೇಖಕರು ಗ್ರಂಥಕರ್ತರಾಗಿ (ಹಣಕಾಸಿನ ಮತ್ತು ನೈತಿಕ) ತಮ್ಮ ಹಕ್ಕನ್ನು ಹೊಂದಿರುತ್ತಾರೆ ಮತ್ತು ತಕ್ಷಣದಿಂದಲೇ ಈ ಪುಸ್ತಕವು ಅವರ ಅಧಿಕಾರಕ್ಕೊಳಪಟ್ಟಿದೆ. ಆದ್ದರಿಂದ ಅವರ ಗಮನಕ್ಕೆ ತರದೆ ಈ ಪುಸ್ತಕವನ್ನು ತಿದ್ದುವುದಾಗಲಿ ಅಥವಾ ನಕಲು ಮಾಡುವುದಾಗಲಿ ಅಥವಾ ನಾಶಮಾಡುವುದಾಗಲಿ ಮಾಡಕೂಡದೆಂದು ತಿಳಿಸಲಾಗಿದೆ.

ಹೊಸ ಪ್ರತಿ ಸೆಪ್ಟೆಂಬರ್ 2025

ಜ್ಞಾನೋಕ್ತಿಗಳು

ಜ್ಞಾನೋಕ್ತಿಗಳ ಪರಿಚಯ

ಗ್ರಂಥಕರ್ತ ಮತ್ತು ಸಮಯ

ಪ್ರಶ್ನೆಗಳು

ಪ್ರಶ್ನೆ 1

ಜ್ಞಾನೋಕ್ತಿ ಪುಸ್ತಕವನ್ನು ಬರೆದವರು ಯಾರು ಮತ್ತು ಸ್ವತಃ ಈ ಪುಸ್ತಕ ಗ್ರಂಥಕರ್ತನ ಬಗ್ಗೆ ಏನೆಂದು ಹೇಳುತ್ತದೆ? ಕೆಳಕಂಡ ವಾಕ್ಯಭಾಗಗಳನ್ನು ನೋಡಿರಿ.

ಅ. ಜ್ಞಾನೋ. 1:1

ಆ. ಜ್ಞಾನೋ. 10:1

ಇ. ಜ್ಞಾನೋ. 22:17

ಈ. ಜ್ಞಾನೋ. 24:23

ಉ. ಜ್ಞಾನೋ. 25:1

ಊ. ಜ್ಞಾನೋ. 30:1

ಋ. ಜ್ಞಾನೋ. 31:1

ಪ್ರಶ್ನೆ 2

ಈ ವಾಕ್ಯಭಾಗಗಳಿಂದ ಜ್ಞಾನೋಕ್ತಿ ಪುಸ್ತಕದ ಬಗ್ಗೆ ನಾವು ಯಾವ ಮುಕ್ತಾಯಕ್ಕೆ ಬರಬಹುದು?

ಪ್ರಶ್ನೆ 3

ಹೆಚ್ಚಿನ ಮಾಹಿತಿ ಸಂಗ್ರಹಗಳೆಲ್ಲಾ ಸೊಲೊಮೋನನಿಂದ ಬಂದಂತೆ ಕಾಣುತ್ತವೆ (1:1–22:6, ಅಧ್ಯಾಯ 25:29). ಆತನು ಯಾರು?

ಪ್ರಶ್ನೆ 4

ಸೊಲೊಮೋನನೊಂದಿಗೆ ಇನ್ನೊಬ್ಬ ವ್ಯಕ್ತಿಯನ್ನು ಸೇರಿಸಿ ಹೇಳಲಾಗಿದೆ. ಆತನು ಯಾರು?

ಪ್ರಶ್ನೆ 5

ಇಲ್ಲಿ ತಿಳಿಸಲಾದ ಇತರ ಗ್ರಂಥಕರ್ತರುಗಳು ಯಾರು? ಅವರ ಬಗ್ಗೆ ನಿಮಗೆ ಏನಾದರೂ ತಿಳಿದಿದೆಯೇ?

ಪ್ರಭೇಧ

ಧರ್ಮಶಾಸ್ತ್ರ, ಇತಿಹಾಸ ಮತ್ತು ಪ್ರವಾದನೆಗಳನ್ನು ಹೊರತುಪಡಿಸಿ **"ಜ್ಞಾನ ಸಾಹಿತ್ಯವನ್ನು"** ನಾವು ಹಳೇ ಒಡಂಬಡಿಕೆಯ ಸಾಹಿತ್ಯದ ಒಂದು ವಿಭಿನ್ನ ಪಭೇಧವನ್ನಾಗಿ ನೋಡಬೇಕಾಗಿದೆ. ಈ ನಾಲ್ಕು ಪ್ರಭೇಧಗಳೂ ಸಹ ದೇವರ ಮಾರ್ಗ ಮತ್ತು ದೇವರ ಜ್ಞಾನವನ್ನು ಕಲಿಯಲು ದೇವಜನರಿಗಾಗಿ ಇರುವ ಸಂಪನ್ಮೂಲಗಳಾಗಿವೆ.

ಹಾಗಾಗಿ **"ಜ್ಞಾನ ಸಾಹಿತ್ಯವನ್ನು ನಾವು ಕಲಿಯುವಾಗ ದೇವರ ಮಾರ್ಗಗಳನ್ನು ಮತ್ತು ದೇವರ ಜ್ಞಾನವನ್ನು ಉತ್ತಮವಾಗಿ ಅರಿತುಕೊಳ್ಳಲು ನಮಗಾಗಿ ಇರುವ ಸಂಪನ್ಮೂಲಗಳಾಗಿ ಉಪಯೋಗಿಸಬೇಕು ಎಂಬುದನ್ನು ನಾವು ಕಲಿಯಬೇಕಿದೆ.

ಜ್ಞಾನದ ಪ್ರಬೇಧವು ಕೇವಲ ಹಳೇ ಒಡಂಬಡಿಕೆಯಲ್ಲಿ ಮಾತ್ರ ಕಂಡುಬರುವುದಿಲ್ಲ. ಸ್ವತಃ ಹಳೇ ಒಡಂಬಡಿಕೆಯೇ ಬೇರೆ ರಾಷ್ಟ್ರಗಳ ಜ್ಞಾನಗಳನ್ನು ಸೂಚಿಸುತ್ತದೆ.

- ಐಗುಪ್ತ: "ಬೆಳಿಗ್ಗೆ ಅವನು ಮನದಲ್ಲಿ ಕಳವಳಗೊಂಡು ಐಗುಪ್ತ ದೇಶದಲ್ಲಿದ್ದ ಎಲ್ಲಾ ಜೋಯಿಸರನ್ನೂ ವಿದ್ವಾಂಸರನ್ನೂ ಕರಸಿ" (ಆದಿಕಾಂಡ. 41:8). ಅಲ್ಲದೇ ವಿಮೋ. 7:11, 1 ಅರಸು 4:30 ಅನ್ನು ನೋಡಿರಿ.

- ಬಾಬೆಲ್: "ನಾನು ಅದರ ಪ್ರಧಾನರು, ಮಂತ್ರಿಗಳು, ಅಧಿಪತಿಗಳು, ಅಧಿಕಾರಿಗಳು, ಬಲಿಷ್ಠರು, ಇವರೆಲ್ಲರಿಗೂ ತಲೆಗೇರ ಕುಡಿಸುವೆನು" (ಯೆರೆಮೀಯ. 51:57). ಯೆರೆಮೀಯ. 50:35, ಯೆಶಾಯ 44:25 ಅನ್ನು ನೋಡಿರಿ.

- ಎದೋಮ್: ಯೆಹೋವನು ಇಂತೆನ್ನುತ್ತಾನೆ. "ಆ ದಿನದಲ್ಲಿ ನಾನು ಎದೋಮಿನೊಳಗಿಂದ ಜ್ಞಾನಿಗಳನ್ನು ಅಳಿಸದೆ ಬಿಟ್ಟೇನೋ?" (ಓಬದ್ಯ ವಚನ 8). ಯೆರೆಮೀಯ. 49:7 ಅನ್ನು ನೋಡಿರಿ.

ಜ್ಞಾನೋಕ್ತಿ ಪುಸ್ತಕದ ಭಾಗಗಳು ಮತ್ತು ಐಗುಪ್ತ್ಯರ ಜ್ಞಾನದ ಸಂಗ್ರಹಗಳ ನಡುವೆ ಅನೇಕ ಸಮಾನತೆಗಳಿವೆ. ಆ ದಿನಗಳಲ್ಲಿ ಮಧ್ಯಪ್ರಾಂತ್ಯದ ಬೇರೆ ಬೇರೆ ಭಾಗಗಳ ನಡುವೆ ಪ್ರಯಾಣ ಮತ್ತು ಸಂಸ್ಕೃತಿಯ ವಿನಿಮಯ ಇದ್ದುದ್ದರಿಂದ ನಾವು ಇದರ ಬಗ್ಗೆ ಅಚ್ಚರಿಪಡಬೇಕಿಲ್ಲ, ಅರಸನಾದ ಸೊಲೊಮೋನನನ್ನು ಸಂಧಿಸಲು ಮತ್ತು ಆತನ ಜ್ಞಾನದ ಬಗ್ಗೆ ಹೆಚ್ಚಾಗಿ ತಿಳಿದುಕೊಳ್ಳಲು ಹೇಗೆ ಶೆಬದ ರಾಣಿಯು ಬಂದಳು ಎಂಬುದನ್ನು ಜ್ಞಾಪಿಸಿಕೊಳ್ಳಿರಿ (1 ಅರಸು. 10).

ಆದರೆ ಅಲ್ಲೊಂದು ದೊಡ್ಡ ವ್ಯತ್ಯಾಸವಿದೆ. ಐಗುಪ್ತ, ಬಾಬೆಲ್, ಎದೋಮ್ ಮತ್ತು ಉಳಿದ ದೇಶಗಳ ಜ್ಞಾನವು ಅವರ ದೇವರ, ಧೈರ್ಯ ಮತ್ತು ನಂಬಿಕೆಯನ್ನು ಪ್ರತಿಬಿಂಬಿಸುತ್ತವೆ. ಆದರೆ ಹಳೇ ಒಡಂಬಡಿಕೆ ಜ್ಞಾನವು ಅದೇ ರೀತಿಯ ಪ್ರಶ್ನೆಗಳೊಂದಿಗೆ ವ್ಯವಹರಿಸುತ್ತದೆ. ಆದರೆ ಸಂಪೂರ್ಣವಾಗಿ ವಿಭಿನ್ನವಾದ ದೃಷ್ಟಿಕೋನದಿಂದ:

- ಕರ್ತನು (ಯೆಹೋವನು)

- ಒಡಂಬಡಿಕೆ

ಇದರರ್ಥ ಹಳೇ ಒಡಂಬಡಿಕೆಯ ಜ್ಞಾನವು ಅದು ದೇವರ ಚಿತ್ತಕ್ಕನುಸಾರವಾಗಿ ದೇವಜನರು ತಮ್ಮ ದೈನಂದಿನ ಜೀವನವನ್ನು ಹೇಗೆ ಜೀವಿಸಬೇಕು? ಎಂಬ ಒಂದು ಬಹು ಪ್ರಾಮುಖ್ಯವಾದ ಅಂಶದ ಕಡೆಗೆ ಗಮನಹರಿಸುತ್ತದೆ. ಹಾಗೇ ಹಳೇ ಒಡಂಬಡಿಕೆಯ ಜ್ಞಾನವು ಧಾರ್ಮಿಕ ಜ್ಞಾನವಾಗಿ ವಿನಃ ಸಮಾನ್ಯ ಜ್ಞಾನವಲ್ಲ. ಪ್ರತಿದಿನ ಲೌಕಿಕ ಜೀವನ ಮತ್ತು ಪವಿತ್ರ ಜೀವನವೆಂದು ವಿಭಾಗಿಸಲಾಗುವುದಿಲ್ಲ. ಜೀವಿತವನ್ನು ಇದರ ಸಂಪೂರ್ಣತೆಯ ಮಟ್ಟಿಗೂ ದೇವರ ಮುಂದೆ ಜೀವಿಸಬೇಕಾಗಿದೆ. ಹಳೇ ಒಡಂಬಡಿಕೆಯ ಜ್ಞಾನಸಾಹಿತ್ಯವು ನೀತಿಶಾಸ್ತ್ರ, ವೈಯಕ್ತಿಕ ಮತ್ತು ಸಾಮಾಜಿಕ ನೀತಿಶಾಸ್ತ್ರದ ಮೇಲೆ ಗಮನಹರಿಸುತ್ತದೆ.

ಪ್ರಶ್ನೆ 6

ಸಾಮಾನ್ಯವಾಗಿ ಪ್ರಾಚೀನ ಜ್ಞಾನ ಮತ್ತು ಹಳೇ ಒಡಂಬಡಿಕೆ ಪುಸ್ತಕಗಳಲ್ಲಿ ನಾವು ಕಾಣುವ ಜ್ಞಾನದ ನಡುವಿನ ಪ್ರಾಮುಖ್ಯವಾದ ವ್ಯತ್ಯಾಸವನ್ನು ನಿಮ್ಮದೇ ಮಾತಿನಲ್ಲಿ ವಿವರಿಸಿರಿ.

ರಚನೆ

ಜ್ಞಾನೋಕ್ತಿ ಪುಸ್ತಕದ ಮುಖ್ಯಭಾಗವನ್ನು ಜ್ಞಾನೋಕ್ತಿಗಳ ಒಂದು ಸಂಗ್ರಹವೆಂಬುದಾಗಿ ಅರ್ಥೈಸಿಕೊಳ್ಳಬಹುದು (ಅಥವಾ ಉತ್ತರಗಳು ಅಥವಾ ಜ್ಞಾನದ ಮಾತುಗಳು). ಜ್ಞಾನೋಕ್ತಿಗಳು ಯಾವುದೇ ಪ್ರತ್ಯೇಕ ಕ್ರಮದಲ್ಲಿ ಬರುವುದಿಲ್ಲ: ಆಗಾಗ್ಗೆ ಜ್ಞಾನೋಕ್ತಿಯಿಂದ ಜ್ಞಾನೋಕ್ತಿಗೆ ವಿಷಯವು ಬದಲಾಗಬಹುದು.

ಪ್ರತೀ ಜ್ಞಾನೋಕ್ತಿ ಸಹ ಒಂದು ದೃಷ್ಟಿ, ಒಂದು ಮನೋಭಾವನೆ ಮತ್ತು ಒಂದು ಕ್ರಿಯೆಯನ್ನು ಸೆರೆ ಹಿಡಿಯುತ್ತದೆ. ಅನಂತರ ಇದು ಇದನ್ನು ವಿಮರ್ಶಿಸಬೇಕೆಂದು ಅಲ್ಲದೆ ಇದನ್ನು ಪಾಲಿಸುವುದರ ಮೂಲಕವಾಗಲಿ ಅಥವಾ ಇದಕ್ಕೆ ವಿರೋಧವಾಗಿ ನಡೆಯುವುರ ಮೂಲಕವಾಗಲಿ ಇದರೊಂದಿಗೆ ವ್ಯವಹರಿಸಬೇಕೆಂದು ಇದು ಓದುಗನನ್ನು ಆಮಂತ್ರಿಸುತ್ತದೆ.

ಜ್ಞಾನೋಕ್ತಿ ಪುಸ್ತಕವನ್ನು ರಚನೆಗೊಳಿಸುವ ಒಂದು ಅತ್ಯುತ್ತಮ ವಿಧಾನವೆಂದರೆ – ವಾಕ್ಯ ಭಾಗದಲ್ಲೇ ಗ್ರಂಥಕರ್ತರ ಬಗ್ಗೆ ಕೊಡಲ್ಪಟ್ಟ ಮಾಹಿತಿಗಳ ಮೇಲೆ ಕಟ್ಟುವುದರಿಂದಾಗಿದೆ. ನಾವು ಈ ರೀತಿ ಮಾಡಿದರೆ ಕಡೆಗೆ ಏಳು ವಿಭಾಗಗಳನ್ನು ಮಾಡಬಹುದು.

1. ಸೊಲೊಮೋನನ ಜ್ಞಾನೋಕ್ತಿಗಳ ಮೊದಲ ಸಂಗ್ರಹ, ಅಧ್ಯಾಯ 1–9. ಈ ಅಧ್ಯಾಯಗಳು ಒಂದು ಸ್ಪಷ್ಟವಾದ ಘಟಕವನ್ನು ಒಳಗೊಂಡಿವೆ. ಹಾಗಾಗಿ ಇದೊಂದು ಪುಸ್ತಕವೇ ಆಗಿದೆ. ಹಿನ್ನಲೆಯು ಜ್ಞಾನದ ಶಾಲೆಯು "ಕಂದಾ/ಮಗನೇ ನಿನ್ನ ತಂದೆಯ ಬುದ್ಧಿಮಾತುಗಳಿಗೆ ಕಿವಿಗೊಡು" ಎಂಬ ರೂಪವನ್ನು ಉಪಯೋಗಿಸಿದಂತಿದೆ.

2. ಸೊಲೊಮೋನನ ಜ್ಞಾನೋಕ್ತಿಗಳ ಇನ್ನೊಂದು ಸಂಗ್ರಹ, 10:1–22:16. ಈ ವಿಭಾಗವು ದ್ವಿಪದಿಗಳನ್ನು (ಎರಡು ಸಾಲುಗಳು ಪದ್ಯರೂಪಿ ವಚನಗಳನ್ನು ಒಳಗೊಂಡಿದ್ದು) ಕ್ರಮವಿಲ್ಲದ ಮನುಷ್ಯನ ಸ್ವಭಾವದ ಅನೇಕ ಕ್ಷೇತ್ರಗಳ ಬಗ್ಗೆ ತಿಳಿಸುತ್ತದೆ. ಈ ಕ್ರಮವಿಲ್ಲದಿರುವಿಕೆಯು ಬಹುಶಃ ವಿವಿಧತೆ ಮತ್ತು ಗೊಂದಲಮಯವಾದ ಜೀವನದ ಪ್ರತಿಬಿಂಬವಾಗಿರಬಹುದು. ಎರಡು ಉದಾರಹಣೆಗಳು:

   ಅ. ಅಧ್ಯಾಯ 10: ನೀತಿಯ ಕುರಿತಾದ ಎರಡು ದ್ವಿಪದಿಗಳು (ವಚನ 2–3), ಸೋಮಾರಿತನದ ಕುರಿತಾದ ಎರಡು ದ್ವಿಪದಿಗಳು ಹಿಂದೆ (ವಚನ 4–5), ನೀತಿಯ ಕುರಿತಾದ ಎರಡು ದ್ವಿಪದಿಗಳು (ವಚನ 6–7), ಜ್ಞಾನಿಯ ಕುರಿತಾದ ಒಂದು ದ್ವಿಪದಿ (ವಚನ 8) ಮತ್ತು ಸಾಧಾರಣ ಮನುಷ್ಯನ ಕುರಿತಾದ ಒಂದು ದ್ವಿಪದಿ (ವಚನ 9) ಬರುತ್ತವೆ.

   ಆ. ಅಧ್ಯಾಯ 13: ಜ್ಞಾನಿಯಾದ ಮಗನ ಕುರಿತಾದ ಒಂದು ದ್ವಿಪದಿ (ವಚನ 1), ಬಾಯ ಮಾತಿನ ಕುರಿತಾದ ಎರಡು ದ್ವಿಪದಿಗಳು (ವಚನ 2–3), ಸೋಮಾರಿತನದ ಬಗ್ಗೆ ಒಂದು ದ್ವಿಪದಿ (ವಚನ 4), ನೀತಿಯ ಕುರಿತಾಗಿ ಎರಡು ದ್ವಿಪದಿಗಳು (ವಚನ 5–6), ಐಶ್ವರ್ಯದ ಕುರಿತಾಗಿ ಒಂದು ದ್ವಿಪದಿ (ವಚನ 7), ಧನವಂತಿಕೆಯ ಬಗ್ಗೆ ಒಂದು ದ್ವಿಪದಿ (ವಚನ 8) ಮತ್ತು ನೀತಿಯ ಕುರಿತಾಗಿ ಒಂದು ದ್ವಿಪದಿ (ವಚನ 9).

3. ಜ್ಞಾನಿಗಳ ಮಾತುಗಳ ಎರಡು ಸಂಗ್ರಹ, 22:17–24:22 ಮತ್ತು 24:23–34. ಈ ಜ್ಞಾನೋಕ್ತಿಗಳು ರಚನೆಯಲ್ಲಿ ವಿಭಿನ್ನವಾಗಿವೆ. ಹಿನ್ನಲೆಯು ಜ್ಞಾನದ ಶಾಲೆಯಾಗಿರುವಂತೆ ಕಂಡುಬರುತ್ತದೆ.

4. ಅರಸನಾದ ಹಿಜ್ಕೀಯನು ಸಂಗ್ರಹಿಸಿದ ಸೊಲೊಮೋನನ ಜ್ಞಾನೋಕ್ತಿಗಳು ಅಧ್ಯಾಯ 25–29. ಇದು ಮುಖ್ಯವಾಗಿ ದ್ವಿಪದಿಗಳನ್ನು ಒಳಗೊಂಡಿದೆ. ಆದರೆ ಕೆಲವು 3–4 ಸಾಲುಗಳ ವಚನವನ್ನು ಒಳಗೊಂಡಿದೆ. ಉದಾ: 25:13, 20. ವಿಷಯಾಂಶಗಳು ಸೊಲೊಮೋನನ ಜ್ಞಾನೋಕ್ತಿಗಳ ಮುಖ್ಯ ಸಂಗ್ರಹದಂತೆ ಇವೆ.

5. ಆಗೂರನ ಮಾತುಗಳು, ಅಧ್ಯಾಯ 30. ಈ ಸಂಗ್ರಹದಲ್ಲಿ ನಾವು "ಸಂಖ್ಯೆಯ ಜ್ಞಾನೋಕ್ತಿಗಳನ್ನು ಕಾಣಬಹುದು. ಉದಾ: ವಚನ. 15–16, 18–19, 21–23.

6. ಅರಸನಾದ ಲೆಮೂವೇಲನ ತಾಯಿಯ ಮಾತುಗಳು, 31:1–9, ಇವು ಒಬ್ಬ ಉತ್ತಮ ಅರಸನ ಅಗತ್ಯಗಳ ಒಂದು ಸಾರಾಂಶವಾಗಿದೆ.

7. ಹಿನ್ನಡಿ: ಗುಣವತಿಯಾದ ಸತಿ, ಅಧ್ಯಾಯ 31:10–31.

ಉದ್ದೇಶ

ಹಾಗಾದರೆ ಜ್ಞಾನೋಕ್ತಿ ಪುಸ್ತಕವನ್ನು ಯಾರಿಗಾಗಿ ಬರೆಯಲಾಗಿದೆ? ಜ್ಞಾನಿಗಳು ತಮ್ಮ ಪಠ್ಯಗಳನ್ನು ಬರೆಯುವಾಗ, ತಮ್ಮ ಸಂಗ್ರಹಗಳನ್ನು ನಿಯೋಜಿಸುವಾಗ ಯಾರನ್ನು ಮನಸ್ಸಿನಲ್ಲಿ ಇಟ್ಟುಕೊಂಡಿದ್ದಿರಬಹುದು?

ಬಹುಶಃ ಅವರ ಮನಸ್ಸಿನಲ್ಲಿ 2 ಗುಂಪಿನ ಜನರಿದ್ದಿರಬಹುದು:

1. ಇಸ್ರಾಯೇಲಿನ ಬೌದ್ಧಿಕ ಮತ್ತು ಸಾಮಾಜಿಕ ವರ್ಗದ ಯೌವನಸ್ಥರಿಗಾಗಿನ ತರಬೇತಿ ಶಾಲೆಗಳು (ಜ್ಞಾನದ ಶಾಲೆಗಳು). ಇದರಲ್ಲಿ ಕೆಲವರು ದೇಶದ ಭವಿಷ್ಯದ ಅರಸರಾಗಲು ಸಹ ತರಬೇತಿ ಹೊಂದುತ್ತಿದ್ದರು. ಇದರಲ್ಲಿ ಮೂರು ಅರಸರುಗಳ ಬಗ್ಗೆ ತಿಳಿಸಲಾಗಿದೆ ಮತ್ತು ಅನೇಕ ವಚನಗಳು ಅರಸನ ಸ್ವಭಾವದ ಬಗ್ಗೆ ತಿಳಿಸುವುದನ್ನು ನೀವು ಗಮನಿಸಿರಿ. ಉದಾ: 16:10–15 ಮತ್ತು 31:1–9.

   ವಿಶೇಷವಾಗಿ ಪುಸ್ತಕದ ಮೊದಲ ಭಾಗವು (ಅಧ್ಯಾಯ 1–9) ತರಬೇತಿಯಲ್ಲಿರುವ ಇಸ್ರಾಯೇಲಿನ ಯೌವನಸ್ಥ ಪುರುಷರಿಗಾಗಿ ಬರೆಯಲ್ಪಟ್ಟಂತೆ ತೋರುತ್ತದೆ. ಇದು ಸ್ತ್ರೀಯರ ಬಗ್ಗೆ ಕೆಲವು ಬೋಧನೆಗಳನ್ನು ಹೊಂದಿದ್ದರೂ ಸಹ ಅವರಿಗಾಗಿ ಅಥವಾ ಬಡವರಿಗಾಗಿ ಯಾಕೆ ಜ್ಞಾನೋಕ್ತಿಯು ಹೆಚ್ಚು ಬೋಧನೆಗಳನ್ನು ಹೊಂದಿಲ್ಲವೆಂಬುದನ್ನು ವಿವರಿಸುತ್ತದೆ. ಅಲ್ಲದೆ ಜ್ಞಾನಿಗಳ ಮಾತುಗಳು (22:17–24:34) ಜ್ಞಾನದ ಶಾಲೆಗಳಿಗಾಗಿನ ಒಂದು ಅಂಶವೆಂಬಂತೆ ತೋರುತ್ತದೆ.

2. ವಿಶಾಲವಾದ ಜನವರ್ಗಕ್ಕಾಗಿ (ಸಾರ್ವತ್ರಿಕವಾಗಿ) ಉದಾಹರಣೆಗೆ ಸೊಲೊಮೋನನ ಜ್ಞಾನೋಕ್ತಿಗಳ ಎರಡು ಸಂಗ್ರಹಗಳು (10:1–22:16 ಮತ್ತು ಅಧ್ಯಾಯ 25–29) ಗುಣಸ್ವಭಾವದಲ್ಲಿ ಹೆಚ್ಚಾಗಿ ಸಾರ್ವತ್ರಿಕವಾಗಿವೆ. ಇಲ್ಲಿ ನಾವು ಈ ಲೋಕದಲ್ಲಿನ ಜೀವನದೊಂದಿಗೆ ಹೇಗೆ ಹೊಂದಿಕೊಂಡಿರಬೇಕು ಎಂಬುದರ ಬಗೆಗಿನ ಸಾಮಾನ್ಯ, ದೈನಂದಿನ ಜ್ಞಾನವನ್ನು ಕಾಣುತ್ತೇವೆ. ಆದರೆ ಪುಸ್ತಕದ ಈ ಭಾಗಗಳು ಸಹ ಭವಿಷ್ಯದ ನಾಯಕತ್ವಕ್ಕಾಗಿ ಯೌವನಸ್ಥರಿಗೆ ಖಂಡಿತವಾಗಿ ಪ್ರಯೋಜನಕಾರಿಯಾಗಿವೆ.

   ಅಂತಿಮ ಸೂಚನೆ: ಶಾಲೆ, ಸಾರ್ವಜನಿಕರು ಪ್ರಾಮುಖ್ಯವಾಗಿ ಪಟ್ಟಣಗಳಲ್ಲಿ ವಾಸಿಸುವ ಅಥವಾ ಭೂ ಒಡೆಯರಾಗಿರುವ ಮಧ್ಯಮವರ್ಗದ ಪುರುಷರಾಗಿರಬಹುದು. ಬಡವರನ್ನು ಪೋಷಿಸಬೇಕಾಗಿತ್ತು (14:31, 19:17) ಮತ್ತು ಸ್ತ್ರೀಯರ ಮೂಲಕವಾಗಿ ಪುರುಷರೊಂದಿಗಿನ ಸಂಬಂಧದಲ್ಲಿ ಕಾಣಿಸಿಕೊಳ್ಳುತ್ತಾರೆ (ಹೆಂಡತಿ, ತಾಯಿ ಅಥವಾ ವ್ಯಭಿಚಾರಿಣಿಯರಿಗಾಗಿ).

ಪ್ರಶ್ನೆ 7

ಜ್ಞಾನೋಕ್ತಿಗಳ ಪುಸ್ತಕದಲ್ಲಿನ ಜ್ಞಾನೋಕ್ತಿಗಳು ಪ್ರಧಾನವಾಗಿ ಮೇಲ್ವರ್ಗದ ಪುರುಷರ ದೃಷ್ಟಿಕೋನದಿಂದ ಸಮಾಜವನ್ನು ಏಕೆ ಮತ್ತು ಹೇಗೆ ನೋಡುತ್ತವೆ ಎಂಬುದನ್ನು ನಿಮ್ಮ ಮಾತಿನಲ್ಲಿ ವಿವರಿಸಿ.

ಸಾಹಿತ್ಯದ ಸ್ವರೂಪ ಮತ್ತು ಶೈಕ್ಷಣಿಕ ವಿಧಾನ

ಜ್ಞಾನೋಕ್ತಿ ಪುಸ್ತಕವು 1:6 ರಲ್ಲಿ ಸಾಹಿತ್ಯದ ನಾಲ್ಕು ರೂಪಗಳನ್ನು ತಿಳಿಸುತ್ತದೆ

1. ಜ್ಞಾನೋಕ್ತಿಗಳು (ಉದಾ: 1:7)
2. ಸಾಮ್ಯಗಳು (ಉದಾ: 6:6–9)
3. ಹೇಳಿಕೆಗಳು (ಜ್ಞಾನಿಗಳ) (ಉದಾ: 24:14)
4. ಒಗಟುಗಳು (ಜ್ಞಾನಿಗಳ) (ಉದಾ: 30:18–19)

ಒಬ್ಬ ಸತ್ಯವೇದ ಪಂಡಿತರು ಏಳು ಸಾಹಿತ್ಯದ ಸ್ವರೂಪಗಳನ್ನು ಗುರುತಿಸಿದ್ದಾರೆ

1. ಗುರುತು (ಒಂದನ್ನು ಇನ್ನೊಂದರೊಂದಿಗೆ ಗುರುತಿಸುವುದು), ಉದಾ: 14:4 ರ ಮೊದಲ ಭಾಗ – "ಎತ್ತುಗಳಿಲ್ಲದಿರುವಾಗ ಗೋದಲಿಯು ಶುದ್ಧ"
2. ಗುರುತು ಇಲ್ಲದಿರುವುದು, ತದ್ವಿರುದ್ಧ ಅಥವಾ ವಿರೋಧ ಭಾವ, ಉದಾ: 25:15. "ದೀರ್ಘಶಾಂತಿಯಿಂದ ಪ್ರಭುವನ್ನು ಸಮ್ಮತಿಪಡಿಸಬಹುದು. ಮೃದುವಚನವು ಎಲುಬನ್ನು ಮುರಿಯುವದು."
3. ಸಮಾನತೆಗಳು ಅಥವಾ ಉಪಮಾನ (ಇದು ಅದರಂತೆ), ಉದಾ: 25:12 "ಕೇಳುವ ಕಿವಿಗೆ ಮುಟ್ಟುವ ಬುದ್ಧಿವಾದವು ಹೊನ್ನಿನ ಮುರುವಿಗೂ ಅಪರಂಜಿಯ ಆಭರಣಕ್ಕೂ ಸಮಾನ"
4. ಕ್ರಮಕ್ಕೆ ತದ್ವಿರುದ್ಧವಾದದ್ದು (ಇದು ವ್ಯರ್ಥ, ಇದು ಹಾಸ್ಯಾಸ್ಪದ), ಉದಾ: 1:7 "ಪಕ್ಷಿಗಳ ಕಣ್ಣೆದುರಿಗೆ ಬಲೆಯನ್ನೊಡ್ಡವುದು ವ್ಯರ್ಥ".
5. ಒಬ್ಬ ವ್ಯಕ್ತಿ, ಒಂದು ಕ್ರಿಯೆ ಅಥವಾ ಒಂದು ಸನ್ನಿವೇಶವು ಸ್ವಭಾವ, ಉದಾ: ಜ್ಞಾನಹೀನ (15:2,5), ಧರ್ಮನಿಂದಕ (13:1), ಸೋಮಾರಿ (26:14) ಸುಳ್ಳು ಸಾಕ್ಷಿ (19:9).
6. ಸಾಪೇಕ್ಷ ಮೌಲ್ಯ ("ಇದು ಅದಕ್ಕಿಂತ ಹೆಚ್ಚು ಮೌಲ್ಯದ್ದಾಗಿದೆ" ಅಥವಾ "ಇದು ಅದಕ್ಕಿಂತ ಉತ್ತಮವಾಗಿದೆ"), ಎರಡು ಉದಾಹರಣೆಗಳು:
   - 19:22: "ಇದ್ದರೂ ಇಲ್ಲವೆಂದು ಸುಳ್ಳಾಡುವವನಿಗಿಂತಲೂ ಏನೂ ಇಲ್ಲದವನೇ ಲೇಸು" .
   - 17:12: "ಮೂರ್ಖತನದಲ್ಲಿ ಮುಣುಗಿರುವ ಮೂಢನಿಗೆ ಎದುರಾಗುವುದಕ್ಕಿಂತಲೂ ಮರಿಗಳನ್ನು ಕಳೆದುಕೊಂಡ ಕರಡಿಗೆ ಎದುರಾಗುವುದು ಲೇಸು" .
7. ಮನುಷ್ಯನ ಗುಣ ಅಥವಾ ಸ್ವಭಾವದ ಪರಿಣಾಮಗಳು. ಎರಡು ಉದಾಹರಣೆಗಳು:

- 15:13: ಅಂತರ್ಯದಲ್ಲಿ ನೀವು ಭಾವಿಸುವುದು ನಿಮ್ಮ ಇಡೀ ಜೀವನದ ಮೇಲೆ ಪ್ರಭಾವ ಬೀರುವುದು.
- 26:27: ಮನುಷ್ಯ ಏನು ಮಾಡಿದರೂ ಅದಕ್ಕೆ ಪರಿಣಾಮವಿದೆ. ಗುಂಡಿಯನ್ನು ತೋಡಿದವನು ಅದರಲ್ಲಿ ತಾನೇ ಬೀಳುವಂತೆ, ಹೊರಳಿಸುವವನ ಮೇಲೆಯೇ ಕಲ್ಲು ಬೀಳುವಂತೆ.

ಈ ಸಾಹಿತ್ಯದ ಸ್ವರೂಪ ಅಥವಾ ರೂಪಗಳು ಪ್ರಾಯೋಗಿಕ ಜ್ಞಾನದಲ್ಲಿ ಮಾಹಿತಿಯ ಒಂದು ವಿಧಾನವನ್ನು ಒದಗಿಸುವವು. ಈ ವಿಧಾನವನ್ನು "ಅನುಭವದಿಂದ ಕಲಿಯುವುದು" ಎಂಬುದಾಗಿ ವರ್ಣಿಸಬಹುದು. ದೈನಂದಿನ ಜೀವನದ ಉದಾಹರಣೆಗಳ ಸಹಾಯದಿಂದ ಓದುಗನು ಲೋಕ ಮತ್ತು ಮನುಷ್ಯನ ಅನುಭವಗಳ ಮೇಲೆ ಪ್ರಭಾವ ಬೀರಲು ಅಹ್ವಾನಿಸಲ್ಪಟ್ಟಿದ್ದಾನೆ: ಮನೆ, ಕುಟುಂಬ ಮತ್ತು ಸಂತೆ, ಪ್ರಾಂಗಣ, ಪಶುಸಂಗೋಪನೆ ಮತ್ತು ವ್ಯವಹಾರ, ಸ್ನೇಹ ಮತ್ತು ಮದುವೆ, ಪ್ರಾಣಿಗಳು ಮತ್ತು ಗಿಡಗಳು. ಮನುಷ್ಯನ ಜೀವನದ ಈ ಎಲ್ಲ ಕ್ಷೇತ್ರಗಳೂ ಸಹ ಒಬ್ಬ ಜ್ಞಾನಯುತ ದೇವರ ಕ್ರಮವಾದ ಸೃಷ್ಟಿಯಾದ ಜಗತ್ತಿನ ಸಂಬಂಧದಲ್ಲಿ ಇಡಲ್ಪಟ್ಟಿವೆ.

ಪರಾಮರ್ಶಿಸಬೇಕೆಂದು ಓದುಗರನ್ನು ಜ್ಞಾನೋಕ್ತಿಗಳು ಆಹ್ವಾನಿಸುತ್ತವೆ. ಈ ಪರಾಮರ್ಶಿಯ ಉದ್ದೇಶವು ಉತ್ತಮವಾದ ಜೀವಿತವನ್ನು ಜೀವಿಸಲು, ತನ್ನ ವ್ಯವಹಾರಗಳನ್ನು ಉತ್ತಮವಾಗಿ ನಿರ್ವಹಿಸಲು, ತಪ್ಪುಗಳನ್ನು ದೂರವಿರಿಸಲು ಮತ್ತು ಸಂಬಂಧಗಳನ್ನು ಉತ್ತಮ ಪಡಿಸಲು ಸಹಾಯಿಸುವುದಾಗಿದೆ. ಹಾಗಾಗಿ ಜ್ಞಾನೋಕ್ತಿಗಳು ಚಾಣಾಕ್ಷತನ, ಶ್ರದ್ಧೆ, ಪರಿಶ್ರಮ ಮತ್ತು ನ್ಯಾಯದಲ್ಲಿ ನಮಗೆ ಪಾಠಗಳನ್ನು ಕಲಿಸುತ್ತದೆ. ಅವು ಮೂರ್ಖರಂತೆ, ಸೋಮಾರಿಗಳಂತೆ ಅಥವಾ ಅನೀತಿವಂತರಂತೆ ಭಾವಿಸಬಾರದೆಂದು ಉತ್ತೇಜಿಸುತ್ತವೆ. ಬದಲಾಗಿ ಆತನು ಜ್ಞಾನದ ಜೀವಿತವನ್ನು, ದೇವರ ಮಾರ್ಗಗಳಿಗನುಸಾರವಾದ ಜೀವಿತವನ್ನು ಜೀವಿಸಬೇಕು. ದೇವರಿಗೆ ಭಯಪಡುವುದು ಎಂದರೆ ಏನೆಂಬುದನ್ನು ಆತನು ಅರ್ಥಮಾಡಿಕೊಳ್ಳಬೇಕು:

ಯೆಹೋವನ ಭಯವೇ ಜ್ಞಾನಕ್ಕೆ ಮೂಲವು,

ಪರಿಶುದ್ಧನ ತಿಳುವಳಿಕೆಯೇ ವಿವೇಕವು.

(ಜ್ಞಾನೋ. 9:10).

ಪ್ರಶ್ನೆ 8

1:6 ರಲ್ಲಿ ಬಳಸಲಾದ ನಾಲ್ಕು ಕನ್ನಡ ಪದಗಳ ಅರ್ಥವನ್ನು ಚರ್ಚಿಸಿರಿ (ಗಾದೆ, ಸಾಮ, ನುಡಿ, ಮತ್ತು ಒಗಟು). ಅವು ಯಾವ ರೀತಿಯಲ್ಲಿ ಸಮಾನವಾಗಿವೆ? ಅವು ಯಾವ ರೀತಿಯಲ್ಲಿ ವಿಭಿನ್ನವಾಗಿವೆ?

ಪ್ರಶ್ನೆ 9

"ಹೇಳಿಕೆ ಒಂದು ವಿರೋಧಾಭಾಸ" ಎಂದು ನಾವು ಏನು ಹೇಳುತ್ತೇವೆ? ವಿರೋಧಾಭಾಸಗಳನ್ನು ಒಳಗೊಂಡಿರುವ ನಿಮ್ಮ ಸ್ವಂತ ಹೇಳಿಕೆಗಳ ಸಂಸ್ಕೃತಿಯಿಂದ ಒಂದು ಅಥವಾ ಎರಡು ಉದಾಹರಣೆಗಳನ್ನು ನೀಡಿ.

ಪ್ರಶ್ನೆ 10

ಇದರ ಅರ್ಥವನ್ನು ವಿವರಿಸಿ "ಮಾನವ ಅನುಭವದಿಂದ ಕಲಿಯುವುದು". ನಿಮ್ಮ ಸ್ವಂತ ಜೀವನದಿಂದ ಉದಾಹರಣೆಗಳನ್ನು ನೀಡಿ.

ಪ್ರಶ್ನೆ 11

19:22 ರಲ್ಲಿ ಕಂಡುಬರುವ ಗಾದೆ "ಸಾಪೇಕ್ಷ ಮೌಲ್ಯ" ವನ್ನು ಏಕೆ ವಿವರಿಸುತ್ತದೆ ಎಂಬುದನ್ನು ವಿವರಿಸಿ.

ಪ್ರಶ್ನೆ 12

ಜ್ಞಾನೋಕ್ತಿಗಳು ಓದುಗರನ್ನು ಪ್ರತಿಬಿಂಬಿಸಲು ಏಕೆ ಆಹ್ವಾನಿಸುತ್ತವೆ?

ಉಲ್ಲೇಖ

ನಾನು ಜ್ಞಾನೋಕ್ತಿಗಳ (ಅಧ್ಯಯನಗಳು ಮತ್ತು ಉತ್ತರಗಳು) ಮೇಲಿನ ಘಟಕವನ್ನು ಸಿದ್ಧಪಡಿಸುವಾಗ ಈ ಕೆಳಗಿನ ಪುಸ್ತಕಗಳು ನನಗೆ ಉಪಯುಕ್ತವಾಗಿದ್ದವು:

ಇಎಸ್‌ವಿ ಅಧ್ಯಯನ ಸತ್ಯವೇದ

ಎನ್‌ಐವಿ ಅಧ್ಯಯನ ಸತ್ಯವೇದ

ಡೇವಿಡ್ ಅಟ್ಕಿನ್ಸನ್ ಅವರ **ಜ್ಞಾನೋಕ್ತಿಗಳ ಸಂದೇಶ** (ದ ಬೈಬಲ್ ಸ್ಪೀಕ್ಸ್ ಟುಡೇ ಸೀರೀಸ್)

ಜ್ಞಾನೋಕ್ತಿಗಳು, ವಿಲಿಯಂ ಮೌಸರ್ ಅವರಿಂದ **ಬುದ್ಧಿವಂತಿಕೆಯಿಂದ ಬದುಕಲು ಕಲಿಯುವುದು** (ದ ಲೈಫ್ ಬಿಲ್ಡ್ ಸೀರೀಸ್)

ಜೋಶುವಾ ಎನ್ಜಿ (ಮತ್ತಾಯಸ್ ಮೀಡಿಯಾ) ಅವರಿಂದ **ಬುದ್ಧಿವಂತಿಕೆಯ ಪ್ರಾರಂಭ**

ಗಾರ್ಡನ್ ಡಿ ಫೀ ಮತ್ತು ಡೌಗ್ಲಾಸ್ ಸ್ಟುವರ್ಟ್ ಅವರಿಂದ **ಬೈಬಲ್ ಅನ್ನು ಅದರ ಎಲ್ಲಾ ಮೌಲ್ಯಕ್ಕೆ ಹೇಗೆ ಓದುವುದು**

ಪ್ರಸ್ತಾವನೆ: ಉದ್ದೇಶ ಮತ್ತು ವಿಷಯ ವಸ್ತು (1:1–7)

ಪೀಠಿಕೆ

ಜ್ಞಾನೋಕ್ತಿ ಪುಸ್ತಕದಲ್ಲಿನ ಜ್ಞಾನೋಕ್ತಿಗಳ ಮೊದಲ ಸಂಗ್ರಹವು ಅರಸನಾದ ಸೊಲೊಮೋನನ ಹೆಸರನ್ನು ಹೊಂದಿವೆ. ಅರಸನಾದ ಸೊಲೊಮೋನನು ಸುಮಾರು ಕ್ರಿ.ಪೂ. 970–930 ರ ಆಸುಪಾಸಿನಲ್ಲಿ ಯೆರೂಸಲೇಮಿನಲ್ಲಿ ಆಳಿದನು.

ಈ ಸಂಗ್ರಹವು ಪುಸ್ತಕದ ಮೊದಲ 9 ಅಧ್ಯಾಯಗಳನ್ನು ಒಳಗೊಂಡಿದೆ ಮತ್ತು ಇದು ನಮಗೆ ಜ್ಞಾನವನ್ನು ವಿವರಿಸುತ್ತದೆ. ಜ್ಞಾನೋಕ್ತಿಗಳಲ್ಲಿ "ಜ್ಞಾನವು ಒಂದು ಅಮೂರ್ತಕ ಸಂಗತಿಯಲ್ಲ. ಇಲ್ಲಿ ಜ್ಞಾನವು ಒಬ್ಬ ಸ್ತ್ರೀಯಾಗಿ ವ್ಯಕ್ತೀಕರಿಸಲ್ಪಟ್ಟಿದ್ದಾಳೆ. ಈ ವಚನಗಳನ್ನು ನೋಡಿರಿ:

ಅ. 1:20–21: ಜ್ಞಾನವೆಂಬಾಕೆಯು ಬೀದಿಗಳಲ್ಲಿ ಕೂಗುತ್ತಾಳೆ, ಚೌಕಗಳಲ್ಲಿ ದನಿಗೈಯುತ್ತಾಳೆ.

ಆ. 9:1: ಜ್ಞಾನವೆಂಬಾಕೆಯು ಏಳು ಕಂಬಗಳನ್ನು ಕಡಿದು ತನ್ನ ಮನೆಯನ್ನು ಕಟ್ಟಿಕೊಂಡಿದ್ದಾಳೆ. ಪಶುಗಳನ್ನು ಕೊಯಿಸಿ (ಪಾನದ್ರವ್ಯಗಳೊಡನೆ) ದ್ರಾಕ್ಷಾರಸವನ್ನು ಬೆರಸಿ ಔತಣವನ್ನು ಸಿದ್ಧಪಡಿಸಿದ್ದಾಳೆ.

ಇ. ಸ್ತ್ರೀಲಿಂಗ ಸರ್ವನಾಮವಾದ **"ಆಕೆ"** 3:13–14, 18 ಮತ್ತು 4:6, 8 ರಲ್ಲಿ ಉಪಯೋಗಿಸಲ್ಪಟ್ಟಿದೆ, ಆದರೆ ಇದನ್ನು ಕನ್ನಡದ ಭಾಷಾಂತರದಲ್ಲಿ ಕಾಣಲಾಗುವುದಿಲ್ಲ.

ಹಾಗಾಗಿ ಜ್ಞಾನವು ದೇವರ ಜ್ಞಾನದ ಕುರಿತಾಗಿ ಹೇಳುವ ಒಬ್ಬ ಸ್ತ್ರೀಯಾಗಿ ಚಿತ್ರಿಸಲ್ಪಟ್ಟಿದೆ. ಅಕೆಯು ದೇವರಿಗೆ ಭಯಪಡುವವರಿಗೆ ಜ್ಞಾನಿಗಳಿಗೆ ಜೀವನದ ಮಾರ್ಗವನ್ನೂ ತಿಳಿಸುತ್ತಾಳೆ.

ಈ ವಾಕ್ಯಭಾಗವು (1:1–7) ಇಡೀ ಜ್ಞಾನೋಕ್ತಿ ಪುಸ್ತಕವನ್ನು: ಇದರ ಉದ್ದೇಶ ಮತ್ತು ವಿಷಯ ವಸ್ತುವನ್ನು ಪರಿಚಯಿಸುತ್ತದೆ. **ಇಬ್ರಿಯ ಜ್ಞಾನದ ಅಸ್ತಿವಾರ** ಎಂದು ಕರೆಯಲ್ಪಡುವ ಅಧ್ಯಾಯವನ್ನೂ ನೋಡಿ.

ಪ್ರಶ್ನೆಗಳು

1. ಈ ಭಾಗವು ಏಳು ವಚನಗಳನ್ನು ಒಳಗೊಂಡಿದೆ. ಯಾವ ವಚನವು ಅತ್ಯಂತ ಮುಖ್ಯ ಎಂದು ನೀವು ಭಾವಿಸುತ್ತೀರಿ? ಏಕೆ?

2. ಸೊಲೊಮೋನನ ಜ್ಞಾನೋಕ್ತಿಗಳ ಸಂಗ್ರಹದ ಉದ್ದೇಶವನ್ನು ವಿವರಿಸಲು ವಚನ 2–4 ರಲ್ಲಿ ಉಪಯೋಗಿಸಲಾದ ಪದಗಳು ಮತ್ತು ಹೇಳಿಕೆಗಳ ಪಟ್ಟಿಮಾಡಿರಿ. ಈ ಪದಗಳು ಮತ್ತು ಹೇಳಿಕೆಗಳನ್ನು ವಿವರಿಸಿರಿ. ಅವುಗಳಲ್ಲಿ ಯಾವುದು **"ಬೌದ್ಧಿಕ ಜ್ಞಾನ"**ವನ್ನು ಉಲ್ಲೇಖಿಸುತ್ತದೆ? ಅವುಗಳಲ್ಲಿ ಯಾವುದು **"ಜೀವನದ ಕೌಶಲ್ಯ"**ವನ್ನು ಉಲ್ಲೇಖಿಸುತ್ತದೆ?

3. 4–5 ನೇ ವಚನಗಳ ಪ್ರಕಾರ ಜ್ಞಾನೋಕ್ತಿಗಳು ಯಾರಿಗಾಗಿ ಇವೆ?

4. ಇಬ್ರಿಯ ಪಠ್ಯದ 6 ನೇ ವಚನವು ನಾಲ್ಕು ಪದಗಳನ್ನು ಹೊಂದಿದ್ದು ಅದು ಜ್ಞಾನೋಕ್ತಿಗಳ ಪುಸ್ತಕದಲ್ಲಿ ಯಾವ ರೀತಿಯ ಸಾಹಿತ್ಯ ಕಂಡುಬರುತ್ತದೆ ಎಂಬುದನ್ನು ಸೂಚಿಸುತ್ತದೆ. ಕನ್ನಡ ಭಾಷಾಂತರಗಳಲ್ಲಿ ಈ ವಚನವನ್ನು ಅಧ್ಯಯನ ಮಾಡಿ ಮತ್ತು **"ಜ್ಞಾನೋಕ್ತಿಗಳು"** ವ್ಯಾಖ್ಯಾನದ ಬಗ್ಗೆ ಅವರು ಯಾವ ಮಾಹಿತಿಯನ್ನು ಹೊಂದಿದ್ದಾರೆ ಎಂಬುದನ್ನು ಗಮನಿಸಿ.

ಪ್ರಸ್ತಾವನೆ ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಪ್ರಶ್ನೆ 3 ಕ್ಕೆ ನಿಮ್ಮ ಉತ್ತರವನ್ನು ನೋಡಿ. ಜ್ಞಾನೋಕ್ತಿಗಳ ಪುಸ್ತಕದ ಬೋಧನೆ (ಅಥವಾ ಸಂದೇಶ) ಸ್ವೀಕರಿಸುವವರ ನಾಲ್ಕು ವರ್ಗಗಳಲ್ಲಿ ನೀವು ಯಾವುದಕ್ಕೆ ಸೇರಿದವರು? ಏಕೆ ಎಂದು ವಿವರಿಸಿ.

2. ಪ್ರಶ್ನೆ 2 ಕ್ಕೆ ನಿಮ್ಮ ಉತ್ತರವನ್ನು ನೋಡಿ. ನಮಗೆ ಇರುವ ಸಂದೇಶವೇನು? ಭಾರತೀಯ ಸಾಂಸ್ಕೃತಿಕ ಮತ್ತು ಧಾರ್ಮಿಕ ಹಿನ್ನಲೆಯಲ್ಲಿ ಈ ಸಂದೇಶವು ಏಕೆ ಮುಖ್ಯವಾಗಿದೆ?

ಜ್ಞಾನದ ಮೊದಲ ವೈರಿ (ಅಧ್ಯಾಯ 1, 2, 4)

ಪೀಠಿಕೆ

ಜ್ಞಾನೋಕ್ತಿ ಪುಸ್ತಕದ ಮೊದಲ 7 ಅಧ್ಯಾಯಗಳಲ್ಲಿ ಒಬ್ಬ ತಂದೆಯಿಂದ ಮಗನಿಗೆ ಸಂಬೋಧಿಸಲ್ಪಡುವ ಹೆಚ್ಚಿನ ಜ್ಞಾನದ ಹೇಳಿಕೆಗಳನ್ನು ನಾವು ಕಾಣುತ್ತೆವೆ. ತಾಯಂದಿರು ಸಹ ಇಲ್ಲಿ ಪ್ರಸ್ತಾಪಿಸಲ್ಪಟ್ಟಿದ್ದನ್ನು ಗಮನಿಸಿರಿ. (1:8, 6:20: ಇದು ಇಸ್ರಾಯೇಲ್ಯರ ಕುಟುಂಬಗಳಲ್ಲಿ ತಾಯಂದಿರು ವಹಿಸಿದ ಪ್ರಾಮುಖ್ಯವಾದ ಪಾತ್ರವನ್ನು ತೋರಿಸುತ್ತದೆ. ಮನೆಯು ಯೌವನಸ್ಥರಿಗೆ "ಜೀವನದ ಕೌಶಲ್ಯ" ಗಳನ್ನು ಕೊಡುವ ಸ್ಥಳವಾಗಿ ತೋರಿಸಲಾಗಿದೆ.

ಅಧ್ಯಾಯ 1–7 ರಲ್ಲಿ ತಂದೆಯ ಹತ್ತು ಮಾತುಗಳಿವೆ, 1:8, 2:1, 3:1, 3:21, 4:1, 4:10, 4:20, 5:1, 6:20, 7:1. ಈ ಹೇಳಿಕೆಗಳ ಸಂಗ್ರಹಗಳನ್ನು ಯೆರೂಸಲೇಮಿನ ರಾಜನ ಆಸ್ಥಾನದಲ್ಲಿ ಭವಿಷ್ಯದಲ್ಲಿನ ನಾಯಕತ್ವಕ್ಕಾಗಿ ಯೌವನಸ್ಥ ಪುರುಷರನ್ನೇ ತರಬೇತಿ ನೀಡುವ ಪಠ್ಯಪುಸ್ತಕದಿಂದ ತೆಗೆದುಕೊಂಡ ಸಾಧ್ಯತೆಯಿದೆ.

ಸ್ವತಃ ಜ್ಞಾನದ ಬಗ್ಗೆ ಆಳವಾದ ಅಧ್ಯಯನ ಮಾಡುವ ಮೊದಲು ನಾವು ಈ ಪುಸ್ತಕದ ಮೊದಲ 7 ಅಧ್ಯಾಯಗಳಲ್ಲಿ ತಿಳಿಸಲ್ಪಟ್ಟ ವೈರಿಗಳ ಕಡೆಗೆ ನೋಡೋಣ. ಈ ಅಧ್ಯಾಯಗಳ ಅನೇಕ ವಾಕ್ಯಭಾಗಗಳಲ್ಲಿ ಶಿಕ್ಷಕನು ತಮ್ಮ ವಿದ್ಯಾರ್ಥಿಗಳಿಗೆ ಈ ವೈರಿಗಳ ಬಗ್ಗೆ ಎಚ್ಚರಿಸುತ್ತಾನೆ.

ಜ್ಞಾನದ ವೈರಿಗಳು 4:

1. ಪಾಪಿಗಳು ಮತ್ತು ದುಷ್ಟ ಸ್ನೇಹಿತರ ಗುಂಪುಗಳು
2. ಲೈಂಗಿಕ ಅನೈತಿಕತೆ, ವ್ಯಭಿಚಾರ
3. ಸೋಮಾರಿತನ
4. ಜ್ಞಾನವನ್ನು ತಿರಸ್ಕರಿಸುವ ಅಪಹಾಸ್ಯಗಾರರು

ಈ ಪಠ್ಯದಲ್ಲಿ ನಾವು ಜ್ಞಾನದ ಮೊದಲ ವೈರಿಯಾದ ಪಾಪಿಗಳು ಮತ್ತು ದುಷ್ಟ ಸ್ನೇಹಿತರ ಗುಂಪಿನ ಬಗ್ಗೆ ಅಧ್ಯಯನ ಮಾಡೋಣ.

ಈ ಪ್ರಶ್ನೆಗಳನ್ನು ಉತ್ತರಿಸುವ ಮುನ್ನ ಇವನ್ನು ಓದಿರಿ. ಜ್ಞಾನೋ. 1:8–19, 2:12–15, 22, 4:10–19.

ಪ್ರಶ್ನೆಗಳು

1. 1:8-19 ರಲ್ಲಿ "ಮಾತನಾಡುವವರು" ಯಾರು?
2. 1:8-19 ರಲ್ಲಿ ಬಳಸಲಾದ ರೂಪಾಲಂಕಾರಗಳು ಯಾವವು? ಅವುಗಳನ್ನು ವಿವರಿಸಿರಿ.
3. 1:8–19 ರಲ್ಲಿ ಪಾಪಿಗಳು ಯುವ ವಿದ್ಯಾರ್ಥಿಯನ್ನು ತಮ್ಮ ಗುಂಪಿಗೆ ಸೇರಲು ಯಾವ ವಾದವನ್ನು ಬಳಸುತ್ತಾರೆ?
4. 1:8–19 ರಲ್ಲಿ ಯುವ ವಿದ್ಯಾರ್ಥಿಯನ್ನು ಆ ಗುಂಪನ್ನು ಸೇರಿಕೊಳ್ಳುವುದನ್ನು ನಿರುತ್ಸಾಹಗೊಳಿಸಲು ಶಿಕ್ಷಕರು ಯಾವ ವಾದವನ್ನು ಬಳಸುತ್ತಾರೆ?
5. 2:12–15, 22 ರಲ್ಲಿ ಶಿಕ್ಷಕನು "ದುಷ್ಟರ ಮಾರ್ಗಗಳನ್ನು" ಹೇಗೆ ವಿವರಿಸುತ್ತಾರೆ? ನಿಮ್ಮ ಸ್ವಂತ ಪದಗಳನ್ನು ಬಳಸಿ (ಅಥವಾ ಪಠ್ಯದಲ್ಲಿ ಬಳಸಲಾದ ಹೇಳಿಕೆಗಳನ್ನು ವಿವರಿಸಿ ಅಥವಾ ಅವುಗಳಿಗೆ ಸಮಾನಾರ್ಥಕ ಪದಗಳನ್ನು ಹುಡುಕಿ)
6. 4:10–19 ರಲ್ಲಿ ನಾವು "ತಂದೆಯ ಮಾತು" ಅನ್ನು ಕಾಣುತ್ತೇವೆ. ಇದು ಹೇಗೆ ರಚಿಸಲ್ಪಟ್ಟಿದೆ?
7. 4:10–19 ರಲ್ಲಿ ದುಷ್ಟರ ಮಾರ್ಗವು ಹೇಗೆ ವಿವರಿಸಲಾಗಿದೆ? ನಿಮ್ಮ ಸ್ವಂತ ಪದಗಳನ್ನು ಬಳಸಿ.

ಜ್ಞಾನದ ಮೊದಲ ವೈರಿ ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಈ ಪಠ್ಯದಲ್ಲಿನ ಕೆಲವು ಸಮಾನಾಂತರತೆಗಳಿಗೆ ಉದಾಹರಣೆಗಳನ್ನು ಹುಡುಕಿ. ಅವುಗಳನ್ನು ವಿವರಿಸಿರಿ.

2. ಭಕ್ತಿವಂತ ತಂದೆತಾಯಿಗಳು ತಮ್ಮ ಮಕ್ಕಳಿಗೆ ಕೊಡುವ ಭೋದನೆ ಮತ್ತು ಸಲಹೆಗಳಿಗಳನ್ನು ಜ್ಞಾನೋಕ್ತಿಗಳ ಪುಸ್ತಕವು ಬಹಳ ಗೌರವವನ್ನು ತೋರಿಸುತ್ತದೆ. 1:8–9 ಇದಕ್ಕೊಂದು ಉದಾಹರಣೆಯಾಗಿದೆ. ಜ್ಞಾನದ ಜೀವಿತವನ್ನು ಜೀವಿಸಲು ತಂದೆತಾಯಿಗಳು ತಮ್ಮ ಮಕ್ಕಳಿಗೆ ಬೋಧಿಸುವುದರ ಬಗ್ಗೆ ನಿಮ್ಮ ಸ್ವಂತ ಅನುಭವವು ಏನು? ಈ ಕ್ಷೇತ್ರದಲ್ಲಿ ಕ್ರೈಸ್ತ ಪೋಷಕರಿಗೆ ನಮ್ಮ ಸಭೆಗಳು ಹೇಗೆ ಸಹಾಯ ಮಾಡಬಹುದು?

3. ದುಷ್ಟ ಜನರ ಗುಂಪನ್ನು ಸೇರುವುದರ ಅಪಾಯದ ಬಗ್ಗೆ ಈ ಅಧ್ಯಾಯವು ಕಠಿಣ ಪದಗಳಿಂದ ನಮ್ಮನ್ನು ಎಚ್ಚರಿಸುತ್ತದೆ. ಅನ್ಯೋನ್ಯತೆ ಮತ್ತು ಸ್ನೇಹಿತರನ್ನು ಕಂಡುಕೊಳ್ಳಲು ಯೌವನಸ್ಥರು ಸಾಮಾನ್ಯವಾಗಿ ಇತರೆ ಯೌವನಸ್ಥರ ಗುಂಪನ್ನು ಸೇರಿಕೊಳ್ಳುವುದಕ್ಕೆ ಶೋಧಿಸಲ್ಪಡುತ್ತಾರೆ. ಈ ರೀತಿ ಮಾಡಿ ಅನೇಕ ಯೌವನಸ್ಥ ವಿಶ್ವಾಸಿಗಳು ದೇವರಿಂದ ದೂರ ಹೋಗಿದ್ದಾರೆ. ಅವರು ಕೆಟ್ಟ ಚಟಗಳಿಗೆ ಒಳಗಾಗಿ ಅಪರಾದಿ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದಾರೆ. ಮತ್ತು ಬಹು ಬೇಗನೆ ನಾಶನದ ಹಾದಿಯಲ್ಲಿದ್ದಾರೆ.

   ಅ. ಇಂದು ದಕ್ಷಿಣ ಭಾರತದಲ್ಲಿ ಯಾವುದೇ ಬಗೆಯ ಗುಂಪನ್ನು ಸೇರುವುದಕ್ಕೆ ಒಬ್ಬ ಯೌವನಸ್ಥ ವಿಶ್ವಾಸಿಗೆ ಇರುವ ಮುಖ್ಯ ಆಕರ್ಷಣೆಗಳು ಯಾವವು?

   ಆ. ಯೌವನಸ್ಥ ವಿಶ್ವಾಸಿಗಳು ಕೆಟ್ಟ ಸಹವಾಸವನ್ನು ಸೇರಿಕೊಳ್ಳುವುದನ್ನು ತಪ್ಪಿಸಲು ವಿಶ್ವಾಸಿಗಳು ಮತ್ತು ಸಭೆಯಾಗಿ ನಾವು ಏನನ್ನು ಮಾಡಬಹುದು?

4. ಈ ಪಾಠದಿಂದ ನೀವು ಕಲಿತ ಕೆಲವು ಸಂಗತಿಗಳನ್ನು ಪಟ್ಟಿ ಮಾಡಿರಿ.

ಅಸೈನ್‌ಮೆಂಟ್: ಜ್ಞಾನದ ಮೊದಲ ವೈರಿ

ಜ್ಞಾನೋಕ್ತಿ 1–7 ಅಧ್ಯಾಯಗಳಲ್ಲಿ ಕಂಡುಬರುವ ತಂದೆಯ ಮಾತುಗಳನ್ನು ಅಭ್ಯಾಸಿಸಿರಿ. ಅಲ್ಲಿ ಅಂತಹ 10 ಮಾತುಗಳಿವೆ. ನೋಡಿ. 1:8, 2:1, 3:21, 4:1, 4:10, 4:20, 5:1, 6:20, 7:1. ಈ ಮಾತುಗಳು ಪಂಡಿತರುಗಳು ಐಗುಪ್ತದ ಪಠ್ಯಪುಸ್ತಕಗಳಲ್ಲಿ ಕಂಡುಹಿಡಿದ ಸಂಗತಿಗಳಿಗೆ ಸಮಾನವಾಗಿವೆ. ಅಲ್ಲಿ ಅವು ಈ ರೀತಿಯ 5 ಬಗೆಯ ವಿಧ್ಯೆಗಳನ್ನು ಪಾಲಿಸುತ್ತವೆ:

1. ಪರಿಚಯಾತ್ಮಕ ಸಂಬೋಧನೆ (ಉದಾ: **"ನನ್ನ ಮಗನೇ"**)
2. ಕೇಳಲು ಅಥವಾ ಮರೆಯದಿರುವಂತೆ ಪ್ರಚೋದನೆ
3. ಜ್ಞಾನದ ಲಾಭ (ಪ್ರಯೋಜನ) ವು ಪ್ರಕಾಶಿಸಲ್ಪಟ್ಟಿದೆ.
4. ಮುಖ್ಯ ವಿಷಯ ವಸ್ತು ಒಂದು ಪ್ರಚೋದನೆ, ಅಥವಾ ಒಂದು ನಿಷೇಧ ಅಥವಾ ಒಂದು ಆಜ್ಞೆ
5. ಫಲಿತಾಂಶದ ಮೇಲೆ ಒಂದು ಅವಲೋಕನ (ಜ್ಞಾನದ ಜೀವಿತ ಅಥವಾ ಮೂರ್ಖತನದ ಜೀವಿತ)

ಈ 10 ವಾಕ್ಯಭಾಗಗಳನ್ನು ನೋಡಿರಿ ಮತ್ತು ಪ್ರತೀ ಮಾತಿನಲ್ಲಿ ಮೇಲ್ಕಂಡ ಐದು ಅಂಶಗಳ ವಿಧಾನವನ್ನು ಕಂಡುಹಿಡಿಯಲು ಪ್ರಯತ್ನಿಸಿರಿ. ಅಲ್ಲದೆ ಪ್ರತೀ ಮಾತಿಗೂ ಸೂಕ್ತವಾದ ತಲೆಬರಹವನ್ನು ಕೊಡಿರಿ.

1. ಜ್ಞಾನೋ. 1:8–19
2. ಜ್ಞಾನೋ. 2:1–22
3. ಜ್ಞಾನೋ. 3:1–12
4. ಜ್ಞಾನೋ. 3:21–35
5. ಜ್ಞಾನೋ. 4:1–9
6. ಜ್ಞಾನೋ. 4:10–19
7. ಜ್ಞಾನೋ. 4:20–27

8. ಜ್ಞಾನೋ. 5:1–23
9. ಜ್ಞಾನೋ. 6:26–35
10. ಜ್ಞಾನೋ. 7:1–27

ಜ್ಞಾನದ ಎರಡನೇ ವೈರಿ (ಅಧ್ಯಾಯ 1, 5, 6, 7)

ಪೀಠಿಕೆ

ಈ ಪಾಠದಲ್ಲಿ ನಾವು ಜ್ಞಾನದ ಎರಡನೇ ವೈರಿಯಾದ ಲೈಂಗಿಕ ಅನೈತಿಕತೆ, ವ್ಯಭಿಚಾರದ ಬಗ್ಗೆ ನೋಡುವುದಕ್ಕಿದ್ದೇವೆ. ಅಲ್ಲದೆ ಈ ನಾಲ್ಕು ವಾಕ್ಯಭಾಗಗಳನ್ನು ನಾವು ಅಭ್ಯಾಸಿಸಲಿದ್ದೇವೆ:

1. ಜ್ಞಾನೋ. 2:16–19
2. ಜ್ಞಾನೋ. 5:1–23
3. ಜ್ಞಾನೋ. 6:20–35
4. ಜ್ಞಾನೋ. 7:1–27

ಪ್ರಶ್ನೆಗಳು

1. "ಜಾರಳ ಮನೆಯು ಪಾತಳಕ್ಕೆ ಇಳಿಯುವ ದಾರಿ, ಅವಳ ಮಾರ್ಗಗಳು ಪ್ರೇತಲೋಕಕ್ಕೆ ಹೋಗುತ್ತವೆ" (2:18) ಮತ್ತು "ಅವಳ ಬಳಿಗೆ ಹೋಗುವವರು ಯಾರು ಹಿಂದಿರುಗುವುದಿಲ್ಲ. ಅವರಿಗೆ ಜೀವದ ಮಾರ್ಗವು ದೊರೆಯುವುದಿಲ್ಲ" (2:19) ಎಂದು ನೀವು ಏಕೆ ಭಾವಿಸುತ್ತೀರಿ?
2. 5:3–6 ರಲ್ಲಿ "ಜಾರಸ್ತ್ರೀ" ("ಸಡಿಲವಾದ ಮಹಿಳೆ") ಅನ್ನು ಹೇಗೆ ವಿವರಿಸಲಾಗಿದೆ? ನಿಮ್ಮ ಸ್ವಂತ ಪದಗಳನ್ನು ಬಳಸಿ ಮತ್ತು ರೂಪಾಲಂಕಾರಗಳನ್ನು ವಿವರಿಸಿರಿ.
3. ಯೌವನಸ್ಥರು ಜಾರಸ್ತ್ರೀಯ ಬಳಿಗೆ ಯಾಕೆ ಹೋಗಬಾರದು (5:7–14)?
4. 5:15–17 ರಲ್ಲಿ ಭೋದಕನು ತನ್ನ ಲೈಂಗಿಕ ಜೀವನವನ್ನು ಮದುವೆಯ ಚೌಕಟ್ಟಿನೊಳಗೆ ಇಟ್ಟುಕೊಳ್ಳಬೇಕೆಂದು ಯೌವನಸ್ಥನಿಗೆ ಉತ್ತೇಜಿಸಲು "ನೀರಿನ ರೂಪಾಲಂಕಾರಗಳನ್ನು" ಬಳಸುತ್ತಾನೆ. ಈ ರೂಪಾಲಂಕಾರಗಳನ್ನು ಅರ್ಥೈಸಿಕೊಳ್ಳಿ ಮತ್ತು ಬಳಸಿದ ವಿಧಾನವನ್ನು ವಿವರಿಸಿ.
5. 5:18–19 ರಲ್ಲಿ ವೈವಾಹಿಕ ಪ್ರೀತಿಯನ್ನು ಹೇಗೆ ಚಿತ್ರಿಸಲಾಗಿದೆ?
6. ಯೌವನಸ್ಥನು ಜಾರ ಸ್ತ್ರೀಯನ್ನು ಅಲ್ಲ, ತನ್ನ ಹೆಂಡತಿಯನ್ನು ಆಯ್ಕೆ ಮಾಡಲು ಸಹಾಯ ಮಾಡಲು 5:20–23 ರಲ್ಲಿ ಶಿಕ್ಷಕನು ಯಾವ ವಾದಗಳನ್ನು ಬಳಸುತ್ತಾನೆ?
7. 6:20–35 ವಾಕ್ಯಭಾಗವು ಅನೇಕ ಸತ್ಯವೇದಗಳಲ್ಲಿ "ವ್ಯಭಿಚಾರಕ್ಕೆ ವಿರುದ್ಧವಾಗಿ ಎಚ್ಚರಿಕೆ" ಎಂಬ ಶಿರ್ಷಿಕೆಯನ್ನು ಒಳಗೊಂಡಿದೆ.

   ಅ. ಈ ವಾಕ್ಯಭಾಗವನ್ನು ನೀವು ಹೇಗೆ ರಚನೆಗೊಳಿಸುವಿರಿ?

   ಆ. ವಚನ 27–28 ರಲ್ಲಿನ ಉದಾಹರಣೆಗಳನ್ನು ಅಭ್ಯಾಸಿಸಿರಿ. ಅವುಗಳನ್ನು ಗುರುತಿಸಿರಿ. ಅವು ಏನನ್ನು ತಿಳಿಸುತ್ತವೆ?

   ಇ. 6:30–35 ರಲ್ಲಿ ಬೋಧಕನು ವ್ಯಭಿಚಾರವನ್ನು ಕಳ್ಳತನದೊಂದಿಗೆ ಹೋಲಿಸಿದ್ದಾನೆ. ಹೇಗೆ ಎಂದು ವಿವರಿಸಿರಿ?
8. 7:1–27 ರಲ್ಲಿ "ತಂದೆಯ ಮಾತು" ಅನ್ನು ನಾವು ಕಾಣುತ್ತೇವೆ. ಅದನ್ನು ಹೇಗೆ ರಚಿಸಬಹುದು?
9. 7:1–27 ರಲ್ಲಿ ವಿವಿಧ ಭಾಗಗಳಲ್ಲಿ ಯಾರು ಮಾತನಾಡುತ್ತಾರೆ?
10. 7:3–4 ರಲ್ಲಿ ಬಳಸಲಾದ ರೂಪಾಲಾಂಕಾರಗಳನ್ನು ವಿವರಿಸಿರಿ.
11. 7:3–4 ರಲ್ಲಿನ ಜಾರಸ್ತ್ರೀಯು ಯೌವನಸ್ಥನನ್ನು ಹೇಗೆ ಮೋಹಿಸುತ್ತಾಳೆ?
12. ಬೋಧಕನು ಯೌವನಸ್ಥನನ್ನು ಎಚ್ಚರಿಸಲು 7:24–27 ರಲ್ಲಿ ಯಾವ ವಾದಗಳನ್ನು ಬಳಸುತ್ತಾನೆ?

ಜ್ಞಾನದ ಎರಡನೇ ವೈರಿ ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಮೊದಲ ಎರಡು "ಜ್ಞಾನದ ವೈರಿಗಳನ್ನು" ಹೋಲಿಸಿರಿ. ಇಂದು ಭಾರತದಲ್ಲಿ ಯೌವನಸ್ಥರಿಗೆ ಇರುವ ದೊಡ್ಡ ಶೋಧನೆ ಯಾವುದು? ಕೆಟ್ಟ ಸ್ನೇಹಿತರು/ಗುಂಪುಗಳು ಅಥವಾ ವೇಶ್ಯೆಯರು/ಜಾರಸ್ತ್ರೀಯರು? ಯಾಕೆ?
2. ಭಾರತದಲ್ಲಿ ವೇಶ್ಯಾವಾಟಿಕೆ ತುಂಬಾ ಸಾಮಾನ್ಯವಾಗಿದೆ. ಕೆಂಪುದೀಪದ ಜಿಲ್ಲೆಗಳನ್ನು ಹೊಂದಿರುವ ದೊಡ್ಡ ನಗರಗಳಲ್ಲಿ ಹಾಗೂ ಸಣ್ಣ ಪಟ್ಟಣಗಳು ಮತ್ತು ಹಳ್ಳಿಗಳಲ್ಲಿ. ಅದಕ್ಕೆ ಕಾರಣ ಏನಿರಬಹುದು?
3. "ಅಧಿಕಾರ, ಹಣ ಮತ್ತು ಹೆಣ್ಣು" ಇವು ಕ್ರೈಸ್ತ ನಾಯಕರಿಗೆ ಇರುವ ಮೂರು ದೊಡ್ಡ ಶೋಧನೆಗಳು ಎಂದು ಹೇಳಲಾಗುತ್ತದೆ. ವ್ಯಭಿಚಾರದ ಪರಿಣಾಮವಾಗಿ ಹೆಚ್ಚಿನ ಸಂಖ್ಯೆಯ ಭಾರತದ ಪ್ರಮುಖ ಕ್ರೈಸ್ತ ನಾಯಕರುಗಳು ತಮ್ಮ ಸೇವೆಯನ್ನು ಸಂಪೂರ್ಣವಾಗಿ ನಾಶಪಡಿಸಿಕೊಂಡಿದ್ದಾರೆ. ಹೇಗೆ ಅವರು ಅಷ್ಟು ಮೂರ್ಖರಾಗಿರಬಹುದು?
4. ಲೈಂಗಿಕ ಅನೈತಿಕತೆಯ ಅಪಾಯಗಳಿಂದ ನಮ್ಮನ್ನು ರಕ್ಷಿಸಿಕೊಳ್ಳಲು ನಾವು ಏನನ್ನು ಮಾಡಬಹುದು?

ಜ್ಞಾನದ ಮೂರನೇ ಮತ್ತು ನಾಲ್ಕನೇ ವೈರಿಗಳು (ಅಧ್ಯಾಯ 1–7)

ಪೀಠಿಕೆ

ಈ ಪಾಠದಲ್ಲಿ ನಾವು ಜ್ಞಾನದ ಕಡೆಯ ಎರಡು ವೈರಿಗಳನ್ನು ನೋಡುವವರಾಗಿದ್ದೇವೆ. ವೈರಿಯು ಚಿತ್ತಭ್ರಮಣಿಗೊಳಿಸುವನು ಎನ್ನುವುದಕ್ಕೆ ಇನ್ನೊಂದು ಪದವೆಂದರೆ ಯಾರಾದರು ಅಥವಾ ಏನಾದರೂ ಯೌವನಸ್ಥನನ್ನು ಜ್ಞಾನದ ಮಾರ್ಗವನ್ನು ಹಿಡಿಯುವುದರಿಂದ ಚಿತ್ತಭ್ರಮಣಿಗೊಳಿಸುವುದು (ಮನಸ್ಸನ್ನು ತಿರುಗಿಸುವುದು, ಬೇರೆಡೆಗೆ ಸೆಳೆಯುವದು). ಹಿಂದಿನ ಎರಡು ಪಾಠಗಳಲ್ಲಿ ನಾವು ಇಬ್ಬರು ಚಿತ್ತಭ್ರಮಣಿಗೊಳಿಸುವವರ ಬಗ್ಗೆ ಅಭ್ಯಾಸಿಸಿದೆವು:

ಅ. ಸಾಧ್ಯವಾದಷ್ಟುಮಟ್ಟಿಗೆ ಒಬ್ಬ ಯೌವನಸ್ಥನನ್ನು ದೇವರಿಗೆ ಭಯಭಕ್ತಿಯುಳ್ಳ, ಜ್ಞಾನದ ಜೀವಿತದಿಂದ ದೂರಮಾಡುವ ಪಾಪಿಷ್ಟರ ಮತ್ತು ದುಷ್ಟರ ಗುಂಪುಗಳು ಅಥವಾ ಸಹವಾಸ.

ಆ. ಕೆಟ್ಟ ಹೆಂಗಸು (ನಮ್ಮ ಭಾಷಾಂತರದಲ್ಲಿ "ಜಾರಸ್ತ್ರೀ, ವ್ಯಭಿಚಾರಿಣಿ ಅಥವಾ ವೇಶ್ಯೆ ಎಂದು ಕರೆಯಲ್ಪಟ್ಟಿದೆ). ಈಕೆಯು ಒಬ್ಬ ಯೌವನಸ್ಥನನ್ನು ಭಕ್ತಿಯುಳ್ಳ ಜೀವಿತದಿಂದ ಅನೈತಿಕ ಜೀವನ ಶೈಲಿಗೆ ಹೋಗುವಂತೆ ಪ್ರೇರೇಪಿಸುತ್ತಾಳೆ.

ಉಳಿದೆರೆಡೆಂದರೆ:

ಇ. ಸೋಮಾರಿತನ

ಈ. ಜ್ಞಾನವನ್ನು ತಿರಸ್ಕರಿಸುವ ಅಪಹಾಸ್ಯಗಾರರು

ಹಿರಿಯರ ಬೋಧನೆ ಮತ್ತು ಮಾರ್ಗದರ್ಶನಗಳನ್ನು ಕೇಳಿ ಅವುಗಳಿಗೆ ವಿಧೇಯರಾಗಬೇಕೆಂದು ಯೌವನಸ್ಥರಿಗೆ ಪದೇ ಪದೇ ಪ್ರಬೋಧಿಸಲಾಗಿದೆ. ಆದರೆ ಕೆಲವರು ಈ ರೀತಿ ಮಾಡಲು ತಿರಸ್ಕರಿಸುತ್ತಾರೆ. ಮತ್ತು ಉಳಿದವರು ಜ್ಞಾನದ ಮಾರ್ಗದ ಬಗ್ಗೆ ತಲೆಕೆಡಿಸಿಕೊಳ್ಳುವುದೇ ಇಲ್ಲ. ಇಂಥ ಜನರನ್ನು "ಕುಚೋದ್ಯಗಾರ" ರೆಂದು ಕರೆಯಾಲಾಗಿದೆ. ಗೇಲಿ ಅಥವಾ ಕುಚೋದ್ಯ ಎಂದರೆ – ಪರಿಹಾಸ್ಯ ಮಾಡುವುದು, ಅಲಕ್ಷಿಸು, ಅಣಕವಾಡು, ವ್ಯಂಗ್ಯವಾಡು, ನಗುವುದು ಎಂದರ್ಥವಾಗಿದೆ. ಅವರು ತಂದೆತಾಯಿಂದಿರನ್ನು ಹಾಸ್ಯಮಾಡುವರು ಮತ್ತು ಹೇಗೆ ನೀತಿವಂತರ ಮಾರ್ಗವನ್ನು ಹಿಂಬಾಲಿಸಬೇಕು ಮತ್ತು ದುಷ್ಟರ ಮಾರ್ಗಗಳಿಂದ ದೂರವಿರಬೇಕೆಂಬ ಅವರ ಸಂದೇಶವನ್ನು ಅಣಕಿಸುತ್ತಾರೆ.

ಪ್ರಶ್ನೆಗಳಿಗೆ ಉತ್ತರಿಸುವ ಮುನ್ನ ಕೆಳಕಂಡ ವಾಕ್ಯಭಾಗಗಳನ್ನು ಓದಿರಿ.

ಅ. ಜ್ಞಾನೋ. 6:6–11

ಆ. ಜ್ಞಾನೋ. 1:8 ಮತ್ತು 1:24–27

ಇ. ಜ್ಞಾನೋ. 3:1, 11, 21 ಮತ್ತು 34

ಈ. ಜ್ಞಾನೋ. 5:1, 7, 11–14

ಉ. ಜ್ಞಾನೋ. 7:1, 24–27

ಪ್ರಶ್ನೆಗಳು

1. ಸೋಮಾರಿಗೆ ಸವಾಲಿಡಲು ಶಿಕ್ಷಕ/ತಂದೆ ಇರುವೆಯ ಉದಾಹರಣೆಯನ್ನು ಬಳಸುತ್ತಾನೆ (6:6–9). ಆತನು ಹೇಳುವ ಅಂಶಗಳೇನು?
2. 6:11 ರಲ್ಲಿನ ಉಪಮೆಗಳನ್ನು ವಿವರಿಸಿ.
3. 6:17–19 ರಲ್ಲಿನ ಪದ್ಯರೂಪಿ ರಚನೆಯನ್ನು ವಿಶ್ಲೇಷಿಸಿರಿ.
4. ಅಧ್ಯಾಯ 1 ರಲ್ಲಿನ ವಾಕ್ಯಗಳಿಂದ ನೀವು ಯಾವ ತೀರ್ಮಾನವನ್ನು ತೆಗೆದುಕೊಳ್ಳಬಹುದು?
5. ಅಧ್ಯಾಯ 3 ರಲ್ಲಿನ ವಾಕ್ಯಗಳಿಂದ ನೀವು ಯಾವ ತೀರ್ಮಾನವನ್ನು ತೆಗೆದುಕೊಳ್ಳಬಹುದು?

6. ಅಧ್ಯಾಯ 5 ರಲ್ಲಿನ ವಾಕ್ಯಗಳಿಂದ ನೀವು ಯಾವ ತೀರ್ಮಾನವನ್ನು ತೆಗೆದುಕೊಳ್ಳಬಹುದು?
7. ಅಧ್ಯಾಯ 7 ರಲ್ಲಿನ ವಾಕ್ಯಗಳಿಂದ ನೀವು ಯಾವ ತೀರ್ಮಾನವನ್ನು ತೆಗೆದುಕೊಳ್ಳಬಹುದು?

ಜ್ಞಾನದ ಮೂರನೇ ಮತ್ತು ನಾಲ್ಕನೇ ವೈರಿಗಳು ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಜ್ಞಾನದ ಮೊದಲ ಎರಡು ವೈರಿಗಳು ಕೊನೆಯ ಎರಡಕ್ಕಿಂತ ಭಿನ್ನವಾಗಿವೆ. ಹೇಗೆ ಎಂಬುದನ್ನು ವಿವರಿಸಿರಿ?
2. ಭಾರತೀಯ ಸಂಸ್ಕೃತಿಯಲ್ಲಿ ಸೋಮಾರಿತನವು ವ್ಯಕ್ತಿಯನ್ನು (ಯುವಕ ಅಥವಾ ವೃದ್ಧ, ಪುರುಷ ಅಥವಾ ಮಹಿಳೆ) ಭಕ್ತಿಯುತ ಜೀವಿತದಿಂದ, ಜ್ಞಾನದ ಜೀವಿತದಿಂದ ಹೇಗೆ ವಿಚಲಿತಗೊಳಿಸಬಹುದು?.
3. ಸೋಮಾರಿತನದ ಬಗ್ಗೆ ನಿಮ್ಮ ಸ್ವಂತ ಅನುಭವವೇನು? ನಮ್ಮ ಕ್ರೈಸ್ತೀಯ ಜೀವನದಲ್ಲಿ ಮತ್ತು ಸೇವೆಯಲ್ಲಿ ನಾವು ಸೋಮಾರಿತನ ವಿರುದ್ಧ ನಾವು ಹೇಗೆ ಹೋರಾಡಬಹುದು?
4. "ಅಪಹಾಸ್ಯ"ವು ಒಬ್ಬ ವ್ಯಕ್ತಿಯನ್ನು (ಯುವಕ ಅಥವಾ ವೃದ್ಧ, ಪುರುಷ ಅಥವಾ ಮಹಿಳೆ) ಭಕ್ತಿಯುತ ಜೀವನದಿಂದ, ಜ್ಞಾನದ ಜೀವನದಿಂದ ಹೇಗೆ ಬೇರಡೆಗೆ ಸೆಳೆಯಬಹುದು?
5. ನಿಮ್ಮ ಸಭೆಯಲ್ಲಿ ಮತ್ತು ನಿಮ್ಮ ಸೇವೆಯಲ್ಲಿ ಎಂದಾದರು "ಅಪಹಾಸ್ಯ ಮಾಡುವವರನ್ನು" ನೀವು ನೋಡಿದ್ದೀರಾ? ನಿಮ್ಮ ಗುಂಪಿನಲ್ಲಿ ಹಂಚಿಕೊಳ್ಳಿರಿ. ಅಂತಹ ಜನರೊಂದಿಗೆ ನಾವು ಹೇಗೆ ವ್ಯವಹರಿಸಬಹುದು (ಅಥವಾ ಸಹಾಯ ಮಾಡಬಹುದು)?

ಜ್ಞಾನದ ರೂಪುರೇಖೆ (ಅಧ್ಯಾಯ 1–4)

ಪೀಠಿಕೆ

ಜ್ಞಾನೋಕ್ತಿಯ 8 ನೇ ಅಧ್ಯಾಯವು ಜ್ಞಾನದ ಒಂದು ಪೂರ್ಣ ಚಿತ್ರಣವನ್ನು ಕೊಡುತ್ತದೆ. ಆದರೆ ಮೊದಲ 4 ಅಧ್ಯಾಯಗಳಲ್ಲಿ ನಾವು ಈಗಾಗಲೇ ಆಕೆಯ ಅನೇಕ ರೂಪುರೇಖೆಗಳನ್ನು ನೋಡಿದ್ದೇವೆ:

1. ಜ್ಞಾನವು ಒಂದು ಸಾರ್ವಜನಿಕ ನಿವೇದಕ (1:20–33).
2. ಜ್ಞಾನವು ಹುಡುಕುವ ಒಂದು ನಿಧಿಯಾಗಿದೆ (2:1–9).
3. ಜ್ಞಾನವು ಒಂದು ಮನೋಹರವಾದ ವ್ಯಕ್ತಿತ್ವವನ್ನು ಒಳಗೊಂಡಿದೆ (2:10–15).
4. ಜ್ಞಾನವು ಒಂದು ಜೀವವೃಕ್ಷವಾಗಿದೆ (3:13–18).
5. ಜ್ಞಾನವು ಗಮನಕೊಡುವುದು, ಸಂಪಾದಿಸುವ, ಘನಪಡಿಸುವ ಮತ್ತು ಅಪ್ಪಿಕೊಳ್ಳಬಹುದಾದ ಒಂದು ಸಂಗತಿಯಾಗಿದೆ (4:1–9).
6. ಜ್ಞಾನವು ನ್ಯಾಯದ ಪರವಾಗಿ ನಿಲ್ಲುತ್ತದೆ (2:6–15).
7. ಜ್ಞಾನವು ನಮ್ಮ ವೈಯಕ್ತಿಕ ಜೀವನದಲ್ಲಿ ನಮ್ಮ ಕುಟುಂಬಗಳಲ್ಲಿ, ನಮ್ಮ ಸಮಾಜದಲ್ಲಿ, ಜಗತ್ತಿನಲ್ಲಿ, ಸೃಷ್ಟಿಯಲ್ಲಿ ಕ್ರಮದ ಪರವಾಗಿ ನಿಲ್ಲುತ್ತದೆ.
8. ಜ್ಞಾನವು ಸೃಷ್ಟಿಯ ಕ್ರಮಬದ್ಧವಾದ ವಿಧಾನವನ್ನು ಉದಾಹರಿಸುತ್ತದೆ (3:9–20).

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವ ಮೊದಲು, ಮೇಲೆ ಉಲ್ಲೇಖಿಸಲಾದ ಭಾಗಗಳನ್ನು ಓದಿ.

ಪ್ರಶ್ನೆಗಳು

1. ಜ್ಞಾನ ಒಬ್ಬ ಸಾರ್ವಜನಿಕ ನಿವೇದಕ (1:20–33): ಜ್ಞಾನದ ಕುರಿತಾದ ಪ್ರಾಮುಖ್ಯ ಅವಲೋಕನಗಳನ್ನು ಪಟ್ಟಿ ಮಾಡಿರಿ: ಅವಳು ಹೇಗಿದ್ದಾಳೆ? ಅವಳು ಯಾವುದರ ಪರವಾಗಿದ್ದಾಳೆ? ಜನರು ಆಕೆಯೊಂದಿಗೆ ಹೇಗೆ ವ್ಯವಹರಿಸಬೇಕು?
2. ಜ್ಞಾನವು ಹುಡುಕುವ ಒಂದು ನಿಧಿಯಾಗಿದೆ. (2:1–9): ಜ್ಞಾನದ ಕುರಿತಾಗಿನ ಅವಲೋಕನಗಳನ್ನು ಪಟ್ಟಿ ಮಾಡಿರಿ. ಅವಳು ಹೇಗಿದ್ದಾಳೆ? ಅವಳು ಯಾವುದರ ಪರವಾಗಿದ್ದಾಳೆ? ಜನರು ಆಕೆಯೊಂದಿಗೆ ಹೇಗೆ ವ್ಯವಹರಿಸಬೇಕು?
3. ಜ್ಞಾನದ ಮನೋಹರವಾದ ವ್ಯಕ್ತಿತ್ವ (2:10–15): ಜ್ಞಾನದ ಕುರಿತಾಗಿನ ಪ್ರಮುಖ ಅವಲೋಕಗಳನ್ನು ಪಟ್ಟಿ ಮಾಡಿರಿ: ಅವಳು ಹೇಗಿದ್ದಾಳೆ? ಅವಳು ಯಾವುದರ ಪರವಾಗಿದ್ದಾಳೆ? ಜನರು ಆಕೆಯೊಂದಿಗೆ ಹೇಗೆ ವ್ಯವಹರಿಸಬೇಕು?
4. ಜ್ಞಾನವು ಒಂದು ಜೀವದ ಮರವಾಗಿದೆ (3:13–18): ಜ್ಞಾನದ ಕುರಿತಾಗಿನ ಪ್ರಮುಖ ಅವಲೋಕನಗಳನ್ನು ಪಟ್ಟಿ ಮಾಡಿರಿ: ಅವಳು ಹೇಗಿದ್ದಾಳೆ? ಅವಳು ಯಾವುದರ ಪರವಾಗಿದ್ದಾಳೆ? ಜನರು ಆಕೆಯೊಂದಿಗೆ ಹೇಗೆ ವ್ಯವಹರಿಸಬೇಕು?
5. ಜ್ಞಾನವು ಗಮನ ಕೊಡಬೇಕಾದ, ಗಳಿಸಬೇಕಾದ, ಗೌರವಿಸಬೇಕಾದ ಮತ್ತು ಅಪ್ಪಿಕೊಳ್ಳಬೇಕಾದ ವಿಷಯ (4:1–9): ಜ್ಞಾನದ ಕುರಿತಾಗಿನ ಅವಲೋಕನಗಳನ್ನು ಪಟ್ಟಿ ಮಾಡಿರಿ. ಅವಳು ಹೇಗಿದ್ದಾಳೆ? ಅವಳು ಯಾವುದರ ಪರವಾಗಿದ್ದಾಳೆ? ಜನರು ಆಕೆಯೊಂದಿಗೆ ಹೇಗೆ ವ್ಯವಹರಿಸಬೇಕು?
6. ಜ್ಞಾನವು ನ್ಯಾಯವನ್ನು ಪ್ರತಿನಿಧಿಸುತ್ತದೆ (2:6–15): ಜ್ಞಾನದ ಕುರಿತಾಗಿನ ಪ್ರಮುಖ ಅವಲೋಕನಗಳನ್ನು ಪಟ್ಟಿ ಮಾಡಿರಿ: ಅವಳು ಹೇಗಿದ್ದಾಳೆ? ಅವಳು ಯಾವುದರ ಪರವಾಗಿದ್ದಾಳೆ? ಜನರು ಆಕೆಯೊಂದಿಗೆ ಹೇಗೆ ವ್ಯವಹರಿಸಬೇಕು?

7. ಜ್ಞಾನವು ಸೃಷ್ಟಿಯ ಕ್ರಮವನ್ನು ತಿಳಿಸುತ್ತದೆ (3:19–20): ಜ್ಞಾನದ ಕುರಿತಾಗಿನ ಪ್ರಮುಖ ಅವಲೋಕನಗಳನ್ನು ಪಟ್ಟಿ ಮಾಡಿರಿ: ಅವಳು ಹೇಗಿದ್ದಾಳೆ? ಅವಳು ಯಾವುದರ ಪರವಾಗಿದ್ದಾಳೆ? ಜನರು ಆಕೆಯೊಂದಿಗೆ ಹೇಗೆ ವ್ಯವಹರಿಸಬೇಕು?

ಜ್ಞಾನದ ರೂಪುರೇಖೆ ಆಲೋಚಿಸಿರಿ ಮತ್ತು ಚರ್ಚಿಸಿರಿ

1–7 ಪ್ರಶ್ನೆಗಳಿಗೆ ಉತ್ತರಗಳನ್ನು ನೋಡಿ. ನಿಮ್ಮ ಜೀವಿತ ಮತ್ತು ಸೇವೆಗಾಗಿ ಜ್ಞಾನದ ಬಗ್ಗೆ ನೀವು ಏನು ಕಲಿಯಬಲ್ಲಿರೆಂದು ಪಟ್ಟಿ ಮಾಡಿರಿ. ಏಕೆ ಮತ್ತು ಹೇಗೆ ಎಂಬುದನ್ನು ವಿವರಿಸಿರಿ.

ಜ್ಞಾನದ ಪ್ರಯೋಜನಗಳು ಮತ್ತು ದೇವರು ಹಗೆ ಮಾಡುವ ಏಳು ಸಂಗತಿಗಳು (ಅಧ್ಯಾಯ 3, 4, 6)

ಪೀಠಿಕೆ

ಜ್ಞಾನೋಕ್ತಿಗಳು ಪುಸ್ತಕದ ಮೊದಲ ವಿಭಾಗವನ್ನು ಮುಗಿಸುವುದಕ್ಕಿಂತ ಮುನ್ನ ನಾವು ಈ ಹಿಂದೆ ನೋಡದೇ ಇರುವ ನಾಲ್ಕು ವಾಕ್ಯಭಾಗಗಳನ್ನು ಸಂಕ್ಷಿಪ್ತವಾಗಿ ನೋಡೋಣ:

ಅ. ಜ್ಞಾನೋ. 3:1–10 ಜ್ಞಾನದ ಕೆಲವು ಪ್ರಯೋಜನಗಳ ಬಗ್ಗೆ ಆಗಿದೆ.

ಆ. ಜ್ಞಾನೋ. 3:21–26 ಜ್ಞಾನದ ಇನ್ನೂ ಕೆಲವು ಪ್ರಯೋಜನಗಳನ್ನು ತಿಳಿಸುತ್ತದೆ.

ಇ. ಜ್ಞಾನೋ. 4:20–27 ಜ್ಞಾನಕ್ಕೆ ಆಳವಾದ ಗಮನಕೊಡುವುದರ ಪ್ರಾಮುಖ್ಯತೆಯ ಕುರಿತಾಗಿದೆ.

ಈ. ಜ್ಞಾನೋ. 6:16–19 ದೇವರು ಹಗೆಮಾಡುವ 7 ಸಂಗತಿಗಳ ಪಟ್ಟಿ.

ಈ ವಾಕ್ಯಭಾಗದ ಮೊದಲ 3 **"ನನ್ನ ಕಂದಾ"** ಎಂಬುದರಿಂದ ಪ್ರಾರಂಭವಾಗುತ್ತವೆ. ಹಾಗಾಗಿ ಇವು ಒಬ್ಬ ತಂದೆಯಿಂದ ಮಗನಿಗೆ ಅಥವಾ ಒಬ್ಬ ಜ್ಞಾನ ಬೋಧಕನಿಂದ ತನ್ನ ಯೌವನಸ್ಥ ವಿದ್ಯಾರ್ಥಿಗೆ ಹೇಳುವ ಉಪದೇಶಗಳಾಗಿವೆ.

ಪ್ರಶ್ನೆಗಳು

1. 3:10 ಮತ್ತು 3:21–26 ಅನ್ನು ಓದಿರಿ. ಇಲ್ಲಿ ತಿಳಿಸಿದ ಜ್ಞಾನದ ಪ್ರಯೋಜನಗಳನ್ನು ಪಟ್ಟಿ ಮಾಡಿರಿ. ನಿಮ್ಮದೇ ಮಾತಿನಲ್ಲಿ ಅವನ್ನು ವಿವರಿಸಿರಿ.
2. ನಿಮ್ಮ ಹಿಂದಿನ ಪ್ರಶ್ನೆಗೆ ನಿಮ್ಮ ಉತ್ತರವನ್ನು ನೋಡಿ, **"ಜ್ಞಾನ"** ಅಥವಾ **"ದೇವರ ಭಯ"** ನಮಗೆ ತರುವ ಪ್ರಯೋಜನಗಳ ಪಟ್ಟಿಯನ್ನು ಮಾಡಿ. ಈ ವಾಕ್ಯ ಭಾಗಗಳಿಗೆ ಹೋಗಿ ಮತ್ತು ಹೇಗೆ ಈ ಪ್ರಯೋಜನಗಳು ಬುದ್ಧಿ ಮಾತುಗಳಿಗೆ ಕಿವಿಗೊಡುವುದು ಮತ್ತು ಜ್ಞಾನದ ಮಾರ್ಗವನ್ನು ಹಿಂಬಾಲಿಸುವುದರ ಫಲಿತಾಂಶ ಎಂಬುದನ್ನು ಪಟ್ಟಿ ಮಾಡಿರಿ.
3. 4:20–27 ಅನ್ನು ಓದಿರಿ. ನಮ್ಮ ದೈನಂದಿನ ಜೀವನದಲ್ಲಿ ಜ್ಞಾನದ ನುಡಿಗಳಿಗೆ ಹೆಚ್ಚು ಗಮನ ಕೊಡುವುದರ ಅರ್ಥವೇನೆಂದು ನಿಮ್ಮ ಸ್ವಂತ ಮಾತುಗಳಲ್ಲಿ ವಿವರಿಸಿರಿ.
4. 6:16–19 ಅನ್ನು ಓದಿರಿ. ದೇವರು ಹಗೆ ಮಾಡುವ ಏಳು ಸಂಗತಿಗಳನ್ನು ನಿಮ್ಮದೇ ಮಾತಿನಲ್ಲಿ ವಿವರಿಸಿ.

ಜ್ಞಾನದ ಪ್ರಯೋಜನಗಳು ಮತ್ತು ದೇವರು ಹಗೆ ಮಾಡುವ ಏಳು ಸಂಗತಿಗಳು ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಪ್ರಶ್ನೆಗಳು 1 ಮತ್ತು 2 ಕ್ಕೆ ನಿಮ್ಮ ಉತ್ತರಗಳನ್ನು ಪರಿಶೀಲಿಸಿರಿ. **"ದೇವರಿಗೆ ಭಯಪಡುವುದರ"** ಕುರಿತಾದ ಈ ಉತ್ತರಗಳಿಂದ ನಿಮ್ಮ ಸ್ವಂತ ಜೀವಿತಕ್ಕಾಗಿ ಏನನ್ನು ಕಲಿಯಬಹುದು?
2. ಪ್ರಶ್ನೆ 3 ಕ್ಕೆ ನಿಮ್ಮ ಉತ್ತರವನ್ನು ಮತ್ತೊಮ್ಮೆ ನೋಡಿ. ನಿಮ್ಮ ಹೃದಯ, ಬಾಯಿ, ಕಣ್ಣು ಮತ್ತು ಕಾಲುಗಳ ಮೂಲಕ ನೀವು ಎದುರಿಸುವ ಶೋಧನೆಗಳು ಯಾವುವು? ಯೌವ್ವನಸ್ಥ ವಿಶ್ವಾಸಿಗಳ ಹೃದಯ, ಬಾಯಿ, ಕಣ್ಣುಗಳು ಮತ್ತು ಕಾಲುಗಳನ್ನು ಕಾಪಾಡಲು ನೀವು (ಮತ್ತು ನಿಮ್ಮ ಸಭೆ) ಏನು ಮಾಡಬಹುದು?
3. ದೇವರು ಹಗೆ ಮಾಡುವ ಏಳು ಸಂಗತಿಗಳಲ್ಲಿ (6:16–19) ನಿಮಗೆ ವೈಯಕ್ತಿಕವಾಗಿ ಯಾವ ಸಮಸ್ಯೆಗಳಿವೆ? ಹೇಗೆ ಎಂದು ವಿವರಿಸಿರಿ. ಹಾಗಾದರೆ, ನಿಮ್ಮ ಸಮಸ್ಯೆಗಳ ಬಗ್ಗೆ ನೀವು ಏನು ಮಾಡಲು ಪ್ರಯತ್ನಿಸುತ್ತಿದ್ದೀರಿ?

ಜ್ಞಾನವು ವರ್ಣಿಸಲ್ಪಟ್ಟದ್ದು, ಚಿತ್ರಿಸಲ್ಪಟ್ಟದ್ದು (ಅಧ್ಯಾಯ 8)

ಪೀಠಿಕೆ

ಜ್ಞಾನೋಕ್ತಿಗಳ 8 ನೇ ಅಧ್ಯಾಯವು ಜ್ಞಾನದ ಒಂದು ಪೂರ್ಣ ಚಿತ್ರಣವನ್ನು ಕೊಡುತ್ತದೆ. ಒಬ್ಬ ಸತ್ಯವೇದ ಪಂಡಿತರು ಈ ಅಧ್ಯಾಯವನ್ನು **"ಹಳೇ ಒಡಂಬಡಿಕೆಯ ಶಿಷ್ಯತ್ವದ ಶಿಖರ"** ವೆಂದು ಕರೆದಿದ್ದಾರೆ. ಹಾಗಾಗಿ ಯೆಹೂದಿ ನೀತಿಶಾಸ್ತ್ರ ಮತ್ತು ಜೀವನದ ಮಾರ್ಗವನ್ನು ಅರಿತುಕೊಳ್ಳಲು ಈ ಅಧ್ಯಯನವು ನಮಗೆ ಸಹಾಯಿಸುತ್ತದೆ.

ಈ ಅಧ್ಯಾಯದುದ್ದಕ್ಕೂ ಜ್ಞಾನವು ಒಬ್ಬ ಸ್ತ್ರೀಯಾಗಿ ವ್ಯಕ್ತೀಕರಿಸಲ್ಪಟ್ಟಿದ್ದಾಳೆ. ಇದನ್ನು ನಾವು ಕನ್ನಡದ **ಜೀವಿ** ಭಾಷಾಂತರದಲ್ಲಿ ಕಾಣಬಹುದು.

ಜ್ಞಾನದ ವ್ಯಕ್ತೀಕರಣವು ಕೇವಲ ಸಾಹಿತ್ಯದ ಚಿನ್ಹೆಯಲ್ಲವೆಂದು ಡೇವಿಡ್ ಆಟ್ಕಿನ್‌ಸನ್‌ರವರು ಹೇಳುತ್ತಾರೆ. ಇದು ಸತ್ಯವೇದದ ಜ್ಞಾನದ ಪ್ರಮುಖ ಲಕ್ಷಣವನ್ನು ಪ್ರತಿಬಿಂಬಿಸುತ್ತದೆ. ಜ್ಞಾನವು ದೇಹವನ್ನು ಧರಿಸಿದೆ. ಜ್ಞಾನವು ಜೀವಿಸುವುದಕ್ಕಾಗಿ ಇರುವುದಾಗಿದೆ. ಖಂಡಿತವಾಗಿ ದೈನಂದಿನ ಲೋಕದಲ್ಲಿ ಜೀವಿಸಿ ತೋರಿಸುವವರೆಗೂ ಯಾವುದನ್ನು ನಾವು ಸಹ ಸರಿಯಾಗಿ ತಿಳಿದುಕೊಳ್ಳಲು ಸಾಧ್ಯವಿಲ್ಲ.

ಪ್ರಶ್ನೆಗಳು

1. ಅಧ್ಯಾಯ 8 ಅನ್ನು ಓದಿರಿ. ಅದನ್ನು ಹೇಗೆ ರಚಿಸಬಹುದು?
2. 8:1–11 ಅನ್ನು ಅಭ್ಯಾಸಿಸಿರಿ ಮತ್ತು ನಿಮ್ಮದೇ ಮಾತಿನಲ್ಲಿ ಕೆಳಕಂಡ ಪ್ರಶ್ನೆಗಳನ್ನು ಉತ್ತರಿಸಿರಿ.
   ಅ. ಜ್ಞಾನವು ಜನರ ಗಮನವನ್ನು ಎಲ್ಲಿ ಕರೆಯುತ್ತಾಳೆ?
   ಆ. ಜ್ಞಾನವು ಯಾರನ್ನು ಸಂಭೋಧಿಸುತ್ತಾಳೆ?
   ಇ. ಜನರು ಜ್ಞಾನವನ್ನು ಏಕೆ ಕೇಳಬೇಕು?
   ಈ. ಜ್ಞಾನಕ್ಕೆ ಗಮನ ಕೊಡುವುದರಿಂದ ಸಿಗುಪ ಪ್ರತಿಫಲಗಳೇನು?
   ಉ. ಈ ವಾಕ್ಯಭಾಗವನ್ನು ನೀವು ಹೇಗೆ ಸಾರಾಂಶಗೊಳಿಸುವಿರಿ?
3. 8:12–21 ಅನ್ನು ಅಭ್ಯಾಸಿಸಿ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ:
   ಅ. ಜನರು ಜ್ಞಾನಕ್ಕೆ ಏಕೆ ಕಿವಿಗೊಡಬೇಕು?
   ಆ. ಈ ವಾಕ್ಯಭಾಗದಲ್ಲಿ **"ದೇವರಿಗೆ ಭಯಪಡುವುದು"** ಯಾವ ಸಂದರ್ಭದಲ್ಲಿ ಬಳಸಲಾಗಿದೆ?
4. 8:22:31 ಅನ್ನು ಅಭ್ಯಾಸಿಸಿ ಈ ಕೆಳಕಂಡ ಪ್ರಶ್ನೆಗಳನ್ನು ನಿಮ್ಮದೇ ಮಾತಿನಲ್ಲಿ ಉತ್ತರಿಸಿ.
   ಅ. ಈ ವಾಕ್ಯಭಾಗದಲ್ಲಿ ಜ್ಞಾನವು ತನ್ನ **"ವೈಯಕ್ತಿಕ ಸಾಕ್ಷಿ"**ಯನ್ನು ಕೊಡುತ್ತಾಳೆ. ಆಕೆಯ ಎರಡು ಮುಖ್ಯ ಅಂಶಗಳು ಯಾವವು?
   ಆ. ವಚನ 31 ರಿಂದ ನಾವು ಏನನ್ನು ಅರ್ಥೈಸಿಕೊಳ್ಳುತ್ತೇವೆ?
   ಇ. ಈ ವಾಕ್ಯಭಾಗದಲ್ಲಿನ ಸ್ವರ/ಭಾವವೇನು? ಮತ್ತು ಇದು ದೇವರು ಮತ್ತು ಆತನ ಸೃಷ್ಟಿಯ ಬಗ್ಗೆ ನಮಗೆ ಏನನ್ನು ಹೇಳುತ್ತದೆ?
5. 8:32–36 ಅನ್ನು ಅಭ್ಯಾಸಿಸಿರಿ ಮತ್ತು ಕೆಳಕಂಡ ಪ್ರಶ್ನೆಗಳನ್ನು ಉತ್ತರಿಸಿ, ಸಾಧ್ಯವಾದಷ್ಟು ನಿಮ್ಮ ಸ್ವಂತ ಮಾತುಗಳನ್ನು ಬಳಸಿ:
   ಅ. ಈ ವಾಕ್ಯಭಾಗವನ್ನು ನೀವು ಹೇಗೆ ರಚಿಸುತ್ತೀರಿ?
   ಆ. ಯಾರು ಧನ್ಯರು?
   ಇ. ಕೊನೆಯ ಎರಡು ವಚನಗಳನ್ನು ನಿಮ್ಮದೇ ಮಾತಿನಲ್ಲಿ ವಿವರಿಸಿರಿ.

ಜ್ಞಾನವು ವರ್ಣಿಸಲ್ಪಟ್ಟದ್ದು, ಚಿತ್ರಿಸಲ್ಪಟ್ಟದ್ದು ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಜ್ಞಾನವು ಆಕೆಯನ್ನು ಪ್ರೀತಿಸಿ ಮತ್ತು ಆಕೆಯ ಮಾತುಗಳಿಗೆ ಕಿವಿಗೊಡುವವರಿಗೆ (8:4:24) ಸಧ್ಯೋಚನೆ, ಸುಜ್ಞಾನ, ಸಾಮರ್ಥ್ಯ (8:14) ಮತ್ತು ಧನ, ಘನತೆ, ಶ್ರೇಷ್ಠ ಸಂಪತ್ತನ್ನು (8:18) ಕೊಡುತ್ತಿದೆ. ಹಾಗಾದರೆ ಯಾಕೆ ಪ್ರಭುಗಳು, ನಾಯಕರು, ರಾಜರು ಮತ್ತು ಭೂಪತಿಗಳು 8:15:16 ರಲ್ಲಿ ತಿಳಿಸಲ್ಪಟ್ಟಿದ್ದಾರೆ ಎಂದು ನೀವು ಯೋಚಿಸುವಿರಿ.

2. ಪ್ರಶ್ನೆ 3ಬಿ ಯ ಉತ್ತರವನ್ನು ನೋಡಿರಿ ನಂತರ ಈ ಪ್ರಶ್ನೆಗೆ ಉತ್ತರಿಸಿ. 8:12–21 ರಿಂದ ದೇವರಿಗೆ ಭಯಪಡುವುದರ ಬಗ್ಗೆ ನೀವು ಏನನ್ನು ಕಲಿಯುವಿರಿ?

3. 8:30–31 ರಲ್ಲಿ ದೇವರು ಭೂಲೋಕವನ್ನು ಸೃಷ್ಟಿಸಿದಾಗ ಜ್ಞಾನವು ಆತನೊಂದಿಗೆ ಇದ್ದಾಗ, ಉಲ್ಲಾಸ ಮತ್ತು ಹರ್ಷದಿಂದ ತುಂಬಿದ್ದಳು ಎಂದು ನಾವು ಓದುತ್ತೇವೆ. ಕೆಲವೊಮ್ಮೆ ನೀವು ದೇವರು ಸೃಷ್ಟಿಲ್ಪಟ್ಟ ಜಗತ್ತಿನಲ್ಲಿ ಈ ಹರ್ಷ ಉಲ್ಲಾಸವನ್ನು ಅನುಭವಿಸುತ್ತೀರಾ? ನಿಮ್ಮ ಭಾವನೆಗಳನ್ನು ವಿವರಿಸಿ ಮತ್ತು ನೀವು ಇದನ್ನು ವಿಶೇಷವಾಗಿ ಅಗಾಧ ರೀತಿಯಲ್ಲಿ ಅನುಭವಿಸಿದ ಕೆಲವು ಕ್ಷಣಗಳನ್ನು ಹಂಚಿಕೊಳ್ಳಿ.

4. 8:22–31 ಅನ್ನು ಕೊಲೊಸ್ಸೆ 1:15–18, ಇಬ್ರಿಯ 1:2 ಮತ್ತು ಯೋಹಾನ 1:1–5 ರೊಂದಿಗೆ ಹೋಲಿಸಿರಿ. ನಿಮ್ಮ ತೀರ್ಮಾನಗಳೇನು?

ಜ್ಞಾನ ಮತ್ತು ಮೂಢತನದ ನಡುವಿನ ಆಯ್ಕೆ (ಅಧ್ಯಾಯ 9)

ಪೀಠಿಕೆ

ಅಧ್ಯಾಯ 9 ಜ್ಞಾನೋಕ್ತಿಗಳು ಪುಸ್ತಕದ ಮೊದಲ ಭಾಗವು ಅಂತ್ಯವನ್ನು ತರುತ್ತದೆ. ಇದನ್ನು ಮೊದಲ 8 ಅಧ್ಯಾಯಗಳ ಒಂದು ಸಾರಾಂಶ ಮತ್ತು ಮುಕ್ತಾಯವನ್ನಾಗಿ ಕಾಣಬಹುದು.

ಇಬ್ಬರು ಸ್ತ್ರೀಯರು ಜನರನ್ನು ತಮ್ಮ ಮನೆಗೆ ಆಹ್ವಾನಿಸುತ್ತಾರೆ. ಜ್ಞಾನವನ್ನು ಈ ಹಿಂದೆ ನಾವು ನೋಡಿದ್ದೇವೆ. ಆದರೆ ಮೂಢತನವೆಂಬ ಸ್ತ್ರೀಯು ಹೊಸಬಳು. ಹಾಗಾಗಿ ಈ ಪಾಠವು ಜ್ಞಾನದ ಜೀವನ ಆ ಮೂಢತ್ವದ ಜೀವನದ ನಡುವಿನ ಆಯ್ಕೆ ಮತ್ತು ಆ ಆಯ್ಕೆಯ ಫಲಿತಾಂಶವಾಗಿದೆ.

ಪ್ರಶ್ನೆಗಳು

1. ಅಧ್ಯಾಯ 9 ಅನ್ನು ನೀವು ಹೇಗೆ ರಚಿಸುತ್ತೀರಿ?
2. ಇಬ್ಬರು ಸ್ತ್ರೀಯರು ಮತ್ತು ಅವರ ಆಮಂತ್ರಣಗಳ ನಡುವೆ ಹೋಲಿಕೆ ಮಾಡಿ.
3. ಧರ್ಮನಿಂದಕರ ಕುರಿತಾದ ವಚನಗಳನ್ನು (ವ 7–8) ವಿವರಿಸಿ. ನಿಮ್ಮ ಸ್ವಂತ ಪದಗಳನ್ನು ಬಳಸಿ.
4. ಜ್ಞಾನಿಯ ಕುರಿತಾಗಿನ ವಚನಗಳನ್ನು (ವ 8–9) ವಿವರಿಸಿ. ನಿಮ್ಮ ಸ್ವಂತ ಪದಗಳನ್ನು ಬಳಸಿ.
5. ಜ್ಞಾನೋಕ್ತಿ ಪುಸ್ತಕದ ಮೊದಲ ಭಾಗದ (ಅಧ್ಯಾಯ 1–9) ಸರಿಯಾದ ತಿಳುವಳಿಕೆಗೆ ಈ ಅಧ್ಯಾಯದಲ್ಲಿನ ಯಾವ ವಚನಗಳು ಕೇಂದ್ರವಾಗಿವೆ ಎಂದು ನೀವು ಕಾಣುವಿರಿ? ಯಾಕೆ?

ಜ್ಞಾನ ಮತ್ತು ಮೂಢತನದ ನಡುವಿನ ಆಯ್ಕೆ ಆಲೋಚಿಸಿರಿ ಮತ್ತು ಚರ್ಚಿಸಿರಿ

1. "ಧರ್ಮನಿಂದಕ" ಮತ್ತು "ಜ್ಞಾನಿ"ಗಳ ಬಗ್ಗೆ ನಿಮ್ಮ ಸ್ವಂತ ಅನುಭವವೇನು?

   ಅ. ನಿಮ್ಮ ಸೇವೆಯಲ್ಲಿ?

   ಆ. ನಿಮ್ಮ ಸಭಾಜೀವಿತದಲ್ಲಿ?

2. ಪ್ರತಿಯೊಬ್ಬನು ಸಹ ಜ್ಞಾನ ಮತ್ತು ಮೂರ್ಖತನದ ನಡುವೆ ಆಯ್ಕೆಯನ್ನು ಮಾಡಲೇಬೇಕು. ನಮ್ಮ ಪರಿಸ್ಥಿತಿಗಳು, ಹಿನ್ನಲೆ ಮತ್ತು ಸಂಸ್ಕೃತಿ ವಿಭಿನ್ನವಾಗಿರಬಹುದು ಆದರೆ ಜೀವ ಮತ್ತು ಮರಣಗಳ ನಡುವಿನ ಆಯ್ಕೆಗೆ ಬಂದಾಗ ನಾವೆಲ್ಲರೂ ಒಂದು ನಿರ್ಧಾರಕ್ಕೆ ಬರಬೇಕು. ಹಾಗಾಗಿ ಈ ವಾಸ್ತವಾಂಶವು ವಿಶ್ವಾಸಿಗಳು ಮತ್ತು ಕ್ರೈಸ್ತ ಸೇವೆಗಳ ಮೇಲೆ ಹೇಗೆ ಪರಿಣಾಮ ಬೀರುತ್ತದೆ. ಇಂತಹ ಕ್ಲಿಷ್ಟಕರವಾದ ಆಯ್ಕೆಯಲ್ಲಿ ನಾವು ಜನರಿಗೆ ಏನನ್ನು ಮಾಡಬಹುದು? ಮತ್ತು ಮರಣದ ಬದಲಾಗಿ ಜೀವನವನ್ನೇ ಆರಿಸಿಕೊಳ್ಳಲು ಜನರಿಗೆ ನಾವು ಹೇಗೆ ಸಹಾಯ ಮಾಡಬಹುದು?

ಜ್ಞಾನದ ವಿಧಾನಗಳು

ಜ್ಞಾನದ ಸಂದೇಶವನ್ನು ತಿಳಿಯಲು ಜ್ಞಾನೋಕ್ತಿಗಳು ಪುಸ್ತಕದಲ್ಲಿ ಬಳಸಲಾದ ಎರಡು ವಿಧಾನಗಳನ್ನು ನಾವು ಈ ಅಧ್ಯಾಯದಲ್ಲಿ ನೋಡೋಣ:

1. ಕಲ್ಪನೆ ಮತ್ತು ಉಪಮಾನ ಬಳಕೆ: ಶಬ್ದ ಚಿತ್ರಗಳು, ವ್ಯಕ್ತೀಕರಣ, ಉಪಮೆ, ರೂಪಾಲಂಕಾರಗಳು, ಹಾಸ್ಯ.
2. ಹೋಲಿಕೆಗಳ ಬಳಕೆ: ವಿಶೇಷವಾಗಿ "ಇದಕ್ಕಿಂತ ಲೇಸು" ಎಂಬ ರೂಪದಲ್ಲಿನ ಜ್ಞಾನೋಕ್ತಿಗಳು.

ಜ್ಞಾನದ ಕಲ್ಪನೆಗಳು ಮತ್ತು ಉಪಮಾನಗಳ ಬಳಕೆ

1. ವಿವಿಧ ಶಬ್ದ ಚಿತ್ರಗಳು ಮತ್ತು ವ್ಯಕ್ತೀಕರಣಗಳು

ಪುಸ್ತಕದ ಮೊದಲ ಭಾಗದಲ್ಲಿ (ಅಧ್ಯಾಯ 1–9) ನಾವು ಈಗಾಗಲೇ ಶಬ್ದ ಚಿತ್ರ ಮತ್ತು ವ್ಯಕ್ತೀಕರಣಗಳಿಗೆ ನಾವು ಉತ್ತಮ ಉದಾಹರಣೆಗಳನ್ನು ಕಂಡಿದ್ದೇವೆ:

ಅ. ಯೌವನಸ್ಥನನ್ನು ದುಷ್ಟತನಕ್ಕಾಗಿ ಪ್ರೇರೇಪಿಸುವ ದುಷ್ಟರ ಗುಂಪು, 1:11–13.

ಆ. ಜ್ಞಾನವು ಕೆಳಕಂಡ ಸ್ವಭಾವಗಳಲ್ಲಿ ವ್ಯಕ್ತೀಕರಣಗೊಂಡಿದೆ

- ಒಬ್ಬ ಸಾರ್ವಜನಿಕ ನಿವೇದಕ, 1:20–33.
- ಜಗತ್ತಿನ ಸೃಷ್ಟಿ ಕಾರ್ಯದಲ್ಲಿ ದೇವರಿಗೆ ಸಹಕರಿಸುವವ, 8:22–30.
- ಬುದ್ಧೀಹಿನ ಯೌವನಸ್ಥರನ್ನು ಆಮಂತ್ರಿಸುವ ಒಬ್ಬ ಒಳ್ಳೆಯ ಅತಿಥಿ, 9:4–6.

ಇ. ಮೂಢತನವು ಈ ರೀತಿ ಸ್ವಭಾವದಲ್ಲಿ ವ್ಯಕ್ತಗೊಂಡಿದೆ

- ಯುವಕರನ್ನು ಸೆಳೆಯಲು ಪ್ರಯತ್ನಿಸುವ ಒಬ್ಬ ಜಾರಸ್ತ್ರೀ, 7:6–23
- ತನ್ನ ಮನೆಯ ಬಾಗಿಲಲ್ಲಿ ಹಾದುಹೋಗುವವರನ್ನು ಕರೆಯುವ ಮೂಢಳು ಮತ್ತು ಕೂಗಾಟದವಳು, 9:13–17.

2. ಉಪಮೆ ಮತ್ತು ರೂಪಾಲಂಕಾರ

ಜ್ಞಾನೋಕ್ತಿ ಪುಸ್ತಕದುದ್ದಕ್ಕೂ ಉಪಮೆ ಮತ್ತು ರೂಪಾಲಂಕಾರಗಳು ಸಾಮಾನ್ಯವಾಗಿವೆ. ಅವುಗಳಿಗೆ ಕೆಲವು ಉದಾಹರಣೆ ಇಲ್ಲಿವೆ:

ಅ. ಜ್ಞಾನ, ವಿವೇಕ, ಮತ್ತು ತಿಳುವಳಿಕೆಯ ಬೆಲೆಯನ್ನು ತಿಳಿಸುವ ಆಭರಣಗಳು, 3:14–15.

ಆ. ಯೌವನಸ್ಥ ಪುರುಷನು ನೈತಿಕ ಚೌಕಟ್ಟನ್ನು ಕಾಪಾಡಿಕೊಳ್ಳಬೇಕೆಂದು ಅರ್ಥೈಸಿಕೊಳ್ಳಲು ನೀರಿನ ಕೊಳವು ನಮಗೆ ಸಹಾಯಿಸುತ್ತದೆ, 5:15–16.

ಇ. ಪ್ರಾಣಿಗಳ ಬಳಕೆ:

- ಜಿಂಕೆ, 6:5
- ಪಕ್ಷಿ, ಗುಬ್ಬಿ, ಹದ್ದು, ಕಾಗೆ, ರಣಹದ್ದು, 6:5, 7:22, 23:5, 30:19, 26:2, 27:8, 30:17.
- ಇರುವೆ, 6:6, 30:25
- ಹಂದಿ, 11:22

- ಕರಡಿ, 17:12, 28:15
- ಸಿಂಹ, 28:15
- ಕುದುರೆ, 21:31, 26:3
- ಕತ್ತೆ, 26:3
- ನಾಯಿ, 26:11, 17

ಈ. ವಾತಾವರಣ

- ಗಾಳಿ, 11:29, 25:14,23, 27:16, 30:4
- ಹಿಮ, 25:13, 26:1
- ಮಳೆ, 25:14,23, 26:1, 28:3
- ಮೋಡಗಾಳಿ, 16:15, 25:14
- ತುಫಾನು, 1:26

ಉ. ಆಹಾರ

- ಅನ್ನ, ರೊಟ್ಟಿ, 4:17, 6:26, 31:27
- ತಣ್ಣೀರು, 25:25
- ಹುಳಿ, 10:26, 25:20

ಊ. ಜಗಳಗಂಟಿ ಹೆಂಡತಿಗಾಗಿ ಇರುವ ರೂಪಾಲಂಕಾರಗಳು:

- ಮಾಳಿಗೆಯ ಮೂಲೆ, 21:9, 25:24
- ಕಾಡು, 21:19
- ತಟತಟನೆ ತೊಟ್ಟಿಕ್ಕುವ ಹನಿ, 19:13, 27:15
- ಜಿಡ್ಡಿನ ವಸ್ತುವನ್ನು ಹಿಡಿಯುವುದು, 27:16

ಎ. ಉಳಿದ ಉಪಮೆಗಳು

- ಆಯುಧಗಳು. (ಚಮಟಿಕೆ, ಕತ್ತಿ, ಚೂಪಾದ ಬಾಣ) 25:18
- ಬಾಣ ಎಸೆಯುವವ, 26:10
- ತಿರುಗಣಿಯಲ್ಲಿ ತಿರುಗುವ ಕದ, 26:14
- ಇದ್ದಿಲು, ಉರಿಗೆ ಕಟ್ಟಿಗೆ, ಕಿಚ್ಚು, 26:21
- ರುಚಿಯಾದ ತುತ್ತುಗಳು, 26:22

3. ತಮಾಷೆ ಮತ್ತು ಹಾಸ್ಯ

ನಗುವನ್ನು ಪ್ರಚೋದಿಸುವ ಸಲುವಾಗಿ ಜ್ಞಾನೋಕ್ತಿಯು ಹಾಸ್ಯ ಮತ್ತು ಗೇರಿಯನ್ನು ಬಳಸಿದೆ.

- ಯಾವುದು ಅತೀ ಭಯಂಕರ – ಮೂರ್ಖನೋ ಅಥವಾ ಮರಿಗಳನ್ನು ಕಳೆದು ಕೊಂಡಿರುವ ಕರಡಿಯೋ (17:12)?

- ಮೂಢನ ಬಾಯಿಗೆ ಸಿಕ್ಕಿದ ಜ್ಞಾನೋಕ್ತಿಯು ಕುಡುಕನ ಕೈಗೆ ಸಿಕ್ಕಿದ ಮುಳ್ಳುಗೋಲಿನ ಹಾಗೆ, (26:9).

4. ಹೋಲಿಕೆ ಮತ್ತು ತಮಾಷೆಗಳು ಯಾಕೆ?

ಬಹುಶಃ ಆಧುನಿಕ ಓದುಗರು ಈ ರೀತಿ ಪ್ರಶ್ನಿಸಬಹುದು: ಯಾಕೆ ಜ್ಞಾನೋಕ್ತಿಯ ಬರಹಗಾರರು ಮತ್ತು ಸಂಗ್ರಹಕಾರರು ಅಷ್ಟೊಂದು ಹೋಲಿಕೆ ಮತ್ತು ತಮಾಷೆಗಳನ್ನು ಬಳಸುತ್ತಾರೆ? ಈ ಪ್ರಶ್ನೆಗಳಿಗೆ ಉತ್ತರಿಸುವಲ್ಲಿ ಡೇವಿಡ್ ಅಟ್ಟಿನ್‌ಸನ್‌ರವರು ಎರಡು ಅಂಶಗಳನ್ನು ತಿಳಿಸುತ್ತಾರೆ.

ಅ. ಜ್ಞಾನವು ಸಾಮಾನ್ಯ ಜೀವಿತದ ಒಂದು ಸಂಭ್ರಮಾಚರಣೆಯಾಗಿದೆ. ಜ್ಞಾನೋಕ್ತಿಯು ಪ್ರಸ್ತುತ ಲೋಕದಲ್ಲಿನ ಜೀವನದೊಂದಿಗೆ ವ್ಯವಹರಿಸುತ್ತದೆ. ದೇವರ ಚಿತ್ತಕ್ಕನುಸಾರವಾಗಿ ತಮ್ಮ ಜೀವಿತವನ್ನು ರೂಪುಗೊಳಿಸಲು ಮತ್ತು ಒಡಂಬಡಿಕೆಗೆ ವಿಧೇಯರಾಗಿರಲು ದೇವ ಜನರಿಗೆ ಸಹಕರಿಸುವುದೇ ಅವರ ಉದ್ದೇಶವಾಗಿದೆ. ಇದಕ್ಕಾಗಿಯೇ ಜ್ಞಾನೋಕ್ತಿಗಳು ಜ್ಞಾನಿಗಳು ಮತ್ತು ಮೂರ್ಖರನ್ನು ಮತ್ತು ತಮ್ಮ ಸುತ್ತಣ ಜಗತ್ತಿನಲ್ಲಿ ದೈನಂದಿನ ಸಾಮಾನ್ಯ ಸಂಗತಿಗಳೊಂದಿಗೆ ಅವರು ಮಾಡಿಕೊಳ್ಳುವ ಆಯ್ಕೆಗಳನ್ನು ಪರಸ್ಪರ ಹೋಲಿಸುತ್ತವೆ.

ಆ. ಜ್ಞಾನದ ಭಾಷೆಯು ಕಲ್ಪನೆ (ಉಪಮಾನ, ಚಿತ್ರಣ, ಹೋಲಿಕೆ) ಗಳನ್ನು ಗಂಭೀರವಾಗಿ ಪರಿಗಣಿಸಬೇಕೆಂದು ಉತ್ತೇಜಿಸುತ್ತದೆ. ಚಿತ್ರಣ/ ಹೋಲಿಕೆ ಮತ್ತು ಹಾಸ್ಯಗಳು ನಮ್ಮ ಗಮನಕೊಡುವ ಕೌಶಲ್ಯ/ ಕಲೆಗಳನ್ನು ತೀಕ್ಷ್ಣಗೊಳಿಸಲು ನಮಗೊಂದು ಸಾಧನವಾಗಿವೆ. ನಮ್ಮ ಜೀವಿತಗಳನ್ನು ಮತ್ತು ನಾವು ಮಾಡಲೇಬೇಕಾದ ಆಯ್ಕೆಗಳನ್ನು ಆಳವಾಗಿ ವಿಮರ್ಶಿಸಲು ಅವು ನಮಗೆ ಸಹಕರಿಸುತ್ತವೆ. ನಾವು ಸರಿಯಾದ ಆಯ್ಕೆಗಳನ್ನು ಮಾಡಲು ಅವು ಸಹಾಯಿಸುತ್ತವೆ.

ಜ್ಞಾನದ ಹೋಲಿಕೆಯ ಬಳಿಕೆ (ಅದಕ್ಕಿಂತ ಉತ್ತಮ/ಲೇಸು)

1. ಅದಕ್ಕಿಂತ "ಉತ್ತಮ/ಲೇಸು" ವಿಧಾನ

ಒಂದು ಬಗೆಯ ಜ್ಞಾನೋಕ್ತಿಗಳು ಹೋಲಿಸಲು ಅದಕ್ಕಿಂತ ಉತ್ತಮ/ಲೇಸು ಎಂಬ ಹೇಳಿಕೆಯನ್ನು ಬಳಸಿವೆ:

ದ್ವೇಷವಿರುವಲ್ಲಿ ಕೊಬ್ಬಿದ ದನದ ಮಾಂಸಕ್ಕಿಂತಲೂ

ಪ್ರೇಮವಿರುವಲ್ಲಿ ಸೊಪ್ಪಿನ ಊಟವೇ ಉತ್ತಮ.

(ಜ್ಞಾನೋಕ್ತಿ 15:17)

ಈ ರೀತಿಯ ಜ್ಞಾನೋಕ್ತಿಗಳಲ್ಲಿ 4 ಮೂಲವಸ್ತುಗಳಿವೆ. ಎರಡು ನಕಾರಾತ್ಮಕ ಮತ್ತು ಎರಡು ಸಕಾರಾತ್ಮಕವಾದವುಗಳು:

- ದ್ವೇಷ – ಇದೊಂದು ರೀತಿಯಲ್ಲಿ ನಕಾರಾತ್ಮಕ ಅಂಶ

- ಕೊಬ್ಬಿದ ದನವು (ಇದನ್ನೇ ಇಸ್ರಾಯೇಲ್ಯರು ಒಂದು ರೀತಿಯಲ್ಲಿ ಅತ್ಯುತ್ತಮ ಆಹಾರವೆಂದು ಎಣಿಸಿದ್ದರು) ಸಕಾರಾತ್ಮಕ

- ಸೊಪ್ಪು – (ಇದು ಒಂದು ಉತ್ತಮ ಆಹಾರವೆಂದು ಇಸ್ರಾಯೇಲ್ಯರು ಎಣಿಸಿರಲಿಲ್ಲ) ಇದೊಂದು ರೀತಿಯಲ್ಲಿ ನಕಾರಾತ್ಮಕ

- ಪ್ರೇಮ – ಸಕಾರಾತ್ಮಕ

ನಮ್ಮ ಸಂಬಂಧ ಮೌಲ್ಯಗಳನ್ನು ಪರಿಗಣಿಸಬೇಕೆಂದು ಈ ಜ್ಞಾನೋಕ್ತಿಯು ನಮ್ಮನ್ನು ಒತ್ತಾಯಿಸುತ್ತದೆ. ಯಾವುದು ನಮಗೆ ಪ್ರಾಮುಖ್ಯವಾಗಿದೆ, ಮಾಂಸವೋ ಅಥವಾ ಪ್ರೀತಿಯೋ?

ಇನ್ನೊಂದು ಉದಾಹರಣೆ:

ಅನ್ಯಾಯದಿಂದ ಗಳಿಸಿದ ಬಹುಧನಕ್ಕಿಂತಲೂ

ನ್ಯಾಯದಿಂದ ಕೂಡಿಸಿದ ಅಲ್ಪ ಧನವೇ ಲೇಸು.

(ಜ್ಞಾನೋಕ್ತಿ 16:8)

ಇಲ್ಲಿ ನಾಲ್ಕು ಮೂಲವಸ್ತುಗಳಿವೆ:

- ಅನ್ಯಾಯ: ಇದು ನಕಾರಾತ್ಮಕ
- ಗಳಿಸಿದ: ಸಕಾರಾತ್ಮಕ
- ಅಲ್ಪ: ನಕರಾತ್ಮಕ
- ನ್ಯಾಯ: ಸಕರಾತ್ಮಕ

ಈ ಕೀರ್ತನೆಯು ನಮಗೆ ಯಾವುದು ಹೆಚ್ಚಿನದಾಗಿದೆ, ಶ್ರೀಮಂತರಾಗಿರುವುದೋ ಅಥವಾ ನೀತಿವಂತರಾಗಿರುವುದೋ? ಎಂಬುದನ್ನು ತೀರ್ಮಾನಿಸಬೇಕೆಂದು ನಮ್ಮನ್ನು ಒತ್ತಾಯಿಸುತ್ತದೆ.ಅತ್ಯುತ್ತಮವಾದುದ್ದನ್ನು ಅಂದರೆ ನೀತಿಯನ್ನು ಗಳಿಸಲು ಉತ್ತಮವಾದ ಸಂಗತಿ (ಶ್ರೀಮಂತರಾಗುವುದು) ಯಿಂದ ದೂರವಿರುಲು ಮತ್ತು ಅತ್ಯುತ್ತಮವಾದುದ್ದಕ್ಕಿಂತಲೂ ಕಡಿಮೆಯಿರುವ (ಬಡತನ)ದಲ್ಲಿ ಬಾಧೆಪಡಲು ಸಿದ್ಧರಿರುವಿರಾ?

2. ಸಂಕ್ಷೇಪವಾದ "ಅದಕ್ಕಿಂತ ಉತ್ತಮ/ಲೇಸು ವಿಧಾನ

ಕೆಲವು ಜ್ಞಾನೋಕ್ತಿಗಳು ಸರಳವಾದ ಒಲವನ್ನು ವ್ಯಕ್ತಪಡಿಸುವಂತೆ ತೋರುತ್ತವೆ.

ಬಹುಧನಕ್ಕಿಂತಲೂ ಒಳ್ಳೆಯ ಹೆಸರು ಉತ್ತಮ; (22:1, ಮೊದಲ ಭಾಗ).

ಇದನ್ನು ಮುಂದಿನ ಸಾಲಿನಲ್ಲಿ ಬಲಪಡಿಸಲಾಗಿದೆ (ಸಮಾನಾರ್ಥಕ ಸಮಾನಾಂತರತೆಯ ಉದಾಹರಣೆ):

ಬೆಳ್ಳಿ ಬಂಗಾರಕ್ಕಿಂತಲೂ ಸತ್ಕೀರ್ತಿಯು ಅಮೂಲ್ಯ. (22:1, ಎರಡನೇ ಭಾಗ).

ಇದು ಉತ್ತಮ ಹೆಸರು ಮತ್ತು ಧನದ ಬಗ್ಗೆ ಮಾತ್ರ ಮಾತನಾಡುವಂತೆ ತೋರುತ್ತದೆ, ಆದರೆ ಇದರೊಳಗೆ ಇನ್ನೂ ಎರಡು ಮೂಲವಸ್ತುಗಳು ಅಡಗಿರುವುದನ್ನು ನಾವು ಕಾಣಬಹುದು:

- ಬಹುಧನ /ಬೆಳ್ಳಿ ಅಥವಾ ಬಂಗಾರ: ಸಕಾರಾತ್ಮಕವಾದದ್ದು.
- ಬಡತನ: ನಕಾರಾತ್ಮಕವಾದದ್ದು ಆದರೆ ಜ್ಞಾನೋಕ್ತಿಯಲ್ಲಿ ನೇರವಾಗಿ ಹೇಳಿಲ್ಲ.
- ಒಳ್ಳೆಯ ಹೆಸರು/ಸತ್ಕೀರ್ತಿ: ಸಕಾರಾತ್ಮಕವಾದದ್ದು.
- ಕೆಟ್ಟ ಹೆಸರು: ನಕಾರಾತ್ಮಕವಾದದ್ದು ಆದರೆ ಇಲ್ಲಿ ನೇರವಾಗಿ ಹೇಳಿಲ್ಲ.

ಈ ರಚನೆಯ ಮೂಲಕ ಬರಹಗಾರನು ಕೇವಲ ಧನ ಮತ್ತು ಒಳ್ಳೆಯ ಹೆಸರನ್ನಷ್ಟೇ ಬಯಸತಕ್ಕದೆಂದು ಹೇಳುತ್ತಿಲ್ಲ, ಆದರೆ ಅವುಗಳ ಸಂಬಂಧಿ ಮೌಲ್ಯಗಳ ಮೇಲೆ ನಾವು ಗಮನ ಕೊಡಬೇಕೆಂದು ನಮ್ಮನ್ನು ಒತ್ತಾಯಿಸುತ್ತಾನೆ ಎಂಬುದನ್ನು ನಾವು ತಿಳಿದುಕೊಳ್ಳಬೇಕು: ಒಳ್ಳೆಯ ಹೆಸರು ಬಡತನಕ್ಕೆ ನಡೆಸುವಾಗಲೂ ಸಹ ಅದನ್ನೇ ಆಯ್ಕೆ ಮಾಡಿಕೊಳ್ಳಬೇಕಾಗಿದೆ.

3. ಲೌಕಿಕ ಸಂಗತಿ ಮತ್ತು ಆತ್ಮೀಕ ಮೌಲ್ಯಗಳ ನಡುವಿನ ಹೋಲಿಕೆ

ಜ್ಞಾನೋಕ್ತಿ ಪುಸ್ತಕ ದೊಳಗೆ ಒಂದು ಅಂಶವು ಶಾರೀರಿಕ, ಅಥವಾ ಲೌಕಿಕ ಸಂಗತಿಗಳ ಬಗ್ಗೆ ಮತ್ತು ಇನ್ನುಳಿದವು ಆತ್ಮೀಕ ಅಥವಾ ಧಾರ್ಮಿಕ ಮೌಲ್ಯಗಳನ್ನು ಸೂಚಿಸುವ ಅನೇಕ ಹೇಳಿಕೆಗಳಿವೆ.

ವ್ಯಾಜ್ಯದ ಮನೆಯಲ್ಲಿ ತುಂಬಿದ ಜೌತಣಕ್ಕಿಂತಲೂ

ಸಮಾಧಾನದ ಒಣತುತ್ತೇ ಮೇಲು

(ಜ್ಞಾನೋಕ್ತಿ 17:1)

ನಮಗೆ ಯಾವುದು ಹೆಚ್ಚಿನದಾಗಿದೆ ಎಂಬುದನ್ನು ನಾವು ಪರಿಗಣಿಸಬೇಕೆಂದು ಈ ಜ್ಞಾನೋಕ್ತಿ ನಮ್ಮನ್ನು ಒತ್ತಾಯಿಸುತ್ತದೆ. ಔತಣವೋ ಅಥವಾ ಸಮಾಧಾನದಿಂದಿರುವುದೋ? ಅತ್ಯುತ್ತಮವಾದುದ್ದನ್ನು ಗಳಿಸುವ ಸಲುವಾಗಿ (ಸಮಾಧಾನ) ಉತ್ತಮವಾದುದರಿಂದ (ಔತಣ) ದೂರವಿರಲು ಮತ್ತು ಅತ್ಯುತ್ತಮವಾದುದ್ದಕ್ಕಿಂತ ಕಡಿಮೆಯಾದುದ್ದರಲ್ಲಿ (ಹಸಿವೆ) ಭಾದೆಪಡಲು ನಾವು ಸಿದ್ಧವಿದ್ದೇವಾ?

ಇಲ್ಲಿ ಆತ್ಮೀಕ ಮೌಲ್ಯವಾದ ಸಮಾಧಾನವನ್ನು ಲೌಕಿಕ ಮೌಲ್ಯವಾದ ಔತಣದೊಂದಿಗೆ ಇಡಲಾಗಿದೆ. ಕೆಲವೊಮ್ಮೆ ಆತ್ಮೀಕ ಮೌಲ್ಯಗಳು ಲೌಕಿಕ ಮೌಲ್ಯಗಳಿಗೆ ತದ್ವಿರುದ್ಧವಾಗಿರುತ್ತವೆ.

ವಾಸ್ತವವಾಗಿ ಅನೇಕ ಜ್ಞಾನೋಕ್ತಿಗಳು ಆಧ್ಯಾತ್ಮಿಕ ಮೌಲ್ಯಗಳ ಮಹತ್ವವನ್ನು ಬಹಿರಂಗಪಡಿಸಲು ಮತ್ತು ಓದುಗರು ಅವುಗಳ ಬೆಳಕಿನಲ್ಲಿ ತಮ್ಮ ಸ್ವಂತ ಮೌಲ್ಯಗಳನ್ನು ಮೌಲ್ಯಮಾಪನ ಮಾಡಲು ಕೇಳಿಕೊಳ್ಳಲು ರಚನೆಯಾಗಿವೆ.

ದೀರ್ಘಶಾಂತನು ಶೂರನಿಗಿಂತಲೂ ಶ್ರೇಷ್ಠ;

ತನ್ನನ್ನು ಆಳುವವನು ಪಟ್ಟಣವನ್ನು ಗೆದ್ದವನಿಗಿಂತಲೂ ಬಲಿಷ್ಠ

(ಜ್ಞಾನೋಕ್ತಿ 16:32)

ಯೋಧ ಮತ್ತು ನಗರವನ್ನು ವಶಪಡಿಸಿಕೊಳ್ಳುವವನು ಇಬ್ಬರನ್ನೂ ಸಕಾರಾತ್ಮಕ ಮೌಲ್ಯಗಳಾಗಿ ಪ್ರಸ್ತುತಪಡಿಸಲಾಗುತ್ತದೆ, ಆದರೆ ಅವು ಐಹಿಕ ಮೌಲ್ಯಗಳಾಗಿವೆ ಮತ್ತು ಜ್ಞಾನೋಕ್ತಿ ಅವುಗಳನ್ನು ಸಾಪೇಕ್ಷಗೊಳಿಸುತ್ತದೆ. ತಾಳ್ಮೆ ಮತ್ತು ಒಬ್ಬರ ಕೋಪವನ್ನು ನಿಯಂತ್ರಿಸುವ ಆಧ್ಯಾತ್ಮಿಕ ಮೌಲ್ಯಗಳು ಸೈನಿಕನ ಕೌಶಲ್ಯಗಳಿಗಿಂತಲೂ ಹೆಚ್ಚು ಮುಖ್ಯ.

4. –

5. ತೀರ್ಮಾನ

10–31 ಅಧ್ಯಾಯಗಳ ಅನೇಕ ಜ್ಞಾನೋಕ್ತಿಗಳು **"ಇದಕ್ಕಿಂತಲೂ ಲೇಸು"** (ಮತ್ತು ಅಂತಹುದೇ) ರಚನೆಗಳಿಗೆ ಸೇರಿವೆ. ಈ ಮಾದರಿಗಳನ್ನು ಬಹಿರಂಗಪಡಿಸುವ ಮುಖ್ಯ ಪ್ರಯೋಜನವೆಂದರೆ ಮೌಲ್ಯಗಳ ನಡುವೆ ಹೋಲಿಕೆ ಮಾಡುವುದು, ವಿಶೇಷವಾಗಿ ಯಾವುದು ಉತ್ತಮ ಮತ್ತು ಯಾವುದು ಕೆಟ್ಟದು.

ಪ್ರಶ್ನೆಗಳು

1. 25 ನೇ ಅಧ್ಯಾಯವನ್ನು ಓದಿ:
   ಅ. ಅಲ್ಲಿ ನೀವು ಕಾಣುವ ರೂಪಾಲಂಕಾರಗಳನ್ನು ಪಟ್ಟಿ ಮಾಡಿರಿ ಮತ್ತು ಅವುಗಳ ಅರ್ಥವನ್ನು ನಿಮ್ಮ ಸ್ವಂತ ಮಾತುಗಳಲ್ಲಿ ವಿವರಿಸಿ.
   ಆ. ಅಲ್ಲಿ ನೀವು ಕಂಡುಕೊಳ್ಳುವ ಉಪಮೆಗಳ ಪಟ್ಟಿಯನ್ನು ಮಾಡಿ ಮತ್ತು ಅವುಗಳ ಅರ್ಥವನ್ನು ನಿಮ್ಮ ಸ್ವಂತ ಮಾತುಗಳಲ್ಲಿ ವಿವರಿಸಿ.
2. ಈ ವಚನಗಳಲ್ಲಿ ಸೋಮಾರಿಯನ್ನು ವಿವರಿಸಲು ಚಿತ್ರಣದ ಬಳಕೆಯನ್ನು ಅಭ್ಯಾಸಿಸಿರಿ.
   - 6:6
   - 10:26
   - 15:19
   - 19:24
   - 22:13
   - 26:14
3. ಹಾಸ್ಯ ಮತ್ತು ಮೋಜಿನ ಉದಾಹರಣೆಗಳನ್ನು ನಾವು ಕಂಡುಕೊಳ್ಳಲು ಈ ಉಲ್ಲೇಖಗಳನ್ನು ಅಧ್ಯಯನ ಮಾಡಿ ಮತ್ತು ವಿವರಿಸಿ:

- 23–29–35 (ಇದು ಕೂಡ ಒಂದು ರೀತಿಯ ಒಗಟಾಗಿದೆ)
- 27–15–16

4. ಈ ವಚನಗಳಲ್ಲಿ ಕಂಡು ಬರುವ **"ಇದಕ್ಕಿಂತಲೂ ಲೇಸು"** ಎಂಬ ಜ್ಞಾನೋಕ್ತಿಗಳನ್ನು ವಿಶ್ಲೇಷಿಸಿರಿ.
   - 15:16
   - 21:19
   - 22:1

ಸೊಲೊಮೋನನ ಜ್ಞಾನೋಕ್ತಿಗಳ ಮುಖ್ಯ ಸಂಗ್ರಹ (10:1–22:16)

ಪೀಠಿಕೆ

ಜ್ಞಾನೋಕ್ತಿ ಪುಸ್ತಕದ ಮೊದಲ ವಚನವು "ಇಸ್ರಾಯೇಲ್ಯರ ಅರಸನಾಗಿದ್ದ ದಾವೀದನ ಮಗನಾದ ಸೊಲೊಮೋನನ ಜ್ಞಾನೋಕ್ತಿಗಳು" ಎಂದು ಹೇಳುತ್ತದೆ. ಈ ಮೊದಲ ಸಂಗ್ರಹವು 9ನೇ ಅಧ್ಯಾಯದವರೆಗೆ ಇರುತ್ತದೆ.

10 ನೇ ಅಧ್ಯಾಯದೊಂದಿಗೆ ಸೊಲೊಮೋನನ ಜ್ಞಾನೋಕ್ತಿಗಳ ಇನ್ನೊಂದು ಸಂಗ್ರಹವು "ಸೊಲೊಮೋನನ ಜ್ಞಾನೋಕ್ತಿಗಳು" ಎಂಬ ಮಾತಿನೊಂದಿಗೆ ಪರಿಚಯಿಸಲ್ಪಟ್ಟಿದೆ. ಈ ಸೊಲೊಮೋನನ ಜ್ಞಾನೋಕ್ತಿಗಳ ಮುಖ್ಯ ಸಂಗ್ರಹವು 22:16 ರೊಂದಿಗೆ ಮುಕ್ತಾಯವಾಗುತ್ತದೆ. ಇದು ದ್ವಿಪದಿಯನ್ನು ಒಳಗೊಂಡಿದ್ದು (ಎರಡು ಸಾಲಿನ ಪದ್ಯರೂಪಿ ವಚನಗಳು) ಮನುಷ್ಯ ಸ್ವಭಾವದ ವಿವಿಧ ಕ್ಷೇತ್ರಗಳ ಕುರಿತು ಹೇಳುತ್ತದೆ. ಇಲ್ಲಿನ ಅನೇಕ ಜ್ಞಾನೋಕ್ತಿಗಳು ಒಂದು ರೀತಿಯ ತದ್ವಿರುದ್ಧತೆಯನ್ನು ವ್ಯಕ್ತಪಡಿಸುತ್ತವೆ.

ಸೊಲೊಮೋನನ ಜ್ಞಾನೋಕ್ತಿಗಳ ಎರಡನೇ ಸಂಗ್ರಹದಲ್ಲಿ ಕಂಡುಬರುವ ಪ್ರಮುಖ ದೈವಶಾಸ್ತ್ರ ಮತ್ತು ನೈತಿಕ ವಿಷಯಗಳನ್ನು **ಇಬ್ರಿಯ ಜ್ಞಾನದ ಹಿನ್ನಲೆ** ಎಂಬ ಅಧ್ಯಾಯದಲ್ಲಿ ಹೆಚ್ಚು ವಿವರವಾಗಿ ಅಧ್ಯಯನ ಮಾಡಲಾಗುವುದು. ಇದನ್ನು **ಜ್ಞಾನದ ಮೌಲ್ಯಗಳು** ಎಂದು ಕರೆಯಲಾಗುತ್ತದೆ ಮತ್ತು ಏಳು ಅಧ್ಯಾಯಗಳನ್ನು ಒಳಗೊಂಡಿದೆ:

1. ಪ್ರೀತಿ ಮತ್ತು ನಿಷ್ಠೆ
2. ನ್ಯಾಯ ಮತ್ತು ಸದಾಚಾರ
3. ಕುಟುಂಬ
4. ಕೆಲಸ
5. ಆರೋಗ್ಯ ಮತ್ತು ಭದ್ರತೆ
6. ಭೌತಿಕ ಸಮೃದ್ಧಿ
7. ನಾಲಿಗೆಯ ಬಳಕೆ

ಪ್ರಶ್ನೆಗಳು

1. ಈ ಜ್ಞಾನೋಕ್ತಿಗಳು ಓದುಗರಿಗೆ ಯಾವುದರ ವಿರುದ್ಧವಾಗಿ ಎಚ್ಚರಿಕೆ ನೀಡುತ್ತವೆ? ಅಥವಾ ಓದುಗರಿಗೆ ಯಾವ ರೀತಿಯ ಗುಣಸ್ವಭಾವ ಇರಬಾರದು? ಮುಖ್ಯಪದ ಅಥವಾ ಮುಖ್ಯ ಹೇಳಿಕೆಗಳನ್ನು ಕಂಡುಹಿಡಿಯಿರಿ.
    - 10:26
    - 11:7
    - 12:16
    - 14:35
    - 15:4
    - 15:25
    - 15:27
2. ಈ ಜ್ಞಾನೋಕ್ತಿಗಳು ಓದುಗರು ಏನನ್ನು ಮಾಡಬೇಕೆಂದು ಪ್ರಚೋದಿಸುತ್ತವೆ? ಅಥವಾ ಓದುಗರು ಯಾವ ರೀತಿಯ ಗುಣಸ್ವಭಾವ ಹೊಂದಿರಬೇಕು? ಮುಖ್ಯಪದ ಅಥವಾ ಮುಖ್ಯ ಹೇಳಿಕೆಗಳನ್ನು ಕಂಡು ಹಿಡಿಯಿರಿ.

- 10:8
- 11:4
- 11:22
- 11:24
- 12:11
- 13:7
- 14:12
- 14:21

3. ಈ ಜ್ಞಾನೋಕ್ತಿಗಳಲ್ಲಿ ಯಾವ ರೀತಿಯ ಗುಣಸ್ವಭಾವಗಳು ತದ್ವಿರುದ್ಧವಾಗಿವೆ?
    - 10:12
    - 10:17
    - 11:1
    - 11:2
    - 11:16
    - 11:17
    - 12:19
    - 14:29
    - 14:30

ಸೊಲೊಮೋನನ ಜ್ಞಾನೋಕ್ತಿಗಳ ಮುಖ್ಯ ಸಂಗ್ರಹ ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಮೇಲ್ಕಂಡ ಮೂರು ಪ್ರಶ್ನೆಗಳ ನಿಮ್ಮ ಉತ್ತರಕ್ಕೆ ಹೋಗಿರಿ. ಕೆಳಕಂಡ ಎಚ್ಚರಿಕೆ, ಆಜ್ಞೆ ಮತ್ತು ತದ್ವಿರುದ್ಧತೆಗಳ ಪಟ್ಟಿಗಳ ಬೆಳಕಿನಡಿಯಲ್ಲಿ ನಿಮ್ಮನ್ನು ಮತ್ತು ನಿಮ್ಮ ಕ್ರೈಸ್ತೀಯ ಜೀವಿತವನ್ನು ಮತ್ತು ಸಾಕ್ಷಿಯನ್ನು ಮೌಲ್ಯಮಾಪನ ಮಾಡಿರಿ.
2. ನಿಮ್ಮ ಜೀವಿತ ಮತ್ತು ಸೇವೆಗಾಗಿ ದೇವರ ಜಿತ್ತಕ್ಕನುಸಾರವಾಗಿ ನೀವು ಬದಲಾವಣೆಯಾಗಲು ಬಯಸುವ ಎರಡು ಅಥವಾ ಮೂರು ಕ್ಷೇತ್ರಗಳನ್ನು ಆರಿಸಿಕೊಳ್ಳಿರಿ. ನಿಮ್ಮ ಮುಂದಿನ ಹೆಜ್ಜೆಗಳನ್ನು ನಿರ್ಧರಿಸಿರಿ.

ಅಸೈನ್‌ಮೆಂಟ್: ಸೊಲೊಮೋನನ ಜ್ಞಾನೋಕ್ತಿಗಳ ಮುಖ್ಯ ಸಂಗ್ರಹ

1. ಚಿಂತನೆಗೆ ಹಚ್ಚುವ ಜ್ಞಾನೋಕ್ತಿಗಳು

ಜ್ಞಾನೋಕ್ತಿ 16–21 ಅಧ್ಯಾಯಗಳನ್ನು ಓದಿ ಮತ್ತು ಪ್ರತೀ ಅಧ್ಯಾಯದಿಂದ ನಿಮಗೆ ವಿಶೇಷವಾಗಿ ಚಿಂತನೆಗೆ ಹಚ್ಚುವ ಒಂದು ಜ್ಞಾನೋಕ್ತಿಯನ್ನು ಆರಿಸಿ. ನಿಮ್ಮ ಗುಂಪಿನಲ್ಲಿ ನಿಮ್ಮ ಆರು ಜ್ಞಾನೋಕ್ತಿಗಳಲ್ಲಿ ಆಯ್ದ ಜ್ಞಾನೋಕ್ತಿಗಳನ್ನು ಪರಸ್ಪರ ಹಂಚಿಕೊಳ್ಳಿ:

ಅ. ಪ್ರತಿಯೊಂದು ಜ್ಞಾನೋಕ್ತಿಯ ಅರ್ಥವನ್ನು ವಿವರಿಸಿ.

ಆ. ನೀವು ಆ ಜ್ಞಾನೋಕ್ತಿಯನ್ನು ಏಕೆ ಆರಿಸಿಕೊಂಡಿದ್ದೀರಿ ಎಂಬುದನ್ನು ಸಹ ವಿವರಿಸಿ.

2. ಗಮನ ಸೆಳೆಯುವ ಚಿತ್ರಣ

ಜ್ಞಾನೋಕ್ತಿ 16–21 ಅಧ್ಯಾಯಗಳನ್ನು ಓದಿ ಮತ್ತು ಪ್ರತೀ ಅಧ್ಯಾಯದಿಂದ ವಿಶೇಷವಾಗಿ ಗಮನಾರ್ಹವಾದ ಚಿತ್ರಣಗಳನ್ನು ಹೊಂದಿರುವ ಒಂದು ಜ್ಞಾನೋಕ್ತಿಯನ್ನು ಆರಿಸಿ. ನಿಮ್ಮ ಗುಂಪಿನಲ್ಲಿ ನಿಮ್ಮ ಆರು ಜ್ಞಾನೋಕ್ತಿಗಳಲ್ಲಿ ನಿಮ್ಮ ಆಯ್ಕೆಯನ್ನು ಪರಸ್ಪರ ಹಂಚಿಕೊಳ್ಳಿ:

ಅ. ಪ್ರತಿಯೊಂದು ಜ್ಞಾನೋಕ್ತಿಯ ಚಿತ್ರಣವನ್ನು ವಿವರಿಸಿ.

ಆ. ನೀವು ಆ ಜ್ಞಾನೋಕ್ತಿಯನ್ನು ಏಕೆ ಆರಿಸಿಕೊಂಡಿದ್ದೀರಿ ಎಂಬುದನ್ನು ಸಹ ವಿವರಿಸಿ.

ಜ್ಞಾನಿಗಳ ಮಾತುಗಳು (22:17–24:34)

ಪೀಠಿಕೆ

ಜ್ಞಾನೋಕ್ತಿ ಪುಸ್ತಕದ ಕೊನೆಯ ಆವೃತ್ತಿಯಲ್ಲಿ ಸೊಲೊಮೋನನ ಜ್ಞಾನೋಕ್ತಿಗಳ ಎರಡು ಸಂಗ್ರಹಗಳ ಮಧ್ಯೆ "ಜ್ಞಾನಿಗಳ ಮಾತುಗಳು" ಎರಡು ಸಂಗ್ರಹಗಳಿಟ್ಟಿರುವುದನ್ನು ನಾವು ಕಾಣಬಹುದು. ಇದರ ಹಿನ್ನಲೆಯು "ಜ್ಞಾನದ ಶಾಲೆ" ಯಾಗಿರಬಹುದೆಂದು ತೋರಿಬರುತ್ತದೆ. "ಜ್ಞಾನಿಗಳ" ಗುರುತು ತಿಳಿದಿಲ್ಲ. ಬಹುಶಃ ಸೊಲೊಮೋನನ ನಾಯಕತ್ವದಡಿಯಲ್ಲಿ ಈ ಜ್ಞಾನೋಕ್ತಿಗಳನ್ನು ಸಂಗ್ರಹಿಸಿ, ತಿದ್ದುಪಡಿಗೊಳಿಸಿದ ಜ್ಞಾನದ ಬೋಧಕರು ಅಥವಾ ಪಂಡಿತರುಗಳಾಗಿರಬಹುದು.

ಈ, ಸಂಗ್ರಹಗಳಲ್ಲಿ ಮೊದಲನೇಯದು (22:17–24:22) "ಮೂವತ್ತು ಮಾತುಗಳನ್ನು" ಒಳಗೊಂಡಿದೆ (22:20, ಸತ್ಯವೇದವು ಮತ್ತು ಪವಿತ್ರ ಗ್ರಂಥ ಕನ್ನಡ ಅನುವಾದಗಳಲ್ಲಿ ಉಲ್ಲೇಖಿಸಲಾಗಿಲ್ಲ, ಆದರೆ ಕನ್ನಡ ರೋಮನ್ ಕ್ಯಾಥೊಲಿಕ್ ಅನುವಾದ ಪವಿತ್ರ ಬೈಬಲ್‌ನಲ್ಲಿ ಸ್ಪಷ್ಟವಾಗಿ ತೋರಿಸಲಾಗಿದೆ). ಎರಡನೇ ಸಂಗ್ರಹವು ಗಣನೀಯವಾಗಿ ಚಿಕ್ಕದಾಗಿದೆ (24:23–34). ಹೆಚ್ಚಿನ "ಮಾತುಗಳು" ಎರಡು ಅಥವಾ ಮೂರು ವಚನಗಳನ್ನು ಒಳಗೊಂಡಿರುತ್ತವೆ. ಆದ್ದರಿಂದ ಅವುಗಳ ರಚನೆ ಮತ್ತು ಶೈಲಿಯು ನಾವು ಈ ಹಿಂದಿನ ಅಧ್ಯಾಯದಲ್ಲಿ ಕಲಿತ ಎರಡು ಸಾಲುಗಳ ಜ್ಞಾನೋಕ್ತಿಗಳಿಗಿಂತ ವಿಭಿನ್ನವಾಗಿವೆ. ಜ್ಞಾನೋಕ್ತಿ ಪುಸ್ತಕದ ಮೊದಲ ಒಂಬತ್ತು ಅಧ್ಯಾಯಗಳಲ್ಲಿ ಕಂಡುಬರುವ ವಿಷಯವನ್ನು ಅವು ನಮಗೆ ಹೆಚ್ಚು ನೆನಪಿಸುತ್ತವೆ.

"ಮೂವತ್ತು ಮಾತುಗಳು" ಮತ್ತು ಐಗುಪ್ತದ ಜ್ಞಾನದ ಪುಸ್ತಕ "ಇನ್‌ಸ್ಟ್ರಕ್ಷನ್ ಆಫ್ ಅಮೆನೆಮೋಪ್" ನಡುವೆ ಹೋಲಿಕೆಗಳಿವೆ, ಇದನ್ನು ವಿದ್ವಾಂಸರು ಪ್ರಾಚೀನ ಸಮೀಪದ ಪೂರ್ವ ಜ್ಞಾನ ಸಾಹಿತ್ಯದ ಮೇರುಕೃತಿಗಳಲ್ಲಿ ಒಂದೆಂದು ಪರಿಗಣಿಸುತ್ತಾರೆ. ಕ್ರಿ.ಪೂ. 1250 ರ ಸುಮಾರಿಗೆ ಬರೆಯಲ್ಪಟ್ಟ ಐಗುಪ್ತದ ಪುಸ್ತಕವು ಯೋಗಕ್ಷೇಮ ಮತ್ತು ಸರಿಯಾದ ನಡವಳಿಕೆಗಾಗಿ ಸಲಹೆಯ ಮೂವತ್ತು ಅಧ್ಯಾಯಗಳನ್ನು ಅನುಸರಿಸಿ ಮುನ್ನುಡಿಯನ್ನು ಒಳಗೊಂಡಿದೆ, ಇದನ್ನು ಲೇಖಕ ಅಮೆನೆಮೋಪ್ ತನ್ನ ಮಗನಿಗೆ ಪರಂಪರೆಯಾಗಿ ಬರೆದಿದ್ದಾನೆ. ಇದು ಹೆಚ್ಚುತ್ತಿರುವ ಕಷ್ಟಕರವಾದ ಸಾಮಾಜಿಕ ಮತ್ತು ಆರ್ಥಿಕ ಸಂದರ್ಭಗಳ ಮುಖಾಂತರ ಸಂತೋಷದ ಜೀವನಕ್ಕೆ ಅಗತ್ಯವಾದ ಆಂತರಿಕ ಗುಣಗಳು ಮತ್ತು ಮನೋಭಾವಗಳನ್ನು ವಿಶ್ಲೇಷಿಸುತ್ತದೆ. "ಸೂಚನೆ" ಎರಡು ರೀತಿಯ ವ್ಯಕ್ತಿಗಳನ್ನು ವ್ಯತಿರಿಕ್ತಗೊಳಿಸುತ್ತದೆ: ಪ್ರಮಾಣಿಕ, ಸಾಧಾರಣ, ಗೌರವಾನ್ವಿತ, ಶಿಸ್ತುಬದ್ಧ, ಶಾಂತ, ಇತರರಿಗೆ ದಯೆ ತೋರುವ ಮತ್ತು ಅನಾನುಕೂಲಕರ ಬಗ್ಗೆ ಕಾಳಜಿ ವಹಿಸುವ ವ್ಯಕ್ತಿ ಮತ್ತು ತ್ವರಿತ ಸ್ವಭಾವದ ಮತ್ತು ಮೋಸಗಾರ. ಪ್ರಾಮಾಣಿಕತೆ (ವೈಯಕ್ತಿಕ ಮತ್ತು ವ್ಯವಹಾರ ವಿಷಯಗಳಲ್ಲಿ), ಸೀಮಿತ ಭೌತಿಕ ಆಸ್ತಿಗಳೊಂದಿಗೆ ಸಂತೃಪ್ತಿ ಮತ್ತು ಬಡವರನ್ನು ಬೆಂಬಲಿಸುವ ಸದ್ಗುಣದ ಮೇಲೆ ಒತ್ತು ನೀಡಲಾಗುತ್ತದೆ.

ಪ್ರಶ್ನೆಗಳು

1. ಜ್ಞಾನಿಗಳು ಮಾತುಗಳು ಜ್ಞಾನೋಕ್ತಿಗಳ ಎರಡು ಸಂಗ್ರಹಗಳನ್ನು ಒಳಗೊಂಡಿವೆ. ನಿಮ್ಮ ಸತ್ಯವೇದದಲ್ಲಿ ಪ್ರತೀ ಸಂಗ್ರಹದ ಪ್ರಾರಂಭ ಮತ್ತು ಅಂತ್ಯವನ್ನು ಕಂಡು ಹಿಡಿಯಿರಿ.

2. "ಜ್ಞಾನಿಗಳ ಮೂವತ್ತು ಮಾತುಗಳು" ಮತ್ತು ಐಗುಪ್ತದ ಪಠ್ಯ ಅಮೆನೆಮೋಪ್‌ನ ಸೂಚನೆಯ ನಡುವಿನ ವ್ಯತ್ಯಾಸವೇನು?

3. ಜ್ಞಾನೋಕ್ತಿಗಳ ಮೊದಲ ಸಂಗ್ರಹದ ಪೀಠಿಕೆಯಲ್ಲಿ (22:17–21) ಗ್ರಂಥಕರ್ತನು ತನ್ನ ಉದ್ದೇಶವನ್ನು ತಿಳಿಸುತ್ತಾನೆ. ಅವನ ಅಂಶಗಳ ಪಟ್ಟಿಯನ್ನು ಮಾಡಿರಿ.

4. ಗ್ರಂಥಕರ್ತರು (ಅಥವಾ ಸಂಪಾದಕರು) ತನ್ನ ಸಂಗ್ರಹವು "ಮೂವತ್ತು ಮಾತುಗಳನ್ನು" ಹೊಂದಿದೆ ಎಂದು ಹೇಳುತ್ತಾನೆ (22:20, **ಸತ್ಯವೇದವು** ಮತ್ತು **ಪವಿತ್ರ ಗ್ರಂಥ** ಕನ್ನಡ ಭಾಷಾಂತರಗಳಲ್ಲಿ ಉಲ್ಲೇಖಿಸಲಾಗಿಲ್ಲ). ಜ್ಞಾನೋಕ್ತಿ 22:22–24:22 ರಲ್ಲಿ ಕಂಡುಬರುವ "ಮೂವತ್ತು ಮಾತುಗಳನ್ನು" ಗುರುತಿಸಿ ಪಟ್ಟಿ ಮಾಡಿ. ಪ್ರತಿಯೊಂದು ಮಾತನ್ನು ನಿಮ್ಮ ಸ್ವಂತ ಮಾತುಗಳಲ್ಲಿ ಸಂಕ್ಷೇಪಿಸಿರಿ.

5. "ಜ್ಞಾನಿಗಳು" ತಮ್ಮ "ಮುಂದಿನ ಮಾತುಗಳಲ್ಲಿ" ಹೇಳುವ ಅಂಶಗಳನ್ನು ಪಟ್ಟಿ ಮಾಡಿರಿ (ಜ್ಞಾನೋ 24:23–24).

ಜ್ಞಾನಿಗಳ ಮಾತುಗಳು ಆಲೋಚಿಸಿರಿ ಮತ್ತು ಚರ್ಚಿಸಿರಿ

1. "ಇವು ಕೂಡ ಜ್ಞಾನಿಗಳ ಮಾತುಗಳು" (ಜ್ಞಾನೋಕ್ತಿ 24:23–34) ಎಂಬ ವಾಕ್ಯವೃಂದದ ರಚನೆಯನ್ನು ವಿವರಿಸಿ.
2. ಜ್ಞಾನೋಕ್ತಿ 24:30–34 ರಲ್ಲಿ ಕಂಡುಬರುವ "ವಾಕ್ಯ" ವನ್ನು ಅಧ್ಯಯನ ಮಾಡಿ. ಅದನ್ನು ಹೇಗೆ ರಚಿಸಲಾಗಿದೆ? ಅಂಶವನ್ನು ಹೇಗೆ ರೂಪಿಸಲಾಗಿದೆ? ಅಂಶ ಯಾವುದು?
3. ನಿಮ್ಮ "ಮೂವತ್ತು ಮಾತುಗಳ" ಪಟ್ಟಿಯನ್ನು ಪರಿಶೀಲಿಸಿ (ಪ್ರಶ್ನೆ 4 ಕ್ಕೆ ನಿಮ್ಮ ಉತ್ತರವನ್ನು ನೋಡಿ). ನಿಮ್ಮನ್ನು ಮತ್ತು ನಿಮ್ಮ ಕ್ರೈಸ್ತೀಯ ಜೀವನವನ್ನು ಮೌಲ್ಯಮಾಪನ ಮಾಡಿ ಮತ್ತು ಈ ಪಟ್ಟಿಯ ಬೆಳಕಿನಲ್ಲಿ ಸಾಕ್ಷಿಯಾಗಿರಿ.

ಅಸೈನ್‌ಮೆಂಟ್: ಜ್ಞಾನಿಗಳ ಮಾತುಗಳು

"ಜ್ಞಾನಿಗಳ ಮೂವತ್ತು ಮಾತುಗಳು" ಕುರಿತು ಯುವ ಗುಂಪಿಗೆ ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿ. ನಿಮ್ಮ ಮಾತುಗಳನ್ನು ಹಳೇ ಒಡಂಬಡಿಕೆಯ ಆಧ್ಯಾತ್ಮಿಕ ಸಂದರ್ಭದಲ್ಲಿ ಇರಿಸಿದ್ದೀರಿ ಎಂದು ಖಚಿತಪಡಿಸಿಕೊಳ್ಳಿ ("ಕರ್ತನ ಭಯವು ಜ್ಞಾನ ಮತ್ತು ತಿಳುವಳಿಕೆಯ ಆರಂಭ")

ಹಿಜ್ಕೀಯನು ಸಂಗ್ರಹಿಸಿದ ಸೊಲೊಮೋನನ ಜ್ಞಾನೋಕ್ತಿಗಳು (25:1–29:27)

ಪೀಠಿಕೆ

ಜ್ಞಾನಿಗಳ ಮಾತುಗಳ ಎರಡು ಸಂಗ್ರಹಗಳ ನಂತರ ಸಂಗ್ರಹಿಸಿದ ಜ್ಞಾನೋಕ್ತಿಗಳ 3ನೇ ಸಂಗ್ರಹವು ಕಂಡುಬರುತ್ತವೆ (ಅಧ್ಯಾಯ 25–29). ಇದು ಸೊಲೊಮೋನನ ಜ್ಞಾನೋಕ್ತಿಗಳ ಯೆಹೂದದ ಅರಸನಾದ ಹಿಜ್ಕೀಯನ ಲೇಖಕರು ಇವುಗಳನ್ನು ಸಂಗ್ರಹಿಸಿ ಬರೆದರು ಎಂದು ಪರಿಚಯಿಸಲ್ಪಟ್ಟಿದೆ (25:1). ಹಿಜ್ಕೀಯನು ಸುಮಾರು ಕ್ರಿ.ಪೂ. 715–686 ರ ಅವಧಿಯಲ್ಲಿ ಇಸ್ರಾಯೇಲಿನ ದಕ್ಷಿಣ ರಾಜ್ಯದ ಅರಸನಾಗಿದ್ದನು.

ಸೊಲೊಮೋನನ ಜ್ಞಾನೋಕ್ತಿಗಳ ಮುಖ್ಯ ಸಂಗ್ರಹದಲ್ಲಿ ಕಂಡುಬರುವ ಎರಡು ಸಾಲು ವಚನಗಳ ವಿಧಾನವು ಅರಸನಾದ ಹಿಜ್ಕೀಯನ ಸಂಗ್ರಹಗಳಲ್ಲಿ ಮುಂದುವರಿಯುತ್ತದೆ. ಆದರೆ ಇದರಲ್ಲಿ ಮೂರು ಸಾಲುಗಳ (ಉದಾ: 25:13, 27:10, 22, 27) ಮತ್ತು ನಾಲ್ಕು ಸಾಲುಗಳ ಜ್ಞಾನೋಕ್ತಿಗಳ (ಉದಾ. 25:4–5, 21–22, 26:18–19) ಸಹ ಇವೆ 27ನೇ ಅಧ್ಯಾಯದ ಅಂತ್ಯದಲ್ಲಿ ಮಂದೆಗಳನ್ನು ನೋಡಿಕೊಳ್ಳುವುದರ ಬಗ್ಗೆ ಪ್ರಬೋಧನೆಗಳನ್ನು ನಾವು ಕಾಣಬಹುದು (ವಚನ 23–27).

ಪ್ರಶ್ನೆಗಳು

1. ಈ ಜ್ಞಾನೋಕ್ತಿಗಳು ಓದುಗರನ್ನು ಯಾವುದರ ವಿರುದ್ಧವಾಗಿ ಎಚ್ಚರಿಸುತ್ತವೆ?

    - 25:14
    - 25:18
    - 25:27
    - 26:6
    - 27:20
    - 27:21
    - 28:3
    - 28:9

2. ಈ ಜ್ಞಾನೋಕ್ತಿಗಳು ಓದುಗರು ಏನನ್ನು ಮಾಡಬೇಕೆಂದು ಪ್ರೋತ್ಸಾಹಿಸುತ್ತವೆ? ಅಥವಾ ಓದುಗರು ಯಾವ ರೀತಿಯ ಗುಣಲಕ್ಷಣ ಹೊಂದಿರಬೇಕು?

    - 25:6–7
    - 25:12
    - 25:19
    - 25:28
    - 26:18–19
    - 27:19
    - 29:14

- 29:17

3. ಈ ಜ್ಞಾನೋಕ್ತಿಗಳಲ್ಲಿ ಯಾವ ರೀತಿಯ ನಡವಳಿಕೆ (ಅಥವಾ ಸ್ವಭಾವಗಳು ಅಥವಾ ವ್ಯಕ್ತಿಗಳು) ತದ್ವಿರುದ್ಧವಾಗಿವೆ?

   - 25:4–5
   - 25:6–7
   - 25:8–10
   - 27:12
   - 28:1
   - 28:19
   - 28:28

4. ಜ್ಞಾನೋಕ್ತಿ 27:23–27 ರ ಪ್ರಕಾರ ಹಿಂಡುಗಳನ್ನು ಬೆಳಸುವುದರಿಂದ ಆಗುವ ಪ್ರಯೋಜನೆಗಳೇನು?

ಹಿಜ್ಕೀಯನು ಸಂಗ್ರಹಿಸಿದ ಸೊಲೊಮೋನನ ಜ್ಞಾನೋಕ್ತಿಗಳು ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಮೇಲ್ಕಂಡ 1–3 ರ ಪ್ರಶ್ನೆಗಳ ಉತ್ತರಕ್ಕೆ ಹೋಗಿರಿ. ಎಚ್ಚರಿಕೆ, ಆಜ್ಞೆ ಮತ್ತು ತದ್ವಿರುದ್ಧತೆಗಳ ಪಟ್ಟಿಗಳ ಬೆಳಕಿನಡಿಯಲ್ಲಿ ನಿಮ್ಮನ್ನು, ನಿಮ್ಮ ಕ್ರೈಸ್ತೀಯ ಜೀವಿತವನ್ನು ಮತ್ತು ಸಾಕ್ಷಿಯನ್ನು ಮೌಲ್ಯಮಾಪನ ಮಾಡಿರಿ.
2. ನಿಮ್ಮ ಜೀವಿತ ಮತ್ತು ಸೇವೆಗಾಗಿ ದೇವರ ಚಿತ್ತದ ಪ್ರಕಾರ ನೀವು ಬದಲಾವಣೆ ಕಾಣಲು ಬಯಸುವ 2 ಅಥವಾ 3 ಕ್ಷೇತ್ರಗಳನ್ನು ಆರಿಸಿಕೊಳ್ಳಿರಿ. ನಿಮ್ಮ ಮುಂದಿನ ಹೆಜ್ಜೆಗಳನ್ನು ನಿರ್ಧರಿಸಿರಿ. ನಂತರ ನಿಮ್ಮ ಕಾಳಜಿಗಳನ್ನು ಪ್ರಾರ್ಥನೆಯಲ್ಲಿ ದೇವರ ಮುಂದೆ ತನ್ನಿರಿ.
3. ಪ್ರತಿ ಜ್ಞಾನೋಕ್ತಿಯನ್ನು ಸಾಹಿತ್ಯಿಕ ಮಾದರಿಗಳಲ್ಲಿ ಒಂದರೊಂದಿಗೆ ಹೊಂದಿಸಿ. ನಿಮ್ಮ ಹೊಂದಾಣಿಕೆಗೆ ಕಾರಣವನ್ನು ಸಹ ವಿವರಿಸಿ.

   ಜ್ಞಾನೋಕ್ತಿಗಳು:

   26:7

   26:15

   25:21–22

   28:6

   26:20

   25:15

   26:1

   ಸಾಹಿತ್ಯಿಕ ಮಾದರಿಗಳು:

   1. ಗುರುತು ಅಥವಾ ಸಮಾನತೆ (“ಇದು ಅದರೊಂದಿಗೆ ನಿಜವಾಗಿಯೂ ಹೋಲುತ್ತದೆ” ಅಥವಾ “ಇದು ಅದಕ್ಕೆ ಸಮಾನವಾಗಿದೆ)
   2. ಗುರುತಿಲ್ಲದಿರುವುದು, ವ್ಯತಿರಿಕ್ತತೆ ಅಥವಾ ವಿರೋಧಭಾಸ (“ಇದರ ಪ್ರತಿಯೊಂದು ನಿದರ್ಶನವೂ ಅದು ಅಲ್ಲ”)
   3. ಹೋಲಿಕೆಗಳು ಅಥವಾ ಸಾದೃಶ್ಯಗಳು (“ಇದು ಹಾಗೆ”)
   4. ಸರಿಯಾದ ಕ್ರಮಕ್ಕೆ ವಿರುದ್ಧವಾಗಿ (“ಇದು ನಿರರ್ಥಕ” ಅಥವಾ “ಇದು ಅಸಂಬದ್ಧ”)
   5. ಒಬ್ಬ ವ್ಯಕ್ತಿ, ಕ್ರಿಯೆ ಅಥವಾ ಸನ್ನಿವೇಶವನ್ನು ವರ್ಗಿಕರಿಸಲಾಗಿದೆ ಅಥವಾ ನಿರೂಪಿಸಲಾಗಿದೆ.

6. ಸಾಪೇಕ್ಷ ಮೌಲ್ಯ (“ಇದು ಅದಕ್ಕಿಂತ ಹೆಚ್ಚು ಯೋಗ್ಯವಾಗಿದೆ” ಅಥವಾ “ಇದು ಅದಕ್ಕಿಂತ ಉತ್ತಮವಾಗಿದೆ”)
7. ಮಾನವ ಪಾತ್ರ ಮತ್ತು ನಡವಳಿಕೆಯ ಪರಿಣಾಮಗಳು

ಅಸೈನ್‌ಮೆಂಟ್: ಹಿಜ್ಕೀಯನು ಸಂಗ್ರಹಿಸಿದ ಸೊಲೋಮೋನನ ಜ್ಞಾನೋಕ್ತಿಗಳು

1. **ಚಿಂತನೆಗೆ ಹಚ್ಚುವ ಜ್ಞಾನೋಕ್ತಿಗಳು**

ಜ್ಞಾನೋಕ್ತಿ 25–29 ಅಧ್ಯಾಯಗಳನ್ನು ಓದಿ ಮತ್ತು ಪ್ರತೀ ಅಧ್ಯಾಯದಿಂದ ನಿಮಗೆ ವಿಶೇಷವಾಗಿ ಚಿಂತನೆಗೆ ಹಚ್ಚುವ ಒಂದು ಜ್ಞಾನೋಕ್ತಿಯನ್ನು ಆರಿಸಿ. ನಿಮ್ಮ ಗುಂಪಿನಲ್ಲಿರುವ ಐದು ಜ್ಞಾನೋಕ್ತಿಗಳಲ್ಲಿ ನಿಮ್ಮ ಆಯ್ಕೆಯನ್ನು ಹಂಚಿಕೊಳ್ಳಿ:

ಅ. ಪ್ರತಿಯೊಂದು ಜ್ಞಾನೋಕ್ತಿಯ ಅರ್ಥವನ್ನು ವಿವರಿಸಿ.

ಆ. ನೀವು ಆ ಜ್ಞಾನೋಕ್ತಿಯನ್ನು ಏಕೆ ಆರಿಸಿಕೊಂಡಿದ್ದೀರಿ ಎಂಬುದನ್ನು ಸಹ ವಿವರಿಸಿ.

2. **ಗಮನ ಸೆಳೆಯುವ ಚಿತ್ರಣ**

ಜ್ಞಾನೋಕ್ತಿ 25–29 ಅಧ್ಯಾಯಗಳನ್ನು ಓದಿ ಮತ್ತು ಪ್ರತೀ ಅಧ್ಯಾಯದಿಂದ ವಿಶೇಷವಾಗಿ ಗಮನ ಸೆಳೆಯುವ ಚಿತ್ರಣವನ್ನು ಹೊಂದಿರುವ ಒಂದು ಜ್ಞಾನೋಕ್ತಿಯನ್ನು ಆರಿಸಿ. ನಿಮ್ಮ ಗುಂಪಿನಲ್ಲಿರುವ ನಿಮ್ಮ ಐದು ಜ್ಞಾನೋಕ್ತಿಗಳಲ್ಲಿ ನಿಮ್ಮ ಆಯ್ಕೆಯನ್ನು ಹಂಚಿಕೊಳ್ಳಿ:

ಅ. ಪ್ರತಿಯೊಂದು ಜ್ಞಾನೋಕ್ತಿಯ ಚಿತ್ರಣವನ್ನು ವಿವರಿಸಿ.

ಆ. ನೀವು ಆ ಜ್ಞಾನೋಕ್ತಿಯನ್ನು ಏಕೆ ಆರಿಸಿಕೊಂಡಿದ್ದೀರಿ ಎಂಬುದನ್ನು ಸಹ ವಿವರಿಸಿ.

ಆಗೂರ ಮತ್ತು ಅರಸನಾದ ಲೆಮೂವೇಲನ ಮಾತುಗಳು (30:1–31:9)

ಪೀಠಿಕೆ

ಜ್ಞಾನೋಕ್ತಿ ಪುಸ್ತಕದ ಕೊನೆಗೆ ಬಂದಾಗ ಯಾಕೆ ಎಂಬುವವನ ಮಗನಾದ ಆಗೂರನ (ಅಧ್ಯಾಯ 30) ಮತ್ತು ಅರಸನಾದ ಲೆಮೂವೇಲ ಅಥವಾ ಆತನ ತಾಯಿಗೆ ಸೇರಿದ (31:1–9) ಜ್ಞಾನೋಕ್ತಿಗಳ ಚಿಕ್ಕ ಸಂಗ್ರಹಗಳನ್ನು ನಾವು ಕಾಣುತ್ತೇವೆ. ಈ ಇಬ್ಬರು ವ್ಯಕ್ತಿಗಳು ಅರಸನಾದ ಸೊಲೊಮೋನನ ಆಸ್ಥಾನಕ್ಕೆ ಸಂಬಂಧಿಸಿದವರೆಂದು ಯೆಹೂದಿ ಸಂಪ್ರದಾಯಗಳು ಹೇಳುತ್ತವೆ. ಆದರೆ ಈ ಸಂಪ್ರದಾಯಗಳು ಅನಿಶ್ಚಿತವಾಗಿವೆ. ಹೆಚ್ಚಿನ ಸತ್ಯವೇದ ಆವೃತ್ತಿಗಳಲ್ಲಿ **"ದೈವೋಕ್ತಿ"** ಎಂದು ಅನುವಾದಿಸಲಾದ ಇಬ್ರಿಯ ಪದ (30:1 ಮತ್ತು 31:1) (ಕನ್ನಡ ಪವಿತ್ರ ಗ್ರಂಥವು **"ಜ್ಞಾನದ ಪದ"**ವನ್ನು ಹೊಂದಿದೆ) ಸಾಮಾನ್ಯವಾಗಿ ಹಳೇ ಒಡಂಬಡಿಕೆಯ ಪ್ರವಾದಿಗಳ ದೈವವಾಣಿಗಳನ್ನು ಸೂಚಿಸುತ್ತದೆ (ಜ್ಞಾನೋಕ್ತಿಗಳಿಗೆ ಅಲ್ಲ). ಆದಾಗ್ಯೂ, ಈ ಪದವನ್ನು ಮಸ್ಸಾ ಎಂಬ ಸ್ಥಳನಾಮವಾಗಿಯೂ ಓದಬಹುದು (ಬಹುಶಃ ಇಷ್ಮಾಯೇಲ್ ಬುಡಕಟ್ಟು ಜನಾಂಗದೊಂದಿಗೆ ಸಂಪರ್ಕ ಹೊಂದಿರಬಹುದು, ಆದಿಕಾಂಡ 25:13–14 ಅನ್ನು ಹೋಲಿಸಿ). ಕೆಲವು ಸತ್ಯವೇದ ಬಾಷಾಂತರಕಾರರು ಈ ಆಯ್ಕೆಯನ್ನು ಆರಿಸಿಕೊಂಡಿದ್ದಾರೆ. ಹೆಚ್ಚಿನ ಸತ್ಯವೇದ ವಿದ್ವಾಂಸರು ಈ ಎರಡು ಸಂಗ್ರಹಗಳನ್ನು ಇಸ್ರಾಯೇಲ್ ಅಲ್ಲದ ಮೂಲದವರು ಎಂದು ಪರಿಗಣಿಸುತ್ತಾರೆ.

30:1 ರ ದ್ವಿತೀಯಾರ್ಧವು ಸತ್ಯವೇದ ವಿದ್ವಾಂಸರಿಗೆ ಸಮಸ್ಯೆಗಳನ್ನು ಉಂಟುಮಾಡುತ್ತದೆ ಮತ್ತು ಇಬ್ರಿಯ ಪಠ್ಯವನ್ನು ಹೇಗೆ ಉಚ್ಚರಿಸಲಾಗುತ್ತದೆ ಎಂಬುದರ ಆಧಾರದ ಮೇಲೆ ಅನುವಾದಗಳು ತೀವ್ರವಾಗಿ ಬದಲಾಗುತ್ತವೆ (ಪ್ರಾಚೀನ ಇಬ್ರಿಯ ಭಾಷೆಯನ್ನು ಕೇವಲ ವ್ಯಂಜನಗಳೊಂದಿಗೆ ಬರೆಯಲಾಗಿದೆ, ಆದ್ದರಿಂದ ಓದುಗರು ಸ್ವರ ಶಬ್ದಗಳನ್ನು ಸೇರಿಸಬೇಕಾಗಿತ್ತು). ಇಂಗ್ಲಿಷ್ **ಎನ್ಐವಿ** ಮತ್ತು ಕನ್ನಡ ಅನುವಾದಗಳು ಹೀಗೆ ಹೇಳುತ್ತವೆ: **"ಇವನು ಇಥಿಯೇಲನಿಗೆ, ಇಥಿಯೇಲನಿಗೂ ಉಕ್ಕಾಲನಿಗೂ ಹೀಗೆ ಹೇಳಿದನು"**. ಆದರೆ ಇಂಗಿಷ್ **ಇಎಸ್ವಿ** ಹೀಗೆ ಹೇಳುತ್ತದೆ" **"ಮನುಷ್ಯನು ಘೋಷಿಸುತ್ತಾನೆ, ನಾನು ದಣಿದಿದ್ದೇನೆ, ಓ ದೇವರೇ ನಾನು ದಣಿದಿದ್ದೇನೆ, ಓ ದೇವರೇ ಮತ್ತು ದಣಿದಿದ್ದೇನೆ"**.

ಈ ಸಂಗ್ರಹಗಳಲ್ಲಿ ಮೊದಲನೇಯದು ಸಂಖ್ಯಾತ್ಮಕ ಜ್ಞಾನೋಕ್ತಿಗಳಿಂದ ಪ್ರಾಬಲ್ಯ ಹೊಂದಿದೆ ಮತ್ತು ಎರಡನೇಯದು ಉತ್ತಮ ಆಡಳಿತಗಾರನ ಅವಶ್ಯಕತೆಗಳ ಸಾರಾಂಶವಾಗಿದೆ.

ಪ್ರಶ್ನೆಗಳು

1. ಆಗೂರನು ತನ್ನನ್ನು ಹೇಗೆ ವರ್ಣಿಸಿಕೊಳ್ಳುತ್ತಾನೆ (30:2–3)?
2. ಆಗೂರನ ದೇವರ ವಾಕ್ಯವನ್ನು ಹೇಗೆ ವರ್ಣಿಸುತ್ತಾನೆ (30:5–6)?
3. ತನಗಾಗಿ ಆಗೂರನು ದೇವರಲ್ಲಿ ಏನೆಂದು ವಿಜ್ಞಾಪಿಸಿಕೊಳ್ಳುತ್ತಾನೆ ಮತ್ತು ಯಾಕೆ (30:7–9)?
4. ತಮ್ಮ ತಂದೆತಾಯಂದಿರನ್ನು ಸನ್ಮಾನಿಸಿದವರು ಹೇಗೆ ವರ್ಣಿಸಲ್ಪಟ್ಟಿದ್ದಾರೆ (30:1–14 ಮತ್ತು 30:17)?
5. ಜ್ಞಾನೋ. 30:20 ರಿಂದ ಜಾರಸ್ತ್ರೀಯ ಬಗ್ಗೆ ನಾವು ಏನನ್ನು ಕಲಿಯುತ್ತೇವೆ?
6. ಜ್ಞಾನೋ. 30:32–33 ರಿಂದ ಮೂರ್ಖರ ಬಗ್ಗೆ ನಾವು ಏನನ್ನು ಕಲಿಯುತ್ತೇವೆ?
7. ಅರಸನ ತಾಯಿಯು ತನ್ನ ಮಗನನ್ನು ಹೇಗೆ ವರ್ಣಿಸುತ್ತಾಳೆ (31:2)?
8. ತನ್ನ ಮಗನಿಗಾಗಿ ಅರಸನ ತಾಯಿಯು ನೀಡಿದ ಬುದ್ಧಿಮಾತುಗಳನ್ನು ಪಟ್ಟಿ ಮಾಡಿರಿ (31:3–9).

ಆಗೂರ ಮತ್ತು ಅರಸನಾದ ಲೆಮೂವೇಲನ ಮಾತುಗಳು ಆಲೋಚಿಸಿರಿ ಮತ್ತು ಚರ್ಚಿಸಿರಿ

1. 30:4 ರಲ್ಲಿ ಆಗೂರನು ಯಾರನ್ನು ಕುರಿತು ಹೇಳುತ್ತಿರುವನೆಂದು ನೀವು ಯೋಚಿಸುವಿರಿ?
2. ಕೆಳಗೆ ಕಂಡು ಬರುವ ಸಂಖ್ಯಾತ್ಮಕ ಜ್ಞಾನೋಕ್ತಿಗಳನ್ನು ವಿಶ್ಲೇಷಿಸಿರಿ ಮತ್ತು ವಿವರಿಸಿರಿ.

   ಅ. ಜ್ಞಾನೋ. 30:15–16

ಆ. ಜ್ಞಾನೋ. 30:18–19

ಇ. ಜ್ಞಾನೋ. 30:21–23

3. ಆಗೂರನ ಮಾತುಗಳಿಂದ ದಕ್ಷಿಣ ಭಾರತದ ವಿಶ್ವಾಸಿಗಳಾದ ನಾವು ಇಂದು ಏನನ್ನು ಕಲಿಯಬಹುದು?

4. ತನ್ನ ಮಗನಾದ ಲೆಮೂವೇಲನಿಗೆ ಆತನ ತಾಯಿ ಹೇಳುವ ಬುದ್ಧಿಮಾತುಗಳಿಂದ ದಕ್ಷಿಣ ಭಾರತದ ವಿಶ್ವಾಸಿಗಳಾದ ನಾವು ಏನನ್ನು ಕಲಿಯಬಯಹುದು?

ಗುಣವತಿಯಾದ ಸತಿ (31:10–31)

ಪಿಠಿಕೆ

ಉತ್ತಮ ಪತ್ನಿಯ ಗುಣಗಳನ್ನು ವರ್ಣಿಸುವ ಒಂದು ಅಕ್ಷರಗಳ ಒಗಟಿನ ಪದ್ಯದೊಂದಿಗೆ ಜ್ಞಾನೋಕ್ತಿ ಪುಸ್ತಕವು ಮುಕ್ತಾಯವಾಗುತ್ತದೆ. ಅಕ್ಷರಗಳ ಒಗಟು ಎಂದರೆ ಪ್ರತಿ ವಚನ ಸಹ ಕ್ರಮವಾಗಿ ಒಂದೊಂದು ಇಬ್ರಿಯ ವರ್ಣಮಾಲೆಯ ಅಕ್ಷರದೊಂದಿಗೆ ಪ್ರಾರಂಭವಾಗುತ್ತದೆ. ಇಬ್ರಿಯ ವರ್ಣಮಾಲೆಯಲ್ಲಿ 22 ಅಕ್ಷರಗಳಿವೆ ಹಾಗೆಯೇ ಈ ಪದ್ಯದಲ್ಲಿ ಸಹ 22 ವಚನಗಳಿವೆ. ಈ ಅಕ್ಷರಗಳ ಒಗಟಿನ ವಿಧಾನವು ಬಹುಶಃ ಎರಡು ಉದ್ದೇಶಗಳನ್ನು ಹೊಂದಿದೆ:

1. ಇದು ಓದುಗನು ಪದ್ಯವನ್ನು ಕಲಿಯಲು ಸಹಕರಿಸಿದೆ.
2. ಕವಿಯು ಒಂದು ಪೂರ್ಣತೆಯ ಜ್ಞಾನವನ್ನು ವ್ಯಕ್ತಪಡಿಸಲು ಇದೊಂದು ವಿಧವಾಗಿತ್ತು.

ಜ್ಞಾನೋಕ್ತಿ ಪುಸ್ತಕದುದ್ದಕ್ಕೂ ಪುರುಷರ ಜೀವನವು ಪ್ರತಿಬಿಂಬಿಸಲ್ಪಟ್ಟಿರುವುದನ್ನು ನಾವು ಕಾಣಬಹುದು.

ಅರಸ, ಮಗ, ರೈತ, ಕುರುಬನ ದೃಷ್ಟಿಕೋನವಿಲ್ಲಿದೆ. ಹಾಗೆಯೇ ಒಬ್ಬ ಮಧ್ಯಮ ವರ್ಗದ ರೈತಾಪಿ– ಉದ್ಯೋಗಮಯ ಸ್ತ್ರೀಯ ಸದ್ಗುಣಗಳನ್ನು ವರ್ಣಿಸುವ ಒಂದು ಸುಂದರವಾದ ಕಾವ್ಯರೂಪಿ ಪರಾಕಾಷ್ಠತೆಗೆ ಜ್ಞಾನೋಕ್ತಿ ಪುಸ್ತಕದ ಕೊನೆಯ ಪ್ರಕಾಶಕನು ತನ್ನಲ್ಲಿ ಜ್ಞಾನೋಕ್ತಿಗಳು, ಸಾಮ್ಯಗಳು, ಹೇಳಿಕೆಗಳು ಮತ್ತು ಒಗಟುಗಳನ್ನು ತಂದಿರುವುದು ಆಸಕ್ತಿಕರವಾಗಿದೆ. ಆಕೆಯನ್ನು ಜ್ಞಾನೋಕ್ತಿಯಲ್ಲಿ ಬೇರೆಲ್ಲಿಯೂ ಸಹ ತಿಳಿಸಲಿಲ್ಲ, ಅಕೆಯ ವರ್ಣನೆಯು ಒಬ್ಬ ವಿವೇಚನೆಯ ಓದುಗರಿಗೆ ಆಕೆ ಯಾರಾಗಿರಬಹುದು ಅಥವಾ ಯಾಕೆ ಈ ಪುಸ್ತಕ ಈ ರೀತಿಯಲ್ಲಿ ಮುಕ್ತಾಯವಾಗುತ್ತೆಂದು ಆಶ್ಚರ್ಯಪಡುವಂತೆ ಮಾಡುತ್ತದೆ.

ಪ್ರಶ್ನೆಗಳು

1. "ಗುಣವತಿಯಾದ ಸತಿಯ" ಮನೆಯನ್ನು ಹೇಗೆ ವಿವರಿಸಲಾಗಿದೆ? ಸಾಧ್ಯವಾದಷ್ಟು ನಿಮ್ಮ ಸ್ವಂತ ಪದಗಳನ್ನು ಬಳಸಲು ಪ್ರಯತ್ನಿಸಿ.
2. "ಗುಣವತಿಯಾದ ಸತಿ"ಯನ್ನು ಹೇಗೆ ವಿವರಿಸಲಾಗಿದೆ? ಸಾಧ್ಯವಾದಷ್ಟು ನಿಮ್ಮ ಸ್ವಂತ ಪದಗಳನ್ನು ಬಳಸಲು ಪ್ರಯತ್ನಿಸಿ.
3. ಅವಳ ಸ್ವಂತ ಕುಟುಂಬವು ಅವಳ ಬಗ್ಗೆ ಏನೆಂದು ಯೋಚಿಸುತ್ತದೆ?
4. ಅವಳ ಸಮುದಾಯದ ನಾಯಕರುಗಳು ಆಕೆಯ ಬಗ್ಗೆ ಏನೆಂದು ಯೋಚಿಸುತ್ತಾರೆ?
5. ವಾಕ್ಯಭಾಗದ ಕೊನೆಯಲ್ಲಿ ವಿರೋಧಾತ್ಮಕ ಸಮಾನಾಂತರತೆಗೆ ಎರಡು ಉದಾಹರಣೆಗಳಿವೆ. ಅವುಗಳನ್ನು ಗುರುತಿಸಿ ಮತ್ತು ವಿಶ್ಲೇಷಿಸಿರಿ.
6. ಜ್ಞಾನೋ 1:7 ಮತ್ತು 31:30 ಅನ್ನು ಹೋಲಿಸಿರಿ. ನೀವು ಯಾವ ತೀರ್ಮಾನವನ್ನು ತೆಗೆದುಕೊಳ್ಳುತ್ತೀರಿ?

ಗುಣವತಿಯಾದ ಸತಿ ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಈ ವಾಕ್ಯಭಾಗವು "ಗುಣವತಿಯಾದ ಸತಿಯು ಎಲ್ಲಿ ಸಿಕ್ಕಾಳು"? (ವ–10) ಎಂಬ ಪ್ರಶ್ನೆಯೊಂದಿಗೆ ಪ್ರಾರಂಭವಾಗುತ್ತದೆ. ಇಡೀ ವಾಕ್ಯಭಾಗವನ್ನು ಓದಿದ ನಂತರ ಯಾಕೆ ನೀವು ಇಂಥಹ ಹೆಂಡತಿಯನ್ನು ಕಂಡುಕೊಳ್ಳುವುದು ಕಷ್ಟ ಎಂದು ಯೋಚಿಸುವಿರಿ?
2. "ಗುಣವತಿಯಾದ ಸತಿ"ಯ ಈ ವರ್ಣನೆಯನ್ನು ಇಂದಿನ ದಕ್ಷಿಣ ಭಾರತದ ಮಹಿಳೆಯರಿಗೆ ಮತ್ತು ಕೌಟುಂಬಿಕ ಜೀವಿತಕ್ಕೆ ಅನ್ವಯಿಸಬಹುದೇ? ಯಾಕೆ? ಯಾಕೆ ಅಲ್ಲ?
3. ಈ ವಾಕ್ಯಭಾಗವನ್ನು ಆಳವಾಗಿ ಓದುವಾಗ ಇದು "ಗುಣವತಿಯಾದ ಸತಿ"ಯ ಈ ಆದರ್ಶ ಚಿತ್ರಕ್ಕಿಂತ ಮೀರಿ ನೋಡಬೇಕಾದ ಸುಳಿವುಗಳು ದೊರೆಯುತ್ತವೆ. ಅಂಥ ಸುಳಿವನ್ನು ಕಂಡುಹಿಡಿಯಿರಿ. ಅವುಗಳನ್ನು ಸುಳಿವುಗಳಾಗಿ ಯಾಕೆ ಅರ್ಥೈಸಿಕೊಳ್ಳಬಹುದು ಎಂಬುದನ್ನು ವಿವರಿಸಿರಿ.

4. ಇದು ಯಾವ ವಿಧದ ಪಠ್ಯವಾಗಿದೆ ಎಂಬುದರ ಬಗ್ಗೆ ನಿಮ್ಮ ತೀರ್ಮಾನವೇನು? ಇಲ್ಲಿ ಕೆಲವು ಆಯ್ಕೆಗಳಿಗೆ. ಅವುಗಳನ್ನು ಚರ್ಚಿಸಿರಿ ಮತ್ತು ಯಾಕೆ? ಇವುಗಳಲ್ಲಿ ಕೆಲವನ್ನು ನೀವು ಆರಿಸುತ್ತೀರೆಂಬುದಕ್ಕೆ ಕಾರಣ ಕೊಡಿರಿ.

    1. ಇದು ಯೌವನಸ್ಥ ಹುಡುಗಿಯರನ್ನು ಮದುವೆಗಾಗಿ ಸಿದ್ದಗೊಳಿಸಲು ಬರೆಯಲ್ಪಟ್ಟ ಪಠ್ಯವಾಗಿದೆ.
    2. ಇದು ಯೌವನಸ್ಥರ ತಮ್ಮ ಜೀವನ ಸಂಗಾತಿಯನ್ನು ಆರಿಸಿಕೊಳ್ಳಲು ಸಹಕರಿಸಲು ಇದು ಪ್ರಣಯದ ಮಾರ್ಗದರ್ಶಿಯಾಗಿದೆ.
    3. ಗೃಹಿಣಿಯೊಬ್ಬರು ಬದುಕಲು ಇದು **"ಕನ್ನಡಿ"**ಯಾಗಿದೆ.
    4. ಒಂದು ವೇಳೆ ಜ್ಞಾನವು ಒಂದು ಸಾಮಾನ್ಯ ಯೆಹೂದಿ ಮನೆಯಲ್ಲಿ ನರಾವತಾರ ಎತ್ತಿದ್ದರೆ ಜ್ಞಾನದ ಜೀವಿತವು ನೋಡಲು ಹೇಗಿರುತ್ತದೆ ಎಂಬುದಕ್ಕೆ ಇದು ಒಂದು ಸುಂದರ ಚಿತ್ರಣವಾಗಿದೆ.
    5. ಇದು ಜ್ಞಾನದ ಒಂದು ಸಾಂಕೇತಿಕ ನಿರೂಪಣೆಯಾಗಿದೆ.

ಅಸೈನ್‌ಮೆಂಟ್: ಗುಣವತಿಯಾದ ಸತಿ

1. ಈ ಪಾಠದಿಂದ ನಮ್ಮ ಟಿಪ್ಪಣಿಗಳನ್ನು ಓದಿ ಮತ್ತು **"ಗುಣವತಿಯಾದ ಸತಿ"** ಎಂಬ ವಿಷಯದ ಕುರಿತು ಯೌವನಸ್ಥರ ಗುಂಪಿಗೆ ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿ.
2. ಈ ಪಾಠದಲ್ಲಿ ನೀವು ಕಲಿತದ್ದನ್ನು ಆಧರಿಸಿ ಕ್ರೈಸ್ತ ನಿಯತಕಾಲಿಕೆಗೆ ಲೇಖನ ಬರೆಯಿರಿ.

ಜ್ಞಾನದ ಮೌಲ್ಯಗಳು

ಪೀಠಿಕೆ

ಪಠ್ಯಪುಸ್ತಕದ ಈ ಭಾಗವನ್ನು ಅಧ್ಯಯನ ಮಾಡುವ ಮೊದಲು, ನೀವು **ಇಬ್ರಿಯ ಜ್ಞಾನದ ಹಿನ್ನಲೆ** ಎಂಬ ಅಧ್ಯಾಯವನ್ನು ಪರಿಶೀಲಿಸಬೇಕು.

ಪಠ್ಯಪುಸ್ತಕದ ಈ ಭಾಗವು ಮುಖ್ಯವಾಗಿ ಜ್ಞಾನೋಕ್ತಿಗಳ ಎರಡನೇ ಭಾಗವಾದ 10:1–22:16 ರಲ್ಲಿರುವ ಜ್ಞಾನೋಕ್ತಿಗಳನ್ನು ಆಧರಿಸಿದೆ. ನಮ್ಮ ಸತ್ಯವೇದಗಳಲ್ಲಿ ಇದು **ಸೊಲೊಮೋನನ ಜ್ಞಾನೋಕ್ತಿಗಳು** ಎಂಬ ಶೀರ್ಷಿಕೆಯನ್ನು ಹೊಂದಿದೆ.

ಪ್ರೀತಿ ಮತ್ತು ನಂಬಿಗಸ್ತಿಕೆ

ಪೀಠಿಕೆ

ತನ್ನ ಜನರೂ ಸಹ ತನ್ನಂತೆಯೇ ಇರಬೇಕೆಂದು ದೇವರು ಬಯಸುತ್ತಾನೆ. ದೇವರು ಮೋಶೆಗೆ ಹೇಳಿದ್ದೇನೆಂದರೆ – ನೀನು ಇಸ್ರಾಯೇಲ್ಯರ ಸಮೂಹದವರಿಗೆ ಹೀಗೆ ಆಜ್ಞಾಪಿಸಬೇಕು – "ನಿಮ್ಮ ದೇವರಾದ ಯೆಹೋವನೆಂಬ ನಾನು ಪರಿಶುದ್ಧನಾಗಿರುವುದರಿಂದ ನೀವೂ ಪರಿಶುದ್ಧರಾಗಿರಬೇಕು" (ಯಾಜಕಕಾಂಡ 19:1–2), ದೇವರು ತನ್ನ ಜನರೊಂದಿಗೆ ಹೇಗೆ ವ್ಯವಹರಿಸುತ್ತಾನೆಂಬುದನ್ನು. "ಪ್ರೀತಿ ಮತ್ತು ನೀತಿವಂತಿಕೆ" ಎಂಬ ಎರಡು ಪದಗಳಲ್ಲಿ ಸಾರಾಂಶಗೊಳಿಸಬಹುದು.ಈ ಅಧ್ಯಾಯನವು 'ಪ್ರೀತಿಯ' ಮೇಲೆ ಮತ್ತು ಮುಂದಿನ ಅಧ್ಯಯನವು "ನ್ಯಾಯ/ನೀತಿಯ" ಮೇಲೆ ದೃಷ್ಟಿಹರಿಸುತ್ತದೆ.

"ಪ್ರೀತಿ" ಎಂಬ ಪದವು ಜ್ಞಾನೋಕ್ತಿಗಳಲ್ಲಿ "ದೇವರ ಭಯವನ್ನು" ವರ್ಣಿಸಲು ಒಂದು ಪದವಾಗಿದೆ. ಈ ಹೇಳಿಕೆಯು ದೇವರಿಗಾಗಿನ ಗೌರವ ಮತ್ತು ಭಕ್ತಿ ಮತ್ತು ತನ್ನ ಜನರಿಂದ ಒಡಂಬಡಿಕೆಯ ಕರ್ತನು ಅಪೇಕ್ಷಿಸುವ ಆತನ ಸ್ವಭಾವವನ್ನು ವ್ಯಕ್ತಪಡಿಸುತ್ತದೆ. ಪ್ರೀತಿಯು ಜ್ಞಾನದ ಅತ್ಯುನ್ನತ ಮೌಲ್ಯಗಳಲ್ಲಿ ಒಂದಾಗಿದೆ. ಧರ್ಮಶಾಸ್ತ್ರವನ್ನು ಸಾರಾಂಶಗೊಳಿಸಲು ಹಳೇ ಒಡಂಬಡಿಕೆಯು ಪ್ರಮುಖ ಎರಡು ವಾಕ್ಯಭಾಗಗಳನ್ನು ಹೇಳುವಾಗ ಯೇಸು ಕ್ರಿಸ್ತನು ಈ ಮೌಲ್ಯವನ್ನು ಉಪಯೋಗಿಸುತ್ತಾನೆ:

> *ನೀವು ನಿಮ್ಮ ದೇವರಾದ ಯೆಹೋವನನ್ನು ಪೂರ್ಣಹೃದಯದಿಂದಲೂ ಪೂರ್ಣಪ್ರಾಣದಿಂದಲೂ ಪೂರ್ಣಶಕ್ತಿಯಿಂದಲೂ ಪ್ರೀತಿಸಬೇಕು.*
>
> (ಧರ್ಮೋ. 6:5)
>
> *ನಿಮ್ಮ ಸ್ವಜನರಲ್ಲಿ ಯಾರಿಗಾದರೂ ಕೇಡಿಗೆ ಕೇಡನ್ನು ಮಾಡದೆ ಮನಸ್ಸಿನಲ್ಲಿ ಮತ್ಸರವನ್ನು ಇಟ್ಟುಕೊಳ್ಳದೆ ನಿಮ್ಮ ನೆರೆಯವರನ್ನು ನಿಮ್ಮಂತೆಯೇ ಪ್ರೀತಿಸಬೇಕು.*
>
> (ಯಾಜಕ. 19:18)

ಪ್ರೀತಿಯು ಹಳೇ ಮತ್ತು ಹೊಸ ಒಡಂಬಡಿಕೆಗಳೆರಡರಲ್ಲಿಯೂ ಅತ್ಯುನ್ನತ್ತವಾದ ಮೌಲ್ಯವಾಗಿದೆ. ಯಾಕೆಂದರೆ ಪ್ರೀತಿಯು ಸ್ವತಃ ಒಡಂಬಡಿಕೆಯ ಕರ್ತನ ಸ್ವಭಾವವನ್ನು ತಿಳಿಯಪಡಿಸುತ್ತದೆ.

ಜ್ಞಾನೋಕ್ತಿಯು "ಪ್ರೀತಿ" ಎಂಬ ಅಂಶಕ್ಕೆ ಹೆಚ್ಚು ಪ್ರಾಧಾನ್ಯತೆ ಕೊಡುತ್ತದೆ ಮತ್ತು ವಿವಿಧ ಸನ್ನಿವೇಶಗಳಲ್ಲಿ ಪ್ರೀತಿ ಎಂದರೆ ಏನು ಎಂಬುದನ್ನು ತೋರಿಸುತ್ತದೆ, ಉದಾಹರಣೆಗೆ:

- ಪ್ರೀತಿ ಮತ್ತು ನಂಬಿಗಸ್ತಿಕೆ
- ಪ್ರೀತಿ ಮತ್ತು ಉದಾರತೆ
- ಪ್ರೀತಿ ಮತ್ತು ಸ್ನೇಹ
- ಪ್ರೀತಿ ಮತ್ತು ಶಿಸ್ತು

ಪ್ರೀತಿ ಮತ್ತು ನಂಬಿಗಸ್ತಿಕೆ

ಇಬ್ರಿಯ ಭಾಷೆಯಲ್ಲಿ ವಿಭಿನ್ನ ಪದಗಳಿದ್ದು, ಅವನ್ನು ನಮ್ಮ ಇಂಗ್ಲೀಷ್ ಮತ್ತು ಕನ್ನಡ ಸತ್ಯವೇದಗಳಲ್ಲಿ "ಪ್ರೀತಿ" ಎಂಬುದಾಗಿ ಭಾಷಾಂತರಿಸಲಾಗಿದೆ. ಅವುಗಳಲ್ಲಿ ಎರಡನ್ನು ನಾವಿಲ್ಲಿ ನೋಡೋಣ.

1. **ಏಹಬ್**: ಈ ಪದವು ಹೆಚ್ಚಾಗಿ "ದ್ವೇಷ"ದ ವಿರುದ್ಧವಾಗಿದೆ. ಇದು ಯಾವುದನ್ನಾದರೂ ಪ್ರೀತಿಸುವ ಪ್ರೀತಿಯನ್ನು ವ್ಯಕ್ತಪಡಿಸುತ್ತದೆ. ಇದು "ಸ್ನೇಹ ಪ್ರೀತಿ"ಯಾಗಿದೆ. ಇದು ಒಂದು ನಿರ್ದಿಷ್ಟ ವಸ್ತುವನ್ನು ಗುರಿಯಾಗಿರಿಸಿಕೊಂಡ ಪ್ರೀತಿಯಾಗಿದೆ. ಈ ಪದವೇ ಧರ್ಮೋ. 6:5 ರಲ್ಲಿ (ಮತ್ತು ಅಂತಹುದೇ ಪಠ್ಯಗಳಲ್ಲಿ) ಇದು (ಕ್ರಿಯಾಪದವಾಗಿ ಬಳಸಲಾಗುತ್ತದೆ) ಇದೆ: "ನಿನ್ನ ದೇವರಾದ ಕರ್ತನನ್ನು ನಿನ್ನ ಪೂರ್ಣಹೃದಯದಿಂದ ಪ್ರೀತಿಸು". "ಪ್ರೀತಿ" ಎಂಬ ಈ ಕ್ರಿಯಾಪದವನ್ನು ಜ್ಞಾನೋಕ್ತಿಗಳಲ್ಲಿ ಸುಮಾರು ಇಪ್ಪತ್ತು ಬಾರಿ ಬಳಸಲಾಗದೆ. ಉದಾಹರಣೆಗೆ 3:12, 9:8, 12:1 ಮತ್ತು 13:24 ರಲ್ಲಿ. ಇದು "ಹೃದಯದ ಪ್ರೀತಿ"ಯಾಗಿದೆ.

2. **ಹೆಸೆದ್**: ಈ ಪದವನ್ನು ಜ್ಞಾನೋಕ್ತಿಗಳಲ್ಲಿ ಸುಮಾರು ಹತ್ತು ಬಾರಿ ಬಳಸಲಾಗಿದೆ. ಇಂಗ್ಲೀಷಿನ ಎನ್ಐವಿ ಸತ್ಯವೇದದಲ್ಲಿ ಇದು **"ವಿಫಲವಾಗದ ಪ್ರೀತಿ"** (ಉದಾಹರಣೆಗೆ 19:22, 20:6 ರಲ್ಲಿ) ಅಥವಾ **"ನಂಬಿಗಸ್ತಿಕೆ"** ಎಂಬುದಾಗಿ ಅನುವಾದಿಸಲಾಗಿದೆ (ಉದಾಹರಣೆಗೆ 3:3, 14:22, 16:6, 20:28, 31:26 ರಲ್ಲಿ). ಇದನ್ನು ಒಡಂಬಡಿಕೆಯ ಕರ್ತನ ಗುಣಲಕ್ಷಣವನ್ನು ವಿವರಿಸಲು ಬಳಸಲಾಗುತ್ತದೆ. ಈ ನಂಬಿಗಸ್ತಿಕೆಯ ದೇವರ ಪ್ರೀತಿಯು ಹಳೇ ಒಡಂಬಡಿಕೆಯ ಗ್ರೀಕಿನ **"ಸೆಪ್ಟೂಜೆಂಟ್"** ಆವೃತ್ತಿಯಲ್ಲಿ ಮತ್ತು ಹಳೇ ಒಡಂಬಡಿಕೆಯಿಂದ ಬಂದ ಹೊಸ ಒಡಂಬಡಿಕೆಯ ಹೇಳಿಕೆಯಲ್ಲಿ ಗ್ರೀಕಿನ **"ಅಗಾಪೆ"** ಪದದಿಂದ ಅನುವಾದಿಸಲಾಗಿದೆ. ಈ ದೈವಿಕ ಪ್ರೀತಿಯು ಹೊಸ ಒಡಂಬಡಿಕೆಯಲ್ಲಿ ಯೇಸು ಕ್ರಿಸ್ತನಲ್ಲಿ ಸಾಕಾರಗೊಂಡಿರುವದನ್ನು ಕಾಣಬಹುದು. ಅವರು ದ್ರೋಹ ಮಾಡಿದ ರಾತ್ರಿಯೂ ಸಹ ತಮ್ಮ ಶಿಷ್ಯರಿಗೆ ತಮ್ಮ ಪ್ರೀತಿಯ ಪೂರ್ಣ ಪ್ರಮಾಣವನ್ನು ತೋರಿಸಿದರು (ಯೋಹಾನ 13:1). ಇದು ಪ್ರೀತಿ: ನಾವು ದೇವರನ್ನು ಪ್ರೀತಿಸಿದ್ದೇವೆ ಎಂದಲ್ಲ, ಆದರೆ ಅವರು ನಮ್ಮನ್ನು ಪ್ರೀತಿಸಿದರು ಮತ್ತು ನಮ್ಮ ಪಾಪಗಳಿಗಾಗಿ ತಮ್ಮ ಮಗನನ್ನು ಪ್ರಾಯಶ್ಚಿತ ಯಜ್ಞವಾಗಿ ಕಳುಹಿಸಿದರು (1 ಯೋಹಾನ 4:10). ಇದು **"ಪ್ರೀತಿಯ ಇಚ್ಛೆಯ"** ಮತ್ತು ಇದು ಒಡಂಬಡಿಕೆಯ ಒಪ್ಪಂದದಿಂದ ಹುಟ್ಟಿಕೊಂಡಿದೆ. ಇದು ಮದುವೆಯ ಪ್ರತಿಜ್ಞೆಗಳಲ್ಲಿ ಮಾಡಿದ ಪ್ರೀತಿ. ಇದು ಭಾವನೆಗಳ ಏರಿಳಿತಗಳು ಮತ್ತು ಅದರ ಸ್ವೀಕರಿಸುವವರ ಯೋಗ್ಯತೆಯ ವ್ಯತ್ಯಾಸಗಳ ಮೂಲಕ ಮುಂದುವರಿಯುತ್ತದೆ.

ಪ್ರೀತಿ ಮತ್ತು ನಂಬಿಗಸ್ತಿಕೆಯ ನಡುವೆ ನಿಕಟ ಸಂಬಂಧವಿದೆ ಎಂದು ಜ್ಞಾನೋಕ್ತಿಗಳು ತೋರಿಸುತ್ತವೆ (**"ಆದರೆ ಒಳ್ಳೆಯದನ್ನು ಯೋಚಿಸುವವರು ನಿರಂತರ ಪ್ರೀತಿ ಮತ್ತು ನಂಬಿಕೆಯನ್ನು ಕಂಡುಕೊಳ್ಳುತ್ತಾರೆ"**, 14:22) ಮತ್ತು ಅವುಗಳನ್ನು ಆತನ ಜನರು ಪಾಲಿಸಬೇಕು.

ಪ್ರೀತಿಸತ್ಯತೆಗಳು ನಿನನ್ನು ಬಿಡದಿರಲಿ,

ಅವುಗಳನ್ನು ನಿನ್ನ ಕೊರಳಿಗೆ ಕಟ್ಟು,

ನಿನ್ನ ಹೃದಯದ ಹಲಗೆಯಲ್ಲಿ ಅವುಗಳನ್ನು ಬರೆ;

ಇದರಿಂದ ನೀನು ದೇವರ ಮತ್ತು ಮನುಷ್ಯರ

ದಯೆಯನ್ನೂ ಸಮ್ಮತಿಯನ್ನೂ ಪಡೆದುಕೊಳ್ಳುವಿ.

(ಜ್ಞಾನೋ. 3:3–4)

ಮೊದಲನೇಯ ಚಿತ್ರಣವು ಒಬ್ಬ ವ್ಯಕ್ತಿಯು ಒಂದು ನಿರಂತರ ಜ್ಞಾಪಕವಾಗಿ ಪ್ರೀತಿ ಮತ್ತು ನಂಬಿಗಸ್ತಿಕೆಯ ಕೊರಳಪಟ್ಟಿಯನ್ನು ಧರಿಸುವುದಾಗಿದೆ. ಎರಡನೇಯ ಚಿತ್ರಣವು ದಶಾಜ್ಞೆಗಳನ್ನು ಕಲ್ಲಿನ ಮೇಲೆ ಬರೆದಂತೆ ಪ್ರೀತಿ ಮತ್ತು ಸತ್ಯತೆಗಳನ್ನು ನಮ್ಮ ಹೃದಯದ ಮೇಲೆ ಬರೆಯಬೇಕೆಂಬ ವಾಸ್ತವಾಂಶದ ಕುರಿತಾಗಿದೆ.

ಪ್ರೀತಿ ಮತ್ತು ಉದಾರತೆ

ಜ್ಞಾನೋಕ್ತಿಗಳ ಪ್ರಕಾರ ಪ್ರೀತಿಯನ್ನು ಉದಾರತೆಯಿಂದ ವ್ಯಕ್ತಪಡಿಸಬೇಕು – ಅಥವಾ ದುರಾಸೆಯನ್ನು ತಪ್ಪಿಸುವ ಮೂಲಕ:

ಸೂರೆಮಾಡುವವನು ಸ್ವಂತ ಮನೆಯನ್ನು ಬಾಧಿಸುವನು.

ಲಂಚವನ್ನೊಪ್ಪದವನು ಸುಖವಾಗಿ ಬಾಳುವನು.

(ಜ್ಞಾನೋ. 15:27)

ಉದಾರಿಯು ಪುಷ್ಟನಾಗುವನು;

ನೀರು ಹಾಯಿಸುವವನಿಗೆ ನೀರು ಸಿಕ್ಕುವುದು.

(ಜ್ಞಾನೋ. 11:25)

ಪ್ರೀತಿ ಮತ್ತು ಸ್ನೇಹ

ಅನೇಕ ಬಾರಿ ಪ್ರೀತಿಯು ಸ್ನೇಹ ಅಥವಾ ಗೆಳೆತನ ಎಂದು ಕರೆಯುಲ್ಪಡುವ ಅಮೂಲ್ಯವಾದ ಸದ್ಗುಣದೊಂದಿಗೆ ಸಂಬಂಧ ಹೊಂದಿದೆ:

ಮಿತ್ರನ ಪ್ರೀತಿಯು ನಿರಂತರ;

ಸಹೋದರನ ಜನ್ಮವು ಆಪತ್ತಿನಲ್ಲಿ ಸಾರ್ಥಕ.

(ಜ್ಞಾನೋ. 17:17)

ಬಹುಮಂದಿ ಗೆಳೆಯರನ್ನು ಸೇರಿಸಿಕೊಂಡವನಿಗೆ ನಾಶನ;

ಸಹೋದರನಿಗಿಂತಲೂ ಹತ್ತಿರ ಹೊಂದಿಕೊಳ್ಳುವ ಮಿತ್ರನುಂಟು.

(ಜ್ಞಾನೋ. 18:24).

ಈ ರೀತಿಯಲ್ಲಿ ಒಬ್ಬ ಸ್ನೇಹಿತನು ಇರಬೇಕಾಗಿದೆ:

ಚಾಡಿಕೋರನು ಗುಟ್ಟು ರಟ್ಟು ಮಾಡುವನು;

ನಂಬಿಗಸ್ತನು ಸಂಗತಿಯನ್ನು ಗುಪ್ತಪಡಿಸುವನು.

(ಜ್ಞಾನೋ. 11:13)

ಸತ್ಯಸಾಕ್ಷಿಯು ಪ್ರಾಣರಕ್ಷಕ;

ಸುಳ್ಳುಸಾಕ್ಷಿಯು ವಂಚಕ.

(ಜ್ಞಾನೋ. 14:25)

ಉದಾರಿಯು ಪುಷ್ಟನಾಗುವನು;

ನೀರು ಹಾಯಿಸುವವನಿಗೆ ನೀರು ಸಿಕ್ಕುವದು.

(ಜ್ಞಾನೋ. 11:25)

ಕಳವಳವು ಮನಸ್ಸನ್ನು ಕುಗ್ಗಿಸುವದು;

ಕನಿಕರದ ಮಾತು ಅದನ್ನು ಹಿಗ್ಗಿಸುವದು.

(ಜ್ಞಾನೋ. 12:25)

ನೆರೆಯವನನ್ನು ತಿರಸ್ಕರಿಸುವವನು ದೋಷಿ;

ದರಿದ್ರನನ್ನು ಕನಿಕರಿಸುವವನು ಧನ್ಯನು.

(ಜ್ಞಾನೋ. 14:21)

ಇಷ್ಟವು ಔದಾರ್ಯದ ಪ್ರಮಾಣ;

ಇದ್ದರೂ ಇಲ್ಲವೆಂದು ಸುಳ್ಳಾಡುವವನಿಗಿಂತಲೂ ಏನೂ ಇಲ್ಲದವನೇ ಲೇಸು.

(ಜ್ಞಾನೋ. 19:22)

ಹಳೆಯ ಒಡಂಬಡಿಕೆಯ ನೈತಿಕ ಬೋಧನೆ ಮತ್ತು ಯೇಸುವಿನ ಬೋಧನೆ ಎರಡಕ್ಕೂ ಪ್ರೀತಿಯು ಕೇಂದ್ರ ಪದವಾಗುವುದರಲ್ಲಿ ಆಶ್ಚರ್ಯವೇನಿಲ್ಲ: "ಅವರಲ್ಲಿ ನ್ಯಾಯಶಾಸ್ತ್ರದಲ್ಲಿ ಪರಿಣಿತನಾದ ಒಬ್ಬನು ಯೇಸುವನ್ನು ಈ ಪ್ರಶ್ನೆಯಿಂದ ಪರೀಕ್ಷಿಸಿದನು: "ಗುರುವೇ ಧರ್ಮಶಾಸ್ತ್ರದಲ್ಲಿ ಯಾವ ಆಜ್ಞೆ ಮುಖ್ಯವಾದದ್ದು ಎಂದು ಆತನನ್ನು ಕೇಳಿದ್ದಕ್ಕೆ ಆತನು – ನಿನ್ನ ದೇವರಾಗಿರುವ ಕರ್ತನನ್ನು ನಿನ್ನ ಪೂರ್ಣಹೃದಯದಿಂದಲೂ ನಿನ್ನ ಪೂರ್ಣಪ್ರಾಣದಿಂದಲೂ ನಿನ್ನ ಪೂಣಬುದ್ಧಿಯಿಂದಲೂ ಪ್ರೀತಿಸಬೇಕು ಎಂಬ ಆಜ್ಞೆಯೇ ಮುಖ್ಯವಾದದ್ದು ಮತ್ತು ಮೊದಲನೇಯದು. ಇದಕ್ಕೆ ಸಮಾನವಾದ ಎರಡನೆಯ ಆಜ್ಞೆ ಒಂದು ಉಂಟು, ಅದು ಯಾವುದೆಂದರೆ – ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬದೇ. ಈ ಎರಡು ಆಜ್ಞೆಗಳು ಎಲ್ಲಾ ಧರ್ಮಶಾಸ್ತ್ರಕ್ಕೂ ಪ್ರವಾದನಗ್ರಂಥಕ್ಕೂ ಆಧಾರವಾಗಿವೆ" (ಮತ್ತಾಯ. 22:35–40, ಧರ್ಮೋಪದೇಶಕಾಂಡ 6:5 ಮತ್ತು ಯಾಜಕಕಾಂಡ 19:18 ರ ಉಲ್ಲೇಖಗಳೊಂದಿಗೆ)

ಪ್ರೀತಿ ಮತ್ತು ಶಿಸ್ತು

ಕೆಲವೊಮ್ಮೆ ಜ್ಞಾನೋಕ್ತಿಗಳಲ್ಲಿ ಪ್ರೀತಿಯು ಶಿಸ್ತಿನೊಂದಿಗೆ ಸಂಬಂಧ ಹೊಂದಿದೆ. ಇದು ಪ್ರೀತಿ ಮತ್ತು ಕ್ಷಮೆಯು ಮೃದುವಾದದ್ದು ಅಲ್ಲ ಎಂದು ತೋರಿಸುತ್ತದೆ. ಕೆಲವೊಮ್ಮೆ ಒಂದು ಸಂಬಂಧವನ್ನು ಪುನರ್‌ಸ್ಥಾಪಿಸಲು ಕಠಿಣ ಮತ್ತು ನೋವನ್ನು ಉಂಟುಮಾಡವ ಆಯ್ಕೆಗಳನ್ನು ಮಾಡಬೇಕಾಗುತ್ತದೆ.

ತಂದೆತಾಯಿಯ ಶಿಸ್ತಿನ ಪ್ರಶ್ನೆಯು, ಪ್ರೀತಿಯ ಹಿನ್ನಲೆಯಲ್ಲಿಯೇ ಕಂಡು ಬರುತ್ತದೆ:

ಬೆತ್ತ ಹಿಡಿಯದ ಪಿತ ಪುತ್ರನಿಗೆ ಶತ್ರು;

ಚೆನ್ನಾಗಿ ಶಿಕ್ಷಿಸುವ ಪಿತ ಪುತ್ರನಿಗೆ ಮಿತ್ರ.

(ಜ್ಞಾನೋ. 13:24)

ಮೂರ್ಖನು ತಂದೆಯ ಶಿಕ್ಷೆಯನ್ನು ತಿರಸ್ಕರಿಸುವನು;

ಗದರಿಕೆಯನ್ನು ಗಮನಿಸುವವನು ಜಾಣನು.

(ಜ್ಞಾನೋ. 15:5)

ನೈತಿಕ ಮೇರೆಗಳು ಮತ್ತು ಸೂಕ್ತವಾದ ಶಿಸ್ತುಗಳು ಸಹ ಪ್ರೀತಿಯ ಭಾಗಗಳಾಗಿವೆ.

ಪ್ರಶ್ನೆಗಳು

ಪ್ರೀತಿ ಮತ್ತು ನಂಬಿಗಸ್ತಿಕೆ

1. ಪ್ರೀತಿಯು ಜ್ಞಾನದ ಅತ್ಯುನ್ನತ ಮೌಲ್ಯಗಳಲ್ಲಿ ಒಂದಾಗಿದೆ ಎಂಬುದನ್ನು ನಿಮ್ಮ ಸ್ವಂತ ಮಾತುಗಳಲ್ಲಿ ವಿವರಿಸಿರಿ.
2. ನಿಮ್ಮದೇ ಮಾತಿನಲ್ಲಿ ಈ ಕೆಳಕಂಡ ಇಬ್ರಿಯ ಪದಗಳನ್ನು ವಿವರಿಸಿ ಮತ್ತು ಅವುಗಳ ಪ್ರಾಮುಖ್ಯತೆಯನ್ನು ತಿಳಿಸಿರಿ.

   ಅ. ಏಹಬ್

   ಆ. ಹೆಸೆದ್

3. ಜ್ಞಾನೋಕ್ತಿ 3:3–4 ಅನ್ನು ಉಪಯೋಗಿಸಿ ಹಳೇ ಒಡಂಬಡಿಕೆಯ ಆತ್ಮೀಕತೆಯಲ್ಲಿ ಪ್ರೀತಿ ಮತ್ತು ನಂಬಿಗಸ್ತಿಕೆಯ ಪ್ರಾಮುಖ್ಯತೆಯನ್ನು ವಿವರಿಸಿ. ನಿಮ್ಮ ಟಿಪ್ಪಣಿಗಳನ್ನು ನಕಲು ಮಾಡಬೇಡಿ ಆದರೆ ನಿಮ್ಮ ಸ್ವಂತ ಮಾತುಗಳನ್ನು ಬಳಲಿ.

ಪ್ರೀತಿ ಮತ್ತು ಉದಾರತೆ

4. ಜ್ಞಾನೋಕ್ತಿ 11:25 ಮತ್ತು 15:27 ರಲ್ಲಿ ದುರಾಸೆ ಮತ್ತು ಉದಾರತೆಗಳು ಹೇಗೆ ಮೌಲ್ಯಮಾಪನ ಮಾಡಲಾಗುತ್ತದೆ? ಈ ಎರಡು ವಚನಗಳಲ್ಲಿರುವ ಬೋಧನೆಯನ್ನು ವಿವರಿಸಲು ನಿಮ್ಮ ಸ್ವಂತ ಮಾತುಗಳನ್ನು ಬಳಸಿ.

ಪ್ರೀತಿ ಮತ್ತು ಸ್ನೇಹ

5. ಪ್ರೀತಿ ಮತ್ತು ಸ್ನೇಹ ಎಂದು ಕರೆಯಲ್ಪಡುವ ವಿಭಾಗದ ವಾಕ್ಯಭಾಗವನ್ನು ಉಪಯೋಗಿಸಿ ಜ್ಞಾನದ ಸ್ನೇಹದ ಮೌಲ್ಯವನ್ನು ಸಾರಾಂಶಗೊಳಿಸಿರಿ. ಸತ್ಯವೇದದ ಪದಗಳನ್ನು ಪುನರಾವರ್ತಿಸಲು ನಿಮಗೆ ಅವಕಾಶವಿಲ್ಲ. ಬದಲಾಗಿ ನೀವು ಸಮಾನಾರ್ಥಕ ಪದಗಳನ್ನು ಕಂಡುಕೊಳ್ಳಬೇಕು ಮತ್ತು **"ಒಳ್ಳೆಯ ಸ್ನೇಹಿತ"** ಎಂದು ವಿವರಿಸಲು ನಿಮ್ಮ ಸ್ವಂತ ಮಾತುಗಳನ್ನು ಬಳಸಬೇಕು.

ಪ್ರೀತಿ ಮತ್ತು ಶಿಸ್ತು

6. ಶಿಸ್ತು ಮತ್ತು ಪ್ರೀತಿಯ ನಡುವಿನ ಸಂಬಂಧವನ್ನು ವಿವರಿಸಿರಿ.

ಪ್ರೀತಿ ಮತ್ತು ನಂಬಿಗಸ್ತಿಕೆ ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಈ ಅಧ್ಯಾಯದಲ್ಲಿನ ಈ ಕ್ಷೇತ್ರಗಳ ಅಧ್ಯಯನದ ಬೆಳಕಿನಡಿಯಲ್ಲಿ ನೀವು ವೈಯಕ್ತಿಕ ಕ್ರೈಸ್ತಿಯ ಜೀವಿತವನ್ನು ಮೌಲ್ಯಮಾಪನ ಮಾಡಿರಿ.
   - ಪ್ರೀತಿ ಮತ್ತು ನಂಬಿಗಸ್ತಿಕೆ
   - ಪ್ರೀತಿ ಮತ್ತು ಉದಾರತೆ
   - ಪ್ರೀತಿ ಮತ್ತು ಸ್ನೇಹ
2. ನೀವು ಹೆಚ್ಚು ನಿಷ್ಠಾವಂತ, ಹೆಚ್ಚು ಉದಾರ ಮತ್ತು ಉತ್ತಮ ಸ್ನೇಹಿತರಾಗಲು ಏನು ಮಾಡಬಹುದು?

ಅಸೈನ್‌ಮೆಂಟ್: ಪ್ರೀತಿ ಮತ್ತು ನಂಬಿಗಸ್ತಿಕೆ

1. ಈ ಅಧ್ಯಯನದಲ್ಲಿ ಸತ್ಯವೇದ ಉಲ್ಲೇಖನಗಳನ್ನು ಎರಡು ವಿಭಿನ್ನ ಕನ್ನಡ ಸತ್ಯವೇದ ಭಾಷಾಂತರಗಳಲ್ಲಿ ನೋಡಿ ಮತ್ತು ಅನುವಾದಕರು ಹೆಸೆದ್ ಎಂಬ ಇಬ್ರಿಯ ಪದವನ್ನು ಹೇಗೆ ಅನುವಾದಿಸಿದ್ದಾರೆ ಎಂಬುದನ್ನು ನೋಡಿ. ಈ ಅಸೈನ್‌ಮೆಂಟ್ "ಪ್ರೀತಿ" ಎಂಬುದಕ್ಕೆ ಇಬ್ರಿಯ ಪದದ ಉತ್ತಮ ತಿಳುವಳಿಕೆಯನ್ನು ನಿಮಗೆ ನೀಡುತ್ತದೆ.
2. "ಒಳ್ಳೆಯ ಸ್ನೇಹಿತ" ಎಂಬ ಪ್ರಬಂಧವನ್ನು ಬರೆಯಿರಿ. ಈ ಪಾಠದಲ್ಲಿ ನೀವು ಅಧ್ಯಯನ ಮಾಡಿದ ವಿಷಯಗಳ ಆಧಾರದ ಮೇಲೆ ನಿಮ್ಮ ಪ್ರಬಂಧವನ್ನು ರಚಿಸಿ. ನೀವು ನಿಮ್ಮ ಸ್ವಂತ ಪದಗಳನ್ನು ಬಳಸಬೇಕು. ನಿಮ್ಮ ಪಾಠ ಟಿಪ್ಪಣಿಗಳನ್ನು ನಕಲಿಸಲು ಅಥವಾ ಸತ್ಯವೇದ ಪಠ್ಯಗಳನ್ನು ಪುನಃ ಬರೆಯಲು ನಿಮಗೆ ಅನುಮತಿ ಇಲ್ಲ. ಇದು ಕೇವಲ ಗುಣಲಕ್ಷಣಗಳ ಪಟ್ಟಿಯನ್ನು ಹೊಂದಿರಬಾರದು. ಬದಲಾಗಿ ಅದು ವಿವರಣಾತ್ಮ ಮತ್ತು ತಾರ್ಕಿಕವಾಗಿರಬೇಕು.

   ಪರ್ಯಾಯವಾಗಿ, ನೀವು ಒಳ್ಳೆಯ ಸ್ನೇಹಿತನ ಬಗ್ಗೆ ಒಂದು ಸಣ್ಣ ಕಥೆಯನ್ನು ಬರೆಯಬಹುದು. ಅದು ನಿಜವಾದ ಕಥೆಯಾಗಿರಬಹುದು ಅಥವಾ ಅದು ಕಾಲ್ಪನಿಕ ಕಥೆಯಾಗಿರಬಹುದು.

ನ್ಯಾಯ ಮತ್ತು ನೀತಿ

ಪೀಠಿಕೆ

ಹಳೇ ಒಡಂಬಡಿಕೆಯಲ್ಲಿ ದೇವರ ಪ್ರೀತಿ ಮತ್ತು ನಂಬಿಗಸ್ತಿಕೆಗಳೆರಡೂ ಸಹ ಆತನ ನ್ಯಾಯ ಮತ್ತು ನೀತಿಯೊಂದಿಗೆ ನಿಕಟವಾದ ಸಂಬಂಧ ಹೊಂದಿದ್ದವು. ದೇವರ ಪ್ರೀತಿ ಮತ್ತು ನಂಬಿಗಸ್ತಿಕೆ ಆತನ ನ್ಯಾಯ ಮತ್ತು ನೀತಿಯ ಬೆಳಕಿನಲ್ಲಿ ಮಾತ್ರ ಅರ್ಥಮಾಡಿಕೊಳ್ಳಬಹುದಾಗಿದೆ. ಇನ್ನೊಂದು ವಿಧದಲ್ಲಿ ದೇವರ ನೀತಿ ಮತ್ತು ನ್ಯಾಯವನ್ನು ಆತನ ಪ್ರೀತಿ ಮತ್ತು ನಂಬಿಗಸ್ತಿಕೆಯ ಬೆಳಕಿನಲ್ಲಿ ಮಾತ್ರ ಅರ್ಥಮಾಡಿಕೊಳ್ಳಬಹುದಾಗಿದೆ.

ನ್ಯಾಯವು ದೇವರ ಗುಣಸ್ವಭಾವದ ಒಂದು ಭಾಗವಾಗಿದೆ. ಖಂಡಿತವಾಗಿ ದೇವರು ಲೋಕದಲ್ಲಿ ನ್ಯಾಯವನ್ನು ಸಾಧಿಸುವವನಾಗಿದ್ದಾನೆ.

ಕೇಡಿಗೆ ಮುಯ್ಯಿ ತೀರಿಸುವೆನು ಅನ್ನಬೇಡ;

ಯೆಹೋವನನ್ನು ನಿರೀಕ್ಷಿಸಿಕೊಂಡಿರು, ಆತನೇ ನಿನ್ನನ್ನುದ್ಧರಿಸುವನು

(ಜ್ಞಾನೋ. 20:22)

ನ್ಯಾಯಮಾರ್ಗವು ಶಿಷ್ಟರಿಗೆ ಸಂತೋಷ;

ಕೆಡುಕರಿಗೆ ಕೇಡು.

(ಜ್ಞಾನೋ. 21:15)

ಮೂಲಭೂತವಾಗಿ ದೇವರ ನ್ಯಾಯವು ದೇವಜನರು ಹೇಗೆ ಜೀವಿಸುತ್ತಾರೆನ್ನುವುದಕ್ಕೆ ನಿರ್ಧರಿತವಾಗಿದೆ. ಅವರ ಜೀವಿತವು ದೇವರ ನೀತಿಯ ಸ್ವಭಾವವನ್ನು ಪ್ರತಿಬಿಂಬಿಸಬೇಕು. ಇದರರ್ಥ ನಮ್ಮ ಮಾನುಷಿಕ ನ್ಯಾಯದ ಪರಿಕಲ್ಪನೆಗಳು ದೇವರ ದೈವಿಕ ನ್ಯಾಯದಿಂದ ತಿದ್ದುಪಡಿಗೊಳ್ಳಲು ಮತ್ತು ರೂಪಾಂತರಗೊಳ್ಳಲು ನಾವು ಅನುವು ಮಾಡಿಕೊಡಬೇಕಿದೆ.

ವ್ಯವಹಾರಿಕ ಜೀವನದಲ್ಲಿ ನ್ಯಾಯ ಎಂದರೆ ಏನು ಎಂಬುದಕ್ಕೆ ಜ್ಞಾನೋಕ್ತಿಗಳು ನಮಗೆ ಒಂದು ಒಳನೋಟವನ್ನು ಕೊಡುತ್ತವೆ. ವಾಸ್ತವಿಕವಾಗಿ ನ್ಯಾಯವೆಂದರೆ "ನಿಮ್ಮ ನೆರೆಯವರನ್ನು ಪ್ರೀತಿಸುವ" ಸಾಮಾಜಿಕ ಮತ್ತು ರಾಜಕೀಯ ಭಾವನೆಗಳಾಗಿವೆ.

ಈ ಅಧ್ಯಾಯನದಲ್ಲಿ ಮೊದಲು ನಾವು ನೆರೆಯವರ ಪ್ರೀತಿಯ ಎರಡು ಕ್ಷೇತ್ರಗಳನ್ನು ನೋಡೋಣ;

- ಬಡವರ ಅಗತ್ಯತೆಗಳು
- ಆರ್ಥಿಕ ಮತ್ತು ನ್ಯಾಯಸ್ಥಾನದ ಪ್ರಾಮಾಣಿಕತೆ

ಅನಂತರ ಜ್ಞಾನದ ಸಾಹಿತ್ಯವು ನೀತಿವಂತರು ಮತ್ತು ದುಷ್ಟರನ್ನು ಹೇಗೆ ತದ್ವಿರುದ್ಧವಾಗಿಸುತ್ತದೆಂಬುದನ್ನು ನೆನಪಿಸಿಕೊಳ್ಳುತ್ತೇವೆ.

ಕೊನೆಯದಾಗಿ ನಾವು ದೇವರು ತನ್ನ ಜನರಿಂದ ಅಪೇಕ್ಷಿಸುವ ವೈಯಕ್ತಿಕ ಪ್ರಾಮಾಣಿಕತೆಯೆಂಬ ಪ್ರಾಮುಖ್ಯ ಜ್ಞಾನದ ಮೌಲ್ಯವನ್ನು ನಾವು ಅಧ್ಯಯನ ಮಾಡುವವರಾಗಿದ್ದೇವೆ.

ನ್ಯಾಯ ಮತ್ತು ಬಡವರ ಅಗತ್ಯತೆಗಳು

ದೇವರು ಬಡವರ ಮತ್ತು ಶ್ರೀಮಂತರಿಬ್ಬರ ಸೃಷ್ಟಿಕರ್ತನು ಆಗಿದ್ದಾನೆ, ಪರಿಣಾಮಾರ್ಥವಾಗಿ ಆತನು ಬಡವರು ಮತ್ತು ಅವರ ಕಷ್ಟಕರ ಸನ್ನಿವೇಷಗಳ ಬಗ್ಗೆ ಕಾಳಜಿಯುಳ್ಳವನಾಗಿದ್ದಾನೆ. ತನ್ನ ಒಡಂಬಡಿಕೆಯ ಜನರು ಈ ಕಾಳಜಿಯನ್ನು ಪ್ರತಿಬಿಂಬಿಸಬೇಕೆಂಬುದು ಆತನ ಆಶೆಯಾಗಿದೆ. ಇದರರ್ಥ ದೇವರ ಗುಣಸ್ವಭಾವ ಮತ್ತು ಆತನ ಬಯಕೆಗಳ ಕುರಿತಾದ ನಮ್ಮ ತಿಳುವಳಿಕೆಯು ವಿಶಾಲವಾದ ಸಮಾಜದಲ್ಲಿ ಮತ್ತು ನಮ್ಮ ಸಮುದಾಯದಲ್ಲಿ ಆತನ ಜನರಾದ ನಾವು ಬಡವರೊಂದಿಗೆ ನಡೆದುಕೊಳ್ಳುವ ರೀತಿಯ ಮೇಲೆ ಪರಿಣಾಮವನ್ನು ಬೀರುತ್ತವೆ:

- 22:2

- 14:31
- 17:5

ಬಡವರ ಸನ್ನಿವೇಶ ವರ್ಣಿಸಲು ಅನೇಕ ಜ್ಞಾನೋಕ್ತಿಗಳು ಕಾಲ್ಪನಿಕ ಚಿತ್ರಣಗಳನ್ನು ಬಳಸುತ್ತವೆ. ದೇವರು ಮೆಚ್ಚುವ ರೀತಿಯಲ್ಲಿ ತಾವು ಬಡವರೊಂದಿಗೆ ಹೇಗೆ ನಡೆದುಕೊಳ್ಳಬೇಕೆಂಬುದರ ಮೇಲೆ ವಿಮರ್ಶಿಸಲು ದೇವಜನರಿಗೆ ಸಹಾಯಿಸುವುದಕ್ಕಾಗಿ ಅವು ಈ ರೀತಿ ಬಳಸಿವೆ:

- 15:25
- 18:23
- 19:7
- 21:13
- 22:9

ನ್ಯಾಯ ಮತ್ತು ಅರ್ಥಿಕ ಮತ್ತು ನ್ಯಾಯಸ್ಥಾನದ ಪ್ರಾಮಾಣಿಕತೆ

ಜ್ಞಾನೋಕ್ತಿಗಳ ಪುಸ್ತಕವು ಸಾಮಾಜಿಕ ಜೀವನದ ಎಲ್ಲಾ ಹಂತಗಳ ಮೇಲಿನ ಪ್ರಾಮಾಣಿಕತೆಯ ಪ್ರಾಮುಖ್ಯತೆಗೆ ಒತ್ತುಕೊಡುತ್ತದೆ. ಇದು ವ್ಯಾಪಾರ ವಹಿವಾಟಿನಲ್ಲಿನ ಪ್ರಾಮಾಣಿಕತೆ, ನ್ಯಾಯಾಡಳಿತದಲ್ಲಿ ಸಮಾನತೆ ಮತ್ತು ಲಂಚ ತೆಗೆದುಕೊಳ್ಳುವುದರ ನಿಷೇದಗಳನ್ನು ಒಳಗೊಂಡಿದೆ.ಈ ಜ್ಞಾನೋಕ್ತಿಗಳನ್ನು ಅಭ್ಯಾಸಿಸಿರಿ:

- 11:1
- 20:10
- 20:23
- 20:17
- 17:26
- 18:5
- 19:28
- 21:28
- 12:17
- 17:23

ಸಾಮಾನ್ಯಾರ್ಥದಲ್ಲಿ ಜ್ಞಾನವು ವ್ಯವಹಾರಿಕ ವಹಿವಾಟಿನಲ್ಲಿ ಜಾಗರೂಕರಾಗಿರಬೇಕೆಂದು ತನ್ನ ವಿಧ್ಯಾರ್ಥಿಗಳಿಗೆ ಬೋಧಿಸುತ್ತದೆ (ಜ್ಞಾನೋ. 11:18)

ನೀತಿವಂತರು ಮತ್ತು ದುಷ್ಟರ ತದ್ವಿರುದ್ಧತೆ

ನೀತಿವಂತರು ಮತ್ತು ದುಷ್ಟರು ತದ್ವಿರುದ್ಧವಾಗಿರುವ ಬಹುದೊಡ್ಡ ಸಂಖ್ಯೆಯ ಜ್ಞಾನೋಕ್ತಿಗಳು ಈ ಅಧ್ಯಾಯಗಳಲ್ಲಿವೆ.

ನೀತಿವಂತ ಎಂಬ ಪದವು ದೇವರಿಗೆ ಭಯಪಡುವ ಮತ್ತು ಜ್ಞಾನಮಾರ್ಗವನ್ನು ಪಾಲಿಸುತ್ತಾ, ನ್ಯಾಯಯುತವಾಗಿ ಬದುಕಲು ಅಪೇಕ್ಷಿಸುವ ಒಬ್ಬ ವ್ಯಕ್ತಿಯ ಕುರಿತಾಗಿ ಉಪಯೋಗಿಸಲ್ಪಟ್ಟಿದೆ. ದುಷ್ಟರು ಅಥವಾ ದೇವ ಭಯವಿಲ್ಲದ ವ್ಯಕ್ತಿಯು ದೇವರಿಗೆ ಗೌರವಾತ್ಮಕ ವಿಧೇಯತೆಯನ್ನು ತೊರಿಸುವುದಿಲ್ಲ ಬದಲಾಗಿ ತನ್ನ ಸ್ವಂತ ಮೌಲ್ಯ ಮತ್ತು ಮಾರ್ಗಗಳನ್ನು ಅಪೇಕ್ಷಿಸುತ್ತಾನೆ.ಈ ಜ್ಞಾನೋಕ್ತಿಗಳನ್ನು ಅಭ್ಯಾಸಿಸಿರಿ:

- 15:9
- 10:3
- 10:7
- 10:11
- 12:5
- 12:21

ವೈಯಕ್ತಿಕ ಪ್ರಾಮಾಣಿಕತೆ

ಕೆಳಕಂಡ ಅನೇಕ ಜ್ಞಾನೋಕ್ತಿಗಳು **"ವೈಯಕ್ತಿಕ ಪ್ರಾಮಾಣಿಕತೆ"** ಅಥವಾ **"ಉತ್ತಮ ಗುಣಸ್ವಭಾವವೆಂದು"** ಕರೆಯಲ್ಪಡುವ ಜ್ಞಾನದ ಮೌಲ್ಯವಾಗಿದೆ.

ನಿರ್ದೋಷದ ನಡತೆಯವನು ನಿರ್ಭಯವಾಗಿ ನಡೆಯುವನು;

ವಕ್ರಮಾರ್ಗಿಯು ಬೈಲಿಗೆ ಬೀಳುವನು.

(ಜ್ಞಾನೋ. 10:9)

ಯಥಾರ್ಥವಂತರಿಗೆ ಸರಳತೆಯು ಮಾರ್ಗದರ್ಶಕ;

ವಂಚಕರಿಗೆ ವಕ್ರತೆಯು ನಾಶಕ.

(ಜ್ಞಾನೋ. 11:3)

ದುರ್ಮಾರ್ಗಗಳನ್ನು ದೂರವಿರಿಸಬೇಕೆಂದು ಜ್ಞಾನವು ತನ್ನ ವಿಧ್ಯಾರ್ಥಿಗಳನ್ನು ಪ್ರೇರೇಪಿಸುತ್ತದೆ (17:11–15, ಇಲ್ಲಿ ದುಷ್ಟತನವು ದಂಗೆ, ಕ್ರೂರತನ, ಮೂರ್ಖತನ/ ಉಪಕಾರಕ್ಕೆ ಅಪಕಾರ ಮಾಡುವುದು, ಜಗಳಗಳಿಂದ ಉದಾಹರಿಸಲ್ಪಟ್ಟಿದೆ). ಯಥಾರ್ಥತೆ, ಪ್ರಾಮಾಣಿಕತೆ, ಸತ್ಯತೆ, ಚಾಣಕ್ಷತನ ಮತ್ತು ಶುದ್ಧತೆ ಇವುಗಳನ್ನು ಹುಡುಕಬೇಕಿದೆ.

- 12:22
- 13:6
- 14:5
- 14:8
- 15:26
- 17:20
- 20:7
- 20:11
- 21:8

- 22:11
- 10:7
- 16:31

ದೇವರು ಒಬ್ಬ ವ್ಯಕ್ತಿಯ ಪ್ರಾಮಾಣಿಕತೆಯ ನ್ಯಾಯಾಧೀಶನಾಗಿದ್ದಾನೆ:

- 17:3
- 26:9

ಪ್ರಶ್ನೆಗಳು

ಪೀಠಿಕೆ

1. ಜ್ಞಾನೋಕ್ತಿ 20:22 ಮತ್ತು 21:15 ರಿಂದ ದೇವರು ಮತ್ತು ನ್ಯಾಯದ ಬಗ್ಗೆ ನಾವು ಏನನ್ನು ಕಲಿಯುತ್ತೇವೆ?
2. ನ್ಯಾಯದ ಬಗ್ಗೆ ನಮ್ಮ ಮಾನವ ಪರಿಕಲ್ಪನೆಗಳನ್ನು **"ದೈವಿಕ ನ್ಯಾಯ"** ಎಂದು ಕರೆಯಬಹುದಾದ ರೀತಿಯಲ್ಲಿ ಸರಿಪಡಿಸಲು ಮತ್ತು ಪರಿವರ್ತಿಸಲು ನಾವು ಏಕೆ ಅನುಮತಿಸಬೇಕು?

ನ್ಯಾಯ ಮತ್ತು ಬಡವರ ಅಗತ್ಯತೆಗಳು

3. ಜ್ಞಾನೋಕ್ತಿ 22:2, 14:31 ಮತ್ತು 17:5 ರಿಂದ ದೇವರು, ಆತನ ಜನರು ಮತ್ತು ಬಡವರ ನಡುವಿನ ಸಂಬಂಧದ ಬಗ್ಗೆ ನಾವು ಏನನ್ನು ಕಲಿಯುತ್ತೇವೆ?
4. ಜ್ಞಾನೋಕ್ತಿ 15:25, 18:23, 19:7, 21:13 ಮತ್ತು 22:9 ರ ಮೂಲಕ ಬಡವರ ಪರಿಸ್ಥಿತಿ ಮತ್ತು ದೇವಜನರಾದ ನಾವು ಅವರೊಂದಿಗೆ ಹೇಗೆ ಸಂಬಂಧ ಹೊಂದಿರಬೇಕು ಎಂಬುದರ ಬಗ್ಗೆ ನಾವು ಏನನ್ನು ಕಲಿಯುತ್ತೇವೆ?

ನ್ಯಾಯ ಮತ್ತು ಅರ್ಥಿಕ ಮತ್ತು ನ್ಯಾಯಸ್ಥಾನದ ಪ್ರಾಮಾಣಿಕತೆ

5. ಜ್ಞಾನೋಕ್ತಿ. 11:1, 20:10, 20:23, 20:17, 17:26, 18:5, 19:28, 21:28, 12:17, 17:23 ರ ಮೂಲಕ ದೇವರು ತನ್ನ ಜನರಿಂದ ಅಪೇಕ್ಷಿಸುವ ಆರ್ಥಿಕ ಮತ್ತು ನ್ಯಾಯಸ್ಥಾನದ ಪ್ರಮಾಣಿಕತೆಯ ಬಗ್ಗೆ ನಾವು ಏನನ್ನು ಕಲಿಯುತ್ತೇವೆ?
6. ಜ್ಞಾನೋಕ್ತಿ. 15:9, 10:3, 10:7, 10:11, 12:5, 12:21 ಇವುಗಳಲ್ಲಿ **"ನೀತಿವಂತರು"** ಮತ್ತು **"ದುಷ್ಟರು"** ನಡುವಿನ ವ್ಯತ್ಯಾಸವನ್ನು ಹೇಗೆ ತೋರಿಸಲಾಗಿದೆ? ಚಿತ್ರಣವನ್ನು ವಿವರಿಸಿ. ನಿಮ್ಮ ಸತ್ಯವೇದವನ್ನು ನೋಡಬೇಡಿ.

ವೈಯಕ್ತಿಕ ಪ್ರಾಮಾಣಿಕತೆ

7. ಜ್ಞಾನೋಕ್ತಿ. 12:22, 13:6, 14:5, 15:26, 17:20, 20:7, 20:11, 22:10, 10:7 ಮತ್ತು 16:31 ರ ಮೂಲಕ ದೇವರು ತನ್ನ ಜನರಿಂದ ಅಪೇಕ್ಷಿಸುವ ವೈಯಕ್ತಿಕ ಪ್ರಾಮಾಣಿಕತೆಯ ಬಗ್ಗೆ ನಾವು ಏನನ್ನು ಕಲಿಯುತ್ತೇವೆ? ನಿಮ್ಮ ಸ್ವಂತ ಮಾತುಗಳನ್ನು ಬಳಸಿ. ಸತ್ಯವೇದವನ್ನು ಉಲ್ಲೇಖಿಸಬೇಡಿ.

ನ್ಯಾಯ ಮತ್ತು ನೀತಿ ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಈ ಅಧ್ಯಾಯದಲ್ಲಿನ ಕೆಳಕಂಡ 3 ಕ್ಷೇತ್ರಗಳ ಅಧ್ಯಾಯನದ ಬೆಳಕಿನ ಅಡಿಯಲ್ಲಿ ನಿಮ್ಮ ವೈಯಕ್ತಿಕ ಕ್ರೈಸ್ತೀಯ ಜೀವಿತವನ್ನು ಮೌಲ್ಯಮಾಪನ ಮಾಡಿರಿ.
    - ಪ್ರೀತಿ ಮತ್ತು ನಂಬಿಗಸ್ತಿಕೆ
    - ಪ್ರೀತಿ ಮತ್ತು ಉದಾರತೆ
    - ಪ್ರೀತಿ ಮತ್ತು ಸ್ನೇಹ

    ನಿಮ್ಮ ಬಲಗಳು ಎಲ್ಲಿವೆ? ಬಲಹೀನತೆಗಳು ಎಲ್ಲಿವೆ?

2. ಹೆಚ್ಚು ನಂಬಿಗಸ್ತರು, ಹೆಚ್ಚಯ ಉದಾರರು ಮತ್ತು ಉತ್ತಮ ಸ್ನೇಹಿತರಾಗಲು ನೀವು ಏನನ್ನು ಮಾಡಬಹುದು?

ಅಸೈನ್‌ಮೆಂಟ್: ನ್ಯಾಯ ಮತ್ತು ನೀತಿ

1. ಈ ಅಧ್ಯಾಯದಲ್ಲಿ ನೀವು ಅಧ್ಯಯನ ಮಾಡಿರುವ ವಿಷಯಗಳ ಆಧಾರದ ಮೇಲೆ **"**ನ್ಯಾಯ ಮತ್ತು ಜ್ಞಾನದ ಬೋಧನೆಯಲ್ಲಿ ಬಡವರ ಅಗತ್ಯತೆಗಳು**"** ಎಂಬ ಸಣ್ಣ ಪ್ರಬಂದವನ್ನು ಬರೆಯಿರಿ.
2. ಈ ಅಧ್ಯಾಯದಲ್ಲಿ ನೀವು ಅಧ್ಯಯನ ಮಾಡಿರುವ ವಿಷಯಗಳ ಆಧಾರದ ಮೇಲೆ **"**ಜ್ಞಾನ ಬೋಧನೆಯಲ್ಲಿ ವೈಯಕ್ತಿಕ ಪ್ರಾಮಾಣಿಕತೆ**"** ಎಂಬ ಚಿಕ್ಕ ಪ್ರಬಂಧವನ್ನು ಬರೆಯಿರಿ.

ಕುಟುಂಬ

ಪೀಠಿಕೆ

ಪ್ರೀತಿ, ನ್ಯಾಯ, ಪ್ರಮಾಣಿಕತೆ ಮತ್ತು ದೇವರ ಭಯಗಳೆಂಬ ಪ್ರಾಚೀನ ಇಬ್ರಿಯ ಆತ್ಮೀಕ ಮೌಲ್ಯಗಳು ಪ್ರಾಥಮಿಕವಾಗಿ ಅಮೂಲ್ಯ ಸಂಗತಿಗಳಲ್ಲ, ಸ್ವಲ್ಪ ವಿರುದ್ಧವಾಗಿವೆ. ಜ್ಞಾನೋಕ್ತಿ ಪುಸ್ತಕದಲ್ಲಿ ಈ ಮೌಲ್ಯಗಳು ಹೇಗೆ ಸಶರೀರಗೊಂಡಿವೆ ಮತ್ತು ದೈನಂದಿನ ಇಸ್ರಾಯೇಲ್ಯರ ಜೀವನದ ವ್ಯೆಯಕ್ತಿಕ ಸ್ವಭಾವ ಮತ್ತು ಸಂಬಂಧಗಳಲ್ಲಿ ಹೇಗೆ ಜೀವಿಸಲ್ಪಟ್ಟಿವೆ ಎಂಬುದನ್ನು ನಾವು ಕಾಣಬಹುದು. ಅವು ದೇವರು ತನ್ನ ಜನರೊಂದಿಗೆ ಮಾಡಿಕೊಂಡ ಒಡಂಬಡಿಕೆಗೆ ವಿಧೇಯರಾಗುವ ಜೀವಿತವನ್ನು ವ್ಯಕ್ತಪಡಿಸುತ್ತವೆ.

ಐದು ಅಧ್ಯಾಯಗಳಲ್ಲಿ ಅತೀಪ್ರಾಮುಖ್ಯ ಮೌಲ್ಯಗಳು ವ್ಯಕ್ತವಾಗಿರುವುದನ್ನು ನಾವು ನೋಡೋಣ. ತಮ್ಮ ದೈನಂದಿನ ವ್ಯವಹಾರಿಕ ಜೀವನದ ಪರಿಸ್ಥಿತಿಗಳಲ್ಲಿ ಜ್ಞಾನ ಮತ್ತು ತಿಳುವಳಿಕೆಗಾಗಿ ದೇವಜನರ ಹುಡುಕಾಟದ ಪ್ರಾಮುಖ್ಯತೆಯನ್ನು ಅವು ಒತ್ತಿ ಹೇಳುತ್ತವೆ. ಅಭ್ಯಾಸಿಸಲ್ಪಡುವ ಕ್ಷೇತ್ರಗಳು ಇಂತಿವೆ:

- ಕುಟುಂಬ
- ಕೆಲಸ
- ಆರೋಗ್ಯ
- ಭೌತಿಕ ಸಂತುಷ್ಠಿ
- ನಾಲಿಗೆಯ ಉಪಯೋಗ

ಗಮನಿಸಿ: ನಮ್ಮ ಸತ್ಯವೇದಗಳಲ್ಲಿ **"ಪುತ್ರರು"** ಎಂದು ಭಾಷಾಂತರಿಸಲ್ಪಟ್ಟ ಇಬ್ರಿಯ ಪದವು **"ಮಕ್ಕಳು"** ಅಥವಾ **"ವಿಧ್ಯಾರ್ಥಿಗಳು"** ಎಂದಾಗಿ ಸಹ ಅರ್ಥೈಸುತ್ತದೆ. ಹಾಗಾಗಿ ಜ್ಞಾನದ ಸಾಮಾನ್ಯ ಬೋಧನೆಯಿಂದ ಸ್ತ್ರೀಯರು ಸೇರಿಸಲ್ಪಡದೆ ಇರಲಿಲ್ಲ.

ಈ ಅಧ್ಯಾಯದಲ್ಲಿ ಕುಟುಂಬದೊಂದಿಗೆ ಸಂರ್ಪಕ/ಸಂಬಂಧ ಹೊಂದಿರುವ ಐದು ಕ್ಷೇತ್ರಗಳನ್ನು ನಾವು ನೋಡೋಣ:

- ಒಳ್ಳೆಯ ಹೆಂಡತಿ
- ವೈವಾಹಿಕ ಜೀವನ
- ಮಕ್ಕಳನ್ನು ಬೆಳೆಸುವುದು
- ಪೋಷಕರಿಗಾಗಿನ ಗೌರವ
- ಸ್ವಾಸ್ಥ್ಯ

ಒಳ್ಳೆಯ ಹೆಂಡತಿ

ಹೆಚ್ಚಿನ ಸಮಾಜಗಳಲ್ಲಿ ಒಬ್ಬ ಪುರುಷನು ಒಳ್ಳೆಯ ಮತ್ತು ಸರಿಬೀಳುವ ಹೆಂಡತಿಯನ್ನು ಕಂಡು ಕೊಳ್ಳುವುದನ್ನು ಹೆಚ್ಚು ಪ್ರಾಮುಖ್ಯತೆ ಕೊಡುತ್ತವೆ. ಇದು ಇಸ್ರಾಯೇಲ್ಯರ ಮಧ್ಯೆ ಇದ್ದ ಸಂಗತಿ ಸಹ ಆಗಿತ್ತು ಉತ್ತಮ ಗುಣವುಳ್ಳ ಹೆಂಡತಿಯು ತನ್ನ ಮನೆ ಮತ್ತು ಕುಟುಂಬವನ್ನು ಚೆನ್ನಾಗಿ ನೋಡಿಕೊಳ್ಳಬಲ್ಲಳು.

ಆಕೆಯ ಆದರ್ಶ ವ್ಯಕ್ತಿತ್ವ ಮತ್ತು ತನ್ನ ಕುಟುಂಬಕ್ಕಾಗಿ ಮಾಡುವ ಆಕೆಯ ಕಾರ್ಯಗಳು ತನ್ನ ಗಂಡನನ್ನು ಹೆಮ್ಮೆಪಡುವಂತೆ ಮತ್ತು ಸಂತೋಷಿಸುವಂತೆ ಮಾಡುತ್ತವೆ ಮತ್ತು ಅವು ಆತನಿಗೆ ಮತ್ತು ಇಡೀ ಕುಟುಂಬಕ್ಕೆ ಗೌರವವನ್ನು ತರುತ್ತವೆ. ಸರಿಬಿಳುವ ಜೋಡಿಗಳನ್ನು ಕೂಡಿಸುವವನು ದೇವರಾಗಿದ್ದಾನೆ. ಈ ಜ್ಞಾನೋಕ್ತಿಗಳನ್ನು ಅಭ್ಯಾಸಿಸಿರಿ:

- 18:22
- 19:14
- 12:4
- 14:1

ವೈವಾಹಿಕ ಜೀವನ

ಕೆಲವು ಜ್ಞಾನೋಕ್ತಿಗಳು ವೈವಾಹಿಕ ಸುಖ ಮತ್ತು ಕೌಟಂಬಿಕ ಸಂಬಂಧಗಳನ್ನು ಚಿತ್ರಿಸುವುದರಲ್ಲಿ ಸ್ಪಷ್ಟವಾದ ವರ್ಣನೆ ಮತ್ತು ತೀವ್ರವಾದ ಚಿತ್ರೀಕರಣಗಳನ್ನು ಹೊಂದಿವೆ. ಈ ಜ್ಞಾನೋಕ್ತಿಗಳನ್ನು ಅಭ್ಯಾಸಿಸಿರಿ:

- 5:18–20
- 15:17
- 19:13
- 21:19
- 12:14

ಮಕ್ಕಳನ್ನು ಬೆಳೆಸುವುದು

ಭಯಭಕ್ತಿಯ ಮತ್ತು ಜ್ಞಾನ ಮಾರ್ಗದಲ್ಲಿ ಮಕ್ಕಳನ್ನು ಬೆಳೆಸುವುದರ ಪ್ರಾಮುಖ್ಯತೆಯ ಬಗ್ಗೆ ಅನೇಕ ಸಂಗತಿಗಳನ್ನು ಜ್ಞಾನೋಕ್ತಿಗಳು ಹೇಳುತ್ತವೆ. ಇಸ್ರಾಯೇಲ್ ಪೋಷಕರು ತಮ್ಮ ಮಕ್ಕಳನ್ನು ಒಡಂಬಡಿಕೆಯ ವಿಧಿಗಳಿಗನುಸಾರವಾಗಿ ಮಾರ್ಗದರ್ಶಿಸಲು, ತರಬೇತಿಗೊಳಿಸಲು ಮತ್ತು ಶಿಸ್ತುಗೊಳಿಸಲು ಅಪೇಕ್ಷಿಸುತ್ತಿದ್ದರು. ಅವರ ಪ್ರಯತ್ನದ ಫಲಿತಾಂಶವು ದೇವರಿಗೆ ಭಯಪಡುವ ಮತ್ತು ತಮ್ಮ ತಂದೆತಾಯಂದಿರಿಗೆ ಹೆಮ್ಮೆ ಮತ್ತು ಸಂತೋಷವನ್ನು ತಂದ ಮಕ್ಕಳಲ್ಲಿ ಕಾಣಬಹುದಾಗಿತ್ತು. ಆದಾಗ್ಯೂ ವೈಪಲ್ಯವು ದುಃಖ ಮತ್ತು ಅವಮಾನವನ್ನು ತರುತ್ತಿವೆ. ಈ ಜ್ಞಾನೋಕ್ತಿಗಳನ್ನು ಅಭ್ಯಾಸಿಸಿರಿ:

- 22:6
- 19:18
- 14:26
- 10:1
- 15:20
- 17:6
- 19:13

ಪೋಷಕರಿಗೆ ಗೌರವ

ಜ್ಞಾನದ ಬೋಧನೆಯು ಕೇವಲ ವಯಸ್ಕರಿಗಷ್ಟೇ ಅಲ್ಲ ಮಕ್ಕಳಿಗಾಗಿ ಸಹ ಅನ್ವಯವಾಗಿದೆ. ಒಂದು ಮಗುವು ತನ್ನ ತಂದೆತಾಯಿಯಂತೆ, ಜ್ಞಾನಿಯಾಗಿಯೋ ಅಥವಾ ಮೂರ್ಖನಾಗಿಯೋ ಇರಬಹುದು. ಒಂದು ಜ್ಞಾನಿಯಾದ ಮಗುವು

ಬುದ್ಧಿಮಾತನ್ನು ಕೇಳುತ್ತದೆ, ಗೌರವ ತೋರಿಸುತ್ತದೆ ಮತ್ತು ತನ್ನ ಪೋಷಕರಿಗೆ ಮಾನವನ್ನು ತರುತ್ತದೆ. ಒಂದು ಮೂರ್ಖ ಮಗುವು ದುಃಖವನು ಮತ್ತು ಕಹಿತನವನ್ನು ತರುತ್ತದೆ. ಈ ಜ್ಞಾನೋಕ್ತಿಗಳನ್ನು ಅಭ್ಯಾಸಿಸಿರಿ:

- 13:1
- 15:5
- 17:25
- 20:20
- 19:26
- 17:6

ಸ್ವಾಸ್ಥ್ಯ

ನಮ್ಮ ಆಧುನಿಕ ಸಮಾಜದಲ್ಲಿ ಆಸ್ತಿ, ಬಂಗಾರದ ಒಡವೆಗಳು ಮತ್ತು ಬ್ಯಾಂಕ್ ಅಕೌಂಟ್‌ಗಳೊಂದಿಗೆ ಸೇರಿಕೊಂಡಿದೆ. ಇವೆಲ್ಲಾ ಭೌತಿಕ ಸಂಗತಿಗಳನ್ನು ಒಂದು ಸಂತತಿಯು ಸಂಗ್ರಹಿಸಿ ತದನಂತರ ಮುಂದಿನ ಸಂತತಿಗೆ ಒಪ್ಪಿಸಿಕೊಡುತ್ತದೆ. ಆದರೆ ಪ್ರಾಚೀನ ಇಸ್ರಾಯೇಲ್ಯರಲ್ಲಿ ಸ್ವಾಸ್ಥ್ಯ **"ಹೆಸರು"** ಮತ್ತು **"ಕೀರ್ತಿ"** ಯೊಂದಿಗೆ ಸೇರಿಕೊಂಡಿತ್ತು. ಅವರು ಬದುಕಿನ ಜೀವಿತವನ್ನು ಮತ್ತು ಸತ್ತಾಗ ಅವರನ್ನು ಕುರಿತು ಜನರು ಹೇಗೆ ಯೋಚಿಸಿದರು. ಈ ಜ್ಞಾನೋಕ್ತಿಗಳನ್ನು ಅಭ್ಯಾಸಿಸಿರಿ:

- 19:14
- 13:22
- 11:29
- 14:18

ಈ ಅಧ್ಯಾಯದಲ್ಲಿ ನೀವು ಕಲಿತ ಸಂಗತಿಗಳನ್ನು ಆಧರಿಸಿ ಒಂದು ಪ್ರಬಂಧವನ್ನು ಬರೆಯಿರಿ. ನಿಮ್ಮ ಪ್ರಬಂಧಕ್ಕೆ **"ಹಳೇ ಒಡಂಬಡಿಕೆ ಜ್ಞಾನ ಬೋಧನೆಯ ಬೆಳಕಿನಲ್ಲಿ ಕ್ರೈಸ್ತೀಯ ಕುಟುಂಬ"** ಎಂದು ಶೀರ್ಷಿಕೆ ಕೊಡಿರಿ.

ಪ್ರಶ್ನೆಗಳು

ಒಳ್ಳೆಯ ಹೆಂಡತಿ

1. ಜ್ಞಾನೋಕ್ತಿ 18:22, 19:14, 12:4 ಮತ್ತು 14:1 ರ ಮೂಲಕ **"ಒಳ್ಳೆಯ ಹೆಂಡತಿ"** ಬಗ್ಗೆ ನಾವು ಏನು ಕಲಿಯುತ್ತೇವೆ?

ವೈವಾಹಿಕ ಜೀವನ

2. ಜ್ಞಾನೋಕ್ತಿ 5:18, 20, 15:17, 19:13, 21:19 ಮತ್ತು 12:4 ರ ಮೂಲಕ ವೈವಾಹಿಕ ಜೀವನದ ಬಗ್ಗೆ ನಾವು ಏನು ಕಲಿಯುತ್ತೇವೆ?

ಮಕ್ಕಳನ್ನು ಬೆಳೆಸುವುದು

3. ಜ್ಞಾನೋಕ್ತಿ 22:6, 19:18, 14:26, 10:1, 15:20, 17:6 ಮತ್ತು 19:13 ರ ಮೂಲಕ ಮಕ್ಕಳನ್ನು ಬೆಳೆಸುವ ಬಗ್ಗೆ ನಾವು ಏನು ಕಲಿಯುತ್ತೇವೆ?

ಪೋಷಕರಿಗೆ ಗೌರವ

4. ಜ್ಞಾನೋಕ್ತಿ 13:1, 15:5, 17:25, 20:20, 19:26 ಮತ್ತು 17:6 ರ ಮೂಲಕ ಪೋಷಕರ ಗೌರವದ ಬಗ್ಗೆ ನಾವು ಏನು ಕಲಿಯುತ್ತೇವೆ?

ಸ್ವಾಸ್ಥ್ಯ

5. ಜ್ಞಾನೋಕ್ತಿ 19:14, 13:22, 11:29 ಮತ್ತು 14:18 ರ ಮೂಲಕ ಸ್ವಾಸ್ಥ್ಯದ ಬಗ್ಗೆ ನಾವು ಏನು ಕಲಿಯುತ್ತೇವೆ?

ಕುಟುಂಬ ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಈ ಅಧ್ಯಾಯದ ಐದು ಕ್ಷೇತ್ರಗಳ ನಿಮ್ಮ ಅಧ್ಯಯನದ ಬೆಳಕಿನಡಿಯಲ್ಲಿ ನಿಮ್ಮ ಸ್ವಂತ ಕುಟುಂಬದ ಜೀವಿತವನ್ನು ಮೌಲ್ಯಮಾಪನ ಮಾಡಿ.

    - ಒಳ್ಳೆಯ ಹೆಂಡತಿ
    - ಕೌಟುಂಬಿಕ ಜೀವನ
    - ಮಕ್ಕಳನ್ನು ಬೆಳೆಸುವುದು
    - ಹೆತ್ತವರಿಗೆ ಗೌರವ
    - ಸ್ವಾಸ್ಥ್ಯ

    ನೀವು ಯಾವ ಬಲವನ್ನು ಕಾಣುವಿರಿ? ಯಾವ ಬಲಹೀನತೆಗಳನ್ನು ನೀವು ಕಾಣುವಿರಿ? ಈ ಅಧ್ಯಾಯದಲ್ಲಿ ಅಧ್ಯಯನ ಮಾಡಲಾದ ದೈವಿಕ ತತ್ವಗಳನ್ನು ನಿಮ್ಮ ಸ್ವಂತ ಕುಟುಂಬವು ಉತ್ತಮವಾಗಿ ಸ್ವೀಕರಿಸುವಂತೆ ಮಾಡಲು ಏನು ಮಾಡಬಹುದು? ಕೆಲವು ಅಂಶಗಳನ್ನು ಗಮನಿಸಿ

2. ಈ ಅಧ್ಯಾಯದಲ್ಲಿನ ಐದು ಕ್ಷೇತ್ರಗಳ ಅಧ್ಯಯನದ ಬೆಳಕಿನ ಅಡಿಯಲ್ಲಿ ನಿಮ್ಮ ಸಭಾ ಅನ್ಯೋನ್ಯತೆಯಲ್ಲಿನ ಕ್ರೈಸ್ತಕುಟುಂಬಗಳ ಜೀವಿತವನ್ನು ವಿಮರ್ಶಿಸಿ.

    - ಒಳ್ಳೆಯ ಹೆಂಡತಿ
    - ಕೌಟುಂಬಿಕ ಜೀವಿತ
    - ಮಕ್ಕಳನ್ನು ಬೆಳೆಸುವುದು
    - ಪೋಷಕರಿಗೆ ಗೌರವ
    - ಸ್ವಾಸ್ಥ್ಯ

    ನೀವು ಯಾವ ಬಲವನ್ನು ಕಾಣುವಿರಿ? ನೀವು ಯಾವ ಬಲಹೀನತೆಗಳನ್ನು ಕಾಣುವಿರಿ? ನಿಮ್ಮ ಸಭಾ ಅನ್ಯೋನ್ಯತೆಯಲ್ಲಿರುವ ಸಾಮಾನ್ಯವಾಗಿ ಕ್ರೈಸ್ತೀಯ ಕುಟುಂಬಗಳು ಈ ಅಧ್ಯಾಯದಲ್ಲಿ ಅಧ್ಯಯನ ಮಾಡಿದ ದೈವಿಕ ತತ್ವಗಳನ್ನು ಉತ್ತಮವಾಗಿ ಸ್ವೀಕರಿಸುವಂತೆ ಏನು ಮಾಡಬಹುದು? ಕೆಲವು ಅಂಶಗಳನ್ನು ಗಮನಿಸಿ.

ಅಸೈನ್‌ಮೆಂಟ್: ಕುಟುಂಬ

ಈ ಅಧ್ಯಾಯದಲ್ಲಿ ನೀವು ಅಧ್ಯಯನ ಮಾಡಿದ ವಿಷಯಗಳ ಆಧಾರದ ಮೇಲೆ ಒಂದು ಸಣ್ಣ ಪ್ರಬಂಧವನ್ನು ಬರೆಯಿರಿ. ನಿಮ್ಮ ಪ್ರಬಂಧವನ್ನು **"ಹಳೇ ಒಡಂಬಡಿಕೆಯ ಜ್ಞಾನ ಬೋಧನೆಯ ಬೆಳಕಿನಲ್ಲಿ ಕ್ರೈಸ್ತ ಕುಟುಂಬ ಜೀವನ"** ಎಂದು ಶೀರ್ಷಿಕೆ ಮಾಡಿ.

ಕೆಲಸ

ಪೀಠಿಕೆ

ಹಳೇ ಒಡಂಬಡಿಕೆಯಲ್ಲಿ ಕೆಲಸವು ಸ್ವಲ್ಪ ಗೊಂದಲಮಯವಾಗಿ ತೋರುತ್ತದೆ.

- ಕೆಲಸವು ಸಕಾರಾತ್ಮಕವಾದುದ್ದು: ದೇವರ ಕ್ರಿಯಾಶೀಲತೆಯನ್ನು ಮನುಷ್ಯನು ವ್ಯಕ್ತಪಡಿಸುವುದು.
- ಕೆಲಸವು ಒಂದು ರೀತಿ ನಕಾರಾತ್ಮಕವಾದದ್ದು: ವ್ಯರ್ಥವಾದದ್ದು, ಬೆವರು ಮತ್ತು ಶ್ರಮೆ.

ಯಾಕೆ ಕೆಲಸವು ಜ್ಞಾನ ಬೋಧನೆಯಲ್ಲಿ ಅತೀ ಪ್ರಾಮುಖ್ಯವಾಗಿದೆ? ಇದು ಶ್ರಮಪಟ್ಟು ಮಾಡುವ ಕೆಲಸವು ನಮ್ಮನ್ನು ಶ್ರೀಮಂತರಾಗಿಸುವ ನಿಮಿತ್ತದಿಂದಲ್ಲ. ಇಲ್ಲಿ ಇದು ದೇವರು ತಾನು ಸೃಷ್ಟಿಸಿದ ಜಗತ್ತಿನಲ್ಲಿ ಉಪಯೋಗಿಸಲು ನಮಗೆ ಅನೇಕ ಕ್ರಿಯಾಶೀಲತೆಯ ತಲಾಂತುಗಳನ್ನು ಕೊಟ್ಟು ನಿಮಿತ್ತದಿಂದಾಗಿದೆ. ಮಾನವ ಚಟುವಟಿಕೆಗಳಲ್ಲಿನ ನಮ್ಮ ಕೆಲಸವು ಸೃಷ್ಟಿಸಲ್ಪಟ್ಟ ಇಡೀ ಜಗತ್ತಿಗಾಗಿನ ದೇವರ ಕಾಳಜಿಯಲ್ಲಿನ ಆತನ ಕೆಲಸಕ್ಕೆ ಹೋಲಿಕೆಯಾಗುತ್ತದೆ. ಹಾಗಾಗಿ ನಮ್ಮ ಕೆಲಸವು ದೇವರ ಕೆಲಸವನ್ನು ಪ್ರತಿಬಿಂಬಿಸುತ್ತದೆ.

ಸೋಮಾರಿಗಳಾಗಬೇಡಿರಿ!

ಜ್ಞಾನೋಕ್ತಿಯು ಸೊಮಾರಿ ಮತ್ತು ಆತನ ಸೋಮಾರಿತನದ ಬಗ್ಗೆ ಬಹಳಷ್ಟು ಮಾತನಾಡುತ್ತದೆ. ಕೆಳಕಂಡ ಜ್ಞಾನೋಕ್ತಿಗಳನ್ನು ಅಭ್ಯಾಸಿಸಿರಿ:

- 19:24
- 20:4
- 21:25
- 22:13

ಚೆನ್ನಾಗಿ ಕೆಲಸ ಮಾಡಿರಿ!

ಜ್ಞಾನೋಕ್ತಿಯು ನಮಗೆ ಸೋಮಾರಿತನದಿಂದ ದೂರವಿರಬೇಕೆಂದು ಹೇಳುವುದಷ್ಟೇ ಅಲ್ಲ, ಚೆನ್ನಾಗಿ ಕೆಲಸ ಮಾಡಬೇಕೆಂದು ನಮಗೆ ಪ್ರಬೋಧಿಸುತ್ತದೆ. ಉತ್ತಮ ಗುಣಮಟ್ಟದ ಕೆಲಸವು ಉತ್ತಮ ಗುಣಮಟ್ಟದ ಫಲಿತಾಂಶವನ್ನು ಕೊಡುತ್ತದೆ. ಈ ಜ್ಞಾನೋಕ್ತಿಗಳನ್ನು ಅಭ್ಯಾಸಿಸಿರಿ:

- 18:9
- 21:5
- 12:27

ಕಷ್ಟಪಟ್ಟು ಕೆಲಸ ಮಾಡಿರಿ!

ಸೋಮಾರಿಗೆ ವಿರುದ್ಧವಾದ ವ್ಯಕ್ತಿಯು ಕಷ್ಟಪಟ್ಟು ಕೆಲಸ ಮಾಡುವ ವ್ಯಕ್ತಿಯಾಗಿದ್ದಾನೆ. ಕಷ್ಟದ ದುಡಿತವು ನಮ್ಮ ಮೇಜಿನ ಮೇಲೆ ಆಹಾರವನ್ನು ತಂದಿಡುತ್ತದೆ ಮತ್ತು ಇತರ ಅಗತ್ಯತೆಗಳನ್ನು ಪೂರೈಸುವಂತೆ ನಮ್ಮನ್ನು ಶಕ್ತಿಗೊಳಿಸುತ್ತದೆಂದು ಜ್ಞಾನೋಕ್ತಿಗಳು ನಮಗೆ ಬೋಧಿಸುತ್ತವೆ. ಈ ಜ್ಞಾನೋಕ್ತಿಗಳನ್ನು ಅಭ್ಯಾಸಿಸಿರಿ:

- 19:15
- 16:26
- 20:13

ಪ್ರಶ್ನೆಗಳು

1. ಹಳೇ ಒಡಂಬಡಿಕೆಯಲ್ಲಿ ಕೆಲಸಕ್ಕಾಗಿನ ಎರಡು ಮನೋಭಾವಗಳ ನಡುವೆ ಕಂಡುಬರುವ ಗೊಂದಲವನ್ನು ವಿವರಿಸಿರಿ. ಸಾಧ್ಯವಾದಷ್ಟು ನಿಮ್ಮ ಸ್ವಂತ ಪದಗಳನ್ನು ಬಳಸಿ.
2. ಜ್ಞಾನೋಕ್ತಿ 19:24, 20:4, 21:25 ಮತ್ತು 22:13 ರ ಮೂಲಕ ಸೋಮಾರಿ ಮತ್ತು ಆತನ ಸೋಮಾರಿತನದ ಬಗ್ಗೆ ನಾವು ಏನು ಕಲಿಯುತ್ತೇವೆ? ಈ ಜ್ಞಾನೋಕ್ತಿಗಳಲ್ಲಿ ಬಳಸಲಾದ ಚಿತ್ರಣವನ್ನು ಸಹ ವಿವರಿಸಿ.
3. ಜ್ಞಾನೋಕ್ತಿ 18:9, 21:5 ಮತ್ತು 12:22ರ ಮೂಲಕ ನಮ್ಮ ಕೆಲಸ ಗುಣಮಟ್ಟದ ಬಗ್ಗೆ ನಾವು ಏನು ಕಲಿಯುತ್ತೇವೆ? ಈ ಜ್ಞಾನೋಕ್ತಿಗಳಲ್ಲಿ ಬಳಸಲಾದ ಚಿತ್ರಣವನ್ನು ಸಹ ವಿವರಿಸಿ.
4. ಜ್ಞಾನೋಕ್ತಿ 19:15, 16:26 ಮತ್ತು 20:13 ರ ಮೂಲಕ ಕಠಿಣ ಪರಿಶ್ರಮದ ಬಗ್ಗೆ ನಾವು ಏನು ಕಲಿಯುತ್ತೇವೆ?

ಕೆಲಸ ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಕೈಯಿಂದ ಮಾಡುವ ಕೆಲಸದ ಬಗ್ಗೆ ದಕ್ಷಿಣ ಭಾರತದ ಮನೋಭಾವನೆಯನ್ನು ವರ್ಣಿಸಿರಿ. ಈ ಅಧ್ಯಾಯದ ಪೀಠಿಕೆಯಲ್ಲಿ ವಿವರಿಸಿದಂತೆ ಹಳೆಯ ಒಡಂಬಡಿಕೆಯ ಮನೋಭಾವದೊಂದಿಗೆ ಹೋಲಿಕೆ ಮಾಡಿ. ನಿಮ್ಮ ತೀರ್ಮಾನಗಳನ್ನು ಗಮನಿಸಿ.
2. ಕೆಲಸ ಮಾಡುವ ನಿಮ್ಮ ಸ್ವಂತ ಮನೋಭಾವವನ್ನು ಮೌಲ್ಯಮಾಪನ ಮಾಡಿ. ನೀವು ಯಾವ ಬಲಗಳನ್ನು ಕಾಣುವಿರಿ? ನೀವು ಯಾವ ಬಲಹೀನತೆಗಳನ್ನು ಕಾಣುವಿರಿ? ಈ ಅಧ್ಯಾಯದಲ್ಲಿ ಅಭ್ಯಾಸಿಸಿದ ದೈವಿನ ತತ್ವಗಳನ್ನು ಅನುಕರಿಸಲು ನೀವು ಏನು ಮಾಡಬಹುದು.

ಅಸೈನ್‌ಮೆಂಟ್: ಕೆಲಸ

ಈ ಅಧ್ಯಾಯದಲ್ಲಿ ಕಲಿತ ಸಂಗತಿಗಳ ಆಧಾರದ ಮೇಲೆ ಒಂದು ಪ್ರಬಂಧ ಬರೆಯಿರಿ. ಇದಕ್ಕೆ **"ಹಳೇ ಒಡಂಬಡಿಕೆಯ ಜ್ಞಾನ ಬೋಧನೆಯ ಬೆಳಕಿನಲ್ಲಿ ಕೆಲಸಕ್ಕೆ ಕ್ರೈಸ್ತೀಯ ಮನೋಭಾವ"** ಎಂಬ ಶೀರ್ಷಿಕೆ ಕೊಡಿರಿ.

ಆರೋಗ್ಯ ಮತ್ತು ಭದ್ರತೆ

ಪೀಠಿಕೆ

ಆರೋಗ್ಯ ಮತ್ತು ಭದ್ರತೆಗಳು ಜ್ಞಾನದ ಎರಡು ಕಾಳಜಿಗಳಾಗಿದ್ದು ಅವು ನಮ್ಮ ಮೂಲಭೂತ ಅಗತ್ಯತೆಗಳನ್ನು ಸಂಧಿಸುತ್ತವೆ.

ಈ ಎರಡು ಕ್ಷೇತ್ರಗಳು ದೈವಶಾಸ್ತ್ರೀಯ ಮತ್ತು ಪ್ರಾಯೋಗಿಕ ಮಗ್ಗುಲನ್ನು ಹೊಂದಿವೆ.

ಹಳೇ ಒಡಂಬಡಿಕೆಯಲ್ಲಿ ಆರೋಗ್ಯವು ದೈವಶಾಸ್ತ್ರೀಯವಾಗಿ **"ಶಾಲೋಮ್"** ದೊಂದಿಗೆ ನಿಕಟ ಸಂಬಂಧ ಹೊಂದಿದೆ. ಇದು ಭೌತಿಕ, ಭಾವನಾತ್ಮಕ ಸಂಬಂಧ, ಮತ್ತು ಆತ್ಮೀಕ ಜೀವನದ ಎಲ್ಲಾ ಅಂಶಗಳ ಸುಖವನ್ನು ಸೂಚಿಸುತ್ತದೆ.

ದೇವರು ಶಾಂತಿಯನ್ನು ತರುವಾಗ ಅಲ್ಲಿ ಇವೆಲ್ಲಾ ಇರುತ್ತವೆ:

- ಸಮೃದ್ಧಿ, ಕೀರ್ತನೆ 72:1–7 ನೋಡಿ
- ಆರೋಗ್ಯ, ಯೆಶಾಯ 57:18–19 ನೋಡಿ
- ಸಮಾಧಾನ, ಆದಿಕಾಂಡ 26:28–29 ನೋಡಿ
- ಸಂತೃಪ್ತಿ, ಕೀರ್ತನೆ 4:8 ನೋಡಿ
- ರಾಷ್ಟ್ರಗಳ ನಡುವಿನ ಉತ್ತಮ ಸಂಬಂಧಗಳು (1 ಪೂರ್ವಕಾಲವೃತ್ತಾಂತ 12:17–18 ಹೋಲಿಸಿ)

ಆದ್ದರಿಂದ ಶಾಂತಿಯ ಆಯಾಮವು ವೈಯಕ್ತಿಕ ಮತ್ತು ಸಾಂಸ್ಥಿಕವಾಗಿದೆ. ದೇವರ ಶಾಲೋಮ್ ಸಮುದಾಯಿಕ ಅಂಶವನ್ನು ಹೊಂದಿದೆ ಮತ್ತು ವೈಯಕ್ತಿಕ ಅಂಶವನ್ನು ಹೊಂದಿದೆ, ಯೆರೆಮೀಯ 29:7 ಅನ್ನು ಹೋಲಿಸಿ.

ಸತ್ಯವೇದದ ಪಾಪದ ಪರಿಕಲ್ಪನೆಯ ಬೆಳಕಿನಲ್ಲಿ ಶಾಲೋಮ್ ಅನ್ನು ತಾತ್ವಿಕವಾಗಿ ಅರ್ಥಮಾಡಿಕೊಳ್ಳಬೇಕು. ಇದರರ್ಥ ಅನಾರೋಗ್ಯವನ್ನು ಸಾಮಾನ್ಯವಾಗಿ ವೈಯಕ್ತಿಕ ಪಾಪಗಳ ಲಕ್ಷಣವಾಗಿ ನೋಡಲಾಗುವುದಿಲ್ಲ, ಆದರೆ ಈ ಲೋಕದ ಸಾಮಾನ್ಯ ಪತನ, ಕೊಳೆತ ಮತ್ತು ಸಾವಿಗೆ ಒಳಪಡುವ ಲೋಕದ ಲಕ್ಷಣವಾಗಿ ನೋಡಲಾಗುತ್ತದೆ. ಆದ್ದರಿಂದ ಶಾಲೋಮ್ ಪುನಃಸ್ಥಾಪನೆ ಮತ್ತು ರಕ್ಷಣೆಯ ಸತ್ಯವೇದದ ಪರಿಕಲ್ಪನೆಯೊಂದಿಗೆ ನಿಕಟ ಸಂಬಂಧ ಹೊಂದಿದೆ, ಅದರ ಮೂಲಕ ದೇವರು ಎಲ್ಲವನ್ನೂ ಹೊಸದಾಗಿ ಮಾಡುತ್ತಿದ್ದಾನೆ ಮತ್ತು ಶಾಲೋಮ್ ಅನ್ನು ಅದರ ಸಂಪೂರ್ಣತೆಯಲ್ಲಿ ತರುತ್ತಿದ್ದಾನೆ.

ಹಳೇ ಒಡಂಬಡಿಕೆಯು **"ಕರ್ತನಿಗೆ ಭಯಪಡುವವರಿಗೆ"** ಒಂದು ಆಶೀರ್ವಾದವಾಗಿ ಭದ್ರತೆ/ಸುರಕ್ಷತೆ/ರಕ್ಷಣೆ ನೀಡುತ್ತದೆ ಎಂದು ಹೇಳುತ್ತದೆ. ಆದರೆ ನಮ್ಮ ಮಾನವ ಅನುಭವವು ದೈವಭಕ್ತರು ಸಹ ಆಗಾಗ್ಗೆ ತೊಂದರೆಗಳು ಮತ್ತು ಸಮಸ್ಯೆಗಳನ್ನು ಎದುರಿಸುತ್ತಾರೆ ಎಂದು ಹೇಳುತ್ತದೆ. ಹಳೇ ಒಡಂಬಡಿಕೆಯ ದೈವಶಾಸ್ತ್ರವು ಈ ಸ್ಪಷ್ಟ ವಿರೋಧಾಭಾಸವನ್ನು ಹೇಗೆ ಪರಿಹರಿಸುತ್ತದೆ ಎಂಬುದನ್ನು **ಇಬ್ರಿಯ ಜ್ಞಾನ ಮತ್ತು ಮಾನವನ ಅನುಭವ** ಎಂಬ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಆರೋಗ್ಯ

ಜ್ಞಾನ ಬೋಧನೆಯು **"ದೇವರ ಭಯ"** ಮತ್ತು ಆರೋಗ್ಯದ ನಡುವೆ ಒಂದು ಬಲವಾದ ಸಂಪರ್ಕವನ್ನು ಕಲ್ಪಿಸುತ್ತದೆ.

"ನೀನೆ ಬುದ್ಧಿವಂತನು ಎಂದೆಣಿಸದೆ ಯೆಹೋವನಿಗೆ ಭಯಪಟ್ಟು ಕೆಟ್ಟದ್ದನ್ನು ತೊರೆದುಬಿಡು. ಇದರಿಂದ ನಿನ್ನ ದೇಹಕ್ಕೆ ಆರೋಗ್ಯವೂ ಎಲುಬುಗಳಿಗೆ ಸಾರವೂ ಉಂಟಾಗುವವು" (ಜ್ಞಾನೋ. 3:7–8)

ಜ್ಞಾನೋಕ್ತಿ ಪುಸ್ತಕವು **"ಸಕಾರಾತ್ಮಕ ಆಲೋಚನೆಯ"** ಒಂದು ಬಲವಾದ ಪ್ರತಿಪಾದಕವಾಗಿದೆ.

- 12:25
- 18:14
- 13:12

- 14:30

ಮನುಷ್ಯನು ಯೋಚಿಸುವುದು ಹೊರನೋಟಕ್ಕೆ ಯಾವಾಗಲೂ ಕಾಣುವುದಿಲ್ಲ, ಆದರೆ ಆತನ ಮನಸ್ಸಿನಲ್ಲಿ ನಿಜವಾಗಿ ಏನಾಗುತ್ತಿದೆ ಎಂಬುದನ್ನು ದೇವರು ಮಾತ್ರ ಬಲ್ಲವನಾಗಿದ್ದಾನೆ.

- 14:13
- 14:10
- 17:3
- 21:2

ಭದ್ರತೆ

ಜ್ಞಾನವು ಮನುಷ್ಯನ ಇನ್ನೊಂದು ಮೂಲಭೂತ ಅವಶ್ಯಕತೆಯ ಬಗ್ಗೆ ಸಮಯ ತೆಗೆದುಕೊಂಡು ಬೋಧಿಸುತ್ತದೆ. ಅದೇನಂದರೆ, ಭದ್ರತೆ ಮತ್ತು ಸುರಕ್ಷಿತತೆಯ ಪ್ರಾಮುಖ್ಯತೆ. ಆದರೆ ಒಳ್ಳೇರೀತಿ ಬದುಕುವುದು ಮತ್ತು ಭದ್ರತೆಯ ನಡುವೆ ಯಾವುದೇ ರೀತಿಯ ವಿಶಿಷ್ಟವಾದ ಸಂಬಂಧವಿಲ್ಲ. ದೇವಜನರು ದರೋಡೆ ಮತ್ತು ರಸ್ತೆ ಅಫಘಾತಗಳಿಂದ ರಕ್ಷಿಸಲ್ಪಡಬೇಕಾದ ಅವಶ್ಯಕತೆಯೇನಿಲ್ಲ, ಕೆಲವೊಮ್ಮೆ ನಮ್ಮ ಭಯಭಕ್ತಿಯು ನಮಗೆ ಹೆಚ್ಚು ಪ್ರಯೋಜನ ತರುವಂತೆ ಸಹ ಕಾಣುವುದಿಲ್ಲ. ಈ ಲೋಕದಲ್ಲಿ ಭಯಭಕ್ತಿಯುಳ್ಳ ಕ್ರೈಸ್ತರು ಸಹ ಆಗಾಗ್ಗೆ ಬಾಧೆಪಡುತ್ತಾರೆ.

1 ಪೇತ್ರ. 4:12–19 ರಲ್ಲಿ **"ಕ್ರೈಸ್ತೀಯ ಭಾಧೆ"** ಯ ಬಗೆಗಿನ ವಾಕ್ಯಭಾಗವನ್ನು ನಾವು ಕಾಣುತ್ತೇವೆ. ಇಲ್ಲಿ ಅಪೊಸ್ತಲ ಪೇತ್ರನು ತನ್ನ ಓದುಗರಿಗೆ ಪ್ರಬೋಧಿಸುವುದರಿಂದ ಬಾಧೆಯ ಕುರಿತಾದ ತನ್ನ ಬೋಧನೆಯನ್ನು ಮುಗಿಸುತ್ತಾನೆ.

"ಹೀಗಿರಲಾಗಿ ದೇವರ ಚಿತ್ತನುಸಾರ ಬಾಧೆಪಡುವವರು ಒಳ್ಳೇದನ್ನು ಮಾಡುವವರಾಗಿದ್ದು ತಮ್ಮ ಆತ್ಮಗಳನ್ನು ನಂಬಿಗಸ್ತನಾದ ಸೃಷ್ಟಿಕರ್ತನಿಗೆ ಒಪ್ಪಿಸಲಿ" (ವಚನ 19).

ನಂಬಿಕೆಯು ಎಲ್ಲಾ ಅನಿಶ್ಚಿತತೆ ಮತ್ತು ಕಷ್ಟಗಳನ್ನು ತೆಗೆದುಹಾಕುವುದಿಲ್ಲ. ನಂಬಿಕೆಯು ಭೌತಿಕವಾಗಿ ಎಲ್ಲವನ್ನು ಸುರಕ್ಷಿತವಾಗಿ ಮಾಡುವುದಿಲ್ಲ. ಆದರೆ ನಂಬಿಕೆಯು ನಮ್ಮ ಅನಿಶ್ಚಿತತೆಗಳಲ್ಲಿ ಭದ್ರವಾಗಿ ಹಿಡಿದುಕೊಳ್ಳಲು ದೇವರು ನಮಗೆ ಕೊಡುವುದಾಗಿದೆ. ಆತನು ನಮಗೆ ಭರವಸೆಯನ್ನು ಕೊಡುತ್ತಾನೆ. ಹಾಗಾಗಿ ದೇವರಲ್ಲಿನ ಭದ್ರತೆಯು ಬದುಕುವುದಕ್ಕಾಗಿ ಇರುವ ಒಂದು ನಂಬಿಕೆಯ ಕಂಠೋಕ್ತಿಯಾಗಿದೆ ವಿನಃ ಜೀವನ ಹೇಗೆ ಇರುತ್ತದೆ ಎಂಬುದರ ವರ್ಣನೆಯಲ್ಲ.

ಈ ಜ್ಞಾನೋಕ್ತಿಗಳನ್ನು ಅಭ್ಯಾಸಿಸಿರಿ:

- 19:23
- 12:21
- 10:9
- 10:25

ಪ್ರಶ್ನೆಗಳು

1. **"ಆರೋಗ್ಯ"** ಮತ್ತು ಹಳೇ ಒಡಂಬಡಿಕೆಯ ಶಾಲೋಮ್ ಪರಿಕಲ್ಪನೆಯು ಹೇಗೆ ಸಂಪರ್ಕ ಹೊಂದಿದೆ ಎಂಬುದನ್ನು ವಿವರಿಸಿರಿ. ನಿಮ್ಮ ಸ್ವಂತ ಪದಗಳನ್ನು ಬಳಸಿ.
2. ಜ್ಞಾನೋಕ್ತಿ 3:7–8 ಅನ್ನು ನೀವು ಹೇಗೆ ಅರ್ಥೈಸುತ್ತೀರಿ? ಈ ಭಾಗವು ಆರೋಗ್ಯವನ್ನು ಜ್ಞಾನದೊಂದಿಗೆ ಹೇಗೆ ಜೋಡಿಸುತ್ತದೆ? ಇದು ಎಷ್ಟರ ಮಟ್ಟಿಗೆ **"ನಂಬಿಕೆಯ ಹೇಳಿಕೆಯಾಗಿದೆ"**? ಮತ್ತು ಎಷ್ಟರಮಟ್ಟಿಗೆ ಇದೊಂದು **"ಸತ್ಯದ ಹೇಳಿಕೆಯಾಗಿದೆ"**?

3. ಜ್ಞಾನೋಕ್ತಿ 12:25, 18:14, 13:12 ಮತ್ತು 14:30 ರ ಮೂಲಕ ಜೀವನದ ವಿಧಾನದ ಬಗ್ಗೆ ನಾವು ಏನು ಕಲಿಯುತ್ತೇವೆ?
4. ಜ್ಞಾನೋಕ್ತಿ 14:13, 14:10, 17:3 ಮತ್ತು 21:2 ರ ಮೂಲಕ ನಾವು ವ್ಯಕ್ತಿಯ ಹೃದಯದ ಬಗ್ಗೆ ಏನು ಕಲಿಯುತ್ತೇವೆ?
5. ಜ್ಞಾನೋಕ್ತಿ 19:23, 12:21, 10:9 ಮತ್ತು 10:25 ರ ಮೂಲಕ ನಾವು ಆರೋಗ್ಯ ಮತ್ತು ಭದ್ರತೆ ಬಗ್ಗೆ ಏನು ಕಲಿಯುತ್ತೇವೆ?

ಆರೋಗ್ಯ ಮತ್ತು ಭದ್ರತೆ ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಆರೋಗ್ಯ ಮತ್ತು ಭದ್ರತೆಯ ಕುರಿತಾದ ಈ ಅಧ್ಯಯನದ ಮುಖ್ಯ ಅಂಶಗಳನ್ನು ಸಾರಾಂಶಗೊಳಿಸಿರಿ ಮತ್ತು ಪರಸ್ಪರ ಒಬ್ಬರಿಗೊಬ್ಬರು ವಿವರಿಸಿರಿ.
2. ಕೆಳಕಂಡ ಜ್ಞಾನೋಕ್ತಿಯನ್ನು ನಾವು ಹೇಗೆ ಅರ್ಥೈಸಿಕೊಳ್ಳಬೇಕು? ಈ ಜ್ಞಾನೋಕ್ತಿಯಲ್ಲಿ ಉದಾಹರಿಸಲ್ಪಟ್ಟ ನಂಬಿಕೆ ಮತ್ತು ಅನುಭವದ ನಡುವಿನ ಸಹಜವಾದ ವಿರೋಧಭಾಸವನ್ನು ಹಳೇ ಒಡಂಬಡಿಕೆಯ ದೈವಶಾಸ್ತ್ರವು ಹೇಗೆ ಪರಿಹರಿಸುತ್ತದೆ?

ದುಷ್ಟನು ತುಟಿಗಳ ದೋಷದಿಂದ ಬೋನಿಗೆ ಬೀಳುವನು

ಶಿಷ್ಟನು ಇಕ್ಕಟ್ಟಿನಿಂದ ಪಾರಾಗುವನು.

(ಜ್ಞಾನೋ. 12:13)

ಅಸೈನ್‌ಮೆಂಟ್: ಆರೋಗ್ಯ ಮತ್ತು ಭದ್ರತೆ

ಈ ಅಧ್ಯಾಯನದಲ್ಲಿ ನೀವು ಕಲಿತ ಸಂಗತಿಗಳನ್ನು ಆಧರಿಸಿ ಒಂದು ಯೌವನಸ್ಥರ ಗುಂಪಿಗಾಗಿ **"ಆರೋಗ್ಯ ಮತ್ತು ಭಧ್ರತೆ"** ಯ ಬಗ್ಗೆ ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ.

ಭೌತಿಕ ಸೌಕರ್ಯ

ಪೀಠಿಕೆ

ಮನುಷ್ಯರಾದ ನಮಗೆ ನಮ್ಮ ಮೂಲಭೂತ ದಿನಸೌಕರ್ಯಗಳನ್ನು ಪೂರೈಸಲು ಆಹಾರ, ಬಟ್ಟೆ, ಆಶ್ರಯ ಮತ್ತು ಬೇಕಾದಷ್ಟು ಸಂಪನ್ಮೂಲಗಳ ಅವಶ್ಯಕತೆಯಿದೆಯೆಂದು ಜ್ಞಾನವು ನಮಗೆ ಬೋಧಿಸುತ್ತದೆ. ಆದರೆ ನಾವು ಉಳಿದವುಗಳ ಕುರಿತು ಸಹ ಯೋಚಿಸಬೇಕೆಂದು ಆಕೆಯು ನಮಗೆ ಬೋಧಿಸುತ್ತಾಳೆ.ದೇವಜನರಾಗಿ ನಾವು ಕೇವಲ ಅಗತ್ಯತೆಗಳನ್ನಷ್ಟೇ ಪರಿಗಣಿಸಬಾರದು. ಆದರೆ ನಮ್ಮ ಅಗತ್ಯತೆಗಳು ಪೂರೈಸಲ್ಪಡುವಾಗ ನಮಗಿಂತ ಕೆಳಮಟ್ಟದಲ್ಲಿ ಇರುವ ಮತ್ತು ಅಗತ್ಯತೆಯಲ್ಲಿರುವವರ ಕುರಿತಾಗಿ ಯೋಚಿಸಬೇಕು.

ಹಾಗಾಗಿ ಈ ಪಾಠದಲ್ಲಿ ಅಭ್ಯಾಸಿಸಿದ ಜ್ಞಾನೋಕ್ತಿಗಳನ್ನು ಈ ಕಳಕಂಡ ಮೂರು ಸತ್ಯಗಳ ಬೆಳಕಿನಡಿಯಲ್ಲಿ ಓದಬೇಕಾಗಿದೆ.

- ನಮ್ಮ ಅಗತ್ಯತೆಗಳು ನೀಗಿಸಲ್ಪಡಬೇಕೆಂದು ದೇವರು ತಿಳಿದಿದ್ದಾನೆ.
- ದೇವರು ನಮ್ಮ ಆಹಾರ, ಬಟ್ಟೆ, ಆಶ್ರಯ ಮತ್ತು ಉಳಿದ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವವನಾಗಿದ್ದಾನೆ.
- ದೇವಜನರಾದ ನಾವು ಬಡವರೆಡೆಗೆ ಹೇಗೆ ಗಮನಕೊಡಬೇಕೆಂಬುದನ್ನು ನೆನಪುಮಾಡಿಕೊಳ್ಳಬೇಕು.

ಈ ಅಧ್ಯಾಯದಲ್ಲಿನ ಜ್ಞಾನೋಕ್ತಿಯನ್ನು ನಮಗೆ ಎರಡು ಪ್ರಶ್ನೆಗಳನ್ನು ಕೇಳುವ ಇಂದು ಶಬ್ದ ಚಿತ್ರಣವನ್ನಾಗಿ ಅರ್ಥೈಸಿಕೊಳ್ಳಬೇಕು:

- ಇದು ನಿಮ್ಮ ಕುರಿತಾದ ಸತ್ಯವಾ?
- ಹಾಗಾಗಿ ನೀನು ಹೇಗೆ ಜೀವಿಸಬೇಕು?

ಆಹಾರ

ಮನುಷ್ಯರಾದ ನಮಗೆ ಆಹಾರ ಬೇಕು. ದೇವರು ನಮಗೆ ಬೇಕಾದ ಆಹಾರವನ್ನು ಒದಗಿಸುವವನಾಗಿದ್ದಾನೆ.

ಈ ಜ್ಞಾನೋಕ್ತಿಗಳನ್ನು ಅಭ್ಯಾಸಿಸಿರಿ:

- 10:3
- 13:25

ದೇವರು ನಮಗೆ ಒದಗಿಸುವಾಗ, ನಾವು ಬೇರೆಯವರಿಗೆ ಸಹ ಒದಗಿಸಬೇಕಾಗಿದೆ. "ನಮ್ಮ ಅನುದಿನದ ಆಹಾರವನ್ನು ದಯಪಾಲಿಸು" ಎಂದು ನಾವು ಪ್ರಾರ್ಥಿಸುವಾಗ ಆ ಆಹಾರವನ್ನು ಆಹಾರವೇ ಇಲ್ಲದವರೊಂದಿಗೆ ಹಂಚಿಕೊಳ್ಳವ ಹಂಗು ಸಹ ನಮಗಿದೆ.

ಈ ಜ್ಞಾನೋಕ್ತಿಗಳನ್ನು ಅಭ್ಯಾಸಿಸಿರಿ:

- 22:9
- 25:21

ಸಾಕಷ್ಟು ಇರುವುದು

ಸಂಪತ್ತಿನ ಕುರಿತಾಗಿ ಜ್ಞಾನೋಕಿಯು ಬಹಳಷ್ಟು ಹೇಳುತ್ತದೆ. ಸಾಮಾನ್ಯವಾಗಿ ಸಂಪತ್ತು ಮತ್ತು ಐಶ್ವರ್ಯಕ್ಕೆ ವಿರುದ್ಧವಾದದ್ದು ಬಡತನವಾಗಿದೆ. ಸಮೃದ್ಧಿಯೆಂದರೆ ಸಾಕಷ್ಟನ್ನು ಹೊಂದಿರುವುದೇ ವಿನಃ ಶ್ರೀಮಂತರಾಗುವುದಲ್ಲವೆಂಬುದಾಗಿ ಅರ್ಥೈಸಿಕೊಳ್ಳಬೇಕೆಂಬುದನ್ನು ಇದು ತೋರಿಸುತ್ತದೆ.

ನಾವು ವಿಮರ್ಶಿಸಲು ಮತ್ತು ನಮ್ಮ ಜೀವಿತಕ್ಕೆ ಅಳವಡಿಸಿಕೊಳ್ಳಲು ಬೇಕಾದ 6 ಪ್ರಶ್ನೆಗಳು ಇಂತಿವೆ:

1. ಸಾಕಷ್ಟನ್ನು ನಾವು ಹೇಗೆ ಪಡೆದುಕೊಳ್ಳುವುದು? ಈ ಜ್ಞಾನೋಕ್ತಿಗಳನ್ನು ಅಭ್ಯಾಸಿಸಿರಿ:
    - 13:11
    - 10:4
    - 14:23
2. ನಮ್ಮ ಸಂಪತ್ತು ಎಲ್ಲಿಂದ ಬರುತ್ತದೆ?
    - 10:22
    - 13:21
3. ನಮ್ಮ ಸಂಪತ್ತನ್ನು ಯಾವುದಕ್ಕೆ ಉಪಯೋಗಿಸಬಹುದು?
    - 14:20
    - 18:11
    - 13:22
4. ನಮ್ಮ ಸಂಪತ್ತು ಯಾವುದಕ್ಕೆ ನಡೆಸಬೇಕು (ನಡೆಸುವುದು)? ಈ ಜ್ಞಾನೋಕ್ತಿಗಳನ್ನು ಅಭ್ಯಾಸಿಸಿರಿ:
    - 11:24
5. ಸಂಪತ್ತಿನ ಅಪಾಯಗಳೇನು?
    - 13:8
6. ಬಡತನವು ಏನನ್ನು ತರುತ್ತದೆ? ಈ ಜ್ಞಾನೋಕ್ತಿಗಳನ್ನು ಅಭ್ಯಾಸಿಸಿರಿ.
    - 13:8
    - 14:20
    - 19:4

ಪ್ರಶ್ನೆಗಳು

1. ಈ ಅಧ್ಯಾಯದ ಮೂರು ಮುಖ್ಯ ಸತ್ಯಗಳು ಯಾವುವು?
2. ಜ್ಞಾನೋಕ್ತಿ 10:3 ಮತ್ತು 13: 25 ರ ಮೂಲಕ ಆಹಾರದ ಬಗ್ಗೆ ನಾವು ಏನನ್ನು ಕಲಿಯುತ್ತೇವೆ?
3. ಜ್ಞಾನೋಕ್ತಿ 22:9 ಮತ್ತು 25:21 ರ ಪ್ರಕಾರ ನಮ್ಮ **"ನೆರೆಹೊರೆಯವನಿಗೆ"** ನಾವು ಯಾವ ಭಾಧ್ಯತೆಗಳನ್ನು (ಋಣ) ಹೊಂದಿದ್ದೇವೆ?
4. ಜ್ಞಾನೋಕ್ತಿ ಪುಸ್ತಕದಲ್ಲಿ **"ಸಂಪತ್ತು"** ಅನ್ನು ಹೇಗೆ ಅರ್ಥೈಸಿಕೊಳ್ಳಬೇಕು?

5. ನಮಗೆ ಹೇಗೆ ಸಾಕಾಗುತ್ತದೆ? ಈ ಜ್ಞಾನೋಕ್ತಿಗಳಲ್ಲಿ ಉತ್ತರಗಳನ್ನು ಹುಡುಕಿ: 13:11, 10:4 ಮತ್ತು 14:23.
6. ನಮ್ಮ "ಸಂಪತ್ತು" ಎಲ್ಲಿಂದ ಬರುತ್ತದೆ? ಈ ಜ್ಞಾನೋಕ್ತಿಗಳಲ್ಲಿ ಉತ್ತರಗಳನ್ನು ಹುಡುಕಿ: 10:22 ಮತ್ತು 13:21.
7. "ಸಂಪತ್ತು" ಅನ್ನು ಯಾವುದಕ್ಕಾಗಿ ಉಪಯೋಗಿಸಬಹುದು? ಈ ಜ್ಞಾನೋಕ್ತಿಗಳಲ್ಲಿ ಉತ್ತರಗಳನ್ನು ಹುಡುಕಿ: 14:20, 18:11 ಮತ್ತು 13:22.
8. ನಮ್ಮ "ಸಂಪತ್ತು" ಯಾವುದಕ್ಕೆ ಕಾರಣವಾಗಬೇಕು 11:24)?
9. "ಸಂಪತ್ತು"ದ ಅಪಾಯಗಳು ಯಾವುವು (13:8)?
10. ಬಡತನವು ಏನನ್ನು ತರುತ್ತದೆ? ಈ ಜ್ಞಾನೋಕ್ತಿಗಳಲ್ಲಿ ಉತ್ತರಗಳನ್ನು ಹುಡುಕಿ: 13:18, 14:20 ಮತ್ತು 19:4. ನಂತರ ಜ್ಞಾನ ಬೋಧನೆಯ ಬೆಳಕಿನಲ್ಲಿ ನಿಮ್ಮ ಉತ್ತರಗಳನ್ನು ಮೌಲ್ಯಮಾಪನ ಮಾಡಿರಿ.

ಭೌತಿಕ ಸೌಕರ್ಯ ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಭೌತಿಕ ಸೌಕರ್ಯದ ಕುರಿತಾದ ಮುಖ್ಯ ಅಂಶಗಳನ್ನು ಸಾರಾಂಶಗೊಳಿಸಿ ನಿಮ್ಮ ಗುಂಪಿನಲ್ಲಿ ಪರಸ್ಪರ ವಿವರಿಸಿರಿ.
2. ಭೌತಿಕ ಸೌಕರ್ಯದ ಬಗ್ಗೆ ಈ ಅಧ್ಯಾಯದಲ್ಲಿ ನೀವು ಕಲಿತ ಸಂಗತಿಗಳ ಬೆಳಕಿನಡಿಯಲ್ಲಿ ನಿಮ್ಮ ಸ್ವಂತ ಜೀವಿತವನ್ನು ಮೌಲ್ಯಮಾಪನ ಮಾಡಿರಿ. ನಿಮ್ಮ ಬಲಗಳೇನು? ನಿಮ್ಮ ಬಲಹೀನತೆಗಳೇನು? ದೇವರ ನೀತಿವಂತ ತತ್ವಗಳನ್ನು ಉತ್ತಮವಾಗಿ ಸ್ವೀಕರಿಸಲು ನೀವು ಏನು ಮಾಡಬಹುದು? ಕೆಲವು ಅಂಶಗಳನ್ನು ಗಮನಿಸಿ.
3. ಭೌತಿಕ ಸೌಕರ್ಯದ ಬಗ್ಗೆ ಈ ಅಧ್ಯಾಯದಲ್ಲಿ ನೀವು ಕಲಿತ ಸಂಗತಿಗಳ ಬೆಳಕಿನಡಿಯಲ್ಲಿ ನಿಮ್ಮ ಸಭಾ ಅನ್ಯೋನ್ಯತೆಯ ಜೀವಿತವನ್ನು ಮೌಲ್ಯಮಾಪನ ಮಾಡಿ. ಬಲಗಳೇನು? ಬಲಹೀನತೆಗಳೇನು? ದೇವರ ನೀತಿವಂತ ತತ್ವಗಳನ್ನು ಉತ್ತಮವಾಗಿ ಸ್ವೀಕರಿಸಲು ನಿಮ್ಮ ಸಭಾ ಅನ್ಯೋನ್ಯತೆಗೆ ಏನು ಮಾಡಬಹುದು? ಕೆಲವು ಅಂಶಗಳನ್ನು ಗಮನಿಸಿ.

ಅಸೈನ್‌ಮೆಂಟ್: ಭೌತಿಕ ಸೌಕರ್ಯ

1. ಈ ಅಧ್ಯಾಯದಲ್ಲಿ ನೀವು ಕಲಿತ ಸಂಗತಿಗಳ ಆಧಾರದ ಮೇಲೆ ಯೌವನಸ್ಥರ ಗುಂಪಿಗಾಗಿ "ಭೌತಿಕ ಪೂರೈಕೆ" ಯ ಬಗ್ಗೆ ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ.
2. ಈ ಪಾಠದಲ್ಲಿ ನೀವು ಕಲಿತದ್ದನ್ನು ಆಧರಿಸಿ ಕ್ರೈಸ್ತ ನಿಯತಕಾಲಿಕೆಗೆ ಲೇಖನ ಬರೆಯಿರಿ.

ನಾಲಿಗೆಯ ಬಳಕೆ

ಪೀಠಿಕೆ

ಹೊಸ ಒಡಂಬಡಿಕೆಯಲ್ಲಿನ ಯಾಕೋಬನ ಪುಸ್ತಕದಲ್ಲಿ ನಾಲಿಗೆಯನ್ನು ನಿಯಂತ್ರಿಸುವುದರ ಬಗ್ಗೆ ಒಂದು ವಾಕ್ಯಭಾಗವಿದೆ (ಯಾಕೋಬ. 3:1–12). ಇಲ್ಲಿ ನಾಲಿಗೆಯು **"**ದೇಹದ ಒಂದು ಸಣ್ಣ ಅಂಗ**"**ವಾಗಿಯೂ ಸಹ ಒಳ್ಳೆಯ ಮತ್ತು ಕೆಟ್ಟದ್ದಕ್ಕಾಗಿನ ಇದರ ಬಳಕೆಯು ಬಹುದೊಡ್ಡ ಪರಿಣಾಮಗಳನ್ನು ಹೊಂದಿದೆ ಎಂದು ಯಾಕೋಬನು ಹೇಳುತ್ತಾನೆ.

ನಾಲಿಗೆಯನ್ನು ಉಪಯೋಗಿಸುವದರ ಬಗ್ಗೆ ಜ್ಞಾನೋಕ್ತಿಯು ಸಾಕಷ್ಟು ಸಂಗತಿಗಳನ್ನು ಹೇಳುತ್ತದೆ ಈ ಅಧ್ಯಾಯದಲ್ಲಿ ನಾವು ಒಳ್ಳೆಯ ಮತ್ತು ಕೆಟ್ಟದ್ದಕ್ಕಾಗಿ ನಾಲಿಗೆಯನ್ನು ಬಳಸುವ ನಾಲ್ಕು ಕ್ಷೇತ್ರಗಳನ್ನು ನೋಡೋಣ.

- ಚಾಡಿ
- ಜಗಳ
- ಕೋಪ
- ನಿಮ್ಮ ನಾಲಿಗೆಯ ಮೇಲೆ ನಿಗಾ ಇರಿಸಿ!
- ಸತ್ಯ

ಚಾಡಿ ಹೇಳಬೇಡಿ!

ಒಬ್ಬ ವ್ಯಕ್ತಿಯು ಬೇರೆಯವರ ಬಗ್ಗೆ ಇಲ್ಲಸಲ್ಲದ ಮತ್ತು ಸುಳ್ಳಾಗಿರುವ ಸಂಗತಿಗಳನ್ನು ಹೇಳುವುದರ ಮೂಲಕ ಅವರ ಜೀವನವನ್ನು ಹಾಳುಮಾಡುವುದೇ ಚಾಡಿಯಾಗಿದೆ. ಚಾಡಿಯನ್ನು ಪೌಲನು ಈ ರೀತಿ ವಿವರಿಸುತ್ತಾನೆ: **"**ಅವರು ಕಿವಿ ಊದುವವರೂ ಚಾಡಿ ಹೇಳುವವರೂ ದೇವರನ್ನು ದ್ವೇಷಿಸುವವರೂ ಸೊಕ್ಕಿನವರೂ ಅಹಂಕಾರಿಗಳೂ ಬಡಾಯಿ ಕೊಚ್ಚುವವರೂ ಕೇಡನ್ನು ಕಲ್ಪಿಸುವವರೂ ತಂದೆತಾಯಿಗಳ ಮಾತನ್ನು ಕೇಳದವರೂ ವಿವೇಕವಿಲ್ಲದವರೂ ಮಾತಿಗೆ ತಪ್ಪುವವರೂ ಮಮತೆಯಿಲ್ಲದವರೂ ಕರುಣೆಯಿಲ್ಲದವರೂ ಆದರು (ರೋಮಾ. 1:30–31). ಅವರು ದೇವರ ನ್ಯಾಯತೀರ್ಪಿನಡಿಯಲ್ಲಿ ಬರುತ್ತಾರೆ. ಚಾಡಿ ಹೇಳುವವರು ದೂಷಿಸುವವರಾಗಿದ್ದು ಲೈಂಗಿಕ ಅನೈತಿಕತೆಯನ್ನು ಇಷ್ಟಪಡುತ್ತಾರೆ. **"**ಜಾರರು ವಿಗ್ರಹಾರಾಧಕರು ವ್ಯಭಿಚಾರಿಗಳು ವಿಟರು ಪುರುಷಗಾಮಿಗಳು ಕಳ್ಳರು ಲೋಭಿಗಳು ಕುಡುಕರು ಬೈಯುವವರು ಸುಲುಕೊಳ್ಳುವವರು ಇವರೊಳಗೆ ಒಬ್ಬರಾದರೂ ದೇವರ ರಾಜ್ಯಕ್ಕೆ ಬಾಧ್ಯರಾಗುವುದಿಲ್ಲ**"** (1 ಕೊರಿಂಥ. 6:9–10).

ಜ್ಞಾನೋಕ್ತಿ ಪುಸ್ತಕವು ಚಾಡಿ ಮತ್ತು ಚಾಡಿಕೋರರ ಬಗ್ಗೆ ಸ್ಪಷ್ಟವಾಗಿ ಹೇಳುತ್ತದೆ. ಈ ಜ್ಞಾನೋಕ್ತಿಗಳನ್ನು ಅಭ್ಯಾಸಿಸಿರಿ:

- 16:28
- 20:19
- 19:1
- 16:30
- 18:8

ಜಗಳವಾಡಬೇಡಿ!

ಜಗಳ ಮಾಡುವುದು ಲೌಕಿಕದ ಒಂದು ಗುರುತಾಗಿದೆ ಎಂದು ಪೌಲನು ಬೋಧಿಸುತ್ತಾನೆ. ನಿಮ್ಮೊಳಗೆ ಹೊಟ್ಟೇಕಿಚ್ಚು ಜಗಳಗಳು ಇರುವಲ್ಲಿ ನೀವು ಶರೀರಾಧೀನಸ್ವಭಾವವುಳ್ಳವರಾಗಿದ್ದು ಕೇವಲ ನರಪ್ರಾಣಿಗಳಂತೆ ನಡೆಯುತ್ತೀರಲ್ಲವೇ (1 ಕೊರಿಂಥ. 3:3).

ಜ್ಞಾನೋಕ್ತಿಯು ಜಗಳದ ಬಗ್ಗೆ ಯಾವ ಒಳ್ಳೆಯ ಸಂಗತಿಯನ್ನು ಹೇಳುವುದಿಲ್ಲ. ಈ ಜ್ಞಾನೊಕ್ತಿಗಳನ್ನು ಅಭ್ಯಾಸಿಸಿರಿ.

- 17:19
- 18:6
- 13:10
- 22:10
- 17:14

ಕೋಪವು ಪಾಪಕ್ಕೆ ಕಾರಣವಾಗಬಹುದು!

ಜಗಳವು ಯಾವಾಗಲೂ ನಾಶಕಾರಿಯಾಗಿದೆ ಮತ್ತು ಅಸಭ್ಯವಾಗಿದೆ. ಆದರೆ ಕೋಪವು ವಿಭಿನ್ನವಾಗಿದೆ. ನ್ಯಾಯವಾದ ಕೋಪವನ್ನು ಸರಿಯಾದ ರೀತಿಯಲ್ಲಿ ವ್ಯಕ್ತಪಡಿಸುವುದು ಸಹ ಸಾಧ್ಯವಿದೆ. ವಾಸ್ತವಾಂಶದಲ್ಲಿ ಕೋಪವು ನಾವು ಅನ್ಯಾಯ ಮತ್ತು ಅನೀತಿಯನ್ನು ಎದುರಿಸುವಾಗ ಮತ್ತು ಪರಿಶುದ್ಧ ಮತ್ತು ಒಳ್ಳೇಯದರ ಬಗ್ಗೆ ಅಣಕವಾಡುವುದನ್ನು ನೋಡುವಾಗ ನಾವು ವ್ಯಕ್ತಪಡಿಸುವ ಸಮರ್ಪಕವಾದ ಪ್ರತಿಕ್ರಿಯೆಯಾಗಿದೆ. ಇದಕ್ಕೆ ಒಂದು ಉದಾಹರಣೆ ದೇವಾಲಯದಲ್ಲಿ ಮಾರುವವರನ್ನು ಮತ್ತು ಕೊಳ್ಳುವವರನ್ನು ಕಂಡು ಯೇಸು ಕೋಪಗೊಳ್ಳುವುದು.

ಆದರೆ ನಮ್ಮ ನ್ಯಾಯಯುತವಾದ ಕೋಪವು ಪಾಪಕ್ಕೆ ನಡೆಸದಂತೆ ನಾವು ಜಾಗ್ರತೆ ವಹಿಸಬೇಕು. "ಕೋಪಮಾಡಬೇಕಾದರೂ ಪಾಪಮಾಡಬೇಡಿರಿ; ಸೂರ್ಯನು ಮುಳುಗುವುದಕ್ಕಿಂತ ಮುಂಚೆ ನಿಮ್ಮ ಸಿಟ್ಟು ತೀರಲಿ" (ಎಫೆಸ 4:26).

ಬೇಗ ಸಿಟ್ಟುಗೊಳ್ಳುವುದು ಮತ್ತು ಕೋಪದ ಬಗ್ಗೆ ಜ್ಞಾನೋಕ್ತಿಯು ನಮ್ಮನ್ನು ಎಚ್ಚರಿಸುತ್ತದೆ. ಈ ಜ್ಞಾನೋಕ್ತಿಗಳನ್ನು ಅಭ್ಯಾಸಿಸಿರಿ:

- 14:17
- 14:29
- 15:1
- 15:18

ನಿಮ್ಮ ನಾಲಿಗೆಯನ್ನು ನೋಡಿಕೊಳ್ಳಿ!

ಜ್ಞಾನೋಕ್ತಿಗಳು 15 ರಲ್ಲಿ ಮಾತನಾಡುವುದು ಮತ್ತು ನಮ್ಮ ನಾಲಿಗೆಯ ಬಳಕೆಯ ಬಗ್ಗೆ ಅನೇಕ ಜ್ಞಾನದ ಮಾತುಗಳನ್ನು ನಾವು ಕಾಣುತ್ತೇವೆ. ಈ ಜ್ಞಾನೋಕ್ತಿಗಳನ್ನು ಅಧ್ಯಯನ ಮಾಡಿ (ಪ್ರಶ್ನೆ 5 ಅನ್ನು ಸಹ ನೋಡಿ):

- 15:1
- 15:2
- 15:4

- 15:7
- 15:8
- 15:29

ಈ ಆರು ಜ್ಞಾನೋಕ್ತಿಗಳನ್ನು ಈ ಉಪದೇಶದಲ್ಲಿ ಸಂಕ್ಷೇಪಿಸಬಹುದು: ನೀವು ಹೇಗೆ ಮಾತನಾಡುತ್ತೀರಿ ಮತ್ತು ಏನು ಹೇಳುತ್ತೀರಿ ಎಂಬುದರ ಬಗ್ಗೆ ಬಹಳ ಜಾಗರೂಕರಾಗಿರಿ!

ಸತ್ಯವನ್ನು ಹೇಳು!

ಆದರೆ ನಾವು ಹೇಗೆ ಮಾತಾಡುತ್ತೇವೆ ಮತ್ತು ಏನನ್ನು ಮಾತಾಡುತ್ತೇವೆಂಬುದರ ಬಗ್ಗೆ ನಾವು ಯಾಕೆ ಜಾಗರೂಕರಾಗಿರಬೇಕು? ಈ ಪ್ರಶ್ನೆಯ ಉತ್ತರವು ಹೀಗಿದೆ: ದೇವರು ನಮ್ಮ ಪ್ರತಿಯೊಂದು ಮಾತನ್ನು ಕೇಳಿಸಿಕೊಳ್ಳುತ್ತಾನೆ. ಹಾಗಾಗಿ ದೇವರು ಎಲ್ಲವನ್ನು ಕೇಳಿಸಿಕೊಳ್ಳುವುದರಿಂದ ನಾವು ಯಾವಾಗಲೂ ಸತ್ಯವನ್ನೇ ಆಡಬೇಕು. ಈ ಜ್ಞಾನೋಕ್ತಿಗಳನ್ನು ಅಭ್ಯಾಸಿಸಿರಿ:

- 12:19
- 12:22
- 16:13
- 17:7
- 19:9
- 21:6

ಪ್ರಶ್ನೆಗಳು

ಚಾಡಿ ಹೇಳಬೇಡಿ!

1. ಕೆಳಕಂಡ ವಚನಗಳಿಂದ ಚಾಡಿಯ ಮತ್ತು ನಿಂದೆಯ ಬಗ್ಗೆ ನಾವು ಏನು ಕಲಿಯುತ್ತೇವೆ?

    ಅ. 16:28

    ಆ. 20:19

    ಇ. 18:8

ಜಗಳವಾಡಬೇಡಿ!

2. ಜಗಳದ ಬಗ್ಗೆ ಈ ವಚನಗಳಿಂದ ನಾವು ಏನು ಕಲಿಯುತ್ತೇವೆ?

    ಅ. 17:19

    ಆ. 18:6

    ಇ. 13:10

    ಈ. 22:10

    ಉ. 17:14

ಕೋಪವು ಪಾಪಕ್ಕೆ ಕಾರಣವಾಗಬಹುದು!

3. ಕೋಪದಲ್ಲಿ ಎರಡು ಮೂಲಭೂತ ವಿಧಗಳಿವೆ. ವಿವರಿಸಿ.

4. ಈ ವಚನಗಳಿಂದ ಕೋಪದ ಬಗ್ಗೆ ನಾವು ಏನು ಕಲಿಯಬಹುದು?

   ಅ. 14:17

   ಆ. 14:29

   ಇ. 15:1

   ಈ. 15:18

ನಿಮ್ಮ ನಾಲಿಗೆಯನ್ನು ನೋಡಿಕೊಳ್ಳಿ!

5. ಜ್ಞಾನೋಕ್ತಿ 15 ನೇ ಅಧ್ಯಾಯದ ಈ ವಚನಗಳಿಂದ ಮಾತಾಡುವುದು ಮತ್ತು ನಮ್ಮ ನಾಲಿಗೆಯನ್ನು ಬಳಸುವ ಬಗ್ಗೆ ನಾವು ಏನು ಕಲಿಯಬಹುದು?

   ಅ. 15:1

   ಆ. 15:2

   ಇ. 15:4

   ಈ. 15:7

   ಉ. 15:8

   ಊ. 15:29

ಸತ್ಯವನ್ನು ಹೇಳು!

6. ಈ ವಚನಗಳಿಂದ ಯಾವಾಗಲೂ ಸತ್ಯವನ್ನು ಮಾತನಾಡುವ ಬಗ್ಗೆ ನಾವು ಏನನ್ನು ಕಲಿಯಬಹುದು?

   ಅ. 12:19

   ಆ. 12:22

   ಇ. 16:13

   ಈ. 17:7

   ಉ. 19:9

ನಾಲಿಗೆಯ ಬಳಕೆ ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಯಾಕೋಬ 3:1–12 ಅನ್ನು ಓದಿರಿ ಮತ್ತು ವಾಕ್ಯ ಭಾಗವನ್ನು ಸಾರಾಂಶಗೊಳಿಸಿರಿ. ನಿಮ್ಮ ಸತ್ಯವೇದವನ್ನು ನೋಡಬೇಡಿ ಆದರೆ ನಿಮ್ಮ ಸ್ವಂತ ಮಾತುಗಳನ್ನು ಬಳಸಿ.

2. ಚಾಡಿ ಮತ್ತು ಚಾಡಿಕೋರರ ಬಗ್ಗೆ ಪೌಲನು ಏನು ಅನ್ನುತ್ತಾನೆ? ರೋಮಾ. 1:30–31 ಮತ್ತು 1 ಕೋರಿಂಥ. 6:9–10 ಅನ್ನು ನೋಡಿರಿ. ಈ ವಾಕ್ಯಭಾಗದಲ್ಲಿ ಆತನು ಉಪಯೋಗಿಸುವ ವಿಭಿನ್ನ ಪದಗಳ ಅರ್ಥವನ್ನು ವಿವರಿಸಿರಿ.

3. ಈ ಅಧ್ಯಾಯದಲ್ಲಿನ ನಾಲಿಗೆಯ ಬಳಕೆಯ ಬಗ್ಗೆ ಮುಖ್ಯ ಅಂಶಗಳನ್ನು ನಿಮ್ಮ ಗುಂಪಿನಲ್ಲಿ ಸಾರಾಂಶಗೊಳಿಸಿ. ವಿವರಿಸಿರಿ.

4. ನಾಲಿಗೆಯ ಉಪಯೋಗದ ಬಗ್ಗೆ ಇಬ್ರಿಯ ಜ್ಞಾನವು ಒಂದು ಪ್ರಾಮುಖ್ಯವಾದ ಮುಕ್ತಾಯವನ್ನು ಹೊರತರುತ್ತದೆ: "ನಾವು ಹೇಳುವ ಪ್ರತಿಯೊಂದನ್ನು ದೇವರು ಕೇಳಿಸಿಕೊಳ್ಳುತ್ತಾನೆ. ನಾವು ಯಾವಾಗಲೂ ಸತ್ಯವನ್ನೇ ಆಡಬೇಕು". ದಕ್ಷಿಣ ಭಾರತದ ಸಂಸ್ಕೃತಿಯಲ್ಲಿ ಸದ್ಗುಣಗಳ ಪಟ್ಟಿಯಲ್ಲಿ ಸತ್ಯವನ್ನು ಆಡುವುದು ಅಷ್ಟೇನು ಉನ್ನತ ಮಟ್ಟದಲ್ಲಿ ಇಲ್ಲಾ ಎಂಬುದನ್ನು ನಾನು ಕಂಡಿದ್ದೇನೆ. ನೀವು ನನ್ನೊಂದಿಗೆ ಒಪ್ಪುತ್ತಿರಾ? ಮುಂದೆ ಯಾಕೆ? ಯಾಕಿಲ್ಲಾ?

5. ನಾಲಿಗೆಯ ಬಳಕೆಯ ಬಗ್ಗೆ ಈ ಅಧ್ಯಾಯದಲ್ಲಿ ನೀವು ಕಲಿತ ಸಂಗತಿಗಳ ಬೆಳಕಿನಡಿಯಲ್ಲಿ ನಿಮ್ಮ ಸ್ವಂತ ಜೀವಿತವನ್ನು ಮೌಲ್ಯಮಾಪನ ಮಾಡಿರಿ. ಬಲಗಳೇನು? ಬಲಹೀನತೆಗಳೇನು? ದೇವರ ನೀತಿವಂತ ತತ್ವಗಳನ್ನು ಉತ್ತಮವಾಗಿ ಸ್ವೀಕರಿಸಲು ನೀವು ಏನು ಮಾಡಬಹುದು? ಕೆಲವು ಅಂಶಗಳನ್ನು ಗಮನಿಸಿ.
6. ನಾಲಿಗೆಯ ಬಳಕೆಯ ಬಗ್ಗೆ ಈ ಅಧ್ಯಾಯದಲ್ಲಿ ನೀವು ಕಲಿತ ಸಂಗತಿಗಳ ಬೆಳಕಿನಡಿಯಲ್ಲಿ ನಿಮ್ಮ ಸಭಾ ಅನ್ಯೋನ್ಯತೆಯ ಜೀವಿತವನ್ನು ಮೌಲ್ಯಮಾಪನ ಮಾಡಿರಿ. ಬಲಗಳೇನು? ಬಲಹಿನತೆಗಳೇನು? ನಿಮ್ಮ ಸಭಾ ಅನ್ಯೋನ್ಯತೆಯ ಜೀವಿತವು ದೇವರ ನೀತಿವಂತ ತತ್ವಗಳನ್ನು ಉತ್ತಮವಾಗಿ ಸ್ವೀಕರಿಸಲು ನೀವು ಏನು ಮಾಡಬಹುದು? ಕೆಲವು ಅಂಶಗಳನ್ನು ಗಮನಿಸಿ.

ಅಸೈನ್‌ಮೆಂಟ್: ನಾಲಿಗೆಯ ಬಳಕೆ

1. ಈ ಅಧ್ಯಾಯನದಲ್ಲಿ ನೀವು ಕಲಿತ ಸಂಗತಿಗಳ ಆಧಾರದ ಮೇಲೆ ಯೌವನಸ್ಥರ ಗುಂಪಿಗಾಗಿ **"ನಾಲಿಗೆಯ ಬಳಕೆ"** ಬಗ್ಗೆ ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ.
2. ಈ ಪಾಠದಲ್ಲಿ ನೀವು ಕಲಿತದ್ದನ್ನು ಆಧರಿಸಿ, ಕ್ರೈಸ್ತ ಪತ್ರಿಕೆಗೆ ಒಂದು ಲೇಖನ ಬರೆಯಿರಿ.

ಪ್ರಸಂಗಿ

ಪ್ರಸಂಗಿ ಪುಸ್ತಕದ ಪರಿಚಯ

ಗ್ರಂಥಕರ್ತ

ಪ್ರಸಂಗಿ ಪುಸ್ತಕವು ತನ್ನ ಗ್ರಂಥಕರ್ತರ ಬಗ್ಗೆ ಏನನ್ನು ತಿಳಿಸಿಲ್ಲ. ಹಾಗಾಗಿ ಅದು ಅನಾಮದೇಯವಾಗಿದೆ. 1:1 ರ ಆಧರಿಸಿ ಸಂಪ್ರದಾಯವು ಈ ಪುಸ್ತಕವನ್ನು ಸೊಲೊಮೋನನು ಬರೆದನೆಂದು ಹೇಳುತ್ತದೆ. ಅನೇಕ ಸತ್ಯವೇದ ಪಂಡಿತರು ಇದನ್ನು ಒಪ್ಪುವುದಿಲ್ಲ.

ಇಬ್ರಿಯ ಪಠ್ಯದಲ್ಲಿ ಗ್ರಂಥಕರ್ತನು ತನ್ನನ್ನು ಖೊಹೆಲೆತ್ ಎಂದು ಕರೆದುಕೊಳ್ಳುತ್ತಾನೆ. ಇದರರ್ಥ **"ಗುಂಪುಗೂಡಿಸುವವನು"**. ಹೆಚ್ಚಿನ ಇಂಗ್ಲೀಷ್ ಭಾಷಾಂತರದಲ್ಲಿ ಬೋಧಕ ಅಥವಾ ಪ್ರಸಂಗಿ ಎಂದಿದೆ. ಕನ್ನಡ ಭಾಷಾಂತರಗಳಲ್ಲಿ **"ಪ್ರಸಂಗಿ"** (ಚರ್ಚಿಸುವವನು, ಸಾರುವವನು) ಮತ್ತು ಉಪದೇಶಕ (ಸಾರುವವನು) ಎಂದಿದೆ.

ಉದ್ದೇಶ ಮತ್ತು ವಿಷಯವಸ್ತು

ಉಳಿದ ಹಳೇ ಒಡಂಬಡಿಕೆಯ ಜ್ಞಾನ ಸಾಹಿತ್ಯದಂತೆ ಪ್ರಸಂಗಿಯ ಉದ್ದೇಶ ಸಹ ದೇವಜನರಿಗೆ ಜ್ಞಾನ ಮತ್ತು ವಿವೇಕವನ್ನು ಕೊಡುವುದು ಮತ್ತು ಅವರಿಗೆ ದೇವರ ಭಯವನ್ನು ಕಲಿಸುವುದಾಗಿದೆ. ಮಾತನಾಡುವವನ (ಗ್ರಂಥಕರ್ತ) ಶೀರ್ಷಿಕೆಯು ಆತನು ಒಂದು ರೀತಿಯ ಗುಂಪಿಗೆ ಮಾತಾಡುತ್ತಿರುವುದನ್ನು ಸೂಚಿಸುತ್ತದೆ. ರಾಜನ ಆಸ್ಥಾನದಲ್ಲಿನ ಜನರನ್ನು (ಉದಾ. ನೋಡಿ 8:1–9) ಅಲ್ಲದೇ ಸಾಮಾನ್ಯ ಜನರನ್ನೂ (ನೋಡಿ 11:6) ಸಂಬೋಧಿಸುತ್ತಾನೆ.

ಈ ಪುಸ್ತಕದ ವಿಷಯವಸ್ತು **"ಪಾಪಮಯ ಲೋಕದಲ್ಲಿ ದೇವರಿಗೆ ಭಯಪಡುವುದರ ಪ್ರಾಮುಖ್ಯತೆ"**ಯಾಗಿದೆ. ಇದು ಈ ಜಗತ್ತು (ಸೂರ್ಯನ ಕೆಳಗಿನ ಜೀವನ) ಗೊಂದಲಮಯ ಮತ್ತು ನಿರಾಶೆಗೊಳಿಸುವಂತಹದ್ದು ಆಗಿದೆಯೆಂದು ವರ್ಣಿಸುತ್ತದೆ.

ಈ ಪುಸ್ತಕದ ವಿಶಿಷ್ಟವಾದ ಲಕ್ಷಣವು ಸತ್ಯವೇದ ಪಂಡಿತರು ಇದನ್ನು ವಿಬಿನ್ನವಾದ ಮತ್ತು ತದ್ವಿರುದ್ಧವಾದ ರೀತಿಯಲ್ಲಿ ವ್ಯಾಖ್ಯಾನಿಸುವಂತೆ ಮಾಡಿದೆ.

ಹಳೇ ಒಡಂಬಡಿಕೆಯ ಜ್ಞಾನ ಸಂಪ್ರದಾಯದ ವಿಶಾಲವಾದ ವಾಹಿನಿಯೊಂದಿಗಿನ ಸಾಮರಸ್ಯದೊಂದಿಗೆ ಮಾತ್ರ ಈ ಇಡೀ ಪುಸ್ತಕ ಮತ್ತು ಇದರ ಸಂದೇಶವನ್ನು ಅರ್ಥೈಸಿಕೊಳ್ಳಲು ಸಾಧ್ಯವಿದೆ. ಇದರ ಹಿನ್ನಲೆಯು ಇಸ್ರಾಯೇಲ್ ಜನರೊಂದಿಗಿನ ದೇವರ ಒಡಂಬಡಿಕೆಯಾಗಿದೆ. ಮತ್ತು ಇದರ ತಿಳುವಳಿಕೆಯು ದೇವರ ಭಯವೇ ಜ್ಞಾನಕ್ಕೆ ಮೂಲವಾಗಿದೆ.

ಆದರೆ ಅದೇ ಸಮಯದಲ್ಲಿ ಬೋಧಕನು ತನ್ನ ಆಲೋಚನೆ ಮತ್ತು ಭಾವನೆ ವ್ಯಕ್ತಪಡಿಸುವುದರಲ್ಲಿ ವಿಶೇಷವಾಗಿ ಕ್ರಿಯಾತ್ಮಕವಾಗಿದ್ದಾನೆ. ಬೇರೆ ಜ್ಞಾನ ಬೋಧಕರು ಬೋಧಿಸಿದ್ದನ್ನು ಆತನು ಪುನರಾವರ್ತಿಸುವುದಿಲ್ಲ. ಆತನ ಆಳವಾದ ಗಮನ ಮತ್ತು ಬಲವಾದ ಭಾವನೆಗಳು ಓದುಗರನ್ನು ಆಳವಾದ ಯೋಚನೆ ಮತ್ತು ವಿಮರ್ಶೆಗೆ ನಡೆಸುತ್ತದೆ.

ಈ ಪುಸ್ತಕದಲ್ಲಿನ ಅನೇಕ ಕ್ಲಿಷ್ಟಕರತೆ ಅಥವಾ ವಿರೋಧಭಾಸಗಳನ್ನು ಆತನ ಜ್ಞಾನ ಬೋಧನೆಯ ಪ್ರಚೋದನಕಾರಿ ಶೈಲಿ ಮತ್ತು ವಿಧಾನದಿಂದ ವಿವರಿಸಬಹುದಾಗಿದೆ. ತನ್ನ ವಿಧ್ಯಾರ್ಥಿಗಳು ಪ್ರತ್ಯೇಕ ಸನ್ನಿವೇಶಗಳಲ್ಲಿ ಹೊಂದಬಹುದಾದ ನಿಯಮಗಳ ಬಗ್ಗೆ ಕಾರ್ಯವಹಿಸಬೇಕೆಂದು ಬೋಧಕನು ಅಪೇಕ್ಷಿಸುತ್ತಾನೆ. ಅಲ್ಲದೇ ಆತನು ಪಾಪಮಯವಾದ ಜಗತ್ತಿನಲ್ಲಿನ ಜೀವನದ ಸ್ವರೂಪಗಳ ಬಗ್ಗೆ ತೀವ್ರವಾದ ಅರಿವುಳ್ಳವನಾಗಿದ್ದಾನೆ (ಸೂರ್ಯನ ಕೆಳಗಿನ ಜೀವನ).

ಸಾಹಿತ್ಯದ ಲಕ್ಷಣಗಳು

ಬರವಣಿಗೆಯ ವಿಧವನ್ನು ನೋಡಿದರೆ ಪ್ರಸಂಗಿ ಪುಸ್ತಕವು ಜ್ಞಾನೋಕ್ತಿ ಪುಸ್ತಕಕ್ಕಿಂತ ವಿಭಿನ್ನವಾಗಿದೆ. ಜ್ಞಾನೋಕ್ತಿಯು ತನ್ನದೇ ಆದ ಶೈಲಿ ಮತ್ತು ಲಕ್ಷಣಗಳಿರುವ ಜ್ಞಾನೋಕ್ತಿಗಳ ಅನೇಕ ಸಂಗ್ರಹಗಳನ್ನು ಒಳಗೊಂಡಿದೆ. ಪ್ರಸಂಗಿ ಸಹ ಜ್ಞಾನೋಕ್ತಿಗಳೊಂದಿಗಿನ ಘಟಕಗಳನ್ನು ಹೊಂದಿದೆ, ಆದರೆ ಈ ಘಟಕಗಳು ಇಡೀ ಪುಸ್ತಕದುದ್ದಕ್ಕೂ ಸಾಗುವ

ಕಥಾವಸ್ತುವಿನ ಸಾಲಿನಿಂದ ಪರಸ್ಪರ ಹೊಂದಿಕೊಂಡಿವೆ. ಘಟಕಗಳು ಮೂರು ವರ್ಗಗಳಾಗಿ ವಿಂಗಡಿಸಲ್ಪಟ್ಟಿವೆ: ನೆನಪುಗಳು, ವಿಮರ್ಶೆಗಳು ಮತ್ತು ಭಾವನಾತ್ಮಕ ವಾಕ್ಯಭಾಗಗಳು. ಜೀವನದಲ್ಲಿ ಸುಖವನ್ನು ಕಂಡುಕೊಳ್ಳುವ ತನ್ನ ಅನ್ವೇಷಣೆಯ ಕಥೆಯನ್ನು ಹೇಳಲು ನಿರೂಪಕನು ಈ ರೀತಿಯ ಪಠ್ಯಗಳನ್ನು ಉಪಯೋಗಿಸುತ್ತಾನೆ. ತನ್ನ ಅನ್ವೇಷಣೆಯ ಸರಿಯಾದ ತೀರ್ಮಾನಕ್ಕೆ ತಾನು ಬಂದ ದೃಷ್ಟಿಕೋನದಿಂದ ಆತನು ತನ್ನ ಕಥೆಯನ್ನು ನಿರೂಪಿಸುತ್ತಾನೆ. *ದೇವರಿಗೆ ಭಯಪಟ್ಟು ಆತನ ಆಜ್ಞೆಗಳನ್ನು ಕೈಕೊಳ್ಳು; ಮನುಷ್ಯರೆಲ್ಲರ ಕರ್ತವ್ಯವು ಇದೇ* (12:13).

ಈ ಪುಸ್ತಕವು ಪರಸ್ಪರ ಮರುಕಳಿಸಲ್ಪಟ್ಟ ಪದ ಮತ್ತು ವಿಷಯವಸ್ತುಗಳಿಂದ ಕೂಡಿದೆ. **"ಆಕಾಶದ ಕೆಳಗೆ"** ಎಂಬ ಹೇಳಿಕೆಯು 30 ಕ್ಕಿಂತ ಹೆಚ್ಚುಬಾರಿ ಕಂಡುಬರುತ್ತದೆ. ವ್ಯರ್ಥ, ಉಸಿರು, ಗಾಳಿ, ಹೊಗೆ, ಹುಡುಕು, ಕಂಡುಕೊಳ್ಳು ಎಂಬ ಪದಗಳು ಪುಸ್ತಕದುದ್ದಕ್ಕೂ ಕಂಡುಬರುತ್ತವೆ ಮತ್ತು ಈ ಜಗತ್ತಿನಲ್ಲಿ ಏನಾಗುತ್ತಿದೆ ಎಂಬುದರ ಅರ್ಥವನ್ನು ತಿಳಿದುಕೊಳ್ಳುವುದು ನಮಗೆ ಎಷ್ಟು ಕಷ್ಟಕರವೆಂಬುದನ್ನು ಇವು ತೋರಿಸುತ್ತವೆ. ನಿಜವಾದ ಜಗತ್ತಿನಲ್ಲಿ ಓದುಗನು ಬೇರೂರುವಂತೆ ಬೋಧಕನು ಪದೇಪದೇ ತಿನ್ನುವ, ಕುಡಿಯುವ, ದುಡಿಯುವ, ಮಲಗುವ, ಮರಣ ಮತ್ತು ಪ್ರಕೃತಿಯ ಚಿತ್ರಣಗಳನ್ನು ಉಪಯೋಗಿಸುತ್ತಾನೆ.

ಪ್ರಸಂಗಿ ಪುಸ್ತಕವು ಸಾಹಿತ್ಯದ ಮೂರು ಪ್ರಬೇಧಗಳನ್ನು ಒಳಗೊಂಡಿದೆ: ಜ್ಞಾನೋಕ್ತಿಗಳು, ವೃತ್ತಾಂತಗಳು ಮತ್ತು ಪದ್ಯಗಳು. ಗ್ರಂಥಕರ್ತನು ಕೇವಲ ಸವಾಲನ್ನು ಎಸೆಯುವ ತತ್ವಜ್ಞಾನಿಯಲ್ಲದೇ ತನ್ನ ಚಿತ್ರಣ, ರೂಪಾಲಂಕಾರ ಮತ್ತು ಉಪಮೆಗಳನ್ನು ಕೌಶಲ್ಯದಿಂದ ನಡೆಸುವ ಒಬ್ಬ ಮಹಾನ್ ಕವಿ ಸಹ ಆಗಿದ್ದಾನೆ.

ಪ್ರಶ್ನೆಗಳು

ಈ ಪ್ರಶ್ನೆಗಳಿಗೆ ಉತ್ತರಗಳನ್ನು ಮೇಲಿನ ಪಠ್ಯದಲ್ಲಿ ಸುಲಭವಾಗಿ ಕಾಣಬಹುದು. ಆದರೆ ನೀವು ಅಲ್ಲಿ ನೋಡುವ ಮೊದಲು ಪ್ರಶ್ನೆಗಳಿಗೆ ಉತ್ತರಿಸಲು ಪ್ರಯತ್ನಿಸಿದರೆ ನೀವು ಇನ್ನಷ್ಟು ಕಲಿಯುವಿರಿ. ನೀವು ಸಾಧ್ಯವಾದಷ್ಟು ನಿಮ್ಮ ಸ್ವಂತ ಪದಗಳನ್ನು ಬಳಸಿದರೆ ಅದು ಉತ್ತಮವಾಗಿರುತ್ತದೆ.

1. ಪ್ರಸಂಗಿ ಪುಸ್ತಕದ ಲೇಖಕರು ಅನಾಮದೇಯರು ಎಂದು ನಾವು ಏಕೆ ಹೇಳುತ್ತೇವೆ?
2. ಖೊಹೆಲೆತ್ ಎಂಬ ಇಬ್ರಿಯ ಪದದ ಅರ್ಥವೇನು ಮತ್ತು ಅದನ್ನು ವಿವಿಧ ಸತ್ಯವೇದ ಆವೃತ್ತಿಗಳಲ್ಲಿ ಹೇಗೆ ಅನುವಾದಿಸಲಾಗಿದೆ?
3. ಪ್ರಸಂಗಿ ಪುಸ್ತಕದ ಮುಖ್ಯ ಉದ್ದೇಶ ಅಥವಾ ವಿಷಯವೇನು?
4. ಪ್ರಸಂಗಿ ಪುಸ್ತಕದ ಅನೇಕ ಸಂವಾಧಾತ್ಮಕ ವ್ಯಾಖ್ಯಾನುಗಳನ್ನು ನಾವು ಏಕೆ ಕಾಣುತ್ತೇವೆ?
5. ಪ್ರಸಂಗಿ ಪುಸ್ತಕದ ಮತ್ತು ಇತರ ಹಳೇ ಒಡಂಬಡಿಕೆಯ ಜ್ಞಾನದ ಪುಸ್ತಕಗಳ ನಡುವೆ ಯಾವುದೇ ಮೂಲಭೂತ ಆಧ್ಯಾತ್ಮಿಕ ವ್ಯತ್ಯಾಸವಿಲ್ಲ ಎಂಬುದನ್ನು ವಿವರಿಸಿ.
6. ಪ್ರಸಂಗಿಯ ಬೋಧಕನು ಇತರ ಜ್ಞಾನದ ಬೋಧಕರಿಗಿಂತ ಯಾವ ರೀತಿಯಲ್ಲಿ ಭಿನ್ನನಾಗಿದ್ದಾನೆ?
7. ಬೋಧಕನ ಬೋಧನಾ ಶೈಲಿಯು ಅವನ ಓದುಗರಿಗೆ ಹೇಗೆ ಸವಾಲು ಹಾಕುತ್ತದೆ?
8. ಪ್ರಸಂಗಿ ಮತ್ತು ಜ್ಞಾನೋಕ್ತಿಗಳ ನಡುವಿನ ಮುಖ್ಯ ರಚನಾತ್ಮಕ ವ್ಯತ್ಯಾಸವೇನು?
9. ಪ್ರಸಂಗಿ ಪುಸ್ತಕದಲ್ಲಿ ನಾವು ಯಾವ ರೀತಿಯ ಪಠ್ಯಗಳನ್ನು ಕಂಡುಕೊಳ್ಳುತ್ತೇವೆ?
10. ಪ್ರಸಂಗಿ ಪುಸ್ತಕದಲ್ಲಿ ನಾವು ಯಾವ ರೀತಿಯ ಸಾಹಿತ್ಯ ಪ್ರಕಾರಗಳನ್ನು ಕಂಡುಕೊಳ್ಳುತ್ತೇವೆ?
11. ಪ್ರಸಂಗಿ ಪುಸ್ತಕದ ಉದ್ದಕ್ಕೂ ಜಾಗರೂಕ ಓದುಗನು ಯಾವ ಒತ್ತಡವನ್ನು ಕಂಡುಕೊಳ್ಳಬಹುದು?
12. ಪ್ರಸಂಗಿ ಪುಸ್ತಕವನ್ನು ಯಾವ ಸಾಹಿತ್ಯಿಕ ವೈಶಿಷ್ಟ್ಯವು ಒಟ್ಟಿಗೆ ಹಿಡಿದಿಟ್ಟುಕೊಳ್ಳುತ್ತದೆ?
13. ಹೆಬೆಲ್ ಎಂಬ ಇಬ್ರಿಯ ಪದದ ಅರ್ಥವೇನು?
14. ಬೋಧಕನು ಯಾವ ರೀತಿಯಲ್ಲಿ ನುರಿತ ಕವಿಯಾಗಿದ್ದಾನೆ?

ಪ್ರಸಂಗಿಯ ಅಧ್ಯಯನ

ಈ ಪಠ್ಯ ಪುಸ್ತಕವು ಪ್ರಸಂಗಿಯನ್ನು ಎರಡು ಹಂತದಲ್ಲಿ ನೋಡುತ್ತದೆ. ಮೊದಲನೇಯದಾಗಿ, ಮೂರು ಅಧ್ಯಾಯಗಳಲ್ಲಿ ಇಡೀ ಪುಸ್ತಕದ ಹೊರನೋಟ. ಈ ಅಧ್ಯಾಯನಗಳಿಗೆ ಇಡೀ ಪ್ರಸಂಗಿ ಪುಸ್ತಕವನ್ನು ಓದಬೇಕಿದೆ:

1. ರಚನೆ ಮತ್ತು ಸಾಮಾನ್ಯ ವಿಷಯಾಂಶಗಳು
2. ಮುಖ್ಯ ಹೇಳಿಕೆಗಳು
3. ದೇವರು ಮತ್ತು ಮನುಷ್ಯ
4. ಆಲೋಚಿಸಿರಿ ಮತ್ತು ಚರ್ಚಿಸಿರಿ

ಎರಡನೇಯದಾಗಿ, ಏಳು ಅಧ್ಯಾಯಗಳಲ್ಲಿನ ಒಂದು ವಿವರವಾದ ಅಧ್ಯಯನ

1. ಅಧ್ಯಾಯ 1
2. ಅಧ್ಯಾಯ 2
3. ಅಧ್ಯಾಯ 3
4. ಅಧ್ಯಾಯ 5:8–6:12
5. ಅಧ್ಯಾಯ 9
6. ಅಧ್ಯಾಯ 11:7–12:8
7. ಅಧ್ಯಾಯ 12:9–12

ಉಲ್ಲೇಖ

ನಾನು ಪ್ರಸಂಗಿ (ಅಧ್ಯಯನಗಳು ಮತ್ತು ಉತ್ತರಗಳು) ಕುರಿತು ಘಟಕವನ್ನು ಸಿದ್ಧಪಡಿಸುವಾಗ ಈ ಕೆಳಗಿನ ಪುಸ್ತಕಗಳು ನನಗೆ ಉಪಯುಕ್ತವಾಗಿದ್ದವು):

ಇಎಸ್‌ವಿ ಅಧ್ಯಯನ ಸತ್ಯವೇದ

ಎನ್‌ಐವಿ ಅಧ್ಯಯನ ಸತ್ಯವೇದ

ಡೆರಿಕ್ ಕಿಡ್ನರ್ ಅವರಿಂದ **ಪ್ರಸಂಗಿಯ ಸಂದೇಶ** (ಬೈಬಲ್ ಸ್ಪೀಕ್ಸ್ ಟುಡೇ ಸೀರೀಸ್)

ಪೊಯೆಟರ್ನಾ (ಲೆನ್ನಾರ್ಟ್ ಬೋಸ್ಟ್ರೋಮ್ ಅವರಿಂದ ಪ್ರೆಡಿಕರೆನ್ ಎಂಬ ಅಧ್ಯಾಯ)

ಪ್ರಸಂಗಿಯ ರಚನೆ

ಪೀಠಿಕೆ

ಪ್ರಸಂಗಿಯು ರಚನೆ ಮಾಡಲು ಒಂದು ಕಷ್ಟಕರವಾದ ಪುಸ್ತಕವಾಗಿದೆ. ಈ ಕೆಳಗಿನ 3 ರೀತಿಯ ರಚನೆಗಳಿವೆ. ಅವನ್ನು **ಎನ್ಐವಿ ಅಧ್ಯಯನ ಸತ್ಯವೇದ, ಇಎಸ್‌ವಿ ಅಧ್ಯಯ ಸತ್ಯವೇದ** ಮತ್ತು ಲೆನಾರ್ಟ್ ಬೋಸ್ಟ್ರೊಮ್‌ರಿಂದ ಪಡೆಯಲಾಗಿದೆ. ನಾನು ಡೆರೆಕ್ ಕಿಡ್ನರ್ ಅವರ ಪ್ರಸ್ತಾಪವನ್ನು ಸೇರಿಸಿಲ್ಲ, ಅದು ಈ ಮೂರಕ್ಕಿಂತಲೂ ಹೆಚ್ಚು ವಿವರ ಮತ್ತು ಸಂಕೀರ್ಣವಾಗಿದೆ.

ನಮ್ಮ ಸತ್ಯವೇದಗಳಲ್ಲಿನ ಅಧ್ಯಾಯದ ವಿಭಾಗಗಳ ಈ ರಚನೆಗಳೊಂದಿಗೆ ಕೇವಲ ಅಂಶತಃ ಒಪ್ಪುತ್ತವೆ ಮತ್ತು ಇದು ಪ್ರಸಂಗಿ ಪುಸ್ತಕದ ಸ್ಪಷ್ಟವಾದ ರಚನೆಯನ್ನು ಕಾಣುವುದು ಎಷ್ಟು ಕಷ್ಟಕರ ಎಂಬುದನ್ನು ತೋರಿಸುತ್ತದೆ. ಕೆಳಗಿನ ಪ್ರಶ್ನೆಗಳು ಪುಸ್ತಕದ ರಚನೆಯನ್ನು ಹತ್ತಿರದಿಂದ ನೋಡಲು ನಿಮಗೆ ಸಹಾಯ ಮಾಡುತ್ತದೆ. ರಚನೆಯ ಕುರಿತಾದ ಪ್ರಶ್ನೆಗಳಿಗೆ ನೀವು ಉತ್ತರಿಸುವಾಗ, ಪ್ರಸಂಗಿಯ ಸಾಮಾನ್ಯ ವಿಷಯಗಳ ಬಗ್ಗೆಯೂ ನಿಮಗೆ ಪರಿಚಯವಾಗುತ್ತದೆ.

ಕೈಯಾಸ್ಟಿಕ್ (* ರೂಪದ) ರಚನೆ

ಸ್ವೀಡನ್ನಿನ ಒಬ್ಬ ಹಳೇ ಒಡಂಬಡಿಕೆಯ ಪಂಡಿತರಾದ ಲೆನಾರ್ಟ್ ಬೋಸ್ಟ್ರೊಮ್‌ರವರು ಪ್ರಸಂಗಿಯ * ರೂಪದ ರಚನೆಯನ್ನು ಪ್ರಸ್ತುತಪಡಿಸುತ್ತಾರೆ. * ಎಂಬ ತಾಂತ್ರಿಕ ರೂಪದ ಈ ರಚನೆಯು ಈ ರೀತಿ ತೋರುತ್ತದೆ:

- ಪೀಠಿಕೆಯ ತಲೆಬರಹವು ಬೋಧಕನನ್ನು ಪರಿಚಯಿಸುವುದು (1:1)
    - ಜೀವನಕ್ಕೆ ಬೋಧಕನ ಅನ್ವೇಷಣೆ (1:12–6:9)
        - ಜೀವನದ ಬಗ್ಗೆ ಬೋಧಕನ ತೀರ್ಮಾನ (6:10–11:6)
    - ಜೀವನದ ಕಾಲಗಳ ಬಗೆಗಿನ ಪದ್ಯ (11:7–12:8)
- ಬೋಧಕನ ಕುರಿತಾದ ಕಡೇಮಾತುಗಳು ಮತ್ತು ಆತನ ಅನ್ವೇಷಣೆಯ ಮುಕ್ತಾಯ (12:9–14)

ಒಂದು ಸಂಕ್ಷಿಪ್ತವಾದ ವಿಷಯವಸ್ತು ಆಧಾರಿತ ರಚನೆ

ಎನ್ಐವಿ ಅಧ್ಯಯನ ಸತ್ಯವೇದವು ಪ್ರಸಂಗಿಯ ಒಂದು ಸಂಕ್ಷಿಪ್ತವಾದ ವಿಷಯವಸ್ತು ಆಧರಿತ ರಚನೆಯನ್ನು ತಿಳಿಸುತ್ತದೆ.

1. ಗ್ರಂಥಕರ್ತ (1:1)
2. ವಿಷಯವಸ್ತು: ದೇವರನ್ನು ಹೊರತು ಭೂಮಿಯ ಮೇಲೆ ಮನುಷ್ಯನ ಶ್ರಮವೆಲ್ಲಾ ವ್ಯರ್ಥ (1:2)
3. ಪೀಠಿಕೆ: ಸಂತೋಷವನ್ನು ಗಳಿಸುವುದಕ್ಕಾಗಿ ಮಾಡುವ ಕೆಲಸದ ನಿಷ್ಪ್ರಯೋಜಕತೆ (1:3–11)
4. ಉಪದೇಶ (ಸಂಭಾಷಣೆ) ಭಾಗ 1: ಇದರ ನಿಗೂಢತೆ ಮತ್ತು ವ್ಯರ್ಥತೆಯ ಹೊರತಾಗಿ ಸಹ ಜೀವಿತವನ್ನು ದೇವರ ಅನುಗ್ರಹ ಎಂಬುದಾಗಿ ಋಷಿಪಡುವುದು (1:12–11:6)
5. ಉಪದೇಶ (ಸಂಭಾಷಣೆ) ಭಾಗ 2: ವೃದ್ಧಾಪ್ಯ ಮತ್ತು ಮರಣ ಬರುವುದರೊಳಗೆ ಮನುಷ್ಯನು ದೇವರು ನ್ಯಾಯತೀರಿಸುತ್ತಾನೆ ಎಂಬುದನ್ನು ನೆನಪಿಸಿಕೊಂಡು ತನ್ನ ಯೌವನದಲ್ಲಿ ಆನಂದಿಸಬೇಕು (11:7–12:7)
6. ವಿಷಯ ವಸ್ತುವಿನ ಪುನರಾವರ್ತನೆ (12:8)
7. ಮುಕ್ತಾಯ: ಗೌರವಯುತವಾಗಿ ದೇವರಲ್ಲಿ ಭರವಸವಿಡುವುದು ಮತ್ತು ಆತನಿಗೆ ವಿಧೇಯರಾಗುವುದು (12:9–14)

ಒಂದು ಸವಿವರವಾದ ವಿಷಯವಸ್ತು ಆಧಾರಿತ ರಚನೆ

ಇಎಸ್‌ವಿ ಅಧ್ಯಯನ ಸತ್ಯವೇದವು ಪ್ರಸಂಗಿಯ ಒಂದು ಸವಿವರವಾದ ವಿಷಯವಸ್ತು ಆಧಾರಿತ ರಚನೆಯನ್ನು ಈ ರೀತಿ ಮಾಡುತ್ತದೆ.

1. ಪೀಠಿಕೆ ಮತ್ತು ವಿಷಯವಸ್ತು (1:1–3)
2. ವ್ಯರ್ಥಗಳ ಮೊದಲ ಪಟ್ಟಿ (1:4–2:26)
   ಅ. ಪ್ರಾಕೃತಿಕ ಜಗತ್ತಿನ ವ್ಯರ್ಥತೆ (1:4–11)
   ಆ. ಜ್ಞಾನ ಮತ್ತು ವಿವೇಕಗಳ ವ್ಯರ್ಥತೆ (1:12–18)
   ಇ. ಸುಖ, ಸಂಪತ್ತು ಮತ್ತು ಸಾಧನೆಗಳ ವ್ಯರ್ಥತೆ (2:1–11)
   ಈ. ಜ್ಞಾನದ ವ್ಯರ್ಥತೆ (2:12–17)
   ಉ. ಪ್ರಯಾಸದ ವ್ಯರ್ಥತೆ (2:18–26)
3. ಪದ್ಯ: ಪ್ರತಿಯೊಂದು ಕಾರ್ಯಕ್ಕೂ ಒಂದು ಸಮಯವಿದೆ. (3:1–8)
4. ಸಾರ್ವಭೌಮನಾದ ದೇವರಿಗೆ ಭಯಪಡು (3:9–15)
5. ವ್ಯರ್ಥಗಳ ಎರಡನೇ ಪಟ್ಟಿ (3:16–4:16)
   ಅ. ನೈತಿಕ ಜೀವನದ ವ್ಯರ್ಥತೆ (3:16–4:3)
   ಆ. ಶ್ರಮದ ವ್ಯರ್ಥತೆ (4:4–12)
   ಇ. ಜ್ಞಾನದ ವ್ಯರ್ಥತೆ (4:13–16)
6 . ಪರಿಶುದ್ಧನೂ ಮತ್ತು ನೀತಿವಂತನೂ ಆದ ದೇವರಿಗೆ ಭಯಪಡು (5:1–7)
7 . ಆಕಾಶದ ಕೆಳಗಿನ ಜೀವನ (5:8–7:24)
   ಅ. ಅನ್ಯಾಯ (5:8–9)
   ಆ. ಅತ್ಯಾಶೆ ಮತ್ತು ಸಂತುಷ್ಟತೆ (5:10–6:9)
   ಇ. ಸೂರ್ಯನ ಕೆಳಗೆ ಜೀವಿಸಲು ಬೇಕಾದ ಜ್ಞಾನ (6:10–7:24)
8. ಸಮಸ್ಯೆಯ ಕೇಂದ್ರ: ಪಾಪ (7:25–29)
9. ಸೂರ್ಯನ ಕೆಳಗಿನ ಜೀವನ (8:1–12:7)
   ಅ. ಮುಖ್ಯ ಅಧಿಕಾರಗಳೊಂದಿಗಿನ ವ್ಯವಹಾರದಲ್ಲಿ ಜ್ಞಾನ (8:1–9)
   ಆ. ದೇವರಿಗೆ ಭಯಪಡುವುದರ ಪ್ರಾಮುಖ್ಯತೆ (8:10–13)
   ಇ. ಮನುಷ್ಯನ ತಿಳುವಳಿಕೆಯ ಇತಿಮಿತಿ (8:14–17)
   ಈ. ಜೀವನದ ಅನಿರೀಕ್ಷಿತತೆ ಮತ್ತು ಮರಣದ ನಿಶ್ಚಿತತೆ (9:1–6)
   ಉ. ಪರಿಸ್ಥಿತಿಗಳು ಅನುಮತಿಸಿದಂತೆ ಸಂತೋಷವನ್ನು ಕಂಡುಕೊಳ್ಳುವುದು (9:1–6)
   ಊ.ಜೀವನದ ಅನಿರೀಕ್ಷಿತತೆ (9:11–12)
   ಎ. ಜ್ಞಾನ ಮತ್ತು ಮೂರ್ಖತನದ ಮಾರ್ಗಗಳು (9:13–11:6)
      - ಜ್ಞಾನದ ಬಲ (9:13–18)
      - ಜ್ಞಾನ ಮತ್ತು ಮೂರ್ಖತನದ ಕುರಿತಾದ ಜ್ಞಾನೋಕ್ತಿಗಳು (10:1–20)
      - ಜೀವನದ ಅನಿರೀಕ್ಷಿತತೆಯ ಬೆಳಕಿನಡಿಯಲ್ಲಿನ ಜ್ಞಾನಯುತ ಆಚಾರಗಳು (11:1–6)

ಏ. ವೃದ್ಧಾಪ್ಯ ಮತ್ತು ಮರ್ತ್ಯಜೀವನದ ವ್ಯರ್ಥತೆ (11:7–12:7)

10. ಅಂತಿಮ ಮುಕ್ತಾಯ ಮತ್ತು ಹಿನ್ನುಡಿ (12:8–14)

ಪ್ರಶ್ನೆಗಳು

1. ಲೆನಾರ್ಟ್ ಬೊಸ್ಟ್ರೋಮ್ ಅವರ ಪ್ರಸಂಗಿ ಗ್ರಂಥದ ರಚನೆಯನ್ನು ಅಭ್ಯಾಸಿಸಿ ಮತ್ತು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ:

   ಅ. ಈ ಪುಸ್ತಕದ ಎರಡು ಕೇಂದ್ರ ವಿಭಾಗಗಳು ಯಾವುವು?

   ಆ. ಈ ಎರಡು ಕೇಂದ್ರ ವಿಭಾಗಗಳ ಮೊದಲ ಮತ್ತು ನಂತರ ಏನು ಬರುತ್ತದೆ?

   ಇ. ಮೊದಲ ಮತ್ತು ಕೊನೆಯದು ಯಾವುದು?

2. ಎನ್ಐವಿ ಅಧ್ಯಯನ ಸತ್ಯವೇದದ ಪ್ರಸಂಗಿಯ ಒಂದು ರಚನೆಯನ್ನು ಅಭ್ಯಾಸಿಸಿ ಮತ್ತು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ:

   ಅ. ಪುಸ್ತಕದ ವಿಷಯವನ್ನು ಹೇಗೆ ರೂಪಿಸಲಾಗಿದೆ?

   ಆ. ಮೊದಲನೇಯ ಉಪದೇಶವು ಯಾವುದರ ಕುರಿತಾಗಿದೆ?

   ಇ. ಎರಡನೇಯ ಉಪದೇಶವು ಯಾವುದರ ಕುರಿತಾಗಿದೆ?

   ಈ. ಪುಸ್ತಕದ ಮುಕ್ತಾಯವನ್ನು ಹೇಗೆ ರೂಪಿಸಲಾಗಿದೆ?

3. ಇಎಸ್‌ವಿ ಅಧ್ಯಯನ ಸತ್ಯವೇದದ ಪ್ರಸಂಗಿ ರಚನೆಯನ್ನು ಅಭ್ಯಾಸಿಸಿ ಮತ್ತು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ:

   ಅ. ವ್ಯರ್ಥಗಳ ಮೊದಲ ಪಟ್ಟಿಯಲ್ಲಿ ಮನುಷ್ಯನ ಅಸ್ತಿತ್ವದ ಯಾವ ಕ್ಷೇತ್ರಗಳು ಒಳಗೊಂಡಿವೆ?

   ಆ. ವ್ಯರ್ಥಗಳ ಎರಡನೇ ಪಟ್ಟಿಯಲ್ಲಿ ಮನುಷ್ಯನ ಅಸ್ತಿತ್ವದ ಯಾವ ಕ್ಷೇತ್ರಗಳು ಒಳಗೊಂಡಿವೆ?

   ಇ. ಪ್ರಸಂಗಿಯ ಹೆಚ್ಚಿನ ವಾಕ್ಯಭಾಗಗಳು ಸೂರ್ಯನ ಕೆಳಗಿನ ಜೀವಿತವನ್ನು ಸಂಶೋಧಿಸುವುದಾಗಿದೆ. ಸಂಖ್ಯೆ 7 ಮತ್ತು 9 ಅನ್ನು ನೋಡಿರಿ. ಅಲ್ಲಿ ಮನುಷ್ಯ ಜೀವನದ ಯಾವ ಅಂಶಗಳನ್ನು ತಿಳಿಸಲಾಗಿದೆ?

   ಈ. ಸಮಸ್ಯೆಯ ಮೂಲತತ್ವ ಏನು? ಸಂಖ್ಯೆ 4 ಅಥವಾ 6 ರಲ್ಲಿ ಈ ಸಮಸ್ಯೆಗೆ ಯಾವ ಪರಿಹಾರವನ್ನು ನಾವು ಕಾಣುತ್ತೇವೆ?

ಪ್ರಸಂಗಿ ಪುಸ್ತಕದಲ್ಲಿನ ಮುಖ್ಯ ಹೇಳಿಕೆಗಳು

ಪೀಠಿಕೆ

ಈ ಅಧ್ಯಾಯದಲ್ಲಿ ನಾವು ಪ್ರಸಂಗಿಯಲ್ಲಿ ಕಂಡುಬರುವ ಮೂರು ಮುಖ್ಯ ಹೇಳಿಕೆಗಳನ್ನು ಸಂಕ್ಷಿಪ್ತವಾಗಿ ನಾವು ನೋಡುವವರಾಗಿದ್ದೇವೆ. ಅವೆಂದರೆ, "ವ್ಯರ್ಥ/ ಉಸಿರು/ ಅಪಿ ಅಥವಾ ಹಬೆ", "ಗಾಳಿಯನ್ನು ಹಿಂದಟ್ಟುವ ಹಾಗೆ" ಮತ್ತು "ಆಕಾಶದ ಕೆಳಗೆ".

ಹೇಬೆಲ್ ಎಂಬ ಇಬ್ರಿಯ ಪದ

ಖಂಡಿತವಾಗಿ ಹೇಬೆಲ್ ಎಂಬ ಇಬ್ರಿಯ ಪದವು ಪ್ರಸಂಗಿಯಲ್ಲಿನ ಒಂದು ಮುಖ್ಯ ಪದವಾಗಿದೆ. ಈ ಪದವು ಹಳೇ ಒಡಂಬಡಿಕೆಯ ಬೇರೆ ಪುಸ್ತಕಗಳಲ್ಲಿ ಅಷ್ಟು ಸಾಮಾನ್ಯವಾಗಿರದಿದ್ದರೂ ಇದನ್ನು ಪ್ರಸಂಗಿಯಲಿ 38 ಕ್ಕಿಂತಲೂ ಹೆಚ್ಚುಬಾರಿ ಕಾಣಬಹುದು. ಇದು ಪ್ರಾರಂಭದ ವಾಕ್ಯಭಾಗದಲ್ಲಿ ಕಂಡುಬಂದಿದ್ದು ಇದೇ ಪುಸ್ತಕದ ಗುರಿಯೆಂಬಂತೆ ತೋರಿಬರುತ್ತದೆ (1:2). "ವ್ಯರ್ಥವೇ ವ್ಯರ್ಥ ಸಮಸ್ತವೂ ವ್ಯರ್ಥ" ಎಂದು ಪ್ರಸಂಗಿಯು ಹೇಳುತ್ತಾನೆ. ಈ ಗುರಿಯು ಪುಸ್ತಕದ ಕೊನೇ ಅಧ್ಯಾಯದಲ್ಲಿ ಸಹ ಮರುಕಳಿಸಿದೆ. (12:8). ಹೇಬೆಲ್ ಎಂಬ ಪದವು ಸತ್ಯವೇದ ಭಾಷಾಂತರಕಾರರಿಗೆ ಅನೇಕ ಅಡೆತಡೆಗಳನ್ನು ತಂದೊಡ್ಡಿದೆ. ಕನ್ನಡದ ಮೂರು ಭಾಷಾಂತರಗಳು ಸಹ "ವ್ಯರ್ಥ" ಎಂಬ ಪದವನ್ನು ಆರಿಸಿಕೊಂಡಿವೆ (ಇದರರ್ಥ ಅಪ್ರಯೋಜಕ, ನಿರರ್ಥಕ). ಹೆಚ್ಚಿನ ಆಧುನಿಕ ಇಂಗ್ಲೀಷ್ ಸತ್ಯವೇದಗಳು "ನಿರರ್ಥಕ, ಅರ್ಥವಿಲ್ಲದ್ದು, ಅನಗತ್ಯ, ಅಪ್ರಯೋಜಕ, ನಿಷ್ಫಲ" ಎಂಬ ಪದ ಬಳಸಿವೆ.

ಆದರೆ ಈ ಇಬ್ರಿಯ ಪದದ ಅಕ್ಷರಶಃ ಅರ್ಥವು "ಉಸಿರು, ಹಬೆ" ಎಂಬುದಾಗಿದೆ. ಇದರರ್ಥ ಏನೋ ಸಂಕ್ಷಿಪ್ತವಾದದ್ದು, ಕ್ಷಣಿಕವಾದದ್ದು, ಅಶಾಶ್ವತ, ಬೇಗ ಮರೆಯಾಗುವಂಥದ್ದು, ಕಳೆಗುಂದುವುದು, ಹಾದುಹೋಗುವಂಥದ್ದು. ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ ಉಸಿರು, ಹಬೆ ಎಂದರೆ ಹಿಡಿಯಲು ಆಗದಂಥದ್ದು.

ಮನುಷ್ಯನ ಈ ಭೂಲೋಕದಲ್ಲಿನ ಸುಖ ಮತ್ತು ಸಂತೋಷದ ಜೀವನಕ್ಕೆ ಹೋಲಿಸುವಾಗ ಹೇಬೆಲ್ ಪದವು ಪೌಲನ "ಈ ಪ್ರಪಂಚದ ತೋರಿಕೆಯು ಗತಿಸಿ ಹೋಗುತ್ತಾ ಅದೆ" (1 ಕೊರಿಥ. 7:31) ಎಂಬ ಮಾತನ್ನು ನಮಗೆ ನೆನಪಿಸುತ್ತದೆ. ಈ ಲೋಕದ ತೋರಿಕೆಯೆಂದರೆ ಪಾಪದ ನಂತರ ಲೋಕವು ವಿಕಸನಗೊಂಡಿರುವುದನ್ನು ಸೂಚಿಸುತ್ತದೆ. ಇದು ಹತಾಶೆ, ಕೋಪ ಮತ್ತು ದುಃಖದ ಲೋಕವಾಗಿದೆ.

ಬೋಧಕನು ಈ ಲೋಕವನ್ನೇ ಶೋಧಿಸಲು ತಿಳುಕೊಳ್ಳಲು ಪ್ರಯತ್ನಿಸುತ್ತಿದ್ದಾನೆ. ಆದರೆ ಇದು ಅರ್ಥೈಸಿಕೊಳ್ಳಲಾಗದ್ದು ಎಂಬ ತೀರ್ಮಾನಕ್ಕೆ ಬರುತ್ತಾನೆ. ಲೋಕದಲ್ಲಿ ನಡೆಯುವ ಕೆಲಸಗಳನ್ನೆಲ್ಲಾ ನೋಡಿದ್ದೇನೆ, ಆಹಾ, ಗಾಳಿಯನ್ನು ಹಿಂದಟ್ಟಿದ ಹಾಗೆ ಸಮಸ್ತವೂ ವ್ಯರ್ಥ (1:14). ಇದನ್ನು ಕಂಡುಹಿಡಿಯುವುದು ಅಸಾಧ್ಯಾ ಇದು ವ್ಯರ್ಥವಾಗಿದೆ (ಹೇಬೆಲ್)

ಗಾಳಿಯನ್ನು ಹಿಂದಟ್ಟಿದ ಹಾಗೆ

"ಗಾಳಿಯನ್ನು ಹಿಂದಟ್ಟಿದ ಹಾಗೆ" ಎಂಬ ರೂಪಾಲಂಕಾರವು ಪ್ರಸಂಗಿ ಪುಸ್ತಕದ ಮೊದಲ ಭಾಗದಲ್ಲಿ 9 ಬಾರಿ ಕಂಡುಬರುತ್ತದೆ (ನೋಡಿ 1:14, 17, 2:11, 17, 26, 4:4, 6, 16, 6:9). ಹೆಬೆಲ್ (ವ್ಯರ್ಥ) ಕ್ಕೆ ಪರ್ಯಾಯ ಅಥವಾ ಸಮಾನಾರ್ಥವಾಗಿ ಇದನ್ನು ಬಳಸಲಾಗಿದೆ. ಈ ರೂಪಾಲಂಕಾರವು ಏನೋ ನಿಷ್ಫಲ ಅಥವಾ ಅಸಾಧ್ಯವಾದುದ್ದನ್ನು ಮಾಡಲು ಪ್ರಯತ್ನಿಸುವುದು ಎಂಬುದನ್ನು ತಿಳಿಸುತ್ತದೆ. ನಿಜವಾಗಿ ಒಬ್ಬ ವ್ಯಕ್ತಿಯು ಗಾಳಿಯನ್ನು ಹಿಡಿಯಲು ಸಾಧ್ಯವಿಲ್ಲ, ಹಾಗಾಗಿ ಆ ರೀತಿ ಮಾಡುವುದು ಸಮಯ ಮತ್ತು ಶ್ರಮವನ್ನು ವ್ಯರ್ಥಮಾಡುವಂಥದ್ದಾಗಿದೆ. ಆದರೆ ಗಾಳಿ ಸಹ ಬೇಗ ಮರೆಯಾಗುವಂಥದ್ದಾಗಿದೆ ಮತ್ತು ಬಂದು ಹೋಗುವಂಥದ್ದಾಗಿದೆ.

ಆಕಾಶದ ಕೆಳಗೆ (ಸೂರ್ಯನ ಕೆಳಗೆ)

ಪ್ರಸ್ತುತ ಲೋಕದಲ್ಲಿನ ಮನುಷ್ಯನ ಜೀವಿತದ ಬಗ್ಗೆ ಪ್ರಸಂಗಿ ಪುಸ್ತಕದಲ್ಲಿ 30 ಕ್ಕಿಂತ ಹೆಚ್ಚುಬಾರಿ ಉಪಯೋಗಿಸಲಾಗಿದೆ. ಎರಡು ಸಮಾನವಾದ ರೂಪಾಲಂಕಾರಿಕ ಹೇಳಿಕೆಗಳಿವೆ. ಅವೆಂದರೆ, "ಸೂರ್ಯನ ಕೆಳಗೆ" (ಉದಾ: ನೋಡಿ 1:3, 9, 14,

2:1, 17–22, 3:16, 4:1, 3, 7, 15, 5:13, 6:1, 8:9, 15, 17, 9:3, 6, 9, 11, 13, 10:5) ಮತ್ತು **"ಆಕಾಶದ ಕೆಳಗೆ"** (ನೋಡಿ 1:13, 2:3, 3:1). ಈ ಎರಡು ಹೇಳಿಕೆಗಳು ಪ್ರಾಥಮಿಕವಾಗಿ ಈ ಲೋಕ ಮತ್ತು ಮನುಷ್ಯರು ಪ್ರಸ್ತುತ ಈ ಪಾಪಮಯ ಲೋಕದಲ್ಲಿನ ಅವರ ಸ್ಥಿತಿಗತಿಗಳನ್ನು ಸೂಚಿಸುತ್ತವೆ.

ಗಮನಿಸಿ, 8:15 ಮತ್ತು 9:9 ರಲ್ಲಿ **"ಸೂರ್ಯನ ಕೆಳಗೆ"** ಎಂಬ ಸಂದರ್ಭವನ್ನು **"ಭೂಮಿ ಮೇಲೆ ಒಬ್ಬ ವ್ಯಕ್ತಿಯ ಜೀವಿಸುವ ಸಮಯ"** ಎಂಬುದಾಗಿ ಅರ್ಥೈಸಿಕೊಳ್ಳಬೇಕು.

ಪ್ರಶ್ನೆಗಳು

1. ಇಬ್ರಿಯದಲ್ಲಿ ಹೆಬೆಲ್‌ನ ಅರ್ಥವೇನು? ನಮ್ಮ ಕನ್ನಡ ಮತ್ತು ಇಂಗ್ಲೀಷ್ ಸತ್ಯವೇದಗಳಲ್ಲಿ ಇದು ಹೇಗೆ ಭಾಷಾಂತರಿಸಲ್ಪಟ್ಟಿದೆ?
2. ಹೆಬೆಲ್‌ಗೆ ಯಾವ ರೂಪಾಲಂಕಾರವು ಸಮಾನಾರ್ಥಕವಾಗಿ ಬಳಸಲ್ಪಟ್ಟಿದೆ? ಈ ರೂಪಾಲಂಕಾರವನ್ನು ನೀವು ಹೇಗೆ ಅರ್ಥಮಾಡಿಕೊಳ್ಳುತ್ತೀರಿ?
3. **"ಸೂರ್ಯನ ಕೆಳಗೆ"** ಎಂಬ ಹೇಳಿಕೆಯು ಕನ್ನಡ ಸತ್ಯವೇದಗಳಲ್ಲಿ ಹೇಗೆ ಭಾಷಾಂತರಿಸಲ್ಪಟ್ಟಿದೆ? 1:3, 9 ಮತ್ತು 14 ಅನ್ನು ಕನ್ನಡದ ವಿಭಿನ್ನ ಭಾಷಾಂತರಗಳಲ್ಲಿ ನೋಡಿರಿ. ಕನ್ನಡದ ಯಾವ ಸತ್ಯವೇದವು ಇಬ್ರಿಯ ಹೇಳಿಕೆ ಅಥವಾ ಭಾಗವನ್ನು ಭಾಷಾಂತರಿಸಿದೆ? ಮತ್ತು ಯಾವ ಕನ್ನಡ ಸತ್ಯವೇದವು ಇಬ್ರಿಯ ಹೇಳಿಕೆ ಅಥವಾ ಭಾಗವನ್ನು ವ್ಯಾಖ್ಯಾನಿಸಿದೆ?
4. ಪ್ರಸಂಗಿಯಲ್ಲಿ **"ಸೂರ್ಯನ ಕೆಳಗೆ"** ಎನ್ನುವ ಹೇಳಿಕೆಗೆ ಸಮಾನವಾದ ಹೇಳಿಕೆಯನ್ನು ಸಹ ನಾವು ಕಾಣುತ್ತೇವೆ, ಅದು ಯಾವುದು?
5. **"ಸೂರ್ಯನ ಕೆಳಗೆ"** ಮತ್ತು **"ಆಕಾಶದ ಕೆಳಗೆ"** ಎನ್ನುವ ಇಬ್ರಿಯ ಹೇಳಿಕೆಯನ್ನು ಹೇಗೆ ಅರ್ಥೈಸಿಕೊಳ್ಳಬೇಕು?

ಪ್ರಸಂಗಿಯಲ್ಲಿ ದೇವರು ಮತ್ತು ಮನುಷ್ಯ

ಪೀಠಿಕೆ

ಪಾಪದ ದುರಂತಮಯ ಪರಿಣಾಮದ ಅಡಿಯಲ್ಲಿ ಈ ಪ್ರಸಕ್ತ ಜಗತ್ತು ಬಾಧೆಪಡುತ್ತಿದೆ ಎಂಬುದರ ಅರಿವನ್ನು ಬೋಧಕನು ಹೊಂದಿರುತ್ತಾನೆ. ಮನುಷ್ಯನ ಅಸ್ತಿತ್ವ ಸೇರಿ, ಇಡೀ ಸೃಷ್ಟಿಯು ಪಾಪದ ನಿಯಮಕ್ಕೆ, ಬೀಳುವಿಕೆಯ ನಿಯಮಕ್ಕೆ ಅಧೀನವಾಗಿದೆ ಮತ್ತು ಹೇಬೆಲ್ (ವ್ಯರ್ಥ, ಹಬೆ)ದಿಂದ ನಿರೂಪಿಸಲ್ಪಟ್ಟಿದೆ. ವ್ಯರ್ಥತ್ವಕ್ಕೆ ಒಳಗಾದ ಜಗತ್ತು, ನರಳುತ್ತಾ ಪ್ರಸವವೇದನೆ ಪಡುತ್ತಾ ನಾಶದ ವಶದಿಂದ ಬಿಡುಗಡೆಯಾಗಲು ಲವಲವಿಕೆಯಿಂದ ನೀರಿಕ್ಷಿಸುತ್ತದೆಂಬ ಸೃಷ್ಟಿಯ ಕುರಿತಾದ ಪೌಲನ ವರ್ಣನೆಯು ನಮಗೆ ನೆನಪಾಗುತ್ತದೆ (ರೋಮಾ. 8:20–22). ಪಾಪ ಅಥವಾ ಬೀಳುವಿಕೆಯಿಂದ ಮನುಷ್ಯರು ಮೊದಲು ತಮಗಿದ್ದ ನೀತಿವಂತಿಕೆಯನ್ನು ಕಳೆದುಕೊಂಡರು. "ದೇವರು ಮನುಷ್ಯರನ್ನು ಸತ್ಯವಂತರನ್ನಾಗಿ ಸೃಷ್ಟಿಸಿದನು, ಅವರಾದರೋ ಬಹು ಯುಕ್ತಿಗಳನ್ನು ಕಲ್ಪಿಸಿಕೊಂಡಿದ್ದಾರೆ; ಇದನ್ನು ಮಾತ್ರ ಕಂಡೆನು" (7:29). ಪರಿಣಾಮವಾಗಿ "ಪಾಪಮಾಡದೆ ಧರ್ಮವನ್ನೇ ಆಚರಿಸುತ್ತಿರುವ ಸತ್ಪುರುಷನು ಲೋಕದಲ್ಲಿ ಇಲ್ಲವೇ ಇಲ್ಲ" 7:20) ಮತ್ತು ಪಾಪವು ಮರಣಕ್ಕೆ ನಡೆಸುವದು, ಮತ್ತು ಮರಣವು ಎಲ್ಲಾ ಮನುಷ್ಯರ ಗತಿಯಾಗಿದೆ (7:2).

ದೇವರು

ಪ್ರಸಂಗಿ ಪುಸ್ತಕವು ದೇವರನ್ನು ಆತನ ಒಡಂಬಡಿಕೆ ಮತ್ತು ವೈಯಕ್ತಿಕ ಹೆಸರಾದ "ಯೆಹೋವನು/ಕರ್ತನು" ಎಂಬುದಾಗಿ ಎಲ್ಲಿಯೂ ಕರೆಯುವುದಿಲ್ಲ. ಭಯದೊಂದಿಗೂ ಸಹ ಆ ಹೆಸರನ್ನು ಸೇರಿಸಿಲ್ಲ ("ಯೆಹೋವನ ಭಯ" ಮತ್ತು "ಯೆಹೋವನಿಗೆ ಭಯಪಡುವುದು"): ಅವನು ದೇವರಿಗೆ ಹೆದರುವವನವಷ್ಟೆ (8:13) ಮತ್ತು

> *ದೇವರಿಗೆ ಭಯಪಟ್ಟು ಆತನ ಆಜ್ಞೆಗಳನ್ನು ಕೈಕೊಳ್ಳು;*
>
> *ಮನುಷ್ಯರೆಲ್ಲರ ಕರ್ತವ್ಯವು ಇದೇ.*
>
> (ಪ್ರಸಂಗಿ 12:13).

ಹಳೇ ಒಡಂಬಡಿಕೆಯಲ್ಲಿ ಸಾಮಾನ್ಯವಾಗಿ ದೇವರಿಗೆ ಕರೆಯುವುದು "ಎಲೋಹಿಮ್" ಎಂಬ ಹೆಸರನ್ನು ಈ ಪುಸ್ತಕದುದ್ದಕ್ಕೂ ಉಪಯೋಗಿಸಲಾಗಿದೆ

ಪ್ರಸಂಗಿಯ ಓದುಗರಿಗೆ, ದೇವರು ತನ್ನನ್ನು ಈ ರೀತಿಯಲ್ಲಿ ತೋರಿಸಿಕೊಳ್ಳುತ್ತಾನೆ:

1. ಆತನು ಸೃಷ್ಟಿಕರ್ತನು (12:1) ಮತ್ತು ಸರ್ವಕರ್ತನು (11:5). ಆತನು ಎಲ್ಲವನ್ನು ಜೋಡಿಸುವವನು (7:13). ಜೀವನದ ಪ್ರತಿಯೊಂದು ಲಯದ ಹಿಂದೆ ಆತನಿದ್ದಾನೆ (3:1–8,11).

2. ಆತನು ಸಾರ್ವಭೌಮನಾದ ದೇವರಾಗಿದ್ದಾನೆ. ಜೀವನ ಚಕ್ರದಲ್ಲಿ ನಾವು ಕಾಣುವ ಹತಾಶೆಗಳನ್ನೆಲ್ಲಾ ಆತನು ನೇಮಿಸಿದ್ದಾನೆ. "ಆಕಾಶದ ಕೆಳಗೆ ನಡೆಯುವ ಎಲ್ಲಾ ಕೆಲಸಗಳನ್ನು ಜ್ಞಾನದಿಂದ ವಿಚಾರಿಸಿ ವಿಮರ್ಶಿಸಲು ಮನಸ್ಸಿಟ್ಟೆನು; ನರಜನ್ಮದವರ ಕರ್ತವ್ಯವೆಂದು ದೇವರು ನೇಮಿಸಿರುವ ಆ ಕೆಲಸವೆಲ್ಲಾ ಬಹು ಪ್ರಯಾಸವೇ. ಲೋಕದಲ್ಲಿ ನಡೆಯುವ ಕೆಲಸಗಳನ್ನೆಲ್ಲಾ ನೋಡಿದ್ದೇನೆ; ಆಹಾ, ಗಾಳಿಯನ್ನು ಹಿಂದಟ್ಟಿದ ಹಾಗೆ ಸಮಸ್ತವೂ ವ್ಯರ್ಥ" (1:13–14). 6:1–6 ಅನ್ನು ಸಹ ನೋಡಿರಿ.

3. ಆತನು ಒದಗಿಸುವವನು, ಆತನೇ ಮನುಷ್ಯರಿಗೆ ಅನ್ನ ಪಾನಗಳನ್ನು ಕೊಡುವವನಾಗಿದ್ದಾನೆ (2:24). ಅಲ್ಲದೇ ತಮ್ಮ ಜೀವನದಲ್ಲಿ (9:7) ಮತ್ತು ಕೆಲಸಕಾರ್ಯಗಳಲ್ಲಿ ಸಂತೋಷಿಸಲು ಶಕ್ತಗೊಳಿಸುವವನಾಗಿದ್ದಾನೆ.

4. ಆತನು ಜ್ಞಾನವಾಗಿದ್ದಾನೆ. ಆತನನ್ನು ಹುಡುಕಲಾಗುವುದಿಲ್ಲ, ಆತನ ಕಾರ್ಯಗಳು ಬಹು ಜ್ಞಾನಿಯಾದ ಮನುಷ್ಯನಿಗೆ ಸಹ ನಿಲುಕಲು ಆಗದಂಥವುಗಳಾಗಿವೆ.

   ಒಂದೊಂದು ವಸ್ತುವನ್ನು ಸಮಯಕ್ಕೆ ತಕ್ಕ ಹಾಗೆ ಅಂದವಾಗಿ ನಿರ್ಮಿಸಿದ್ದಾನೆ; ಇದಲ್ಲದೆ ಮನುಷ್ಯರ ಹೃದಯದಲ್ಲಿ ಅನಂತಕಾಲದ ಯೋಚನೆಯನ್ನು ಇಟ್ಟಿದ್ದಾನೆ; ಆದರೂ ದೇವರು ಆದ್ಯಂತವಾಗಿ ನಡಿಸುತ್ತಿರುವ ಕೆಲಸವನ್ನು ಅವರು ಗ್ರಹಿಸಲಾರದಂತೆ ಮಾಡಿದ್ದಾನೆ (3:11).

ಏಕೆಂದರೆ ಧರ್ಮಿಗಳೂ ಜ್ಞಾನಿಗಳೂ ಅವರ ಕೃತ್ಯಗಳೂ ದೇವರ ಕೈಯಲ್ಲುಂಟು; ತಾವು ಪ್ರೀತಿಗೆ ಗುರಿಯೋ ದ್ವೇಷಕ್ಕೆ ಗುರಿಯೋ ಮನುಷ್ಯರಿಗೆ ಗೊತ್ತಿಲ್ಲ (9:1).

ಗಾಳಿಯ ಗತಿಯನ್ನೂ ಗರ್ಭಿಣಿಯ ಗರ್ಭದೊಳಗೆ ಎಲುಬು ಬೆಳೆಯು ರೀತಿಯನ್ನೂ ನೀನು ಹೇಗೆ ತಿಳಿಯುವುದಿಲ್ಲವೋ ಹಾಗೆ ಸರ್ವಕರ್ತನಾದ ದೇವರ ಕಾರ್ಯವನ್ನು ಅರಿಯೆ (11:5).

3:17–21, 7:14, 8:14,16–17 ಅನ್ನು ಸಹ ನೋಡಿರಿ.

ಮನುಷ್ಯ

ಬೋಧಕನು ವ್ಯಕ್ತಪಡಿಸುವ ಮನುಷ್ಯನ ಚಿತ್ರಣವು ಮೂಲತಃ ನಿರಾಶವಾದರಿಂದ ಕೂಡಿದೆ. ತನ್ನೆಲ್ಲಾ ಪ್ರಯತ್ನ ಮತ್ತು ಕ್ರಿಯಾಶೀಲತೆಯ ಹೊರತಾಗಿಯೂ ಮನುಷ್ಯನು ಇತಿಮಿತಿಗಳನ್ನು ಒಳಗೊಂಡಿದ್ದಾನೆ (ಅಧ್ಯಾಯ 2). ಪ್ರಸಂಗಿಯು ಮನುಷ್ಯನ ಇತಿಮಿತಿಗಳ ದೃಷ್ಟಿಕೋನದೊಂದಿಗೆ ಆದಿಕಾಂಡದಲ್ಲಿನ ಸೃಷ್ಟಿಯ ವಾಕ್ಯಭಾಗಗಳ ಮೇಲಿನ ಒಂದು ವಿವರಣೆಯಾಗಿದೆ ಎಂದು ಲೆನಾರ್ಟ್ ಬೊಸ್ಟ್ರೊಮ್‌ರವರು ಅರ್ಥೈಸಿಕೊಳ್ಳುತ್ತಾರೆ.

- ಪಾಪ ಮಾಡದೆ ಧರ್ಮವನ್ನೇ ಆಚರಿಸುತ್ತಿರುವ ಸತ್ಪುರುಷನು ಲೋಕದಲ್ಲಿ ಇಲ್ಲವೇ ಇಲ್ಲ (7:20). ಬೀಳುವಿಕೆಯನ್ನು ಸಹ ಪ್ರಸಂಗಿಯು ವರ್ಣಿಸುತ್ತದೆ. ದೇವರು ಮನುಷ್ಯರನ್ನು ಸತ್ಯವಂತರನ್ನಾಗಿ ಸೃಷ್ಟಿಸಿದನು, ಅವರಾದರೋ ಬಹು ಯುಕ್ತಿಗಳನ್ನು ಕಲ್ಪಿಸಿಕೊಂಡಿದ್ದಾರೆ (7:29).

- ನಿಜವಾಗಲೂ ಮನುಷ್ಯನು ಪ್ರಾಣಿಗಳಿಗಿಂತ ವಿಭಿನ್ನನೋ? (3:19–21) ಇದನ್ನು ಆದಿ. 2:9 ಮತ್ತು 19 ರಲ್ಲಿ ದೇವರು ಮನುಷ್ಯನನ್ನು ಮತ್ತು ಪ್ರಾಣಿಗಳನ್ನು ಮಣ್ಣಿನಿಂದ ಸೃಷ್ಟಿಸಿದನು ಎಂಬುದರ ವಿವರಣೆಯನ್ನಾಗಿ ಓದಬೇಕಾಗಿದೆ; ಮರಣದ ನಂತರ ಅವರಿಬ್ಬರ ಅಂತ್ಯ ಸಹ ಒಂದೇ ಆಗಿದೆ.

- ಆಕಾಶದ ಕೆಳಗೆ ಮನುಷ್ಯನಿಗೆ ಯಾವುದೇ ನಿರೀಕ್ಷೆಯಿಲ್ಲ.

  ಎಲ್ಲವೂ ಎಲ್ಲರಿಗೂ ಒಂದೇ ಬಗೆಯಾಗಿ ಸಂಭವಿಸುವುದು; ಶಿಷ್ಟನಿಗೂ ದುಷ್ಟನಿಗೂ ಒಳ್ಳೆಯವನಿಗೂ ಶುದ್ಧನಿಗೂ ಅಶುದ್ಧನಿಗೂ ಯಜ್ಞಮಾಡುವವನಿಗೂ ಮಾಡದವನಿಗೂ ಒಂದೇ ಗತಿ; ನಿರ್ದೋಷಿಯಂತೆ ದೋಷಿಯಿರುವನು; ಆಣೆಯಿಡುವವನ ಹಾಗೆ ಆಣೆಗೆ ಅಂಜುವವನು ಇರುವನು (9:2).

ಬೋಧಕನ ಅನ್ವೇಷಣೆಯನ್ನು ಡೆರಿಕ್ ಕಿಡ್ನೆರ್‌ರವರು ಮನುಷ್ಯನ ಜೀವನದ ಮೂಲಕವಾಗಿ ಇರುವ ಒಂದು ಪರಿಶೋಧನೆಯ ಪ್ರಯಾಣವೆಂದು ವರ್ಣಿಸುತ್ತಾರೆ:

- ಬೋಧಕನು ಜ್ಞಾನದೊಂದಿಗೆ ಪ್ರಾರಂಭಿಸುತ್ತಾನೆ, ಆದರೆ ಅದು ವ್ಯರ್ಥವಾಗುತ್ತದೆ (2:15–17). ಆತನು ಮೂಢತನ ಮತ್ತು ಮೂರ್ಖತನದೊಂದಿಗೆ ಮುಂದುವರಿಸುತ್ತಾನೆ ಮತ್ತು ಮೌಲ್ಯಗಳನ್ನು ಕಂಡುಕೊಳ್ಳುತ್ತಾನೆ, ಆದರೆ ಅವು ಆತನ ಜೀವಮಾನವನ್ನು ಮೀರಿ ನಿಲ್ಲುವುದಿಲ್ಲ (2:16). ಹಾಗಾಗಿ ಮರಣವು ಆತನು ಎದುರಿಸುವ ಹಠದ ಮೊದಲ ವಾಸ್ತವಾಂಶವಾಗಿದೆ.

- ಎರಡನೆಯ ವಾಸ್ತವಾಂಶವು ದುಷ್ಟತನವಾಗಿದೆ, ಇದು ಮರಣದಷ್ಟೇ ವೇದನೆಯುಳ್ಳದ್ದಾಗಿದೆ, ಆದರೆ ಅದಕ್ಕಿಂತ ಭಯಾನಕವಾದುದ್ದಾಗಿದೆ. ಬೋಧಕನು ಹೊಲಸಾದ ಪಾಪಗಳನ್ನು ಕಾಣುತ್ತಾನೆ: ಮತ್ಸರ (4:4), ಹಣದಾಸೆ (4:1–8). ಆದರೆ ಹಿಂಸೆ (4:1), ಅಧರ್ಮ (3:16), ಅಧಿಕಾರದ ದುರುಪಯೋಗ (4:1), ಸಂಸ್ಥಾನದಲ್ಲಿನ (ಸಮಾಜ) ಹಿಂಸೆ ಮತ್ತು ಅನ್ಯಾಯಯುತ ವ್ಯವಸ್ಥೆಗಳು (5:8) ಬಹು ಕೆಟ್ಟದ್ದಾಗಿವೆ. ಆತನ ಮುಕ್ತಾಯವು ಈ ರೀತಿಯಾಗಿದೆ: ಪಾಪಮಾಡದೆ ಧರ್ಮವನ್ನೇ ಆಚರಿಸುತ್ತಿರುವ ಸತ್ಪುರುಷನು ಲೋಕದಲ್ಲಿ ಇಲ್ಲವೇ ಇಲ್ಲ (7:20) ಮತ್ತು ಇದಲ್ಲದೆ ನರವಂಶದವರ ಎದೆಯಲ್ಲಿ ಕೆಟ್ಟತನವು ತುಂಬಿದೆ; ಅವರು ಬದುಕಿರುವತನಕ ಮರುಳುತನವು ಅವರ ಮನಸ್ಸನ್ನು ಹಿಡಿದಿರುವುದು (9:3).

- ಇದರ ಜೊತೆಗೆ, ಶಿಕ್ಷಕರು ಗಣನೆಗೆ ತೆಗೆದುಕೊಳ್ಳಬೇಕಾದ **"ಸಮಯ ಮತ್ತು ಅವಕಾಶ"** ಎಂಬ ಚಿಕ್ಕ ಆದರೆ ಅಷ್ಟೇ ನಿರ್ವಹಿಸಲಾಗದ ಅಂಶವಿದೆ (9:11). ತನ್ನ ಸಮಯ ಯಾವಾಗ ಬರುತ್ತದೆ ಎಂದು ಯಾರಿಗೂ ತಿಳಿದಿಲ್ಲ (9:12).

ಶಿಕ್ಷಕರ ಪರಿಶೋಧನಾ ಪ್ರವಾಸವು ವಾಸ್ತವವಾಗಿ ಈ ಪತನಶೀಲ ಜಗತ್ತಿನಲ್ಲಿ, "ಸೂರ್ಯನ ಕೆಳಗಿನ ಜೀವನ"ದಲ್ಲಿ ಮಾನವ ಜೀವನದ ಸಂಪೂರ್ಣ ನಾಶವನ್ನು ಒಳಗೊಂಡಿತ್ತು. ಆದ್ದರಿಂದ ಈಗ, ಡೆರೆಕ್ ಕಿಡ್ನರ್ ಹೇಳುತ್ತಾರೆ, ಶಿಕ್ಷಕರು ಅರ್ಥಹೀನ, ನಿಷ್ಪ್ರಯೋಜನ ಅಥವಾ ಕ್ಷಣಿಕವಲ್ಲದ ಏನನ್ನಾದರೂ ಮೌಲ್ಯಯುತವಾದದ್ದನ್ನು ನಿರ್ಮಿಸಬಹುದು. ಆದ್ದರಿಂದ ಶಿಕ್ಷಕರು ತಮ್ಮ ಪುಸ್ತಕವನ್ನು ತಮ್ಮ ಓದುಗರಿಗೆ ಒಳ್ಳೆಯ ಸುದ್ದಿಯೊಂದಿಗೆ ಕೊನೆಗೊಳಿಸುತ್ತಾರೆ.

ಆದರೆ ಈ ಶುಭ ಸುದ್ದಿಯು ಒಂದು ಷರತ್ತಿನೊಂದಿಗೆ ಬರುತ್ತದೆ: ಶಾಶ್ವತತೆಯ ಸಾಮರ್ಥ್ಯವನ್ನು ನೀಡಲಾಗಿರುವ ಮನುಷ್ಯನು ಮರ್ತ್ಯವಾದದ್ದರಲ್ಲಿ ತೃಪ್ತನಾಗಬಹುದು ಎಂದು ನಟಿಸುವುದನ್ನು ನಿಲ್ಲಿಸಬೇಕು. ಶುಭ ಸುದ್ದಿ, ವಿರೋಧಭಾಸವಾಗಿ, ತೀರ್ಪಿನ ಸುದ್ದಿಯಾಗಿದೆ. ಡೆರಿಕ್ ಕಿಡ್ನರ್ ಅವರ ಪ್ರಸಂಗಿಯು, ಓದುಗರಾದ ನಮ್ಮನ್ನು ಯಾವುದಕ್ಕೂ ಅರ್ಥವಿಲ್ಲ, ಸೂರ್ಯನ ಕೆಳಗೆ ಏನೂ ಮುಖ್ಯವಲ್ಲ ಎಂದು ನಾವು ಅರ್ಥಮಾಡಿಕೊಳ್ಳಲು ಪ್ರಾರಂಭಿಸುವ ಹಂತಕ್ಕೆ ತರುವುದು ಎಂಬ ತೀರ್ಮಾನಕ್ಕೆ ಬರುತ್ತಾರೆ. ಆಗ ಮಾತ್ರ ಎಲ್ಲವೂ ಮುಖ್ಯ ಎಂಬ ಶುಭ ಸುದ್ದಿಯನ್ನು ನಾವು ಕೇಳಬಹುದು:

> ಒಳ್ಳೇದಾಗಲಿ ಕೆಟ್ಟದಾಗಲಿ ಸಕಲ ರಹಸ್ಯ ಸಂಗತಿಗಳನ್ನು ವಿಮರ್ಶಿಸುವ ನ್ಯಾಯವಿಚಾರಣೆಗೆ ದೇವರು ಪ್ರತಿಯೊಂದು ಕಾರ್ಯವನ್ನು ಗುರಿಮಾಡುವನು.
>
> (ಪ್ರಸಂಗಿ 12:14)

ದೇವರ ಭಯ

ಈ ಲೋಕದಲ್ಲಿ "ಎಲ್ಲವೂ ವ್ಯರ್ಥ" ಎಂಬ ಸತ್ಯವು ಪ್ರಸಂಗಿ ಪುಸ್ತಕದ ಓದುಗರನ್ನು ದೇವರಲ್ಲಿ ಆಶ್ರಯ ಪಡೆಯುವಂತೆ ಪ್ರೇರೇಪಿಸಬೇಕು. ಆತನ ಕೆಲಸವು ಶಾಶ್ವತವಾಗಿರುತ್ತದೆ:

ದೇವರ ಕಾರ್ಯವೆಲ್ಲವೂ ನಿತ್ಯವೆಂದು ಬಲ್ಲೆನು; ಅದಕ್ಕೆ ಯಾವುದನ್ನೂ ಸೇರಿಸಲಾರೆವು, ಅದರಿಂದ ಯಾವುದನ್ನೂ ತೆಗೆಯಲಾರೆವು; ದೇವರ ಈ ನಿಯಮಕ್ಕೆ ಮನುಷ್ಯರು ತನ್ನ ಎದುರಿನಲ್ಲಿ ಭಯಭಕ್ತಿಯುಳ್ಳವರಾಗಿರಬೇಕೆಂಬದೇ ಕಾರಣವು (3:14).

ದೇವರ ಸಂಪೂರ್ಣ ಸಾರ್ವಭೌಮತ್ವ ಮತ್ತು ಆತನ ಉದ್ದೇಶಗಳ ಕುರಿತಾದ ಅರಿವು ಮಾನವರಲ್ಲಿ ಆತನ ಬಗ್ಗೆ ವಿನಮ್ರ ಭಕ್ತಿ ಮತ್ತು ಭಯವನ್ನು ಮೂಡಿಸಬೇಕು. ಎಲ್ಲವೂ ವ್ಯರ್ಥ, ವ್ಯರ್ಥತೆ ಮತ್ತ ನಶ್ವರ ಎಂಬ ಅಂಶವು ಜನರನ್ನು ದೇವರ ಮುಂದೆ "ಭಯಪಡಲು" ಅಥವಾ "ವಿಸ್ಮಯದಿಂದ ನಿಲ್ಲಲು" ಕರೆಯುತ್ತದೆ. ನಾವು ದೇವರೊಬ್ಬನಿಗೆ ಭಯಪಡಲೇಬೇಕು (5:7).

ಮನುಷ್ಯನ ಕರ್ತವ್ಯವು ದೇವರಲ್ಲಿ ಯಥಾರ್ಥವಾದ ನಂಬಿಕೆಯಿಡುವುದಾಗಿದೆ. ಪ್ರತಿಯೊಂದು ಕಾರ್ಯವನ್ನು ದೇವರು ನ್ಯಾಯತೀರ್ಪಿಗೆ ತರುತ್ತಾನೆ (11:9) ಹಾಗಾಗಿ ಮನುಷ್ಯರು ಆತನ ಆಜ್ಞೆಗಳಿಗೆ ವಿಧೇಯರಾಗುವುದು ಅತೀ ಪ್ರಾಮುಖ್ಯವಾದುದ್ದಾಗಿದೆ.

ವಿಷಯವು ತೀರಿತು; ಎಲ್ಲವೂ ಕೇಳಿ ಮುಗಿಯಿತು; ದೇವರಿಗೆ ಭಯಪಟ್ಟು ಆತನ ಆಜ್ಞೆಗಳನ್ನು ಕೈಕೊಳ್ಳು; ಮುಷ್ಯರೆಲ್ಲರ ಕರ್ತವ್ಯವು ಇದೇ. ಒಳ್ಳೇದಾಗಲಿ ಕೆಟ್ಟದ್ದಾಗಲಿ ಸಕಲ ರಹಸ್ಯ ಸಂಗತಿಗಳನ್ನು ವಿಮರ್ಶಿಸುವ ನ್ಯಾಯವಿಚಾರಣೆಗೆ ದೇವರು ಪ್ರತಿಯೊಂದು ಕಾರ್ಯವನ್ನು ಗುರಿಮಾಡುವನು (12:13–14).

ಪ್ರಶ್ನೆಗಳು

ಈ ಪ್ರಶ್ನೆಗಳಿಗೆ ಉತ್ತರಗಳನ್ನು ಮೇಲಿನ ಪಠ್ಯದಲ್ಲಿ ಸುಲಭವಾಗಿ ಕಾಣಬಹುದು. ಆದರೆ ನೀವು ಅಲ್ಲಿ ನೋಡುವ ಮೊದಲು ಪ್ರಶ್ನೆಗಳಿಗೆ ಉತ್ತರಿಸಲು ಪ್ರಯತ್ನಿಸಿದರೆ ನೀವು ಇನ್ನಷ್ಟು ಕಲಿಯುವಿರಿ. ನೀವು ಸಾಧ್ಯವಾದಷ್ಟು ನಿಮ್ಮ ಸ್ವಂತ ಪದಗಳನ್ನು ಬಳಸಿದರೆ ಅದು ಉತ್ತಮವಾಗಿರುತ್ತದೆ.

1. ರೋಮಾ. 8:20–22 ಮತ್ತು ಪ್ರಸಂಗಿಯಲ್ಲಿ ಹೇಳಿದಂತೆ "ಸೂರ್ಯನ ಕೆಳಗಿನ ಜೀವನ"ದ ನಡುವಿನ ಸಂಬಂಧವನ್ನು ವಿವರಿಸಿ.
2. ಪತನದ ಯಾವ ಪರಿಣಾಮಗಳನ್ನು ಪ್ರಸಂಗಿಯಲ್ಲಿ ಒತ್ತಿ ಹೇಳಲಾಗಿದೆ?
3. ದೇವರಿಗೆ ಯಾವ "ಹೆಸರು" ಅನ್ನು ಪ್ರಸಂಗಿಯಲ್ಲಿ ಬಳಸಲಾಗಿಲ್ಲ?

4. ಪ್ರಸಂಗಿಯಲ್ಲಿ ವರ್ಣಿಸಿದಂತೆ ದೇವರು ಮನುಷ್ಯನಿಗೆ ತನ್ನನ್ನು ಹೇಗೆ ಪ್ರಕಟಿಸಿಕೊಳ್ಳುತ್ತಾನೆ ಎನ್ನುವ ನಾಲ್ಕು ಅಂಶಗಳನ್ನು ಪಟ್ಟಿ ಮಾಡಿ.
5. ಬೋಸ್ಟ್ರೋಮ್ ಅವರ ಪ್ರಸಂಗಿಯ ತಿಳುವಳಿಕೆಯನ್ನು 3 ಅಂಶಗಳಲ್ಲಿ ಬರೆಯಿರಿ.
6. ಡೆರಿಕ್ ಕಿಡ್ನರ್ ಶಿಕ್ಷಕನ ಶೋಧವನ್ನು ಹೇಗೆ ವಿವರಿಸುತ್ತಾರೆ?
7. ಡೆರಿಕ್ ಕಿಡ್ನರ್ ಪ್ರಕಾರ ಯಾಕೆ ಶಿಕ್ಷಕನು ಈ ಪ್ರಸ್ತುತ ಲೋಕದಲ್ಲಿನ ಮನುಷ್ಯ ಜೀವನದ ಎಲ್ಲಾ ನೋಟಗಳನ್ನು ನಾಶಗೊಳಿಸುತ್ತಾನೆ?
8. ಡೆರಿಕ್ ಕಿಡ್ನರ್ ಪ್ರಕಾರ ಶಿಕ್ಷಕರು ತಮ್ಮ ಶುಭ ಸಮಾಚಾರಕ್ಕಾಗಿ ಯಾವ ಸ್ಥಿತಿಯನ್ನು ಹೊಂದಿದ್ದಾರೆ?
9. ಡೆರಿಕ್ ಕಿಡ್ನರ್ ಪ್ರಕಾರ ಶಿಕ್ಷಕನ ಶುಭ ಸಮಾಚಾರವೆನು?
10. ಇಡೀ ಪ್ರಸಂಗಿ ಪುಸ್ತಕದ ಕಾರ್ಯವನ್ನು ಡೆರಿಕ್ ಕಿಡ್ನರ್ ಹೇಗೆ ನೋಡುತ್ತಾರೆ?
11. "ಎಲ್ಲವನ್ನು ಕೇಳಿದ ಮೇಲೆ" ನಂತರ ಪ್ರಸಂಗಿ ಪುಸ್ತಕದ ತೀರ್ಮಾನವೇನು? ಅದು ಈ ತೀರ್ಮಾನಕ್ಕೆ ಏಕೆ ಬರುತ್ತದೆ?

ಪ್ರಸಂಗಿ ಓದಿರಿ ಮತ್ತು ಉತ್ತರಿಸಿ

ಈ ಎಲ್ಲಾ "ಓದಿ ಮತ್ತು ಉತ್ತರಿಸಿ" ಪ್ರಶ್ನೆಗಳು ಮತ್ತು ಅಸೈನ್‌ಮೆಂಟ್‌ಗಳನ್ನು ನೀವು ಮುಂದಿನ ಪಾಠಗಳಿಗೆ ಮಂದುವರಿಯುವ ಮೊದಲು ಪೂರ್ಣಗೊಳಿಸಿ.

1. ಒಂದೇ ಬಾರಿಗೆ ಇಡೀ ಪ್ರಸಂಗಿ ಪುಸ್ತಕವನ್ನು ಎಚ್ಚರಿಕೆಯಿಂದ ಓದಿ. ಹಾಗೆ ಮಾಡುವಾಗ ಈ ಕೆಳಗಿನ ಪ್ರಶ್ನೆಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳಿ.

2. ನೀವು ಇಡೀ ಪುಸ್ತಕವನ್ನು ಎಚ್ಚರಿಕೆಯಿಂದ ಓದುವಾಗ, ಲೇಖಕರ ಬಗ್ಗೆ ಸಾಧ್ಯವಾದಷ್ಟು ಸುಳಿವುಗಳನ್ನು ಕಂಡುಹಿಡಿಯಲು ಪ್ರಯತ್ನಿಸಿ.

   ಅ. ನಿಮ್ಮ ಎಲ್ಲಾ ಉಲ್ಲೇಖಗಳನ್ನು ಗಮನಿಸಿ.

   ಆ. ಅವನನ್ನು ಖೊಹೆಲೆತ್ (**"ಜೋಡಿಸುವವನು"**) ಎಂದು ಏಕೆ ಕರೆಯಲಾಗುತ್ತದೆ ಎಂದು ನೀವು ಭಾವಿಸುತ್ತೀರಿ?

   ಇ. ಕರ್ತೃತ್ವದ ಬಗ್ಗೆ ನಿಮ್ಮ ಸ್ವಂತ ತೀರ್ಮಾನವೇನು? ನಿಮ್ಮ ಕಾರಣಗಳನ್ನು ನೀಡಿ.

3. ಅಧ್ಯಾಯದಲ್ಲಿ ಪ್ರಸ್ತುತಪಡಿಸಲಾದ ಮೂರು ರಚನೆಗಳಲ್ಲಿ ಯಾವುದು ಪ್ರಸಂಗಿಯ ರಚನೆ ಉತ್ತಮವೆಂದು ನೀವು ಭಾವಿಸುತ್ತೀರಿ? ಏಕೆ ಎಂದು ವಿವರಿಸಿ.

4. **ಪ್ರಸಂಗಿಯ ರಚನೆಯನ್ನು** ನಿಮ್ಮ ಸತ್ಯವೇದದಲ್ಲಿ ಕಂಡುಬರುವ ಶೀರ್ಷಿಕೆಗಳೊಂದಿಗೆ ಹೋಲಿಕೆ ಮಾಡಿ. ಹೋಲಿಕೆಗಳು ಮತ್ತು ವ್ಯತ್ಯಾಸಗಳನ್ನು ಗುರುತಿಸಿ. ಕನ್ನಡ **ಸತ್ಯವೇದವು** ಅನುವಾದವು ಯಾವುದೇ ಶೀರ್ಷಿಕೆಗಳನ್ನು ಹೊಂದಿಲ್ಲದ ಕಾರಣ, ಈ ಪ್ರಶ್ನೆಗಳಿಗೆ ಉತ್ತರಿಸಲು ನೀವು ಆ ಸತ್ಯವೇದ ಆವೃತ್ತಿಯನ್ನು ಬಳಸಲಾಗುವುದಿಲ್ಲ.

5. **"ಅರ್ಥಹೀನತೆ/ನಿರರ್ಥಕತೆ", "ಗಾಳಿಯ ಹಿಂದೆ ಬೆನ್ನಟ್ಟುವುದು"** ಮತ್ತು **"ಸೂರ್ಯನ ಕೆಳಗೆ"** ಎಂಬ ಮೂರು ಪ್ರಮುಖ ಹೇಳಿಕೆಗಳು ಪರಸ್ಪರ ಹೇಗೆ ಸಂಬಂಧಿಸಿವೆ ಎಂಬುದನ್ನು ವಿವರಿಸಿ.

6. ಪ್ರಸಂಗಿ ಪುಸ್ತಕವನ್ನು ಪೂರ್ತಿ ಓದಿದ ನಂತರ ನೀವು ಇಬ್ರಿಯ ಪದ ಹೆಬೆಲ್ ಅನ್ನು ಹೇಗೆ ಅರ್ಥಮಾಡಿಕೊಳ್ಳುತ್ತೀರಿ? ಕನ್ನಡ ಪದ **"ವ್ಯರ್ಥ"** ಅತ್ಯುತ್ತಮ ಅನುವಾದವೇ ಅಥವಾ ನೀವು ಬೇರೆ ಯಾವುದಾದರೂ ಪದವನ್ನು ಬಯಸುತ್ತೀರಾ? ಏಕೆ ಎಂದು ವಿವರಿಸಿ.

7. ನೀವು ಇಡೀ ಪ್ರಸಂಗಿ ಪುಸ್ತಕವನ್ನು ಎಚ್ಚರಿಕೆಯಿಂದ ಓದುವಾಗ, ಪುಸ್ತಕವನ್ನು ನಿರೂಪಿಸುವ ಇತರ ಪ್ರಮುಖ ನುಡಿಗಟ್ಟುಗಳು ಮತ್ತು ಹೇಳಿಕೆಗಳನ್ನು ಗಮನಿಸಿ. ಪಟ್ಟಿಯನ್ನು ಮಾಡಿ. ಈ ನುಡಿಗಟ್ಟುಗಳು/ಹೇಳಿಕೆಗಳು ಏನನ್ನು ಅರ್ಥೈಸುತ್ತವೆ ಮತ್ತು ಅವು ಇಡೀ ಪುಸ್ತಕವನ್ನು ಹೇಗೆ ನಿರೂಪಿಸುತ್ತವೆ ಎಂಬುದನ್ನು ವಿವರಿಸಿ.

8. ಪ್ರಸಂಗಿ ಪುಸ್ತಕವನ್ನು ಎಚ್ಚರಿಕೆಯಿಂದ ಓದುವಾಗ, ದೇವರನ್ನು ಹೇಗೆ ವಿವರಿಸಲಾಗಿದೆ ಎಂಬುದನ್ನು ಗಮನಿಸಿ. ಪುಸ್ತಕವು ದೇವರ ಬಗ್ಗೆ ಯಾವ ತಿಳುವಳಿಕೆಯನ್ನು ಪ್ರಸ್ತುತಪಡಿಸುತ್ತದೆ? ದೇವರ ಹಲವಾರು ಅಂಶಗಳನ್ನು ಕಂಡುಹಿಡಿಯಲು ಪ್ರಯತ್ನಿಸಿ. **ಪ್ರಸಂಗಿ ಪುಸ್ತಕದಲ್ಲಿ ದೇವರು ಮತ್ತು ಮನುಷ್ಯ** ಅಧ್ಯಾಯದಲ್ಲಿ ಪ್ರಸ್ತುತಪಡಿಸಲಾದ ದೇವರ ವಿವರಣೆಯೊಂದಿಗೆ ಹೋಲಿಕೆ ಮಾಡಿ. ನೀವು ಏನನ್ನಾದರೂ ಮಾರ್ಪಡಿಸಲು ಅಥವಾ ಸೇರಿಸಲು ಬಯಸುತ್ತೀರಾ? ಹಾಗಿದ್ದಲ್ಲಿ, ಹೇಗೆ ಮತ್ತು ಏನು?

9. ನೀವು ಇಡೀ ಪ್ರಸಂಗಿ ಪುಸ್ತಕವನ್ನು ಎಚ್ಚರಿಕೆಯಿಂದ ಓದುವಾಗ, ಮನುಷ್ಯ ಮತ್ತು ಅವನ ಅಸ್ತಿತ್ವವನ್ನು ಹೇಗೆ ವಿವರಿಸಲಾಗಿದೆ ಎಂಬುದನ್ನು ಗಮನಿಸಿ. ಪ್ರಸಂಗಿ ಪುಸ್ತಕದ ದೇವರು ಮತ್ತು ಮನುಷ್ಯ ಅಧ್ಯಾಯದಲ್ಲಿ ಪ್ರಸ್ತುತಪಡಿಸಲಾದ ಮನುಷ್ಯನ ವಿವರಣೆಯೊಂದಿಗೆ ಹೋಲಿಕೆ ಮಾಡಿ. ನೀವು ಏನನ್ನಾದರೂ ಮಾರ್ಪಡಿಸಲು ಅಥವಾ ಸೇರಿಸಲು ಬಯಸುತ್ತೀರಾ? ಹಾಗಿದ್ದಲ್ಲಿ, ಹೇಗೆ ಮತ್ತು ಏನು?

10. ಪ್ರಸಂಗಿಯು ಯಾವ ಟಿಪ್ಪಣಿಯಲ್ಲಿ ಕೊನೆಗೊಳ್ಳುತ್ತದೆ (12:13–14)? ಈ ಅಂತ್ಯವು ಪುಸ್ತಕದ ಉಳಿದ ಭಾಗಕ್ಕೆ ಹೇಗೆ ಹೊಂದಿಕೊಳ್ಳುತ್ತದೆ ಎಂಬುದನ್ನು ವಿವರಿಸಿ.

11. ಪ್ರಸಂಗಿ ಪುಸ್ತಕದ ಸಂದೇಶವನ್ನು ನೀವು ಹೇಗೆ ಅರ್ಥಮಾಡಿಕೊಳ್ಳುತ್ತೀರಿ? ನೀವು ಆ ತೀರ್ಮಾನಕ್ಕೆ ಬರಲು ಕಾರಣವೇನು?

12. ಇಡೀ ಪ್ರಸಂಗಿ ಪುಸ್ತಕವನ್ನು ಓದಿದ ನಂತರ ನಿಮಗೆ ಯಾವ ಸಾಮಾನ್ಯ ಅನಿಸಿಕೆ ಸಿಕ್ಕಿತು? ಪುಸ್ತಕವು ಕಷ್ಟಕರವಾಗಿದೆಯೇ? ಸವಾಲಿನದ್ದೇ? ಗೊಂದಲಮಯವೇ? ಬೇಸರದದ್ದೇ? ಆಸಕ್ತಿದಾಯಕವೇ? ಲೌಕಿಕವೇ? ಭಕ್ತಿಹೀನವೇ? ತಾತ್ವಿಕವೇ? ಆಧ್ಯಾತ್ಮಿಕವೇ? ಉನ್ನತಿಗೇರಿಸುವದೇ? ಖಿನ್ನತೆಯನ್ನುಂಟುಮಾಡುತ್ತಿದೆಯೇ? ನಿಮ್ಮ ಭಾವನೆಗಳು ಮತ್ತು ಅನಿಸಿಕೆಗಳನ್ನು ಸಂಕ್ಷೇಪಿಸಲು ಈ ಪದಗಳಲ್ಲಿ ಒಂದು ಅಥವಾ ಹೆಚ್ಚಿನದನ್ನು (ಅಥವಾ ಯಾವುದೇ ಇತರ ಪದ) ಆರಿಸಿ. ನೀವು ಏನು ಹೇಳುತ್ತಿದ್ದೀರಿ ಮತ್ತು ನಿಮಗೆ ಹೇಗೆ ಅನಿಸುತ್ತಿದೆ ಎಂಬುದನ್ನು ಸಹ ವಿವರಿಸಿ.

ಪ್ರಸಂಗಿ ಅಧ್ಯಾಯ 1

ಪೀಠಿಕೆ ಮತ್ತು ಟಿಪ್ಪಣಿಗಳು

ಈ ಅಧ್ಯಾಯವು ಬೋಧಕನ ಪರಿಚಯದೊಂದಿಗೆ (ವಚನ 1) ಮತ್ತು ಆತನ ಪುಸ್ತಕದ ಉದ್ದೇಶ ನಿರೂಪಣೆಯೊಂದಿಗೆ ಪ್ರಾರಂಭವಾಗುತ್ತದೆ (ವಚನ 2). ನಂತರ ಬೋಧಕನು ಜ್ಞಾನವನ್ನು ಪರಿಶೋಧಿಸುತ್ತಾನೆ ಮತ್ತು ಇದು ಗಾಳಿಯನ್ನು ಹಿಂದಟ್ಟಿದ ಹಾಗೆ, ಕೇವಲ ಸಂಕಟ ಮತ್ತು ವ್ಯಥೆಯನ್ನು ತರುತ್ತದೆ ಎಂಬ ತೀರ್ಮಾನಕ್ಕೆ ಬರುತ್ತಾನೆ (ವಚನ 12–18).

ಬೋಧಕ/ಪ್ರಸಂಗಿ (ವಚನ 1): ಇಬ್ರಿಯದಲ್ಲಿ ಖೊಹೆಲೆತ್.

ದಾವೀದನ ಮಗ (ವಚನ 1): ಇಬ್ರಿಯದಲ್ಲಿ **"ಮಗ"** ಎಂಬ ಪದವು ಯಾವುದೇ ಪುರುಷ ವಂಶ/ಸಂತತಿಯನ್ನು ಸೂಚಿಸುತ್ತದೆ.

ವ್ಯರ್ಥ (ವಚನ 2): ಇಬ್ರಿಯದಲ್ಲಿ ಹೇಬೆಲ್.

ಆಕಾಶದ ಕೆಳಗೆ (ವಚನ 13): ಇದು ಸೂರ್ಯನ ಕೆಳಗೆ ಎಂಬ ಹೇಳಿಕೆಗೆ ಸಮಾನಾಂತರವಾದ ಹೇಳಿಕೆಯಾಗಿದೆ.

ದೇವರು (ವಚನ 13): ಇಡೀ ಪುಸ್ತಕದುದ್ದಕ್ಕೂ ಪ್ರಸಂಗಿ ಪುಸ್ತಕವು ದೇವರಿಗೆ **"ಎಲೋಹಿಂ"** ಎಂಬ ಇಬ್ರಿಯ ಪದವನ್ನು ಬಳಸುತ್ತದೆ. ಈ ಹೆಸರು ದೇವರ ಸಂಪೂರ್ಣ ಸಾರ್ವಭೌಮತೆಯನ್ನು ತಿಳಿಸುತ್ತದೆ. ಇಲ್ಲಿ ಯೆಹೋವನು ಎಂಬ ದೇವರ ಒಡಂಬಡಿಕೆಯ ಹೆಸರನ್ನು ಉಪಯೋಗಿಸಿಲ್ಲ.

ಗಾಳಿಯನ್ನು ಹಿಂದಟ್ಟಿದ ಹಾಗೆ (ವಚನ 14): ಇದು ನಿಷ್ಫಲ ಮತ್ತು ವ್ಯರ್ಥಕ್ಕೆ ಒಂದು ರೂಪಾಲಂಕಾರವಾಗಿದೆ.

ಪ್ರಶ್ನೆಗಳು

1. ವಚನ 1:12 ಮತ್ತು 16 ರಲ್ಲಿ ಶಿಕ್ಷಕನ ಬಗ್ಗೆ ನಾವು ಏನನ್ನು ಕಲಿಯುತ್ತೇವೆ?
2. ಜೀವನದ **"ನಡಿಗೆ"** ಬಗ್ಗೆ ವಾಕ್ಯಭಾಗದ ಮನೋಭಾವವೇನು? (1:2–12) ಈ ತೀರ್ಮಾನಕ್ಕೆ ನೀವು ಹೇಗೆ ಬರುತ್ತೀರಿ?
3. ವಚನ 13–18 ರಲ್ಲಿ ಮನುಷ್ಯ ಜೀವನದ ತನ್ನ ಅಧ್ಯಯನವನ್ನು ಶಿಕ್ಷಕನು ಹೇಗೆ ವರ್ಣಿಸುತ್ತಾನೆ?

ಪ್ರಸಂಗಿ ಅಧ್ಯಾಯ 1 ಆಲೋಚಿಸಿರಿ ಮತ್ತು ಚರ್ಚಿಸಿರಿ

ಶಿಕ್ಷಕನ ತೀರ್ಮಾನಗಳ ಬಗ್ಗೆ ನಿಮ್ಮ ಅಭಿಪ್ರಾಯಗಳೇನು? **"ಆಕಾಶದ ಕೆಳಗೆ ನಡೆಯುವ ಸಂಗತಿಗಳು"** ಬಗ್ಗೆ ಆತನ ಅಧ್ಯಯನಗಳಿಂದ ನೀವು ಯಾವ ತೀರ್ಮಾನಕ್ಕೆ ಬರುತ್ತೀರಿ?

ಪ್ರಸಂಗಿ ಅಧ್ಯಾಯ 2

ಪೀಠಿಕೆ ಮತ್ತು ಟಿಪ್ಪಣಿಗಳು

ಈ ಅಧ್ಯಾಯವು ಬೋಧಕನು ಜೀವನದಲ್ಲಿ ಸುಖವನ್ನು ಅನುಭವಿಸಲು ಪ್ರಯತ್ನಿಸುವುದು, ದೊಡ್ಡ ಯೋಜನೆಗಳನ್ನು ಕೈಗೊಳ್ಳುವುದು ಮತ್ತು ಅತ್ಯಧಿಕವಾಗಿ ಸಂಪತ್ತನ್ನು ಸಂಗ್ರಹಿಸುವುದರೊಂದಿಗೆ ಪ್ರಾರಂಭವಾಗುತ್ತದೆ (ವಚನ 1–9). ಆದರೆ ಎಲ್ಲವೂ ವ್ಯರ್ಥವೆಂಬುದಾಗಿ ಆತನು ಕಂಡುಕೊಳ್ಳುತ್ತಾನೆ (ವಚನ 10–11). ಹಾಗೆಯೇ ಜ್ಞಾನವನ್ನಲ್ಲದೆ ಹುಚ್ಚುತನ ಮತ್ತು ಮೂರ್ಖತನವನ್ನು ಪ್ರಯತ್ನಿಸುತ್ತಾನೆ, ಆದರೆ ಅವೆಲ್ಲವೂ ವ್ಯರ್ಥವೆಂದು ಕಾಣುತ್ತಾನೆ (ವಚನ 12–16). ಕೊನೆಗೆ ಆತನು ಎಲ್ಲಾ ಶ್ರಮ ಮತ್ತು ಆಕಾಶದ ಕೆಳಗಿನ ಎಲ್ಲಾ ಪ್ರಯಾಸವನ್ನು ಪರಾಮರ್ಶಿಸುತ್ತಾನೆ ಮತ್ತು ಗಾಳಿಯನ್ನು ಹಿಂದಟ್ಟಿದ ಹಾಗೆ ಸಮಸ್ತವೂ ವ್ಯರ್ಥ ಎಂಬ ನಿರ್ಣಯಕ್ಕೆ ಬರುತ್ತಾನೆ (ವಚನ 17–26).

ವಚನ 4–9: 1 ಅರಸು ಅಧ್ಯಾಯ 6–7, 9–11 ಅನ್ನು ಹೋಲಿಸಿರಿ. ಇಲ್ಲಿ ನಾವು ಸೊಲೊಮೋನನ ಕಟ್ಟಡದ ಯೋಜನೆಗಳು, ಆತನ ಸಂಪತ್ತು, ಮಹಿಮೆ ಮತ್ತು ಆತನ ಪತ್ನಿಯರ ಪಟ್ಟಿಗಳನ್ನು ನಾವು ಕಾಣುತ್ತೇವೆ.

ಕಣ್ಣು (ವಚನ 14): ಇದು ತಿಳುವಳಿಕೆ/ವಿವೇಕಕ್ಕೆ ಒಂದು ರೂಪಾಲಂಕಾರ

ವಚನ 24–25: 3:12–13, 5:8–20, 8:15 ಮತ್ತು 9:7 ಅನ್ನು ಹೋಲಿಸಿರಿ.

ಪ್ರಶ್ನೆಗಳು

1. ವಚನ 1 ರಲ್ಲಿ ಶಿಕ್ಷಕನು ಯಾರೊಂದಿಗೆ ಮಾತನಾಡುತ್ತಾನೆ?
2. ಯಾವ ವಿಧದಲ್ಲಿ ಶಿಕ್ಷಕನು ಸುಖವನ್ನು ಅನುಸರಿಸುತ್ತಾನೆ?
3. ಶಿಕ್ಷಕನ ಮೂರ್ಖತನವನ್ನು ಅನುಸರಿಸುವಲ್ಲಿ ಜ್ಞಾನವು ಯಾವ ಪಾತ್ರವನ್ನು ವಹಿಸುತ್ತದೆ? ಮೂರ್ಖತನವನ್ನು ಹಿಂಬಾಲಿಸಲು ಜ್ಞಾನವನ್ನು ಉಪಯೋಗಿಸುವ ವಿರೋಧಭಾಸವನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ?
4. ಶಿಕ್ಷಕನ ವೈಭವ ಮತ್ತು ಸಂಪತ್ತನ್ನು ಅನುಸರಿಸುವಲ್ಲಿ ಜ್ಞಾನವು ವಹಿಸುವ ಪಾತ್ರವನ್ನು ನೀವು ಹೇಗೆ ವ್ಯಾಖ್ಯಾನಿಸುವಿರಿ?
5. "ಜ್ಞಾನ, ಹುಚ್ಚುತನ ಮತ್ತು ಮೂರ್ಖತನ"ದ ವಿಷಯದಲ್ಲಿ ಶಿಕ್ಷಕನು ಯಾವ ತೀರ್ಮಾನಕ್ಕೆ ಬರುತ್ತಾನೆ?
6. ಯಾವ ವಿಧದಲ್ಲಿ ಹೇಗೆ ಜ್ಞಾನಿ ಮತ್ತು ಮೂರ್ಖ ಇಬ್ಬರೂ ಒಂದೇ ವರ್ಗಕ್ಕೆ ಸೇರಿದ್ದಾರೆ?
7. ಪ್ರಯಾಸವು ಏಕೆ ವ್ಯರ್ಥವಾಗಿದೆ?
8. ಕೆಲಸ ಸಹ ವ್ಯರ್ಥ ಎನ್ನುವ ತೀರ್ಮಾನಕ್ಕೆ ಶಿಕ್ಷಕ ಬರುತ್ತಾನೆ. ಪರಿಣಾಮವಾಗಿ, ಮನುಷ್ಯನು ಏನು ಮಾಡಬೇಕು?

ಪ್ರಸಂಗಿ ಅಧ್ಯಾಯ 2 ಆಲೋಚಿಸಿರಿ ಮತ್ತು ಚರ್ಚಿಸಿರಿ

ಪದ್ಯರೂಪಿ ಭಾಗಗಳು ಕನ್ನಡದ ಸತ್ಯವೇದವು ಮತ್ತು ಪವಿತ್ರ ಬೈಬಲ್‌ಗಳಲ್ಲಿ ಕಾಣಿಸುವುದಿಲ್ಲ. ಹಾಗಾಗಿ 1–3 ಪ್ರಶ್ನೆಗಳನ್ನು ಉತ್ತರಿಸಲು ಪವಿತ್ರಗ್ರಂಥ ಮತ್ತು ಸತ್ಯವೇದವನ್ನು ಉಪಯೋಗಿಸಿರಿ.

1. ಈ ಅಧ್ಯಯದಲ್ಲಿ ಶಿಕ್ಷಕನು ಮನುಷ್ಯನ ಬಗ್ಗೆ ಯಾವ ತಿಳುವಳಿಕೆಯನ್ನು ವ್ಯಕ್ತಪಡಿಸುತ್ತಾನೆ?
2. ವಚನ 24–26 ರಲ್ಲಿ ಶಿಕ್ಷಕನು ದೇವರ ಯಾವ ಚಿತ್ರಣ ಮತ್ತು ತಿಳುವಳಿಕೆಯನ್ನು ವ್ಯಕ್ತಪಡಿಸುತ್ತಾನೆ?
3. ಈ ಅಧ್ಯಯನವನ್ನು ಸಾರಾಂಶಗೊಳಿಸಲು ನಿಮ್ಮದೇ ಪದಗಳನ್ನು ಉಪಯೋಗಿಸಿರಿ. ಇದು ಈ ಮೂರು ಕ್ಷೇತ್ರಗಳನ್ನು ಒಳಗೊಂಡಿರಬೇಕು:

   ಅ. ಶಿಕ್ಷಕನು ಯಾವ ಚಟುವಟಿಕೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ?

   ಆ. ಆತನ ಭಾಗವಹಿಸುವಿಕೆಯ ಫಲಿತಾಂಶಗಳೇನು?

ಇ. ಆತನು ಯಾವ ತೀರ್ಮಾನಕ್ಕೆ ಬರುತ್ತಾನೆ?

4. ಈ ಅಧ್ಯಯನದಲ್ಲಿನ ಮನೋಭಾವವನ್ನು ನೀವು ಹೇಗೆ ವಿವರಿಸುವಿರಿ? ಏಕೆ?

ಪ್ರಸಂಗಿ ಅಧ್ಯಾಯ 3

ಪೀಠಿಕೆ ಮತ್ತು ಟಿಪ್ಪಣಿಗಳು

ಈ ಅಧ್ಯಾಯವು "ಪ್ರತಿಯೊಂದು ಕಾರ್ಯಕ್ಕೂ ಒಂದು ಕಾಲವಿದೆ" ಎಂಬ ವಿಷಯಾಂಶದ ಮೇಲಿನ ಒಂದು ವಚನದೊಂದಿಗೆ ಪ್ರಾರಂಭವಾಗುತ್ತದೆ (ಕನ್ನಡದ ಸತ್ಯವೇದದಲ್ಲಿ ಪದ್ಯವಾಗಿ ತೋರಿಸಿಲ್ಲ) (ವಚನ 1–8). ಹಾಗೆಯೇ ದೇವರ ನ್ಯಾಯತೀರ್ಪಿನ ದೃಷ್ಟಿಕೋನದಲ್ಲಿ ಈ ಲೋಕದಲ್ಲಿನ ಮನುಷ್ಯನ ಜೀವನದ ಮೇಲಿನ ಸಾಮಾನ್ಯ ವಿಮರ್ಶೆಯನ್ನು ಕಾಣಬಹುದು (ವಚನ 9–22).

ವಚನ 1: ಹೋಲಿಸಿ 8:6

ಆಕಾಶದ ಕೆಳಗೆ (ವಚನ 1): ಈ ಹೇಳಿಕೆಯು "ಸೂರ್ಯನ ಕೆಳಗೆ" ಎಂಬ ಹೇಳಿಕೆಗೆ ಸಮಾನಾರ್ಥಕವಾಗಿದೆ. 1 ಮತ್ತು 2 ನೇ ಅಧ್ಯಾಯ ನೋಡಿ

ಪ್ರಯಾಸ (ವಚನ 9, 13): ಅಧ್ಯಾಯ 2 ಅನ್ನು ನೋಡಿ

ಅನಂತಕಾಲ (ವಚನ 11): ಇದಕ್ಕೆ ಇಬ್ರಿಯ ಪದ ಓಲಾಮ್, ಇದು ಹಿನ್ನಲೆಯನ್ನು ಆಧರಿಸಿ "ಎಂದೆಂದಿಗೂ, ಯುಗಯುಗಾಂತರ, ದೀರ್ಘಕಾಲ, ಹಳೇಯ, ಪ್ರಾಚೀನ" ಎಂಬುದಾಗಿ ಅರ್ಥೈಸುತ್ತದೆ.

ಗ್ರಹಿಸಲಾರದಂತೆ (ವಚನ 11): ಕಂಡುಹಿಡಿ, ಅಥವಾ ಗ್ರಹಿಸು ಎಂಬ ಇಬ್ರಿಯ ಪದವು ಈ ಪುಸ್ತಕದ ಈ ವಚನ ಮತ್ತು ಇತರ ವಚನಗಳಲ್ಲಿ ಅಧ್ಯಯನದಿಂದ "ತಿಳಿದುಕೊ, ಗ್ರಹಿಸಿಕೋ" ಎಂಬ ಅರ್ಥವನ್ನು ಹೊಂದಿದೆ (7:14, 24, 27, 28, 29, 8:17). ಹಾಗಾಗಿ ಜೀವನವನ್ನು ಅರ್ಥೈಸಿಕೊಳ್ಳು ತನ್ನ ಬಯಕೆ, ಅಲ್ಲದೇ ಆತನ ಇತಿಮಿತಿಗಳು ಸಹ ದೇವರಿಂದಲೇ ನೇಮಿಸಲ್ಪಟ್ಟಿವೆ ಎಂದು ಬೋಧಕನು ಅರಿತುಕೊಳ್ಳುತ್ತಾನೆ.

ಪ್ರಾಣ (ವಚನ 19): ಮತ್ತು **ಆತ್ಮ** (ವಚನ 21): ಈ ಎರಡೂ ವಚನಗಳಲ್ಲಿ ಒಂದೇ ಇಬ್ರಿಯ ಪದ ಬಳಸಲ್ಪಟ್ಟಿದೆ. ಕನ್ನಡದ ಬಾಷಾಂತರಗಳು ಎರಡು ವಿಭಿನ್ನ ಪದಗಳನ್ನು ಆರಿಸಿಕೊಂಡಿವೆ.

ಪ್ರಶ್ನೆಗಳು

1. ಪದ್ಯದಲ್ಲಿ ನೀವು ಎಷ್ಟು "ಕಾಲಗಳು" ಅಥವಾ "ಸಮಯಗಳನ್ನು" ಕಾಣುವಿರಿ? ಅವು ಮನುಷ್ಯ ಜೀವನದ ಯಾವ ಕ್ಷೇತ್ರಗಳನ್ನು ಒಳಗೊಂಡಿವೆ?
2. ಈ ಪಠ್ಯದಲ್ಲಿ (ವಚನ 9–13) ಶಿಕ್ಷಕನು ಮನುಷ್ಯನ "ಶ್ರಮ"ದ ಯಾವ ಚಿತ್ರಣವನ್ನು ಚಿತ್ರಿಸುತ್ತಾನೆ?
3. ಕನ್ನಡದ ಸತ್ಯವೇದವು ಮತ್ತು ಪವಿತ್ರ ಗ್ರಂಥ ಭಾಷಾಂತರಗಳಲ್ಲಿ ವಚನ 11 ಅನ್ನು ಹೋಲಿಕೆ ಮಾಡಿ. ಈ ವಚನವನ್ನು ಹೇಗೆ ಅರ್ಥೈಸಿಕೊಳ್ಳಬೇಕೆಂದು ನೀವು ಯೋಚಿಸುವಿರಿ?
4. ಈ ಲೋಕದಲ್ಲಿನ ನ್ಯಾಯದ ಬಗ್ಗೆ ಶಿಕ್ಷಕನ ತೀರ್ಮಾನಗಳು ಯಾವುವು (ವಚನ 16–17)?
5. ಮನುಷ್ಯರು ಮತ್ತು ಪ್ರಾಣಿಗಳ ಬಗ್ಗೆ ಶಿಕ್ಷಕನ ತೀರ್ಮಾನಗಳು ಯಾವುವು (18–19)?
6. ಅಧ್ಯಯನದ ಕೊನೆಯಲ್ಲಿ ಶಿಕ್ಷಕನ ತೀರ್ಮಾನಗಳೇನು?

ಪ್ರಸಂಗಿ ಅಧ್ಯಾಯ 3 ಆಲೋಚಿಸಿರಿ ಮತ್ತು ಚರ್ಚಿಸಿರಿ

1. ವಚನ 11 ರಿಂದ ದೇವರು ಮತ್ತು ಮನುಷ್ಯನ ಬಗ್ಗೆ ನಾವು ಏನು ತಿಳಿದುಕೊಳ್ಳುತ್ತೇವೆ?
2. ಇಲ್ಲಿಯವರೆಗೆ ಮನುಷ್ಯ ಜೀವನದ ಬಗ್ಗೆ ಶಿಕ್ಷಕನ ಶೋಧನೆಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಪ್ರಸಂಗಿ 5:8–6:12

ಪೀಠಿಕೆ ಮತ್ತು ಟಿಪ್ಪಣಿಗಳು

5 ನೇ ಅಧ್ಯಾಯವು ಪ್ರಾಮಾಣಿಕತೆಯಿಂದ ಪ್ರಾರಂಭವಾಗಿ, ನಾವು ದೇವರಿಗೆ ಭಯಪಡಬೇಕು ಎಂಬ ತೀರ್ಮಾನದೊಂದಿಗೆ ಮುಕ್ತಾಯವಾಗುತ್ತದೆ (ವಚನ 1–7).

ತದನಂತರ ಬೋಧಕನು ಈ ಲೋಕದಲ್ಲಿನ ಮನುಷ್ಯನ ಜೀವನದ ವಿಭಿನ್ನ ಆಯಾಮಗಳನ್ನು ತಿಳಿಸುತ್ತಾನೆ. ನ್ಯಾಯವನ್ನು ಪಡೆಯಲು ಬಡವರಿಗೆ ಇರುವ ಹೋರಾಟಗಳೊಂದಿಗೆ ಆತನು ಪ್ರಾರಂಭಿಸುತ್ತಾನೆ. ಅಲ್ಲದೇ ಶ್ರೀಮಂತರು ಎದುರಿಸುವ ಸಮಸ್ಯೆಗಳ ಅನೇಕ ಉದಾಹರಣೆಗಳೊಂದಿಗೆ ಆತನು ಮುಂದುವರಿಸುತ್ತಾನೆ. ಈ ಹಿಂದೆ ಪುಸ್ತಕದಲ್ಲಿ ತಾನು ಚರ್ಚಿಸಿದ ಸೂರ್ಯನ ಕೆಳಗಿನ ಜೀವನದ ಬಗೆಗಿನ ಅನೇಕ ವಿಷಯಗಳನ್ನು ಸಾರಾಂಶಗೊಳಿಸುವುದರೊಂದಿಗೆ ಆತನು ಮುಕ್ತಾಯಗೊಳಿಸುತ್ತಾನೆ.

ವಚನ 5:9: ಇಬ್ರಿಯದಲ್ಲಿ ಈ ವಚನದ ಅರ್ಥವು ಅಸ್ಪಷ್ಟವಾಗಿದೆ.

ಬಹುವರುಷ ಬದುಕಿದವನಿಗೆ ಸುಖ ತೃಪ್ತಿಯೂ ಉತ್ತರಕ್ರಿಯೆಯೂ ಇಲ್ಲದಿದ್ದರೆ (6:3): ಈ ಸತ್ಯಾಂಶದ ಸಾಂಸ್ಕೃತಿಕ ಪ್ರಾಮುಖ್ಯತೆಯು ಒಬ್ಬ ವ್ಯಕ್ತಿಯು ಶೋಕವಿಲ್ಲದೆ ಮತ್ತು ಗೌರವವಿಲ್ಲದೆ ಸಾಯುವನು ಎಂಬುದಾಗಿದೆ.

ಪ್ರಶ್ನೆಗಳು

1. 5:8–9 ರಲ್ಲಿ ಮನುಷ್ಯ ಜೀವನದ ಯಾವ ಅಂಶವನ್ನು ತರಲಾಗಿದೆ? ಶಿಕ್ಷಕರು ಯಾವ ತೀರ್ಮಾನಕ್ಕೆ ಬರುತ್ತಾರೆ?
2. ಮನುಷ್ಯ ಜೀವನದ ಮುಂದಿನ ಅಂಶವು ಹಣ ಮತ್ತು ಅದರ ಪರಿಣಾಮವಾಗಿದೆ (5:10–12). ಹಣವನ್ನು ಹೊಂದುವುದರ ಕುರಿತ ಯಾವ ಮೂರು ಅಂಶಗಳನ್ನು ಶಿಕ್ಷಕನು ಹೇಳುತ್ತಾನೆ?
3. 5:13–17 ರಲ್ಲಿ ಶಿಕ್ಷಕನು ಒಂದು "ಪ್ರಕರಣದ ಕಥೆ"ಯನ್ನು ಮುಂದಿಡುತ್ತಾನೆ. ಆ ಕಥೆ ಏನು ಮತ್ತು ಶಿಕ್ಷಕನು ಯಾವ ತೀರ್ಮಾನಕ್ಕೆ ಬರುತ್ತಾನೆ?
4. ಈ ಪಾಠದಲ್ಲಿ ಇಲ್ಲಿಯವರೆಗೆ, ಶಿಕ್ಷಕನು ಈ ಲೋಕದಲ್ಲಿ ಮನುಷ್ಯ ಜೀವಿತದ ಮೇಲೆ ಮೂರು ನಕಾರಾತ್ಮಕ ಅಂಶಗಳನ್ನು ಪ್ರಸ್ತುತಪಡಿಸುತ್ತಾನೆ: ಅನ್ಯಾಯ ಮತ್ತು ಬಡವರನ್ನು ತುಳಿಯುವ ಆಡಳಿತ ವ್ಯವಸ್ಥೆ, ಮನುಷ್ಯನನ್ನು ತೃಪ್ತಿಪಡಿಸಲು ಮತ್ತು ಸಂತೋಷಗೊಳಿಸಲು ಹಣದ ಅಸಫಲತೆ ಮತ್ತು ಮನುಷ್ಯನ ಸಂಪತ್ತು ಐಶ್ವರ್ಯದ ವ್ಯರ್ಥತೆ. ಹಾಗಾದರೆ ಶಿಕ್ಷಕನು ಯಾವ ತೀರ್ಮಾನಕ್ಕೆ ಬರುತ್ತಾನೆ (5:12–20)?
5. 6:1–6 ರಲ್ಲಿ ಇನ್ನೆರಡು "ಪ್ರಕರಣದ ಕಥೆ"ಗಳನ್ನು ಪ್ರಸ್ತುತಪಡಿಸುತ್ತಾರೆ. ಅವು ಯಾರ ಕುರಿತಾಗಿವೆ?
6. ಎರಡನೇ "ಪ್ರಕರಣದ ಕಥೆ"ಯಲ್ಲಿ (6:3–6) "ಅತಿಶಯೋಕ್ತಿ" ಎಂದು ಕರೆಯಲ್ಪಡುವ ಶಬ್ದಾಲಂಕಾರಕ್ಕೆ ಎರಡು ಉದಾಹರಣೆಗಳಿವೆ. ಅವು ಯಾವುವು ಮತ್ತು ಅದನ್ನು ಹೇಗೆ ಅರ್ಥಮಾಡಿಕೊಳ್ಳಬೇಕು?
7. ಎರಡನೇ "ಪ್ರಕರಣದ ಕಥೆ"ಯಲ್ಲಿ (6:3–6) ಸಹ ನಾವು ಇಬ್ಬರು ವ್ಯಕ್ತಿಗಳ ನಡುವೆ ಒಂದು ಆಶ್ಚರ್ಯಕರವಾದ ವ್ಯತ್ಯಾಸವನ್ನು ಕಾಣುತ್ತೇವೆ. ಶಿಕ್ಷಕನು ಹೇಳುವ ಮುಖ್ಯ ಅಂಶವೇನು?

ಪ್ರಸಂಗಿ 5:8–6:12 ಆಲೋಚಿಸಿರಿ ಮತ್ತು ಚರ್ಚಿಸಿರಿ

ಈ ಪಾಠದ ಉಳಿದ ಭಾಗವು (6:7–12) "ಸೂರ್ಯನ ಕೆಳಗಿನ" ಜೀವನ, ಈ ಲೋಕದಲ್ಲಿನ ಜೀವನದ ಬಗ್ಗೆ ಈ ಹಿಂದೆ ಶಿಕ್ಷಕನು ಹೇಳಿದ ಅನೇಕ ಸಂಗತಿಗಳ ಸಾರಾಂಶವಾಗಿ ಅರ್ಥೈಸಿಕೊಳ್ಳಬೇಕಿದೆ. ಈ ವಚನಗಳಿಂದ ಈ ಲೋಕದಲ್ಲಿನ ಅಲ್ಪ ತಿಳುವಳಿಕೆಯುಳ್ಳ ವ್ಯಕ್ತಿಯೊಬ್ಬನು ಕೇಳಬಹುದಾದ ಪ್ರಶ್ನೆಗಳ ಪಟ್ಟಿಯನ್ನು ಮಾಡಲು ಸಾಧ್ಯವಿದೆ. ವಚನ 7–12 ರ ಆಧಾರದಿಂದ ಈ ಪ್ರಶ್ನೆಗಳನ್ನು ನೀವು ಹೇಗೆ ರೂಪಿಸುವಿರಿ?

ಪ್ರಸಂಗಿ ಅಧ್ಯಾಯ 9

ಪೀಠಿಕೆ ಮತ್ತು ಟಿಪ್ಪಣಿಗಳು

ಈ ಅಧ್ಯಾಯದಲ್ಲಿ ಬೋಧಕನು ಈ ಲೋಕದಲ್ಲಿನ ನಮ್ಮ ಜೀವನ ಅಲ್ಲದೆ ನಮ್ಮ ಭವಿಷ್ಯವು ದೇವರ ಹಸ್ತದಲ್ಲಿದೆ ಮತ್ತು ಈ ಜೀವನದ ನಂತರದ ನಮ್ಮ ಭವಿಷ್ಯವು ಒಳ್ಳೆಯದಾಗಿರುತ್ತದೋ ಅಥವಾ ಕೆಟ್ಟದ್ದಾಗಿರುತ್ತದೋ ಎಂಬುದನ್ನು ತಿಳಿದುಕೊಳ್ಳುವುದು ನಮ್ಮಿಂದ ಸಾಧ್ಯವಿಲ್ಲವೆಂದು ತಿಳಿಸುತ್ತಾನೆ. ಹಾಗೆಯೇ ಈ ಲೋಕದಲ್ಲಿನ ನಮ್ಮ ಜೀವಿತದ ಮೂರು ಸಂಶಯಗಳನ್ನು ತಿಳಿಸುತ್ತಾನೆ. ಜ್ಞಾನದ ಮೇಲೆ ಕೆಲವು ಪಾರಾಮರ್ಶೆಗಳೊಂದಿಗೆ ಆತನು ಮುಕ್ತಾಯಗೊಳಿಸುತ್ತಾನೆ.

ನಿನ್ನ ಬಟ್ಟೆಗಳು ಬೆಳ್ಳಗಿರಲಿ (8): ಇದು ಸಂತೋಷದ ಕುರಿತಾಗಿನ ಒಂದು ಸಾಂಪ್ರದಾಯಿಕವಾದ ಒಂದು ಹೇಳಿಕೆಯಾಗಿದೆ.

ಪ್ರಶ್ನೆಗಳು

1. ಶಿಕ್ಷಕನು ಏನನ್ನು ಪರಾಮರ್ಶಿಸುತ್ತಾನೆ?
2. ವಚನ 1 ರಲ್ಲಿ ಈ ಲೋಕದಲ್ಲಿನ ಜೀವನದ ಬಗ್ಗೆ ಶಿಕ್ಷಕನು ಎರಡು ಹೇಳಿಕೆಗಳನ್ನು ಕೊಡುತ್ತಾನೆ? ಅವು ಯಾವುವು?
3. ಅಧ್ಯಾಯದ ಉಳಿದ ಭಾಗದಲ್ಲಿ "ಸೂರ್ಯನ ಕೆಳಗೆ" ಏನು ನಡೆಯುತ್ತಿದೆ ಎಂಬುದರ ಮೂರು ಸಂಗತಿಗಳನ್ನು ತಿಳಿಸುತ್ತಾನೆ. ಅವು ಯಾವುವು?

   ಅ. ವಚನ 2–10 ರಲ್ಲಿ ಶಿಕ್ಷಕನು ತಿಳಿಸುವ ಮನುಷ್ಯನ ಜೀವಿತದ ಅಂಶ?

   ಆ. ವಚನ 11–12 ರಲ್ಲಿ ಶಿಕ್ಷಕನು ತಿಳಿಸುವ ಮನುಷ್ಯನ ಜೀವಿತದ ಅಂಶ?

   ಇ. ವಚನ 13–18 ರಲ್ಲಿ ಶಿಕ್ಷಕನು ತಿಳಿಸುವ ಮನುಷ್ಯನ ಜೀವಿತದ ಅಂಶ?
4. ವಚನ 2–3 ರಲ್ಲಿ ಶಿಕ್ಷಕನು ತಿಳಿಯ ಮಾಡುವ ಸಂಗತಿ ಏನು? 2:14 ರೊಂದಿಗೆ ಹೋಲಿಸಿ?
5. ವಚನ 11 ರಲ್ಲಿ ಈ ಲೋಕದಲ್ಲಿನ ಜೀವಿತದ ಅನಿಶ್ಚಿತತೆಯ ಐದು ಉದಾಹರಣೆಗಳನ್ನು ಕೊಡುತ್ತಾನೆ. ಅವು ಯಾವುವು?
6. ವಚನ 12 ರಲ್ಲಿ ಮನುಷ್ಯನ ದೃಶ್ಯವನ್ನು ವಿವರಿಸಲು ಎರಡು ಉಪಮೆಗಳನ್ನು ಉಪಯೋಗಿಸುತ್ತಾನೆ. ಅವನ್ನು ವಿವರಿಸಿ.
7. "ಬಡವ ಆದರೆ ಜ್ಞಾನಿ"ಯ ಕುರಿತಾದ ಕಥೆಯು ಜನರು ಹಿಂದಿನದನ್ನು ಮರೆತು ಬಿಡುತ್ತಾರೆ ಎನ್ನುವ ವಾಸ್ತವಾಂಶವನ್ನು ಹೇಗೆ ತಿಳಿಸುತ್ತದೆ (ವಚನ 13–15).
8. ವಚನ 16–18 ರಲ್ಲಿ "ಸೂರ್ಯನ ಕೆಳಗೆ" ಇರುವ ಜ್ಞಾನದ ಬಗ್ಗೆ ನಾವು ಏನನ್ನು ಕಲಿಯುತ್ತೇವೆ?

ಪ್ರಸಂಗಿ ಅಧ್ಯಾಯ 9 ಆಲೋಚಿಸಿರಿ ಮತ್ತು ಚರ್ಚಿಸಿರಿ

1. "ಸತ್ತ ಸಿಂಹಕ್ಕಿಂತ ಬದುಕಿರುವ ನಾಯಿಯೇ ಲೇಸು" (ವಚನ 4) ಎಂಬ ಹೇಳಿಕೆಯಿಂದ ಶಿಕ್ಷಕನು ಏನು ಅರ್ಥೈಸುತ್ತಾನೆ ಎಂದು ನೀವು ಭಾವಿಸುತ್ತೀರಿ?
2. ವಚನ 8–10 ರಲ್ಲಿನ ಬುದ್ಧಿವಾದವನ್ನು ನೀವು ಹೇಗೆ ಅರ್ಥಮಾಡಿಕೊಳ್ಳುತ್ತೀರಿ?

ಪ್ರಸಂಗಿ 11:7–12:8

ಪೀಠಿಕೆ ಮತ್ತು ಟಿಪ್ಪಣಿಗಳು

ನಮ್ಮ ಸತ್ಯವೇದದಲ್ಲಿನ ಶೀರ್ಷಿಕೆಯು ಈ ವಾಕ್ಯಭಾಗದ ಒಂದು ಉತ್ತಮವಾದ ಸಾರಾಂಶವಾಗಿದೆ. **"ಯೌವನದಲ್ಲಿಯೇ ನಿನ್ನ ಸೃಷ್ಟಿಕರ್ತನನ್ನು ಸ್ಮರಿಸು".** ಇದು ಯೌವನ ಪ್ರಾಯದ ಬಗ್ಗೆ ಕೆಲವು ಮಾತುಗಳಿಂದ ಪ್ರಾರಂಭವಾಗಿ ವೃದ್ಧಾಪ್ಯ ಮತ್ತು ಮರಣದ ಬಗ್ಗೆ ಬಹಳಷ್ಟು ವಿವರಗಳೊಂದಿಗೆ ಮುಂದುವರಿಯುತ್ತದೆ. ಇದನ್ನು ಪದ್ಯರೂಪದಲ್ಲಿ ಬರೆಯಲಾಗಿದ್ದು, ಇದರ ಭಾಷೆಯು ಬಹುಮಟ್ಟಿಗೆ ಅಲಂಕಾರಿಕವಾಗಿದೆ.

ಬಾದಾಮಿಯ ಮರ (12:5): ಈ ಮರವು ಗುಲಾಬಿ ಮತ್ತು ಬಿಳಿ ಬಣ್ಣದ ಹೂಗಳನ್ನು ಹೊಂದಿರುತ್ತದೆ.

ಮಿಡತೆ (12:5): ಮಿಡತೆಯು ಅತ್ತಿತ್ತ ಕುಪ್ಪಳಿಸುವ ಒಂದು ಜೀವಿಯಾಗಿದೆ.

ಪ್ರಶ್ನೆಗಳು

1. ಈ ವಾಕ್ಯಭಾಗವನ್ನು ನೀವು ಹೇಗೆ ರಚಿಸುತ್ತೀರಿ?
2. ಯೌವನಸ್ಥನಿಗೆ ಶಿಕ್ಷಕನು ಯಾವ ಸಲಹೆಯನ್ನು ನೀಡುತ್ತಾರೆ (11:7–10)?
3. 12:2 ರಲ್ಲಿ ವೃದ್ಧಾಪ್ಯಕ್ಕೆ ಯಾವ ರೂಪಾಲಂಕಾರಗಳನ್ನು ಬಳಸುತ್ತಾರೆ?
4. 12:3–4 ರಲ್ಲಿ ವೃದ್ಧಾಪ್ಯಕ್ಕೆ ಶಿಕ್ಷಕನು ಯಾವ ರೂಪಾಲಂಕಾರಗಳನ್ನು ಬಳಸುತ್ತಾನೆ?
5. 12:4–5 ರಲ್ಲಿ ವೃದ್ಧಾಪ್ಯವನ್ನು ಶಿಕ್ಷಕನು ಹೇಗೆ ವಿವರಿಸುತ್ತಾನೆ?
6. 12:6 ರಲ್ಲಿ ಮರಣಕ್ಕೆ ಶಿಕ್ಷಕನು ಯಾವ ರೂಪಾಲಂಕಾರಗಳನ್ನು ಬಳಸುತ್ತಾನೆ?

ಪ್ರಸಂಗಿ 11:7–12:8 ಆಲೋಚಿಸಿರಿ ಮತ್ತು ಚರ್ಚಿಸಿರಿ

12:7 ಅನ್ನು ನೀವು ಹೇಗೆ ಅರ್ಥಮಾಡಿಕೊಳ್ಳುತ್ತೀರಿ?

ಪ್ರಸಂಗಿ 12:9–14

ಪೀಠಿಕೆ

ಬೋಧಕನು ಈ ಲೋಕದಲ್ಲಿನ ಜೀವನದ ಲೆಕ್ಕಾಚಾರವನ್ನು ತಾನು ಪ್ರಾರಂಭಿಸಿದ ಅದೇ "ವ್ಯರ್ಥವೇ ವ್ಯರ್ಥ, ಸಮಸ್ತವೂ ವ್ಯರ್ಥ" ಎಂಬ ಪದದೊಂದಿಗೇ ಮುಕ್ತಾಯಗೊಳಿಸುತ್ತಾನೆ. ಆತನು ಬುದ್ಧಿವಂತ, ವಿವೇಕ, ನೀತಿವಂತ, ಯಥಾರ್ಥ ಮತ್ತು ಮನುಷ್ಯನ ಅಸ್ತಿತ್ವದ ನಿಜವಾದ ಪರಿಶೋಧಕರಾದ ಅನೇಕರ ಲೋಕದಲ್ಲಿನ ಜೀವನವು "ದೇವರ ಭಯವನ್ನು" ಲೆಕ್ಕಕ್ಕೆ ತೆಗೆದುಕೊಳ್ಳದ ಹೊರತು ಯಾವುದೇ ಉದ್ದೇಶವಿಲ್ಲ ಅರ್ಥವಿಲ್ಲದ್ದಾಗಿರುತ್ತದೆಂದು ಆತನು ಮುಕ್ತಾಯಗೊಳಿಸುತ್ತಾನೆ. ಆ ಸತ್ಯದ ಸುಳಿಯನ್ನು ಬೋಧಕನು ಪುಸ್ತಕದುದ್ದಕ್ಕೂ ಪ್ರಕಟಿಸುತ್ತಾನೆ (ಉದಾಹರಣೆ ನೋಡಿ 3:10–11, 17–18, 5:7, 8:12–13, 11:9). ಆದರೆ ಇವೆಲ್ಲವೂ ಕೇವಲ ದೇವರ ಭಯದಲ್ಲಿನ ಜೀವಿತದ ಸುಳಿವುಗಳಾಗಿವೆ. ಮನುಷ್ಯನ ಜೀವಿತವು ವ್ಯರ್ಥವಾದದ್ದು, ಅಲ್ಪವಾದದ್ದು ಮತ್ತು ಗ್ರಹಿಸಲಾಗದು ಎಂಬ ಅನಿಸಿಕೆಯನ್ನು ಬೋಧಕನು ತನ್ನ ಓದುಗರಿಗೆ ಬಿಟ್ಟುಹೋಗಿದ್ದಾನೆ.

ಈಗ ಪುಸ್ತಕದ ಸಂಪಾದಕನು ಮನುಷ್ಯನ ಜೀವಿತಕ್ಕೆ ಬೋಧಕನ ಅನ್ವೇಷಣೆಯಿಂದ ಓದುಗನು ತಪ್ಪಾದ ತೀರ್ಮಾನವನ್ನು ಕೊಡಬಾರದೆಂದು ಬಯಸುತ್ತಾನೆ. ಹಾಗಾಗಿ ಆತನು ಈ ಪುಸ್ತಕವನ್ನು ಎರಡು ಪ್ರಬೋಧನೆಗಳು ಮತ್ತು ಈ ಪ್ರಬೋಧನೆಗಳಿಗೆ ಕಾರಣಗಳನ್ನು ಕೊಡುತ್ತಾನೆ.

ಪ್ರಶ್ನೆಗಳು

1. ಈ ಕೊನೆಯ ವಚನಗಳಲ್ಲಿ ಶಿಕ್ಷಕನನ್ನು ಹೇಗೆ ವಿವರಿಸಲಾಗಿದೆ?
2. "ಜ್ಞಾನಿಗಳ ಮಾತುಗಳ" ಪ್ರಭಾವವನ್ನು ವಿವರಿಸಲು ಎರಡು ಉಪಮೆಗಳು ಬಳಸಲಾಗುತ್ತದೆ. ಅವು ಯಾವುವು? ಮತ್ತು ಅವುಗಳ ಮೂಲಕ "ಜ್ಞಾನಿಗಳ ಮಾತುಗಳ" ಬಗ್ಗೆ ನಾವು ಏನು ಕಲಿಯುತ್ತೇವೆ?
3. ಇಡೀ ಪಸ್ರಂಗಿ ಪುಸ್ತಕದ ಅಂತ್ಯವನ್ನು ಒಂದು ಉಪದೇಶದಲ್ಲಿ ಸಾರಾಂಶಗೊಳಿಸಲಾಗಿದೆ ಮತ್ತು ಈ ಉಪದೇಶಕ್ಕೆ ಎರಡು ಕಾರಣಗಳಿವೆ. ಅವು ಯಾವುವು?

ಪ್ರಸಂಗಿ 12:9–14 ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಈ ವಾಕ್ಯಭಾಗವು ಹಿಂದಿನ ಪಠ್ಯಕ್ಕಿಂತ ಹೇಗೆ ಭಿನ್ನವಾಗಿದೆ?. ನಿಮ್ಮ ಅಭಿಪ್ರಾಯಗಳನ್ನು ಸಹ ನೀಡಿ.
2. 11 ನೇ ವಚನದಲ್ಲಿ "ಕುರುಬ" ಅಂಬ ಅರ್ಥವಿರುವ ಇಬ್ರಿಯ ಪದವನ್ನು ಹೊಂದಿದೆ. ಕನ್ನಡ ಸತ್ಯವೇದಗಳಲ್ಲಿ ಇದನ್ನು ಹೇಗೆ ಅನುವಾದಿಸಲಾಗಿದೆ? ಇದನ್ನು ಈ ರೀತಿ ಏಕೆ ಅನುವಾದಿಸಲಾಗಿದೆ ಎಂದು ನೀವು ಭಾವಿಸುತ್ತೀರಿ?

ಪ್ರಸಂಗಿ ಪರೀಕ್ಷೆಯ ಪತ್ರಿಕೆ

ಪರೀಕ್ಷೆಯ ಪ್ರಶ್ನೆಗಳು

1. ಮನುಷ್ಯ ಜೀವಿತಕ್ಕೆ ಬೋಧಕನ ಅನ್ವೇಷಣೆಗಳು

ಮನುಷ್ಯನ ಜೀವಿತಕ್ಕೆ ಬೋಧಕನ ಅನ್ವೇಷಣೆ ಮತ್ತು ಆತನು ಕಂಡುಕೊಂಡ ಸಂಗತಿಗಳನ್ನು ನಿಮ್ಮದೇ ಮಾತಿನಲ್ಲಿ ಸಾರಾಂಶಗೊಳಿಸಿರಿ. ನೀವು ನಿಮ್ಮ ಸತ್ಯವೇದವನ್ನು ಉಪಯೋಗಿಸಬಹುದು ಆದರೆ ನಿಮ್ಮ ಪಠ್ಯಪುಸ್ತಕ ಮತ್ತು ನೋಟ್ಸ್ ಅಲ್ಲ. ನೀವು ಬರೀ ಸತ್ಯವೇದದ ಹೇಳಿಕೆಗಳನ್ನು ಪಟ್ಟಿ ಮಾಡಬಾರದು.

2. ಪ್ರಸಂಗಿ – ಅಪಾಯಕಾರಿ ಪುಸ್ತಕ!

ಸಾಮಾನ್ಯ ಸತ್ಯವೇದ ಓದುಗರಿಗೆ ಪ್ರಸಂಗಿಯು ಏಕೆ ಒಂದು **"**ಅಪಾಯಕಾರಿ ಪುಸ್ತಕ**"**ವಾಗಿದೆ ಎಂಬುದನ್ನು ವಿವರಿಸಿ. ನೀವು ನಿಮ್ಮ ಸತ್ಯವೇದವನ್ನು ಉಪಯೋಗಿಸಬಹುದು. ಆದರೆ ನಿಮ್ಮ ನೋಟ್ಸ್ ಮತ್ತು ಪಠ್ಯಪುಸ್ತಕವನ್ನು ಉಪಯೋಗಿಸಬಾರದು.

ಪರಮಗೀತ

ಪರಮಗೀತ ಪುಸ್ತಕದ ಪರಿಚಯ

ಶೀರ್ಷಿಕೆ, ಗ್ರಂಥಕರ್ತ ಮತ್ತು ಸಮಯ

ಈ ಹಳೇ ಒಡಂಬಡಿಕೆಯ ಪದ್ಯರೂಪಿ ಪುಸ್ತಕದ ಶೀರ್ಷಿಕೆಯು "ಪರಮಗೀತ" ಎಂಬುದಾಗಿದೆ. ಇದನ್ನು "ಹಾಡುಗಳ ಸಂಗ್ರಹ" ಅಥವಾ "ಅತ್ಯುತ್ತಮ ಹಾಡುಗಳು" ಎಂಬುದಾಗಿ ಸಹ ಭಾಷಾಂತರಿಸಬಹುದಾಗಿದೆ (ಹೋಲಿಸಿ "ರಾಜಾಧಿ ರಾಜ" ಮತ್ತು "ಕರ್ತಾದಿ ಕರ್ತ" ಇದರರ್ಥ "ರಾಜ/ಕರ್ತರಲ್ಲಿ ಅತೀ ಪ್ರಾಮುಖ್ಯನು ಎಂಬುದಾಗಿದೆ). ಅನೇಕ ಸತ್ಯವೇದ ಭಾಷಂತರಗಳು "ಸೊಲೊಮೋನನ ಗೀತ" ಎಂಬ ಶೀರ್ಷಿಕೆಯನ್ನು ಉಪಯೋಗಿಸಿವೆ.

ಹೆಚ್ಚಿನ ಕೀರ್ತನೆಗಳಲ್ಲಿ ತಲೆಬರಹವು ಕಂಡುಬರುವಂತ ಪರಮಗೀತವು ಒಂದು ಸಂಕ್ಷಿಪ್ತವಾದ ಹೇಳಿಕೆಯೊಂದಿಗೆ ಪ್ರಾರಂಭವಾಗುತ್ತದೆ. ಪರಮಗೀತವು ಸೊಲೊಮೋನನು ರಚಿಸಿದ್ದು (1:1). ಇಬ್ರಿಯದಲ್ಲಿ "ಸೊಲೊಮೋನನ" ಎಂಬ ವಾಕ್ಯದ ರೂಪವು ಎರಡು ವಿಧದಲ್ಲಿ ಅರ್ಥೈಸಲ್ಪಡುತ್ತದೆ. ಈ ಪುಸ್ತಕವು ಸೊಲೊಮೋನನಿಂದ ಬರೆಯಲ್ಪಟ್ಟಿದೆ ಅಥವಾ ಇದು ಸೊಲೊಮೋನನ ಶೈಲಿಯಲ್ಲಿ ಬರೆಯಲ್ಪಟ್ಟಿದೆ. ಸಾಂಪ್ರದಾಯಿಕವಾಗಿ ಈ ಪುಸ್ತಕವನ್ನು ದಾವೀದನ ಮಗನೂ ಮತ್ತು ಅವಿಭಜಿತ ಇಸ್ರಾಯೇಲ್ ಸಾಮ್ರಾಜ್ಯದ ಕೊನೆಯ ಅರಸನೂ ಆದ ಸೊಲೊಮೋನನಿಂದ ಬರೆಯಲ್ಪಟ್ಟಿದೆ ಎಂದು ಸತ್ಯವೇದ ಅನುವಾದಕರು ಹೇಳುತ್ತಾರೆ. ಈ ಅಭಿಪ್ರಾಯವನ್ನು ವಿವರವಾಗಿ ಹೇಳುವ ಒಂದು ವಾಸ್ತವಾಂಶವೆಂದರೆ (ಖಂಡಿತವಾಗಿ ಇದನ್ನು ಅವಿಭಜಿತ ಸಾಮ್ರಾಜ್ಯದ ಅವಧಿಯಲ್ಲಿಯೇ ಬರೆಯಲಾಗಿದೆ.) 6:4 ರಲ್ಲಿ ತಿರ್ಚ ಮತ್ತು ಯೆರೂಸಲೇಮನ್ನು ಸಹ ತಿಳಿಸಲಾಗಿದೆ. ಇಸ್ರಾಯೇಲಿನ ವಿಭಜನೆಯ ನಂತರ ತಿರ್ಚ ಪಟ್ಟಣವು ಉತ್ತರ ರಾಜ್ಯಕ್ಕೆ ಸೇರಿಕೊಂಡಿತು.

ಹೆಚ್ಚಿನ ಆಧುನಿಕ ಸತ್ಯವೇದಪಂಡಿತರು ಸೊಲೊಮೋನನ ಗ್ರಂಥಕರ್ತತ್ವವನ್ನು ಪ್ರಶ್ನಿಸುತ್ತಾರೆ. ಇದಕ್ಕೆ ಅವರ ಕಾರಣಗಳು ಇಂತಿವೆ:

- ಸೊಲೊಮೋನನನ್ನು (ಶೀರ್ಷಿಕೆ ಹೊರತುಪಡಿಸಿ) ತೃತೀಯ ಪುರುಷನಾಗಿ ("ಅವನು" "ನಾನು" ಎಂದಿಲ್ಲ) ಪುಸ್ತಕದ ಕೆಲವಡೆ ತಿಳಿಸಲಾಗಿದೆ. 1:5 ರಲ್ಲಿ ಕೇದಾರಿನ ಕಪ್ಪು ಗುಡಾರವನ್ನು ಒಂದು ಹೋಲಿಕೆಯಾಗಿ ಬಳಸಲಾಗಿದೆ. 3:7–11 ರಲ್ಲಿ ಅಂತರದಿಂದ ಸೊಲೊಮೋನನ ವಿವಾಹದ ಮೆರವಣಿಗೆಯನ್ನು ವರ್ಣಿಸಲಾಗಿದೆ. ಮತ್ತು 8:11–12 ರಲ್ಲಿ ಸ್ತ್ರೀಯು ಸೊಲೊಮೋನನ ಸಂಪತ್ತನ್ನು ತನ್ನ ನೈತಿಕತೆಗೆ ನಕಾರಾತ್ಮಕವಾಗಿ ಹೋಲಿಸುತ್ತಾಳೆ. ಪ್ರಶ್ನೆ ಏನೆಂದರೆ ಸೊಲೊಮೋನನು ತನ್ನನ್ನು ಇಷ್ಟು ಅಂತರ ಮತ್ತು ನಕಾರಾತ್ಮಕ ರೀತಿಯಲ್ಲಿ ವರ್ಣಿಸಿಕೊಳ್ಳಲು ಸಾಧ್ಯವೇ?

- ಪ್ರಿಯಳನ್ನು ಶೂಲಮ್ ಊರಿನವಳೆಂದು 6:13 ರಲ್ಲಿ ಕರೆಯಲಾಗಿದೆ. ಈ ಮಾಹಿತಿಯು 1 ಅರಸುಗಳು. 3:1 ರಲ್ಲಿ ತನ್ನ ಆಳ್ವಿಕೆಯ ಆರಂಭದಲ್ಲಿ ಸೊಲೊಮೋನನು ಐಗುಪ್ತದ ಅರಸನಾದ ಫರೋಹನ ಮಗಳೊಂದಿಗೆ ಮದುವೆಯ ಒಪ್ಪಂದ (ಮೈತ್ರಿ) ಮಾಡಿಕೊಂಡನು ಎಂಬ ಹೇಳಿಕೆಗೆ ಸರಿಹೊಂದುವುದಿಲ್ಲ.

- ಸೊಲೊಮೋನನ ಅನ್ಯ ಸ್ತ್ರೀಯರ ಮೋಹವು (ಮೈತ್ರಿ) (1 ಅರಸುಗಳು. 11:1–8) ಇಸ್ರಾಯೇಲ್ಯರಿಗೆ ಆತನನ್ನು ವೈವಾಹಿಕ ಪ್ರೀತಿಯ ಒಂದು ಕೆಟ್ಟ ಉದಾಹರಣೆಯನ್ನಾಗಿ ಮಾಡುತ್ತದೆ.

ಅಂತಿಮವಾಗಿ ಸೊಲೊಮೋನನೇ ಪರಮಗೀತದ ಗ್ರಂಥಕರ್ತನು ಎಂಬುದನ್ನು ಖಚಿತವಾಗಿ ತಿಳಿದುಕೊಳ್ಳುವುದು ಅಷ್ಟು ಸುಲಭವಲ್ಲ. ಖಂಡಿತವಾಗಿ ಆ ಮಹಾನ್ ಕವಿ ಯಾರು ಎಂಬುದು ಅತೀ ಪ್ರಾಮುಖ್ಯ ಸಂಗತಿಯಲ್ಲ.

ಪ್ರಬೇಧ ಮತ್ತು ರಚನೆ

ಪರಮಗೀತವು ಕುರಿಕಾಯುವ ಒಬ್ಬ ಯೌವನಸ್ಥ ಹುಡುಗ ಮತ್ತು ಕುರಿಕಾಯುವ ಒಬ್ಬ ಯೌವನಸ್ಥ ಹುಡುಗಿಯ ನಡುವಿನ ಪ್ರೀತಿಯನ್ನು ವ್ಯಕ್ತಪಡಿಸುವ ಒಂದು ಸುಂದರವಾದ ಕವನವನ್ನು ಒಳಗೊಂಡಿದೆ. ಹೆಚ್ಚಿನದಾಗಿ ಈ ಪ್ರೇಮಕಾವ್ಯ ಪ್ರಿಯಕರ

ಅಥವಾ ಪ್ರೇಯಸಿಯಿಂದ ನುಡಿಯಲ್ಪಟ್ಟಿದೆ. ಅನೇಕ ಸಂದರ್ಭಗಳಲ್ಲಿ ಇಬ್ರಿಯ ಪಠ್ಯದ ವ್ಯಾಕರಣವು ಮಾತನಾಡುವವರು ಗಂಡಸೋ ಅಥವಾ ಹೆಂಗಸೋ, ಒಬ್ಬ ವ್ಯಕ್ತಿಯೋ ಅಥವಾ ಜನರ ಗುಂಪೋ ಎಂಬುದನ್ನು ತಿಳಿಸುತ್ತದೆ. ಆಧುನಿಕ ಓದುಗರಿಗೆ ಸಹಕರಿಸಲು ಈ ಸಂಭಾಷಣೆಯ ರೂಪವನ್ನು ನೋಡಿರಿ. ಹೆಚ್ಚಿನ ಸತ್ಯವೇದ ಆವೃತ್ತಿಗಳಲ್ಲಿ ಪ್ರತೀವಿಭಾಗದಲ್ಲಿ ಮಾತನಾಡುವವರು ಯಾರೆಂಬುದನ್ನು ಸೂಚಿಸಲು **"ಸ್ನೇಹಿತರು, ಪ್ರಿಯೆ, ಪ್ರಿಯ"** ಎಂಬ ತಲೆಬರಹವನ್ನು ಸೇರಿಸಲಾಗಿದೆ.

ಈ ಎಲ್ಲಾ ವಾಸ್ತವಾಂಶಗಳನ್ನು ಪರಿಶೀಲಿಸುವಾಗ, ಸತ್ಯವೇದ ವ್ಯಾಖ್ಯಾನುಕಾರರು ಪರಮಗೀತದ ವಿಷಯಾಂಶ ಮತ್ತು ರಚನೆಯನ್ನು ಒಪ್ಪುವುದಿಲ್ಲ.

ಇದರ ವಿಷಯಾಂಶಗಳ ಬಗ್ಗೆ ನಾಲ್ಕು ಮುಖ್ಯ ಅಭಿಪ್ರಾಯಗಳಿವೆ:

ಅ. ಈ ಪುಸ್ತಕವು ಅರಸನಾದ ಸೊಲೊಮೋನನು ಮತ್ತು ಆತನ ಶೂಲೇಮ್ಯ ವಧುವಿನ (8:13) ನಡುವಿನ ಸಂಬಂಧವನ್ನು ವಿವರಿಸುತ್ತದೆ.

ಆ. ಈ ಪುಸ್ತಕವು ಒಬ್ಬ ಸಾಮಾನ್ಯ ಕುರುಬ ಮತ್ತು ಕುರಿಕಾಯುವ ಶೂಲೇಮ್ಯ ಸ್ತ್ರೀ ನಡುವಿನ ಸಂಬಂಧವನ್ನು ವಿವರಿಸುತ್ತದೆ.

ಇ. ಈ ಪುಸ್ತಕವು ಮೂರು ವ್ಯಕ್ತಿಗಳ ನಡುವಿನ ಕಾದಾಟದ ಕುರಿತಾದ ಒಂದು ಕಾವ್ಯರೂಪಿ ನಾಟಕವಾಗಿದೆ. ಅರಸನಾದ ಸೊಲೊಮೋನನು, ಒಬ್ಬ ಕುರಿಕಾಯುವ ಹುಡುಗ ಮತ್ತು ಕುರಿಕಾಯುವ ಶೂಲೇಮ್ಯ ಸ್ತ್ರೀ.

ಈ. ಈ ಪುಸ್ತಕವು ಕೇವಲ ಒಂದು ಪದ್ಯವನ್ನು ಒಳಗೊಂಡಿಲ್ಲ, ಆದರೆ ಒಂದು ಸಾಮಾನ್ಯ ಹಳ್ಳಿ ಹಿನ್ನಲೆಯಲ್ಲಿ ಮತ್ತು ಒಂದು ಸಾಮಾನ್ಯ ವಿಷಯವಸ್ತುವಿನ ಮೇಲಿನ ಪ್ರೇಮಕಾವ್ಯಗಳ ಒಂದು ಸಂಗ್ರಹವಾಗಿದೆ.

ರಚನೆಯ ಒಂದು ಸಾಂಪ್ರದಾಯಿಕ ವಿಧವು ವಾಕ್ಯಭಾಗವನ್ನು 6 ಭಾಗಗಳಾಗಿ ವಿಭಾಗಿಸುವುದಾಗಿದೆ. **ಎನ್ಐವಿ ಅಧ್ಯಯನ ಸತ್ಯವೇದ** ಮತ್ತು ಕನ್ನಡದ **ಪವಿತ್ರ ಬೈಬಲ್** ಗಳಲ್ಲಿ ಈ ವಿಧಾನವನ್ನು ಅನುಸರಿಸಲಾಗಿದೆ.)

1. ಮೊದಲ ಭೇಟಿ (ಅಥವಾ ಪದ್ಯ), 1:2–2:7
2. ಎರಡನೇ ಭೇಟಿ (ಅಥವಾ ಪದ್ಯ), 2:8–3:5
3. ಮೂರನೇ ಭೇಟಿ (ಅಥವಾ ಪದ್ಯ), 3:6–5:1
4. ನಾಲ್ಕನೇ ಭೇಟಿ (ಅಥವಾ ಪದ್ಯ), 5:2–6:3
5. ಐದನೇ ಭೇಟಿ (ಅಥವಾ ಪದ್ಯ), 6:4 –8:4
6. ಆರನೇ ಭೇಟಿ (ಅಥವಾ ಪದ್ಯ) ಮತ್ತು ಮುಕ್ತಾಯ, 8:5–14

ಗಮನಿಸಿ ಈ ರಚನೆಯು ನಮ್ಮ ಸತ್ಯವೇದಗಳ ಅಧ್ಯಯನಗಳ ವಿಭಾಗಗಳನ್ನು ಪ್ರತಿಬಿಂಬಿಸುವುದಿಲ್ಲ. ನಮ್ಮ ಕನ್ನಡದ ಸತ್ಯವೇದ ಭಾಷಾಂತರದಲ್ಲಿ ಕೇವಲ ರಚನೆಯನ್ನಷ್ಟೇ ತೋರಿಸಲಾಗಿದೆ. ಅಲ್ಲದೆ ಕನ್ನಡದ **ಪವಿತ್ರ ಗ್ರಂಥ**ವು ಇದರ ನಾಲ್ಕು ವಿಭಾಗಗಳನ್ನು ವ್ಯಾಖ್ಯಾನಿಸಿ ಈ ರೀತಿ ಪ್ರೀತಿಯ ನಾಲ್ಕು ವರ್ಗಗಳಾಗಿ ಹೆಸರಿಸಿದೆ: ನಿರೀಕ್ಷಿಸುತ್ತಿರುವ ಪ್ರೀತಿ, ಆಳವಾದ ಪ್ರೀತಿ, ವೈವಾಹಿಕ ಪ್ರೀತಿ ಮತ್ತು ಹೊಸ ಜೀವನದ ಪ್ರೀತಿ. ಈ ವ್ಯಾಖ್ಯಾನವನ್ನು ಸ್ವತಃ ವಾಕ್ಯಭಾಗವೇ ಬೆಂಬಲಿಸುವುದಿಲ್ಲ.

ಈ ಪುಸ್ತಕವನ್ನು ನೀವು ರಚನೆಗೊಳಿಸುವ ರೀತಿಯು ಈ ಪುಸ್ತಕದ ಮುಖ್ಯ ವಿಷಯಾಂಶಗಳನ್ನು ನೀವು ಅರ್ಥೈಸಿಕೊಳ್ಳುವುದರ ಮೇಲೆ ಬಲವಾದ ಪ್ರಭಾವವನ್ನು ಬೀರುತ್ತದೆ. ಪರಮಗೀತವು ಸೊಲೊಮೋನ ಮತ್ತು ಆತನ ಶೂಲೇಮ್ಯ ಹೆಂಡತಿಯ ಕುರಿತಾದದ್ದು ಅಥವಾ ಇದು ಒಬ್ಬ ಕುರಿಕಾಯುವ ಕುರುಬ ಮತ್ತು ಒಬ್ಬ ಕುರಿಕಾಯುವವಳ ಕುರಿತಾದದ್ದಾ? ಇದು ಸೊಲೊಮೋನನನ್ನು ಒಳಗೊಂಡ ಒಂದು ತ್ರಿಕೋನ ನಾಟಕವಾ ಅಥವಾ ಇದು ಒಬ್ಬ ಪ್ರೇಮಿ ಮತ್ತು ಆತನ ಪ್ರೇಯಸಿಯ ಕುರಿತಾದದ್ದಾ? ಪರಮಗೀತವು ಒಂದೇ ಪದ್ಯವಾ ಅಥವಾ ಪ್ರೇಮ ಪದ್ಯಗಳ ಒಂದು ಸಂಗ್ರಹವಾ? ಪುಸ್ತಕವು ಪ್ರೇಮಿಗಳ ನಡುವಿನ ಅನೇಕ ಭೇಟಿಗಳನ್ನು ಒಳಗೊಂಡಿದೆಯಾ? ಅಥವಾ ಪ್ರೇಮಿ ಮತ್ತು ಪ್ರೇಯಸಿಯ ನಡುವೆ ಪ್ರೀತಿಯ ಪರಾಕಾಷ್ಠತೆಗೆ ನಡೆಸುವ ಆಲೋಚನೆ ಮತ್ತು ಭಾವನೆಗಳ ಪ್ರಗತಿಯನ್ನು ಈ ಪುಸ್ತಕವು ವರ್ಣಿಸುತ್ತದಾ? ಪುಸ್ತಕದಲ್ಲಿ ಯಾವಾಗ ಜೋಡಿಯು ಲೈಂಗಿಕ ಸಂಬಂಧದಲ್ಲಿ ತೊಡಗುತ್ತವೆ? ಈ ರೀತಿಯ ಪ್ರಶ್ನೆಗಳಿಗೆ ಓದುಗರ ಉತ್ತರಗಳು ಪಠ್ಯದ ವಿಭಿನ್ನ ಭಾಗಗಳನ್ನು ಆತನು ಹೇಗೆ ಅರ್ಥೈಸಿಕೊಳ್ಳುತ್ತಾನೆ ಮತ್ತು ವ್ಯಾಖ್ಯಾನಿಸುತ್ತಾನೆ ಎಂಬುದನ್ನು ನಿರ್ಧರಿಸುತ್ತವೆ. ಹಾಗಾಗಿ ಓದುಗನು ಓದುವ ಒಂದು ವಿಧಾನವನ್ನು ಆಯ್ದುಕೊಳ್ಳಬೇಕಾಗಿದೆ. ಇಲ್ಲದಿದ್ದರೆ ಬಹುಬೇಗನೆ ಆತನು ಗೊಂದಲದಲ್ಲಿ ಸಿಲುಕಿಕೊಳ್ಳುವನು.

ಈ ಪಠ್ಯ ಪುಸ್ತಕದಲ್ಲಿ ಪಾಲಿಸಲಾದ ರಚನೆ ಮತ್ತು ಓದುವ ವಿಧಾನ

ಇಎಸ್‌ವಿ ಅಧ್ಯಯನ ಸತ್ಯವೇದದಲ್ಲಿ ಕಂಡುಬರುವ ರಚನೆ ಮತ್ತು ಓದುವ ವಿಧಾನವನ್ನು ನಾವು ಇಲ್ಲಿ ಉಪಯೋಗಿಸಲಿದ್ದೇವೆ.

ಪರಮಗೀತ ರಚನೆ (ಇಎಸ್‌ವಿ ಅಧ್ಯಯನ ಸತ್ಯವೇದದಿಂದ):

1. ಶೀರ್ಷಿಕೆ: ಗೀತಗಳಲ್ಲಿ ಅತ್ಯುತ್ತಮವಾದದ್ದು, 1:1
2. ಪ್ರೇಮಿಗಳು ಪರಸ್ಪರ ಹಾತೊರೆಯುವುದು, 1:2 –1:17
3. ಕುರಿಕಾಯುವವಳ ಕನಸುಗಳು, 3:1–6
4. ಪ್ರೇಮಿಗಳು ಪುನಃ ಪರಸ್ಪರ ಹಾತೊರೆಯುವುದು, 6:4–8:4
5. ಪ್ರೇಮಿಗಳು ಮದುವೆಯಲ್ಲಿ ಒಂದಾಗುವುದು, 8:5–14

ನಮ್ಮ ಓದುವ ವಿಧಾನ 3 ಅಂಶಗಳನ್ನು ಒಳಗೊಂಡಿದೆ:

1. ಪ್ರಾರಂಭದಿಂದ ಅಂತ್ಯದವರೆಗೆ ಒಂದೇ ಕಥಾಹಂದರವಿದೆ. ಹಾಗಾಗಿ ಈ ಪುಸ್ತಕವು ಪ್ರೇಮ ಕಾವ್ಯಗಳ ಒಂದು ಸಂಗ್ರಹವಲ್ಲ. ಇದು ಪದ್ಯ ರೂಪದಲ್ಲಿರುವ ಒಂದು ಪ್ರೇಮಕಥೆಯಾಗಿದೆ. ಇದು ಬಯಸುವಿಕೆಯಿಂದ ಆರಂಭವಾಗಿ ವೈವಾಹಿಕ ಸುಖ, ಸಂತೋಷದೊಂದಿಗೆ ಮುಕ್ತಾಯವಾಗುತ್ತದೆ.
2. ಇದರಲ್ಲಿ ಮೂರು ಮುಖ್ಯ ವ್ಯಕ್ತಿತ್ವಗಳಿವೆ: ಒಬ್ಬ ಯೌವನಸ್ಥ ಸ್ತ್ರೀ, ಆಕೆ ಪ್ರೀತಿಸುತ್ತಿರುವ ಮತ್ತು ಆಕೆಗೆ ನಿಶ್ಚಯವಾಗಿರುವ ಒಬ್ಬ ಕುರಿಕಾಯುವ ಹುಡುಗ ಮತ್ತು ನೃತ್ಯ ಮೇಳದಂತೆ ಇರುವ ಒಂದು ಗುಂಪು, ಹಾಗಾಗಿ ಕರಿಕಾಯುವ ಹುಡುಗ ಮತ್ತು ಅರಸನಾದ ಸೊಲೊಮೋನ ಇಬ್ಬರೂ ಒಂದೇ ವ್ಯಕ್ತಿಯಾಗಿದ್ದಾರೆಂದು ನಾವು ಭಾವಿಸಲಾಗದು. ಅಲ್ಲದೇ ಅರಸನಾದ ಸೊಲೊಮೋನನು ಈ ಕಥೆಯಲ್ಲಿ ವೈಯಕ್ತಿಕವಾಗಿ ಭಾಗಿಯಾಗಿದ್ದಾನೆಂದು ಸಹ ನಾವು ಯೋಚಿಸಲಾಗದು. ಆದರೆ ಕುರಿಕಾಯುವ ತರುಣಿಯು ಆತನ ಬಗ್ಗೆ ಕನಸು ಕಾಣುತ್ತಾಳೆ (3:6–11) ಮತ್ತು ಆತನೊಂದಿಗೆ ತನ್ನನ್ನು ಹೋಲಿಸಿಕೊಳ್ಳುತ್ತಾಳೆ (8:11–12).
3. ಕುರಿಕಾಯುವ ಹುಡುಗ ಮತ್ತು ಆತನ ಪ್ರೇಯಸಿಯ ನಡುವಿನ ಪ್ರೀತಿಯ ಲೈಂಗಿಕ ಆಶೆಯು 8:5 ರವರೆಗೂ ನೆರವೇರುವುದಿಲ್ಲ, ಪದೇ ಪದೇ ಲೈಂಗಿಕ ಸಂಬಂಧಗಳು ಕಂಡುಬರುವುದನ್ನು ನಾವು ನಂಬಲಾಗದು (ಉದಾ. 4:16 ಮತ್ತು 5:1). ಬದಲಾಗಿ 3:1–6:3 ಮದುವೆ ಮತ್ತು ಅದರ ಇಷ್ಟಾರ್ಥಗಳನ್ನು ನಿರೀಕ್ಷಿಸುವ ಒಂದು ಕನಸಾಗಿರಬಹುದೆಂದು ನಾವು ತಿಳುಕೊಳ್ಳಬೇಕು. "ನಾನು ನಿದ್ರೆಗೊಂಡಿದ್ದರೂ ನನ್ನ ಹೃದಯವು ಎಚ್ಚರಗೊಂಡಿತ್ತು" (5:2). ದಂಪತಿ ಅಧ್ಯಾಯ 4 ರಲ್ಲಿ ವಿವಾಹವಾದ ನಂತರ ಅವರು ಪಡುವ ಲೈಂಗಿಕ ಸುಖದ ಬಗೆಗಿನ ತೀವ್ರವಾದ ನಿರೀಕ್ಷೆಯಾಗಿರಬಹುದು. ಹಾಗಾಗಿ ನಮ್ಮ ತಿಳುವಳಿಕೆ ಏನಂದರೆ ಆ ಜೋಡಿಯ ಪ್ರೀತಿಯು ಮದುವೆಗೆ ನಡೆಸುತ್ತದೆ ಮತ್ತು ಅದು ಮದುವೆಯ ನಂತರವಷ್ಟೇ ಲೈಂಗಿಕ ಸಂಪರ್ಕಕ್ಕೆ ನಡೆಸುತ್ತದೆ. ಇದು ಸತ್ಯವೇದದ ಮಟ್ಟಕ್ಕನುಸಾರವಾಗಿದೆ. ಇದು ಒಂದು ಪಲ್ಲವಿಯಿಂದ ಬೆಂಬಲಿಸಲ್ಪಟ್ಟಿದೆ. "ಉಚಿತಕಾಲಕ್ಕೆ ಮುಂಚೆ ಪ್ರೀತಿಯನ್ನು ಹುಟ್ಟಿಸಿ ಬೆಳೆಯಿಸಬಾರದು" (ನೋಡಿ. 2:7, 3:5, 8:4). ಇದು ಕಡೆಯದಾಗಿ ಕಂಡುಬರುವ ಈ ಚರಳೂದ ನಂತರ ಸ್ತ್ರೀಯ ಹೇಳಿಕೆಯಿಂದ ಬೆಂಬಲಿಸಲ್ಪಟ್ಟಿದೆ: "ಆ ಸೇಬುಮರದ ಕೆಳಗೆ ನಿನ್ನನ್ನು ಎಬ್ಬಿಸಿದೆನಲ್ಲಾ" (8:5), ಇಲ್ಲಿ ಮಾತ್ರ ಆಕೆಯು ತನ್ನ ಪ್ರಿಯತಮನನ್ನು ಲೈಂಗಿಕವಾಗಿ ಉದ್ರೇಕಿಸಿದ್ದೇನೆಂದು ಹೇಳುತ್ತಾಳೆ. ಅಂತಿಮವಾಗಿ ಪರಮಗೀತವನ್ನು ಓದುವುದು ಜ್ಞಾನೋಕ್ತಿ 5:15–19 ರೊಂದಿಗೆ ಸಾಮರಸ್ಯವನ್ನುಂಟುಮಾಡುತ್ತದೆ. ಇದು ವಿವಾಹದ ಚೌಕಟ್ಟಿನೊಳಗಿನ ಲೈಂಗಿಕ ಸಂತೋಷವನ್ನು ಪ್ರಸಂಗಿಸುತ್ತದೆ ವಿನಃ ವಿವಾಹೇತರವಲ್ಲ.

ಪ್ರಶ್ನೆಗಳು

ಈ ಪ್ರಶ್ನೆಗಳಿಗೆ ಉತ್ತರಗಳನ್ನು ಮೇಲ್ಕಂಡ ವಾಕ್ಯಭಾಗಗಳಲ್ಲಿ ಕಾಣಬಹುದು. ಆದರೆ ಅಲ್ಲಿ ನೋಡುವುದಕ್ಕಿಂತ ಮುನ್ನ ಉತ್ತರಿಸಲು ಪ್ರಯತ್ನಿಸಿದರೆ ನೀವು ಹೆಚ್ಚಾಗಿ ಕಲಿಯುವಿರಿ. ಸಾಧ್ಯವಾದಷ್ಟು ನಿಮ್ಮದೇ ಮಾತಿನಲ್ಲಿ ಉತ್ತರಿಸಿರಿ.

1. ಈ ಪುಸ್ತಕದ ಇಬ್ರಿಯ ಶೀರ್ಷಿಕೆಯನ್ನು ಎರಡು ರೀತಿಯಲ್ಲಿ ಭಾಷಾಂತರಿಸಬಹುದಾಗಿದೆ. ಹೇಗೆ? ಇವುಗಳಲ್ಲಿನ ಯಾವ ಬಗೆಯನ್ನು ನಿಮ್ಮ ಕನ್ನಡ ಭಾಷಾಂತರವು ಅನುಸರಿಸಿದೆ?

2. ಕೆಲವು ಸತ್ಯವೇದ ಪಂಡಿತರು ಅರಸನಾದ ಸೊಲೊಮೋನನೇ ಪರಮಗೀತದ ಗ್ರಂಥಕರ್ತನಾಗಿರಬಹುದೆಂದು ಏಕೆ ಹೇಳುತ್ತಾರೆ?
3. ಕೆಲವು ಸತ್ಯವೇದ ಪಂಡಿತರು ಅರಸನಾದ ಸೊಲೊಮೋನನು ಪರಮಗೀತದ ಗ್ರಂಥಕರ್ತನಾಗಿರಲು ಅಸಂಭವವೆಂದು ಏಕೆ ಹೇಳುತ್ತಾರೆ?
4. ಪರಮಗೀತದುದ್ದಕ್ಕೂ ನಾವು ಯಾವ ರೀತಿಯ ವಾಕ್ಯಭಾಗವನ್ನು ಕಾಣುತ್ತೇವೆ?
5. ಇಬ್ರಿಯ ಪಠ್ಯವು ಮಾತನಾಡುವವನ ಗುರುತನ್ನು ಹೇಗೆ ತಿಳಿಸುತ್ತದೆ?
6. ಪರಮಗೀತದ ವಿಷಯಾಂಶಗಳ ಕುರಿತಾದ ನಾಲ್ಕು ಮುಖ್ಯ ಅಭಿಪ್ರಾಯಗಳು ಯಾವುವು?
7. ಮೂರು ಕನ್ನಡ ಭಾಷಾಂತರಗಳು **"ಪರಮಗೀತ"** ಪಠ್ಯವನ್ನು ಹೇಗೆ ರಚಿಸಿವೆ ಎಂಬುದನ್ನು ವಿವರಿಸಿರಿ.
8. ಒಬ್ಬ ಓದುಗನು ಪರಮಗೀತವನ್ನು ರಚಿಸುವ ವಿಧಾನಕ್ಕೂ ಅದರ ಮುಖ್ಯ ವಿಷಯಗಳನ್ನು ಅವನು ಅರ್ಥಮಾಡಿಕೊಳ್ಳುವ ವಿಧಾನಕ್ಕೂ ಹೇಗೆ ಸಂಬಂಧವಿದೆ?
9. ಈ ಪಠ್ಯಪುಸ್ತಕವು ಅನುಸರಿಸುವ **"ಪರಮಗೀತ"** ರಚನೆಯನ್ನು ವಿವರಿಸಿರಿ.
10. ಈ ಪಠ್ಯಪುಸ್ತಕವು ಅನುಸರಿಸುವ ಪರಮಗೀತ ಓದುವ ತಂತ್ರದ ಮೂರು ಮುಖ್ಯ ಅಂಶಗಳನ್ನು ಪಟ್ಟಿಮಾಡಿರಿ.
11. ಓದುವ ತಂತ್ರದ ಮೂರನೇ ಅಂಶದ ಹಿಂದಿನ ಕಾರಣಗಳನ್ನು ವಿವರಿಸಿ: **"ಕುರುಬ ಹುಡುಗ ಮತ್ತು ಅವನ ಪ್ರಿಯತಮೆಯ ನಡುವಿನ ಪ್ರೀತಿಯ ನಿಜವಾದ ಲೈಂಗಿಕ ಪೂರ್ಣಗೊಳಿಸುವಿಕೆಯು 8:5 ರವರೆಗೆ ನಡೆಯುವುದಿಲ್ಲ".**

ಪರಮಗೀತದ ಅಧ್ಯಯನ

ಈ ಪಠ್ಯ ಪುಸ್ತಕವು ಪರಮಗೀತವನ್ನು ಎರಡು ಹಂತಗಳಲ್ಲಿ ನೋಡುತ್ತದೆ: ಮೊದಲನೇಯದಾಗಿ, ಪುಸ್ತಕದ ಅನೇಕ ಅಂಶಗಳನ್ನೊಳಗೊಂಡ ನಾಲ್ಕು ಪರಿಚಯಾತ್ಮಕ ಅಧ್ಯಾಯಗಳು.

1. ಪರಮಗೀತವನ್ನು ಪರಿಚಯಿಸುವುದು
2. ಪರಮಗೀತವನ್ನು ವ್ಯಾಖ್ಯಾನಿಸುವುದು (ಅರ್ಥವಿವರಣೆ ಮಾಡುವುದು)
3. ಕಟ್ಟಳೆ (ಶಾಸನ) ಮತ್ತು ದೈವಶಾಸ್ತ್ರ
4. ಕೆಲವು ಸಾಹಿತ್ಯದ ಲಕ್ಷಣಗಳು

ಎರಡನೇಯದಾಗಿ, ಪರಮಗೀತದ ಇಡೀ ಪಠ್ಯವನ್ನು ನಾಲ್ಕು ಅಧ್ಯಾಯಗಳಲ್ಲಿ ಅಭ್ಯಾಸಿಸುವುದು. ಈ ಅಧ್ಯಯನವು **ಇಎಸ್‌ವಿ ಅಧ್ಯಯನ ಸತ್ಯವೇದ**ದಲ್ಲಿ ಕಂಡುಬರುವ ಓದುವ ವಿಧಾನವನ್ನು ಆಧರಿಸಿದೆ.

1. ಪ್ರೇಮಿಗಳು ಪರಸ್ಪರ ಒಬ್ಬರಿಗೊಬ್ಬರು ಹಾತೊರೆಯುವುದು, 1:2–2:17.
2. ಕುರಿಕಾಯುವವಳ ಕನಸುಗಳು, 3:1–6:3
3. ಪುನಃ ಪ್ರೇಮಿಗಳು ಪರಸ್ಪರ ಒಬ್ಬರಿಗೊಬ್ಬರು ಹಾತೊರೆಯುವುದು, 6:4–8:4.
4. ಪ್ರೇಮಿಗಳು ಮದುವೆಯಲ್ಲಿ ಒಂದಾಗುವುದು, 8:5–14.

ಉಲ್ಲೇಖ

ನಾನು ಪರಮಗೀತೆಯ ಘಟಕವನ್ನು (ಅಧ್ಯಯನಗಳು ಮತ್ತು ಉತ್ತರಗಳು) ಸಿದ್ಧಪಡಿಸುವಾಗ ಈ ಕೆಳಗಿನ ಪುಸ್ತಕಗಳು ನನಗೆ ಉಪಯುಕ್ತವಾಗಿದ್ದವು:

ಇಎಸ್‌ವಿ ಅಧ್ಯಯನ ಸತ್ಯವೇದ

ಎನ್‌ಐವಿ ಅಧ್ಯಯನ ಸತ್ಯವೇದ

ಟಾಮ್ ಗ್ಲೆಡ್‌ಹಿಲ್ ಅವರಿಂದ **ಪರಮಗೀತದ ಸಂದೇಶ** (ಬೈಬಲ್ ಸ್ಪೀಕ್ಸ್ ಟುಡೇ ಸೀರೀಸ್)

ಪೊಯೆಟರ್ನಾ (ಗ್ರೇಗರ್ ಆಂಡರ್ಸನ್ ಅವರಿಂದ ಹೊಗಾ ವಿಸನ್ ಎಂಬ ಅಧ್ಯಾಯ)

ಪರಮಗೀತವನ್ನು ಅರ್ಥವಿವರಣೆ ಮಾಡುವುದು

ಪೀಠಿಕೆ

ಓದುಗರು ಮತ್ತು ಸತ್ಯವೇದ ಪಂಡಿತರು ಪರಮಗೀತವನ್ನು ಮೂರು ವಿಧಗಳಲ್ಲಿ ಅರ್ಥವಿವರಣೆ ಮಾಡಿದ್ದಾರೆ. ಒಂದು ಅಕ್ಷರಶಃವಾದದ್ದು ಮತ್ತು ಇನ್ನೂ ಎರಡನ್ನು ಸಾಂಕೇತಿಕವೆಂದು ಕರೆಯಲಾಗಿದೆ:

1. ಅಕ್ಷರಶಃವೆಂದರೆ ವಾಕ್ಯಭಾಗವು ಹೇಗಿದೇಯೋ ಅದೇ ರೀತಿ ಅದನ್ನು ಅರ್ಥೈಸಿಕೊಳ್ಳುವುದು. ಈ ಪುಸ್ತಕವು ಪ್ರೇಮಕಾವ್ಯವನ್ನು ಒಳಗೊಂಡಿದೆ. ಈ ಪ್ರೇಮಕಾವ್ಯವು ಒಂದು ಗಂಡು ಮತ್ತು ಹೆಣ್ಣಿನ ನಡುವಿನ ಪ್ರೀತಿಯ ಕುರಿತಾಗಿದೆ.

2. ಸಾಂಕೇತಿಕ ಅರ್ಥವಿವರಣೆ (ವಿಧ–1) ಪರಮಗೀತವು ಮನುಷ್ಯನ ಪ್ರೀತಿಯ ಕುರಿತಾದ ಕಾವ್ಯವನ್ನು ಒಳಗೊಂಡಿದೆ. ಆದರೆ ಈ ಪ್ರೇಮ ಕಾವ್ಯವು ಆಳವಾದ ಆತ್ಮೀಕ ಅರ್ಥವನ್ನು ಹೊಂದಿದೆ. ನಿಜವಾಗಲೂ ಇದು ದೇವರು (ಅಥವಾ ಕ್ರಿಸ್ತನು) ಮತ್ತು ಆತನ ಜನರ (ಅಥವಾ ವಿಶ್ವಾಸಿ) ಕುರಿತಾಗಿದೆ. ಈ ರೀತಿಯ ಸಾಂಕೇತಿಕ ಓದಿನಲ್ಲಿ ಮೂರು ಮುಖ್ಯ ವಿಧಗಳಿವೆ:

   - ಸಾಂಪ್ರದಾಯಿಕ ಯೆಹೂದಿ ತಿಳುವಳಿಕೆ: ಪರಮಗೀತವು ದೇವರು (ಪ್ರಿಯಕರ/ಮದಲಿಂಗ) ಮತ್ತು ಆತನ ಒಡಂಬಡಿಕೆಯ ಜನರಾದ ಇಸ್ರಾಯೇಲ್ಯರ (ಪ್ರೇಯಸಿ/ವಧು) ನಡುವಿನ ಪ್ರೀತಿಯ ಕುರಿತಾಗಿದೆ.

   - ಒಂದು ಸಾಂಪ್ರದಾಯಿಕ ಕ್ರೈಸ್ತೀಯ ತಿಳುವಳಿಕೆ: ಪರಮಗೀತವು ಕ್ರಿಸ್ತನು (ಪ್ರಿಯಕರ/ಮದಲಿಂಗ) ಮತ್ತು ಆತನ ಸಭೆಯ (ಪ್ರೇಯಸಿ/ವಧು) ನಡುವಿನ ಪ್ರೀತಿಯ ಕುರಿತಾಗಿದೆ.

   - ಇನ್ನೊಂದು ಸಾಂಪ್ರದಾಯಿಕ ಕ್ರೈಸ್ತೀಯ ತಿಳುವಳಿಕೆ: ಪರಮಗೀತವು ಕ್ರಿಸ್ತನು (ಪ್ರಿಯಕರ/ಮದಲಿಂಗ) ಮತ್ತು ವ್ಯಕ್ತಿಗತ ಕ್ರೈಸ್ತೀಯ ವಿಶ್ವಾಸಿಯ (ಪ್ರೇಯಸಿ/ವಧು) ನಡುವಿನ ಪ್ರೀತಿಯ ಕುರಿತಾಗಿದೆ.

3. ಸಾಂಕೇತಿಕ ಅರ್ಥವಿವರಣೆ (ವಿಧ 2): ಪರಮಗೀತವು ಮುಖ್ಯವಾಗಿ ಮನುಷ್ಯನ ಪ್ರೀತಿಯ ಕುರಿತಾದದ್ದಲ್ಲ. ಇದು ಆತ್ಮೀಕ ಸಂಗತಿಗಳ ಕುರಿತಾದದ್ದಾಗಿದೆ. ಪರಿಣಾಮವಾಗಿ, ಹೆಚ್ಚಿನ ಎಲ್ಲಾ ವಚನಗಳು ಮತ್ತು ಹೇಳಿಕೆಗಳಿಗೆ ಒಂದು ಹೊಸ ಮತ್ತು ವಿಭಿನ್ನ ಅರ್ಥವನ್ನು ಕೊಡಲಾಗಿದೆ.

ಐತಿಹಾಸಿಕವಾಗಿ ಸಾಂಕೇತಿಕ ಅರ್ಥವಿವರಣೆಯ ಮೊದಲ ಬಗೆಯು ಯೆಹೂದಿಯಲ್ಲದೆ ಕ್ರೈಸ್ತೀಯ ವಲಯಗಳಲ್ಲಿ ಸಹ ಪರಮಗೀತದ ತಿಳುವಳಿಕೆಯ ಪ್ರಾಭಲ್ಯತೆ ಹೊಂದಿದೆ.

ಸಾಂಕೇತಿಕ ಅರ್ಥವಿವರಣೆಯು ಮೂರು ಉದಾಹರಣೆಗಳು:

ಉದಾಹರಣೆ 1:

ಎನ್ನಿನಿಯನು ನನ್ನ ಸ್ತನಗಳ ಮಧ್ಯದಲ್ಲಿನ

ರಕ್ತ ಬೋಳದ ಚೀಲ.

(ಪರಮ. 1:13).

ಒಂದು ಸಾಮಾನ್ಯ ಯೆಹೂದಿ ಅರ್ಥವಿವರಣೆ: ದೇವರು ದೇವಾಲಯದ ಅತೀಪರಿಶುದ್ಧ ಸ್ಥಳದಲ್ಲಿ ಎರಡು ಕೆರೂಬಿಗಳ ಮಧ್ಯದಲ್ಲಿ ಆಸೀನನಾಗಿದ್ದಾನೆ.

ಒಂದು ಸಾಮಾನ್ಯ ಕ್ರೈಸ್ತೀಯ ಅರ್ಥವಿವರಣೆ: ಕ್ರಿಸ್ತನು ಹಳೇ ಮತ್ತು ಹೊಸ ಒಡಂಬಡಿಕೆಗಳ ನಡುವೆ ವಿಶ್ರಮಿಸುತ್ತಿದ್ದಾನೆ.

ಉದಾಹರಣೆ 2:

ಬಾಯ ಮುದ್ದುಗಳಿಂದ ನನ್ನನ್ನು ಮುದ್ದಿಸಲಿ;

ನಿನ್ನ ಲಾಲನೆಯು ದ್ರಾಕ್ಷಾರಸಕ್ಕಿಂತಲೂ ಮೇಲು.

ನಿನ್ನ ತೈಲವು ಸುಗಂಧ;

ನಿನ್ನ ಹೆಸರು ಸುರಿದ ತೈಲದ ಸುಗಂಧದಂತೆ ವ್ಯಾಪಿಸಿರುವುದರಿಂದ

ತರುಣಿಯರು ನಿನ್ನನ್ನು ಪ್ರೀತಿಸುವರು.

ನನ್ನನ್ನು ತುಸು ಎಳೆ; ನಿನ್ನ ಹಿಂದೆ ಓಡಿ ಬರುವೆವು;

ರಾಜನು ನನ್ನನ್ನು ಅಂತಃಪುರಕ್ಕೆ ಬರಮಾಡಿದ್ದಾನೆ.

(ಪರಮ. 1:2–4).

ಒಂದು ಸಾಮಾನ್ಯ ಯೆಹೂದಿ ಅರ್ಥವಿವರಣೆ: ದೇವರು ತನ್ನ ಜನರನ್ನು ಐಗುಪ್ತದಲ್ಲಿನ ದಾಸತ್ವದಿಂದ ವಾಗ್ದಾನ ದೇಶಕ್ಕೆ ಬರಮಾಡುತ್ತಾನೆ.

ಉದಾಹರಣೆ 3:

ಬಡಗಣಗಾಳಿಯೇ ಬೀಸು, ತೆಂಕಣ ಗಾಳಿಯೇ ಬಾ!

ನನ್ನ ತೋಟದ ಸುಗಂಧಗಳು ಹರಡುವ ಹಾಗೆ ಅದರ ಮೇಲೆ ಸುಳಿದಾಡು.

ಎನ್ನಿನಿಯನು ತನ್ನ ತೋಟದೊಳಗೆ ಸೇರಿ ತನ್ನ ಉತ್ತಮ ಫಲಗಳನ್ನು ತಾನೇ

ಭುಜಿಸಲಿ.

(ಪರಮ. 4:16).

ಒಬ್ಬ ಜನಪ್ರಿಯ ಸಭಾಪಾಲಕರು ಈ ವಚನವನ್ನು ಈ ರೀತಿ ಅರ್ಥವಿವರಿಸುತ್ತಾರೆ: ಗಾಳಿಯು ಪವಿತ್ರಾತ್ಮನಾಗಿದ್ದಾನೆ. ಬಡಗಣ (ಉತ್ತರದ ತಂಪಾದ ಗಾಳಿ) ಗಾಳಿ ಮತ್ತು ತೆಂಕಣ ಗಾಳಿಯು (ಸಾಮ್ಯವಾದ ದಕ್ಷಿಣದ ಗಾಳಿ) ದೇವರು ಈ ಲೋಕದಲ್ಲಿ ಪರಿಶುದ್ಧಾತ್ಮನ ಮೂಲಕ ಗಡುಸಾಗಿ ಮತ್ತು ಅಹ್ಲಾದಕರವಾಗಿ ಸಹ ಕಾರ್ಯಮಾಡುತ್ತಾನೆ ಎಂಬದನ್ನು ತಿಳಿಸುತ್ತದೆ. ತೋಟವೆಂದರೆ ಸಭೆಯಾಗಿದೆ. ಹಾಗಾಗಿ ಸಭೆಯು ಕೆಲವೊಮ್ಮೆ (ವಿಶ್ವಾಸಿಗಳು) ದೇವರ ಬಡಗಣ ಮತ್ತು ತೆಂಕಣ ಗಾಳಿಯನ್ನು ಅನುಭವಿಸುತ್ತದೆ. ಸಭೆಯು ಫಲವನ್ನು ಕೊಡಲು ಬಡಗಣ ಗಾಳಿ ಮತ್ತು ತೆಂಕಣ ಗಾಳಿಗಳೆರಡೂ ಸಹ ಅದಕ್ಕೆ ಅವಶ್ಯಕವಾಗಿವೆ. ಬುಗ್ಗೆಯೆಂದರೆ ದೇವರ ಸತ್ಯವಾಗಿದೆ. ಇದನ್ನು ಸಭೆಯೆಂಬ ಉದ್ಯಾನದಲ್ಲಿ ಕಾಣಬರುವುದು. ಮುಚ್ಚಿ ಮುದ್ರಿಸಿದ ಬಾವಿಯು (ವಚನ 12) ಸತ್ಯವು ಲೋಕಕ್ಕೆ ಪ್ರಕಟಿಸಲ್ಪಟ್ಟಿಲ್ಲ ಎಂಬುದನ್ನು ತೋರಿಸುತ್ತದೆ. ಆದರೆ ಸುಗಂಧವು (ವಚನ 16) ತೋವದಿಂದ (ಸಭೆ) ಬಹುದೂರ ಹರಡುತ್ತದೆ. ಹಾಗೆಯೇ ದೇವರ ಸತ್ಯವು ಸಭೆಯಿಂದ ಲೋಕಕ್ಕೆ ಹರಡುತ್ತದೆ.

ಕೆನಡಾದ ಒಬ್ಬ ಪ್ರಸಿದ್ಧ ಸತ್ಯವೇದ ಶಿಕ್ಷಕರು ಈ ರೀತಿ ಹೇಳಿದ್ದಾರೆ: ಅಕ್ಷರಶಃ ಮಟ್ಟದಲ್ಲಿ ಈ ವ್ಯಾಕ್ಯಭಾಗವು ಒಂದು ಗಂಡು ಮತ್ತು ಹೆಣ್ಣಿನ ನಡುವಿನ ಪ್ರೀತಿಯ ವರ್ಣನೆಯಾಗಿದೆ. ಆದರೆ, ಸಾಂಪ್ರದಾಯಿಕ ಸಭೆಯ ಪ್ರಕಾರ ಇದು ಹೆಚ್ಚುವರಿಯಾಗಿ ಆಳವಾದ ಒಂದು ಸಾಂಕೇತಿಕ ಅರ್ಥವನ್ನು ಹೊಂದಿದೆ.

ಜರ್ಮನ್ ಪ್ರೊಟೆಸ್ಟೆಂಟ್ ಸುಧಾರಕನಾದ ಮಾರ್ಟಿನ್ ಲೂಥರ್ ಈ ವಚನವನ್ನು ಈ ರೀತಿ ಅರ್ಥೈಸಿಕೊಂಡಿದ್ದಾರೆ: 16 ನೇ ವಚನದ ಮೊದಲ ಭಾಗವು ದೇವರ ಗಾಳಿಯು ಸಭೆಯೊಳಗೆ ಬೀಸಿ, ಫಲವನ್ನು ಕೊಡುವಂತೆ ಮಾಡಬೇಕೆಂದು ಆಹ್ವಾನಿಸುವುದಾಗಿದೆ. ಆ ಮೂಲಕ ಶಿಲುಬೆಯ ಸಂದೇಶದಲ್ಲಿ ದೇವರ ವಾಕ್ಯದ ಶಕ್ತಿಯನ್ನು ಸ್ಪಷ್ಟಪಡಿಸುವವುದಾಗಿದೆ.

ಮುಕ್ತಾಯದಲ್ಲಿ, ಈ ಪುಸ್ತಕವು ನಿಜವಾಗಲು ಒಂದು ಗಂಡು ಮತ್ತು ಹೆಣ್ಣಿನ ನಡುವಿನ ಪ್ರೀತಿಯ ಕುರಿತಾದದ್ದು ಅಲ್ಲವೆಂಬುದು ಪರಮಗೀತದ ಎಲ್ಲಾ ಸಾಂಕೇತಿಕ ಅರ್ಥವಿವರಣೆಗಳಲ್ಲಿ ಕಂಡುಬರುವ ಒಂದು ಸಾಮಾನ್ಯವಾದ ಲಕ್ಷಣವಾಗಿದೆ. ಪರಿಣಾಮವಾಗಿ ಪಠ್ಯದ ಯಾವುದೇ ರೀತಿಯ ಲೈಂಗಿಕ ವರ್ಣನೆ ಅಥವಾ ಪ್ರಸ್ತಾಪವನ್ನು ಒಳಗೊಳ್ಳದಂತೆ ಅರ್ಥೈಸಿಕೊಳ್ಳಲಾಗಿದೆ.

ಪರಮಗೀತದ ಸಾಂಕೇತಿಕ ಅರ್ಥವಿವರಣೆಗಳೊಂದಿಗಿನ ಸಮಸ್ಯೆಗಳು

ಪರಮಗೀತದ ಸಾಂಕೇತಿಕ ಅರ್ಥವಿವರಣೆಯನ್ನು ತಿರಸ್ಕರಿಸಬೇಕು ಎಂಬುದಕ್ಕೆ ಸುಮಾರು ಮೂರು ಮುಖ್ಯ ಕಾರಣಗಳಿವೆ:

1. ಪರಮಗೀತವನ್ನು ಸಾಂಕೇತಿಕವಾಗಿ ಅರ್ಥೈಸಿಕೊಳ್ಳಬೇಕು ಎಂಬುದನ್ನು ಸೂಚಿಸುವ ಯಾವುದೇ ಸಂಗತಿಗಳು ವಾಕ್ಯಭಾಗದಲ್ಲಿ ಇಲ್ಲವೇ ಇಲ್ಲ. ಹಳೇ ಒಡಂಬಡಿಕೆಯಲ್ಲಿನ ನಿಜವಾದ ಮೂರು ಸಾಂಕೇತಿಕ ಪಠ್ಯಗಳನ್ನು ಹೋಲಿಸಿ:

ಅ. ದ್ರಾಕ್ಷೇತೋಟದ ಹಾಡು, ಇಲ್ಲಿ ಸಾಂಕೇತದ ಅರ್ಥವನ್ನು ಕೊನೆಯಲ್ಲಿ ವಿವರಿಸಲಾಗಿದೆ, "ದ್ರಾಕ್ಷೇತೋಟವು ಇಸ್ರಾಯೇಲ್ಯರ ಮನೆತನ" (ಯೆಶಾಯ 5:1–7).

ಆ. ಅಪನಂಬಿಗಸ್ತ ಯೆರೂಸಲೇಮಿನ ಸಂಕೇತ, ಇಲ್ಲಿ ದೇವರು ಯೆರೂಸಲೇಮಿನ ಕುರಿತಾಗಿ ಹೇಳುತ್ತಾನೆ. "ನೀನು ಹುಟ್ಟಿದ ದಿನದಲ್ಲಿ ಯಾರೂ ನಿನ್ನ ಹೊಕ್ಕಳು ಕೊಯ್ದು ಕಟ್ಟಲಿಲ್ಲ" (ಯೆಹೆಜ್ಕೇಲ ಅಧ್ಯಾಯ 16)

ಇ. ನರಪುತ್ರನೇ ಇಸ್ರಾಯೇಲ್ ವಂಶದವರಿಗೆ ಈ ಸಾಮ್ಯವನ್ನು ಹೇಳು ಎಂದು ಪ್ರಾರಂಭವಾಗುವ ಹದ್ದು ಮತ್ತು ಗಿಡಗಳ ಸಾಮ್ಯ (ಯೆಹೆಜ್ಕೇಲ 17:1)

2. ಪರಮಗೀತವನ್ನು ಹೊಸ ಒಡಂಬಡಿಕೆಯಲ್ಲಿ ಒಂದು ಬಾರಿಯೂ ಸಹ ಬಳಸಲಾಗಿಲ್ಲ. ಒಂದು ವೇಳೆ ಯೇಸು ಕ್ರಿಸ್ತನು ಅಥವಾ ಹೊಸ ಒಡಂಬಡಿಕೆಯ ಬರಹಗಾರರು ಪರಮಗೀತವನ್ನು ತನ್ನ ಜನರಿಗಾಗಿನ ದೇವರ ಪ್ರೀತಿ ಅಥವಾ ತನ್ನ ಶಿಷ್ಯರಿಗಾಗಿ/ ಸಭೆಗಾಗಿನ ಕ್ರಿಸ್ತನ ಪ್ರೀತಿಯ ಸಂಕೇತವೆಂಬುದಾಗಿ ಅರ್ಥೈಸಿಕೊಂಡಿದ್ದರೆ ಈ ಹೊಸ ಒಡಂಬಡಿಕೆಯ ಕೇಂದ್ರ ವಿಷಯವಸ್ತುವನ್ನು ಉದಾಹರಿಸಲು ಪರಿಮಗೀತದಿಂದ ಕನಿಷ್ಠಪಕ್ಷ ಕೆಲವು ಸುಂದರ ಹೇಳಿಕೆಗಳನ್ನಾದರೂ ಉಪಯೋಗಿಸುತ್ತಿದ್ದರು ಎಂಬುದನ್ನು ನಾವು ನಿರೀಕ್ಷಿಸಬಹುದಿತ್ತು. ಆದರೆ ಹೊಸ ಒಡಂಬಡಿಕೆಯಲ್ಲಿ ಗಂಡು ಮತ್ತು ಹೆಣ್ಣಿನ ನಡುವಿನ ದೈಹಿಕ ಪ್ರೀತಿಯು ಅತೀ ಪ್ರಾಮುಖ್ಯವಾದ ವಿಷಯವಲ್ಲದ ನಿಮಿತ್ತ ಪರಮಗೀತವನ್ನು ಉಪಯೋಗಿಸಲು ಅವರಿಗೆ ಯಾವುದೇ ಕಾರಣ ಸಿಗಲಿಲ್ಲ.

3. ವಾಕ್ಯಭಾಗದಲ್ಲೇ ಸಾಂಕೇತಿಕ ಅರ್ಥವಿವರಣೆಗೆ ನೇರ ಬೆಂಬಲವಿಲ್ಲ. ಅಲ್ಲದೇ ಹೊಸ ಒಡಂಬಡಿಕೆಯಲ್ಲಿ ಅದರ ಬಗ್ಗೆ ನಿಶ್ಚಯವಿಲ್ಲ. ಯಾರು ಬೇಕಾದರೂ ಒಂದು ವಚನವನ್ನು ತೆಗೆದುಕೊಂಡು ತನಗಿಷ್ಠ ಬಂದ ರೀತಿಯಲ್ಲಿ ಅದನ್ನು ಅರ್ಥೈಸಿಕೊಳ್ಳಬಹುದು. ಯಾರೂ ಸಹ ಆತನು ಹೇಳುವುದು ಸರಿಯೋ ಅಥವಾ ತಪ್ಪೋ ಎಂದು ನಿಶ್ಚಯಿಸಲಾಗಲ್ಲ. ಹಳೇ ಒಡಂಬಡಿಕೆಯ ವಾಕ್ಯಭಾಗದ ಸಾಂಕೇತಿಕ ಅರ್ಥವಿವರಣೆಗಳು ಊಹೆಯಿಂದ ಕೂಡಿವೆ, ಹಾಗಾಗಿ ಗಂಭೀರವಾಗಿ ಸತ್ಯವೇದವನ್ನು ಅಧ್ಯಯನ ಮಾಡುವವರಾದ ನಾವು ಅದನ್ನು ದೂರವಿರಿಸಬೇಕಾಗಿದೆ.

ಪ್ರಶ್ನೆಗಳು

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಗಳನ್ನು ಮೇಲಿನ ಪಠ್ಯದಲ್ಲಿ ಸುಲಭವಾಗಿ ಕಾಣಬಹುದು. ಆದರೆ ನೀವು ಅಲ್ಲಿ ನೋಡುವ ಮೊದಲು ಪ್ರಶ್ನೆಗಳಿಗೆ ಉತ್ತರಿಸಲು ಪ್ರಯತ್ನಿಸಿದರೆ ನೀವು ಇನ್ನಷ್ಟು ಕಲಿಯುವಿರಿ. ನೀವು ಸಾಧ್ಯವಾದಷ್ಟು ನಿಮ್ಮ ಸ್ವಂತ ಪದಗಳನ್ನು ಬಳಸಿದರೆ ಅದು ಉತ್ತಮವಾಗಿರುತ್ತದೆ.

1. ಪಠ್ಯದ ಅಕ್ಷರಶಃ ಮತ್ತು ಸಾಂಕೇತಿಕ ವ್ಯಾಖ್ಯಾನದ ನಡುವಿನ ವ್ಯತ್ಯಾಸವನ್ನು ವಿವರಿಸಿ.

2. ಪರಮಗೀತೆಯನ್ನು ಹೇಗೆ ಅರ್ಥಮಾಡಿಕೊಳ್ಳುವುದು ಎಂಬುದರ ಕುರಿತು ಮೂರು ದೃಷ್ಟಿಕೋನಗಳು ಯಾವುವು?

3. ಹೆಚ್ಚಿನ ಆಧುನಿಕ ಸತ್ಯವೇದ ಶಿಕ್ಷಕರು ಪರಮಗೀತೆಯನ್ನು ಹೇಗೆ ಅರ್ಥಮಾಡಿಕೊಳ್ಳುತ್ತಾರೆ?

4. ಪರಮಗೀತೆಯ ಸಾಂಕೇತಿಕ ವ್ಯಾಖ್ಯಾನುಗಳನ್ನು ತಿರಸ್ಕರಿಸಲು ಮೂರು ಉತ್ತಮ ಕಾರಣಗಳನ್ನು ವಿವರಿಸಲು ನಿಮ್ಮ ಸ್ವಂತ ಪದಗಳನ್ನು ಬಳಸಿ.

ಕೆನಾನ್ ಮತ್ತು ದೈವಶಾಸ್ತ್ರ

ಪೀಠಿಕೆ

"ಪರಮಗೀತೆಯನ್ನು" ಇಬ್ರಿಯ ಮತ್ತು ಕ್ರೈಸ್ತ ಸತ್ಯವೇದಗಳಲ್ಲಿ ಅಂಗೀಕೃತ ಪುಸ್ತಕಗಳಲ್ಲಿ ಒಂದಾಗಿ ಸೇರಿಸಲಾಗಿದೆ. ಯೆಹೂದ್ಯರು ಇದನ್ನು ತಮ್ಮ ಸತ್ಯವೇದದ ಮೂರನೇ ಭಾಗದಲ್ಲಿ ಇರಿಸಿದರು. ಇದನ್ನು "ಬರಹಗಳು" ಎಂದು ಕರೆಯಲಾಗುತ್ತದೆ (ಲೂಕ 24:24 ರಲ್ಲಿ ಯೇಸು ಉಲ್ಲೇಖಿಸಿದ ಇಬ್ರಿಯ ಸತ್ಯವೇದದ 3 ವಿಭಾಗಗಳನ್ನು ಹೋಲಿಕೆ ಮಾಡಿ, ಅಲ್ಲಿ "ಕೀರ್ತನೆಗಳು" "ಬರಹಗಳ" ಎಲ್ಲಾ ಪುಸ್ತಕಗಳನ್ನು ಪ್ರತಿನಿಧಿಸುತ್ತವೆ: "ನನ್ನ ವಿಷಯವಾಗಿ ಮೋಶೆಯ ಧರ್ಮಶಾಸ್ತ್ರದಲ್ಲಿಯೂ ಪ್ರವಾದಿಗಳ ಗ್ರಂಥಗಳಲ್ಲಿಯೂ ಕೀರ್ತನೆಗಳಲ್ಲಿಯೂ ಬರೆದಿರುವುದೆಲ್ಲಾ ನೆರವೇರಬೇಕು"). ಇಬ್ರಿಯ ಕೆನಾನ್ ಅನ್ನು ಬಹುಶಃ ಕ್ರಿಸ್ತನು ಬರುವುದಕ್ಕಿಂತ ಮುಂಚೆ ಸುಮಾರು ಕ್ರಿ.ಪೂ. 100 ರಲ್ಲಿ ರೂಪಿಸಿರಬಹುದು. ಪರಮಗೀತೆಯನ್ನು ಸಾಂಪ್ರದಾಯಿಕವಾಗಿ ಯೆಹೂದ್ಯರ ಪಸ್ಕಹಬ್ಬದ ಸಮಯದಲ್ಲಿ ಓದಲಾಗುತ್ತಿತ್ತು. ಇದಕ್ಕೆ ಕಾರಣ ಬಹುಶಃ ಪಸ್ಕಹಬ್ಬವನ್ನು ವಸಂತಕಾಲದಲ್ಲಿ ಆಚರಿಸಲಾಗುತಿತ್ತು ಮತ್ತು ಪರಮಗೀತದಲ್ಲಿ ಇಂತಹ ವರ್ಷದ ಸುಂದರ ಸಮಯವನ್ನು ವರ್ಣಿಸಲಾಗಿದೆ.

ಕೆನಾನ್‌ನಲ್ಲಿ ಯಾಕೆ

ಆದರೆ ಯಾಕೆ ಪರಮಗೀತವು ಕೆನಾನ್‌ನಲ್ಲಿ ಮೊದಲ ಸ್ಥಾನದಲ್ಲಿದೆ? ಗಂಡು ಮತ್ತು ಹೆಣ್ಣಿನ ನಡುವಿನ ಪ್ರೀತಿಯನ್ನು ವರ್ಣಿಸುವ ಈ ರೀತಿಯ ಕಾವ್ಯವನ್ನು ಸತ್ಯವೇದದಲ್ಲಿ ಸೇರಿಸಬೇಕಿತ್ತಾ? ಈ ಪುಸ್ತಕದಲ್ಲಿ ದೇವರನ್ನು ನಾವು ಎಲ್ಲಿ ಕಾಣುತ್ತೇವೆ? ಯೆಹೂದ್ಯ ಮತ್ತು ಕ್ರೈಸ್ತರಿಬ್ಬರೂ ಈ ರೀತಿಯ ಪ್ರಶ್ನೆಗಳನ್ನು ಕೇಳುತ್ತಾರೆ. ಈ ರೀತಿಯ ಪ್ರಶ್ನೆಗಳನ್ನು ಎದುರಿಸಲು ಸಹಾಯಕವಾಗುವ ಐದು ಅಂಶಗಳು ಇಂತಿವೆ.

1. "ದೇವರು ಮನುಷ್ಯನನ್ನು ತನ್ನ ಸ್ವರೂಪದಲ್ಲಿ ಉಂಟುಮಾಡಿದನು; ದೇವಸ್ವರೂಪದಲ್ಲಿ ಅವರನ್ನು ಉಂಟುಮಾಡಿದನು; ಅವರನ್ನು ಗಂಡು ಹೆಣ್ಣಾಗಿ ನಿರ್ಮಿಸಿದನು. ಇದಲ್ಲದೆ ದೇವರು ಅವರನ್ನು ಆಶೀರ್ವದಿಸಿ – ನೀವು ಬಹುಸಂತಾನವುಳ್ಳವರಾಗಿ ಹೆಚ್ಚಿರಿ ... ದೇವರು ತಾನು ಉಂಟುಮಾಡಿದ್ದನ್ನೆಲ್ಲಾ ನೋಡಲಾಗಿ ಅದು ಬಹು ಒಳ್ಳೇದಾಗಿತ್ತು" (ಆದಿಕಾಂಡ 1:27–28, 31) ಎಂದು ಹಳೇ ಒಡಂಬಡಿಕೆಯು ಬೋಧಿಸುತ್ತದೆ. ಆದ್ದರಿಂದ ವೈವಾಹಿಕ ಹಿನ್ನಲೆಯಲ್ಲಿನ ಮನುಷ್ಯನ ಪ್ರೀತಿ ಮತ್ತು ಲೈಂಗಿಕತೆಯು ದೇವರ ಉತ್ತಮ ಸೃಷ್ಟಿಯ ಭಾಗವಾಗಿದೆ. ಸತ್ಯವೇದ ಆಧಾರಿತ ದೈವಶಾಸ್ತ್ರವು ಕೇವಲ "ಆತ್ಮೀಕ" ವಿಷಯಗಳಡೆಗೆ ಮಾತ್ರ ಗಮನಹರಿಸುವುದಿಲ್ಲ ವಾಸ್ತವಿಕವಾಗಿ ಸತ್ಯವೇದ ಆಧಾರಿತ ದೈವಶಾಸ್ತ್ರವು ಲೌಕಿಕ ಮತ್ತು ಆತ್ಮೀಕ ಸಂಗತಿಗಳ ನಡುವೆ, ಒಬ್ಬ ವ್ಯಕ್ತಿಯ "ದೇಹ" ಮತ್ತು ಆತನ "ಆತ್ಮ/ಪ್ರಾಣ"ದ ನಡುವೆ ವ್ಯತ್ಯಾಸವನ್ನು ಮಾಡುವುದಿಲ್ಲ. ವ್ಯಕ್ತಿಯ "ದೇಹ"ವು ಅವನ "ಹೃದಯ"ದಷ್ಟೇ ದೇವರಿಗೆ ಸಮರ್ಪಿತವಾಗಿರಬೇಕು.

2. ಮನುಷ್ಯನ ಬೀಳುವಿಕೆಯು ಎಲ್ಲಾ ವಿಧದ ಸಂಬಂಧಗಳಿಗೆ ಪಾಪವನ್ನು ತಂದಿತು ಎಂದೂ ಸಹ ಹಳೇ ಒಡಂಬಡಿಕೆಯು ಬೋಧಿಸುತ್ತದೆ. ದೇವರು ಮತ್ತು ಮನುಷ್ಯನ ನಡುವಿನ ಬಾಂಧವ್ಯ ಬೆಸುಗೆಯು ಹದಗೆಟ್ಟಿತು. ಮನುಷ್ಯರ ನಡುವಿನ ಬಾಂಧವ್ಯದಲ್ಲಿ ಘರ್ಷಣೆ ಮತ್ತು ಕೊಲೆಗಳು ತುಂಬಿಕೊಂಡವು. ಮದುವೆಯ ಚೌಕಟ್ಟಿನೊಳಗೆ ಆನಂದ ಪಡುವ ಲೈಂಗಿಕತೆಯ ಸ್ಥಾನದಲ್ಲಿ ಎಲ್ಲಾ ಬಗೆಯ ಪಾಪಮಯ ಶಾರೀರಿಕ ಪಾಪಗಳು ತೊಂಬಿಕೊಂಡವು. ಪಾಪದ ಪರಿಣಾಮದೊಂದಿಗೆ ವ್ಯವಹರಿಸಲು ಇಬ್ರಿಯ ಆತ್ಮೀಕತೆಯು ವಿಭಿನ್ನವಾದ ವಿಧಾನಗಳನ್ನು ತಿಳಿಸುತ್ತದೆ. ಅದರಲ್ಲಿ ಒಂದು ವಿಧಾನವು ಯಜ್ಞದ ಮೂಲಕ ಪಾಪದೊಂದಿಗೆ ವ್ಯವಹರಿಸುವುದಾಗಿದೆ. ಇನ್ನೊಂದು ವಿಧಾನವೆಂದರೆ– ಇಬ್ರಿಯ ಜ್ಞಾನದ ಬೋಧನೆಯ ಮೂಲಕ ಭಕ್ತಿಯುತ ಗುಣಸ್ವಭಾವವನ್ನು ವರ್ಣಿಸುವುದಾಗಿದೆ. ಪರಮಗೀತವನ್ನು ಈ ಇಬ್ರಿಯ ಜ್ಞಾನದ ಹಿನ್ನಲೆಯಲ್ಲಿ ಅರ್ಥೈಸಿಕೊಳ್ಳಬೇಕಾಗಿದೆ. ಇದು ವೈವಾಹಿಕ ಲೈಂಗಿಕತೆಯ ಪ್ರೀತಿಯ ಆನಂದವನ್ನು ಕಾವ್ಯ/ಪಠ್ಯರೂಪವಾಗಿ ವರ್ಣಿಸುತ್ತದೆ. ಅದಕ್ಕಾಗಿಯೇ ಇದು ಮೊದಲ ಸ್ಥಾನದಲ್ಲಿ ಬರೆಯಲ್ಪಟ್ಟಿದೆ.

3. ಆದರೆ ಹೆಲೆನ್ ತತ್ವವಾದವು ಮನುಷ್ಯನ ತಿಳುವಳಿಕೆಯಲ್ಲಿ ಮತ್ತು ಪ್ರಾಚೀನ ಇಸ್ರಾಯೇಲಿಗೆ ಒಂದು ಪ್ರಮುಖ ಬದಲಾವಣೆಯನ್ನು ತಂದಿತು. ಪ್ಯಾಲೆಸ್ತೇನ್ ಹೆಲೆನ್ ಸಮುದ್ರದಿಂದ ನಿಯಂತ್ರಿಸಲ್ಪಡುತ್ತಿತ್ತು (ಮೊದಲು ಈಜಿಪ್ತಿನ ಪ್ಟೊಲೇಮಿ ಮತ್ತು ನಂತರ ಸಿರಿಯಾದ ಸೆಲ್ಯುಸ್ಯೆರಿಂದ) ಮತ್ತು ಕ್ರಿಸ್ತನಿಗಿಂತ ಮುಂಚೆ ಮೂರು ಶತಮಾನಗಳ ಅವಧಿಯಲ್ಲಿ ಹೆಲೆನ್ ತತ್ವವಾದದಿಂದ ಬಲವಾಗಿ ಪ್ರಭಾವಿತಗೊಂಡಿತ್ತು. ಒಬ್ಬ ವ್ಯಕ್ತಿಯ ದೇಹವು ಆತನ

ಆತ್ಮನಿಂದ/ಪ್ರಾಣದಿಂದ ಬೇರ್ಪಡಿಸುವ ಪಾಶ್ಚಾತ್ಯ ತತ್ವಶಾಸ್ತ್ರವನ್ನು ಹೆಲೆನ್ ವಿಚಾರವು ಒಪ್ಪಿಕೊಂಡಿತ್ತು. ಇದು ಮನುಷ್ಯನ ಕುರಿತಾಗಿನ ಇಬ್ರಿಯ ತಿಳುವಳಿಕೆಗೆ ಸರಿಹೊಂದುವುದಿಲ್ಲ. ಈಗ ದೇಹವು ಪಾಪಮಯ ಮತ್ತು ಪ್ರಾಣ (ಆತ್ಮವು) ದೈವಿಕವಾದುದ್ದೆಂದು ಯೋಚಿಸುವುದಾಗಿತ್ತು. ಹಾಗಾಗಿ ವೈವಾಹಿಕ ಚೌಕಟ್ಟಿನೊಳಗಿನ ಲೈಂಗಿಕ ಪ್ರೀತಿ ಸಹ ಬೀಳುವಿಕೆಯ ಒಂದು ಪಾಪಮಯವಾದ ಪರಿಣಾಮವೆಂಬುದಾಗಿ ಪರಿಗಣಿಸಲಾಯಿತು.

4. ಈ ಮನುಷ್ಯನ ಕುರಿತಾಗಿನ ಈ ಬದಲಾದ ತಿಳುವಳಿಕೆಯು ಪರಮಗೀತದ ಒಂದು ಬದಲಾದ ತಿಳುವಳಿಕೆಗೆ ನಡೆಸಿತ್ತು. ಮದುವೆಯ ಚೌಕಟ್ಟಿನೊಳಗೆ ಮನುಷ್ಯನ ಲೈಂಗಿಕ ಆಕರ್ಷಣೆಗೆ ಮತ್ತು ಪ್ರೀತಿಯೊಂದಿಗೆ ಈ ಒಂದು ಪವಿತ್ರ ಪುಸ್ತಕವು ವ್ಯವಹರಿಸುವುದು ಎಂದಿಗೂ ಒಪ್ಪುವುದಿಲ್ಲ. ಒಂದು ಹೊಸ ಓದುವ ವಿಧಾನದ ಮೂಲಕ ಈ ಸಮಸ್ಯೆಯನ್ನು ಪರಿಹರಿಸಲಾಯಿತು. ಪುನಾಕರ್ಥ ಆತ್ಮೀಕ (ಮತ್ತು ಸಾಂಕೇತಿಕ) ತಿಳುವಳಿಕೆಯು ಮೂಲ ಅಕ್ಷರಶಃ ತಿಳುವಳಿಕೆಯ ಸ್ಥಾನವನ್ನು ಕಬಳಿಸಿತು. ಪರಮಗೀತವು ಹೆಚ್ಚುಕಾಲ ಒಂದು ಗಂಡು ಮತ್ತು ಹೆಣ್ಣಿನ ನಡುವಿನ ಪ್ರೀತಿಯ ಕುರಿತಾಗಿ ಉಳಿಯಲಿಲ್ಲ, ಆದರೆ ಇದು ದೇವರು ಮತ್ತು ಆತನ ಜನರ ನಡುವಿನ ಪ್ರೀತಿಯ ಕುರಿತಾಗಿ ಬದಲಾಯಿತು.

5. ಪರಮಗೀತದ ಈ ಹೊಸ **"ಆತ್ಮೀಕ"** (ಮತ್ತು ಸಾಂಕೇತಿಕ) ತಿಳುವಳಿಕೆಯು ಹಳೇ ಒಡಂಬಡಿಕೆಯ ಪುಸ್ತಕಗಳ ಅಂಗೀಕೃತ ಜೋಡಣೆಯ ಕೊನೇ ಹಂತದ ಸಮಯದಲ್ಲಿ ಪರಿಗಣಿಸಲಾಯಿತು. ಹಾಗಾಗಿ ಇದು ಆತ್ಮೀಕವಾಗಿ ಮತ್ತು ಸಾಂಕೇತಿಕವಾಗಿ ಅರ್ಥವಿವರಣೆಗೊಂಡ ನಿಮಿತ್ತದಿಂದಾಗಿ ಯೆಹೂದಿ ಪಂಡಿತರು ಇದನ್ನು ಇಬ್ರಿಯ ಅಧಿಕೃತ ಜೋಡಣೆಯಲ್ಲಿ ಸೇರಿಸಿರಬಹುದು.

ದೈವಶಾಸ್ತ್ರ

ಈ ಪಠ್ಯಪುಸ್ತಕವು ಪರಮಗೀತವನ್ನು ಅಕ್ಷರಶಃ ಒಂದು ಗಂಡು ಮತ್ತು ಹೆಣ್ಣಿನ ನಡುವಿನ ಲೈಂಗಿಕ ಆಕರ್ಷಣೆ ಮತ್ತು ಪ್ರೀತಿಯ ಬಗೆಗಿನ ಕಾವ್ಯವೆಂಬಂತೆ ವ್ಯಾಖ್ಯಾನಿಸುತ್ತದೆ. ಮತ್ತು ಮನುಷ್ಯನ ಪ್ರೀತಿಯ ಕುರಿತಾಗಿನ ಈ ಪದ್ಯವನ್ನು ಯೆಹೂದಿ ಮತ್ತು ಕ್ರೈಸ್ತ ಗ್ರಂಥ ಜೋಡಣೆಯಲ್ಲಿ ಕೆನಾನ್ ಸೇರಿಸಲಾಗಿದೆ. ಇದು ಕೆಲವು ದೈವಶಾಸ್ತ್ರೀಯ ಪ್ರಾಮುಖ್ಯತೆಯನ್ನು ಹೊಂದಿರಬಹುದು ಎಂಬುಂದನ್ನು ಇದು ತೋರಿಸುತ್ತದೆ. ಪರಮಗೀತದಲ್ಲಿ ಕಂಡುಬರುವ ದೈವಶಾಸ್ತ್ರದ ಸಂಕ್ಷಿಪ್ತ ವರ್ಣನೆಯು ಇಂತಿದೆ:

- ಪರಮಗೀತವು ಮನುಷ್ಯನ ಶರೀರ ಮತ್ತು ಅದರ ಲೈಂಗಿಕತೆಯನ್ನು ಒಂದು ನಕಾರಾತ್ಮಕ ನೋಟವನ್ನು (ದೃಷ್ಠಿಕೋನವನ್ನು) ತಿರಸ್ಕರಿಸುತ್ತದೆ. ಬದಲಾಗಿ ಇದು ಸೃಷ್ಟಿಯ ಮತ್ತು ಆದಿಕಾಂಡ 1:26–31, 2:24, ಜ್ಞಾನೋ. 5:15–19, ಮತ್ತು 30:18–19 ರಲ್ಲಿ ಕಂಡುಬರುವ ಸ್ತ್ರೀ ಮತ್ತು ಪುರುಷರ ನಡುವಿನ ಸಂಬಂಧದ ಸಕಾರಾತ್ಮಕ ದೃಷ್ಠಿಕೋನವನ್ನು ಪ್ರತಿನಿಧಿಸುತ್ತದೆ. ದೇವರು ಪ್ರಾಚೀನ ಮತ್ತು ಆಧುನಿಕ ಜನರಿಂದ ಕೀಳಾಗಿ ಕಾಣಲ್ಪಟ್ಟ ಮತ್ತು ತಿರಸ್ಕರಿಸಲ್ಪಟ್ಟ ಮನುಷ್ಯನ ಪ್ರೀತಿಯು ತನ್ನ ಒಳ್ಳೆಯ ಸೃಷ್ಟಿಯಲ್ಲಿ ವೈವಾಹಿಕ ಜೀವನದ ಒಂದು ಸಾಮಾನ್ಯ ಭಾಗವಾಗಿರಬೇಕೆಂದು ಬಯಸುತ್ತಾನೆ.

ಪ್ರಶ್ನೆಗಳು

ಈ ಪ್ರಶ್ನೆಗಳಿಗೆ ಉತ್ತರಗಳನ್ನು ಮೇಲಿನ ಪಠ್ಯದಲ್ಲಿ ಸುಲಭವಾಗಿ ಕಾಣಬಹುದು. ಆದರೆ ನೀವು ಅಲ್ಲಿ ನೋಡುವ ಮೊದಲು ಪ್ರಶ್ನೆಗಳಿಗೆ ಉತ್ತರಿಸಲು ಪ್ರಯತ್ನಿಸಿದರೆ ನೀವು ಇನ್ನಷ್ಟು ಕಲಿಯುವಿರಿ. ನೀವು ಸಾಧ್ಯವಾದಷ್ಟು ನಿಮ್ಮ ಸ್ವಂತ ಪದಗಳನ್ನು ಬಳಸಿದರೆ ಅದು ಉತ್ತಮವಾಗಿರುತ್ತದೆ.

1. ಇಬ್ರಿಯ ಸತ್ಯವೇದದಲ್ಲಿ ಪರಮಗೀತ ಅನ್ನು ಕ್ಯಾನೊನಿಕಲ್ ಆಗಿ ಯಾವಾಗ ಸೇರಿಸಲಾಯಿತು?
2. ಯೆಹೂದಿ ಸಮುದಾಯವು ತನ್ನ ಧಾರ್ಮಿಕ ಜೀವನದಲ್ಲಿ ಪರಮಗೀತವನ್ನು ಹೇಗೆ ಬಳಸಿಕೊಂಡಿತು?
3. ನಮ್ಮ ಸತ್ಯವೇದಗಳಲ್ಲಿ ಪರಮಗೀತವನ್ನು ಏಕೆ ಸೇರಿಸಲಾಗಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುವ ಐದು ಅಂಶಗಳ ಪಟ್ಟಿ ಮಾಡಿ.
4. ನಮ್ಮ ಸತ್ಯವೇದಗಳಲ್ಲಿ ಪರಮಗೀತವನ್ನು ಏಕೆ ಸೇರಿಸಲಾಗಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುವ ಐದು ಅಂಶಗಳಲ್ಲಿ ಪ್ರತಿಯೊಂದನ್ನು ನಿಮ್ಮ ಸ್ವಂತ ಮಾತುಗಳಲ್ಲಿ ವಿವರಿಸಿ.
5. ಪರಮಗೀತದ ದೈವಶಾಸ್ತ್ರವನ್ನು ವಿವರಿಸಲು ನಿಮ್ಮ ಸ್ವಂತ ಪದಗಳನ್ನು ಬಳಸಿ.

ಕೆಲವು ಸಾಹಿತ್ಯದ ಲಕ್ಷಣಗಳು

ಹಿನ್ನಲೆ

ಪರಮಗೀತವನ್ನು ಒಂದು ಪ್ರೇಮಕಾವ್ಯವನ್ನಾಗಿ ವರ್ಣಿಸಬಹುದು. ಒಬ್ಬ ಕುರಿಕಾಯುವ ಹುಡುಗ ಮತ್ತು ಕುರಿಕಾಯುವ ಹುಡುಗಿ ಇಲ್ಲಿ ಪ್ರೇಮಿಗಳಾಗಿದ್ದಾರೆ. (1:7–8). ಹಿನ್ನಲೆಯು ಹೂ ಮತ್ತು ಹಣ್ಣುಗಳಿಂದ ತುಂಬಿದ ಹಳ್ಳಿಯ ರಮ್ಯನೋಟಗಳನ್ನು, ದ್ರಾಕ್ಷೇತೋಟಗಳು (1:6, 14, 2:15, 7:12), ಬೆಟ್ಟಗಳು ಮತ್ತು ಗುಡ್ಡಗಳು (2:8, 4:6, 8:14), ಹೂಗಳು ಮತ್ತು ಮರಗಳು (2:12, 4:14, 6:11, 8:5) ಮತ್ತು ಕುರಿಯ ಹಿಂಡುಗಳನ್ನು (1:8) ಒಳಗೊಂಡಿದೆ. ಸನ್ನಿವೇಶವು ವಿಶೇಷವಾದ ಒಂದು ವಿವಾಹದ ಸಂಭ್ರಮದಂತೆ ತೋರುತ್ತದೆ.

ಹೋಲಿಕೆಗಳು

ಈ ಪುಸ್ತಕದ ಒಂದು ಪ್ರಮುಖ ಸಾಹಿತ್ಯಿಕ ವೈಶಿಷ್ಟ್ಯವೆಂದರೆ ಅದರ ಅತಿರಂಜಿತ ಹೋಲಿಕೆಗಳು. ಎರಡು ಉದಾಹರಣೆಗಳು:

ಒಬ್ಬ ಸ್ತ್ರೀಯು ಫರೋಹನ ಆಸ್ಥಾನದಲ್ಲಿನ ಒಂದು ಕುದುರೆಗೆ ಹೋಲಿಸಲ್ಪಟ್ಟಿದ್ದಾಳೆ (1:9):

ಪ್ರಿಯಳೇ ನಿನ್ನನ್ನು ಫರೋಹನ ರಥಗಳ ಕುದುರೆಗೆ ಹೋಲಿಸಿದ್ದೇನೆ.

ಆಕೆಯ ಕೂದಲನ್ನು ಆಡುಮಂದೆಗೆ ಹೋಲಿಸಲಾಗಿದೆ (4:1):

ನಿನ್ನ ಕೂದಲು ಗಿಲ್ಯಾದ್ ಬೆಟ್ಟದ ಪಾರ್ಶ್ವದಲ್ಲಿ ಮಲಗಿರುವ ಆಡುಮಂದೆ.

ಈ ರೀತಿಯ ಹೋಲಿಕೆಗಳು ಹೇಗೆ ಕಾರ್ಯನಿರ್ವಹಿಸುತ್ತವೆಂಬುದನ್ನು ನೋಡೋಣ:

ಅ. ಹೋಲಿಕೆಗಳ ಪ್ರಾಥಮಿಕ ಅಂಶವು ಕಾಣುವಂಥದಲ್ಲ. ಕೆಲವೊಮ್ಮೆ ಈ ರೀತಿಯಲ್ಲಿ ಕಾಣುವುದಿಲ್ಲ: ಸ್ತ್ರೀಯು ಬಹುಶಃ ರಥದ ಕುದುರೆಯಂತೆ ಕಾಣದೇ ಇರಬಹುದು (1:9) ಮತ್ತು ಆಕೆಯ ಕೂದಲು ಆಡುಮಂದೆಯಂತೆ ಇರದೇ ಇರಬಹುದು (4:1)

ಆ. ಹಾಗೆಯೇ ಹೋಲಿಕೆಗಳು ಅಕ್ಷರಶಃಕ್ಕಿಂತಲೂ ಅಲಂಕಾರಿಕವಾಗಿವೆ.

ಇ. ಇಲ್ಲಿ ಸಾಮಾನ್ಯವಾಗಿ ಇಬ್ಬರೂ ಹೋಲಿಸಲ್ಪಟ್ಟಿರುವುದು ಗುಣಮಟ್ಟ ಅಥವಾ ಮೌಲ್ಯದ ಜೊತೆಗಾಗಿದೆ.

ಈ. ಹಾಗಾಗಿ ಇಲ್ಲಿ ಎರಡು ವಸ್ತುಗಳ ಮೌಲ್ಯಗಳು ಹೋಲಿಸಲ್ಪಟ್ಟಿವೆ. ಸ್ತ್ರೀಯು ಸ್ತ್ರೀಯರ ನಡುವೆ ಅತ್ಯುತ್ತಮ ಮತ್ತು ಅತೀ ಅಮೂಲ್ಯವಾಗಿರುವ ಮೂಲಕ ಫರೋಹನ ರಥಗಳ ಕುದುರೆಯಂತಿದ್ದಾಳೆ (1:9). ಆಕೆಯ ಕೂದಲು ಅರೋಗ್ಯವಂತ ಆಡುಮಂದೆಯ ಐಶ್ವರ್ಯ ಮತ್ತು ಸೌಂದರ್ಯವನ್ನು ಹೊಂದಿದೆ. ಇದು ಆ ಪ್ರೇಮಿಗೆ ಆನಂದವನ್ನುಂಟುಮಾಡುತ್ತದೆ.

ಸಂಭಾಷಣೆಗಳು

ಪರಮಗೀತವು ಮುಖ್ಯವಾಗಿ ಕುರಿಕಾಯುವ ಹುಡುಗಿ ಮತ್ತು ಹುಡುಗನ ನಡುವಿನ, ಕೆಲವೊಮ್ಮೆ ಉಳಿದ ಗುಂಪಿನೊಂದಿಗಿನ ಸಂಭಾಷಣೆಯ ಒಂದು ಸರಣಿಯಾಗಿ ನಿರೂಪಿಸಲ್ಪಟ್ಟಿದೆ.

ಪಲ್ಲವಿ

ಇಲ್ಲಿ ಒಂದು ಪಲ್ಲವಿ ಸಹ ಇದೆ, **"**ಯೆರೂಸಲೇಮಿನ ಸ್ತ್ರೀಯರೇ ಉಚಿತಕಾಲಕ್ಕೆ ಮುಂಚೆ ಪ್ರೀತಿಯನ್ನು ಹುಟ್ಟಿಸಿ ಬೆಳೆಸಬಾರದು**"** (2:7, 3:5, 8:4, 5:8). ಈ ಪಲ್ಲವಿಯು ಕುರಿಕಾಯುವ ಹುಡುಗಿಯಿಂದ ಹೇಳಲ್ಪಟ್ಟಿದೆ. ಇದನ್ನು ಆಕೆಯು ತನ್ನ ಪ್ರೀತಿಯನ್ನು ತುಂಬಾ ವೇಗವಾಗಿರಲು ಒತ್ತಡ ತರಬಾರದೆಂದು ಉಳಿದ ಸ್ತ್ರೀಯರ ಬಳಿ ಬೇಡುತ್ತಿರುವುದಾಗಿ

ಅರ್ಥೈಸಿಕೊಳ್ಳಬಹುದು. ಪ್ರೇಮಿಗಳ ಪ್ರೀತಿಯು ನಿಗಧಿತ ಸಮಯ ಅಂದರೆ ವಿವಾಹದ ಹಾಸಿಗೆಗಿಂತ (8:5) ಮುಂಚೆ ಅದರ ಉತ್ತುಂಗಕ್ಕೆ ಏರಬಾರದು.

ಒಂದು ಕನಸು

ಪುಸ್ತಕವನ್ನು ನಾವು ಓದುವಾಗ ಅದರ ಮಧ್ಯದ ವಿಭಾಗದಲ್ಲಿ (3:1–6:3) ಕುರಿಕಾಯುವ ಹುಡುಗಿಯ ಕನಸನ್ನು ವರ್ಣಿಸಲಾಗಿದೆ.

"ರಾತ್ರಿ ರಾತ್ರಿಯಲ್ಲಿಯೂ ಹಾಸಿಗೆಯ ಮೇಲೆ ನನ್ನ ಪ್ರಾಣಪ್ರಿಯನನ್ನು ಹುಡುಕಿದೆನು; ಎಷ್ಟು ಹುಡುಕಿದರೂ ಸಿಕ್ಕಲಿಲ್ಲ" (3:1) ಮತ್ತು "ನಾನು ನಿದ್ರೆಗೊಂಡಿದ್ದರೂ ನನ್ನ ಹೃದಯವು ಎಚ್ಚರಗೊಂಡಿತ್ತು" (5:2) ಇದು ಇಂತಹ ಕನಸಿನಲ್ಲಿ ಒಬ್ಬರು ಏನನ್ನು ಅಪೇಕ್ಷಿಸಬಹುದೆಂಬುದನ್ನು ಒಳಗೊಂಡಿದೆ. ಅವೆಂದರೆ, ಲೈಂಗಿಕ ಬಯಕೆ, ಕಳಕೊಳ್ಳುವ ಭಯ ಅಲ್ಲದೇ ಇದು ಕುರಿಕಾಯುವ ಯೌವನಸ್ಥ ಹುಡುಗ ಮತ್ತು ಹುಡುಗಿಯರು ಪರಸ್ಪರ ಹೊಂದಿರುವ ಉದ್ರೇಕದಾರಿ ಆಸೆಗಳ ಬಯಕೆಯನ್ನು ವ್ಯಕ್ತಪಡಿಸುತ್ತದೆ. ಈ ಬಯಕೆಯು ದೇವರ ಉತ್ತಮವಾದ ವರದ ಒಂದು ಭಾಗವಾಗಿದೆ.

ಪ್ರೀತಿಯ ಎರಡು ದೃಷ್ಟಿಕೋನಗಳು

ಪ್ರೇಮಿಗಳು ವಿಭಿನ್ನವಾದ ರೀತಿಯಲ್ಲಿ ಮಾತನಾಡುತ್ತಾರೆ. ಇದು ಪ್ರೀತಿಯಲ್ಲಿ ಬಿದ್ದಿರುವ ಒಂದು ಗಂಡು ಮತ್ತು ಹೆಣ್ಣಿನ ನಡುವಿನ ಅನುಭವದ ವ್ಯತ್ಯಾಸವನ್ನು ಪ್ರತಿಬಿಂಬಿಸುತ್ತದೆ. ಗಂಡಿನ ಮಾತುಗಳು ಸಂಪೂರ್ಣವಾಗಿ ಹೆಣ್ಣಿನ ಮೇಲೆಯೇ ಸೀಮಿತಗೊಂಡಿದೆ. ಪುಸ್ತಕದುದ್ದಕ್ಕೂ ಆತನು ಬೇರೆ ಯಾರನ್ನೂ ಸಹ ಸಂಬೋಧಿಸಿ ಮಾತನಾಡುವುದಿಲ್ಲ. ಪದೇ ಪದೇ ನೇರವಾಗಿ ಹೆಣ್ಣಿಗೇ ಮಾತನಾಡುತ್ತಾನೆ, ಆಕೆಯ ಸೌಂದರ್ಯ ಮತ್ತು ಉತ್ತಮವಾದ ಗುಣಗಳನ್ನು ಹೊಗಳುತ್ತಾನೆ. ಕೆಲವೂಮ್ಮೆ ಮಾತ್ರ ಆತನು ತನ್ನ ಬಗ್ಗೆ ಮಾತನಾಡುತ್ತಾನೆ (5:1, 7:8 ಮತ್ತು 8:13).

ಹುಡುಗಿಯು (ಸ್ತ್ರೀ) ಹುಡಗನಲ್ಲದೇ ಯೆರೂಸಲೇಮಿನ ಸ್ತ್ರೀಯರ ಬಗ್ಗೆ ಸಹ ಮಾತನಾಡುತ್ತಾಳೆ. ಆದರೆ ಆಕೆ ಬೇರೆಯವರೊಂದಿಗೆ ಮಾತನಾಡುವಾಗ ಅದು ಹೆಚ್ಚಾಗಿ ಆಕೆಯ ಪ್ರಿಯತಮನ (2:8–9) ಬಗ್ಗೆಯೇ ಆಗಿದೆ. ಆಕೆ ಆತನ ರಮಣೀಯವಾದ ಲಕ್ಷಣಗಳನ್ನು ಹೊಗಳುತ್ತಾಳೆ (5:10–16). ಅಲ್ಲದೆ ಆಕೆಯು ತನ್ನ ಪ್ರಿಯಕರನು ತನಗೆ ಏನಾಗಿದ್ದಾನೆ ಎಂಬುದನ್ನು ವರ್ಣಿಸುತ್ತಾಳೆ (1:13–14) ಮತ್ತು ತಾನು ಆತನೊಂದಿಗೆ ಇರಬೇಕೆಂದೂ ಮತ್ತು ತನ್ನ ಪ್ರೀತಿಯನ್ನು ಆತನಿಗೆ ಕೊಡಬೇಕೆಂದು ಆಶಿಸುತ್ತಾಳೆ (2:5, 5:2–8, 7:12–13).

ಪ್ರಶ್ನೆಗಳು

ಈ ಪ್ರಶ್ನೆಗಳಿಗೆ ಉತ್ತರಗಳನ್ನು ಮೇಲಿನ ಪಠ್ಯದಲ್ಲಿ ಸುಲಭವಾಗಿ ಕಾಣಬಹುದು. ಆದರೆ ನೀವು ಅಲ್ಲಿ ನೋಡುವ ಮೊದಲು ಪ್ರಶ್ನೆಗಳಿಗೆ ಉತ್ತರಿಸಲು ಪ್ರಯತ್ನಿಸಿದರೆ ನೀವು ಇನ್ನಷ್ಟು ಕಲಿಯುವಿರಿ. ನೀವು ಸಾಧ್ಯವಾದಷ್ಟು ನಿಮ್ಮ ಸ್ವಂತ ಪದಗಳನ್ನು ಬಳಸಿದರೆ ಅದು ಉತ್ತಮವಾಗಿರುತ್ತದೆ.

1. ಪರಮಗೀತೆಯ ಸನ್ನಿವೇಶ ಹೇಗಿದೆ?
2. ಪರಮಗೀತೆಯ ಸಂದರ್ಭ ಏನಾಗಿರಬಹುದು?
3. ಪರಮಗೀತೆಯಲ್ಲಿ ಹೋಲಿಕೆಗಳನ್ನು ಹೇಗೆ ಬಳಸಲಾಗಿದೆ ಎಂಬುದನ್ನು ವಿವರಿಸಲು ನಿಮ್ಮ ಸ್ವಂತ ಮಾತುಗಳನ್ನು ಬಳಸಿ.
4. ಪರಮಗೀತೆಯ ಸಂಯೋಜನೆಯನ್ನು ನೀವು ಹೇಗೆ ವಿವರಿಸುತ್ತೀರಿ?
5. ಪಲ್ಲವಿಯ ಉದ್ದೇಶವೇನು?
6. ಕನಸಿನಲ್ಲಿ ಯಾವ ಭಾವನೆಗಳನ್ನು ಕಾಣಬಹುದು?
7. ಪರಮಗೀತೆಯಲ್ಲಿ ಪುರುಷ ಮತ್ತು ಮಹಿಳೆ ಮಾತನಾಡುವ ವಿಧಾನದ ನಡುವಿನ ವ್ಯತ್ಯಾಸಗಳನ್ನು ವಿವರಿಸಿ.

ಪ್ರೇಮಿಗಳು ಪರಸ್ಪರ ಹಾತೊರೆಯುವುದು, (1:2–2:17)

ಪೀಠಿಕೆ ಮತ್ತು ಟಿಪ್ಪಣಿಗಳು

ಇದು ಎರಡು ಮುಖ್ಯ ವ್ಯಕ್ತಿಗಳು (ಕುರಿಕಾಯುವವನು ಮತ್ತು ಕುರಿಕಾಯುವಂತ ಹುಡುಗಿ) ಪರಿಚಯಿಸಲ್ಪಟ್ಟಿದ್ದಾರೆ. ಅವರು ಪರಸ್ಪರ ವಿವಾಹವಾಗಬೇಕೆಂದು ನಿಶ್ಚಯಿಸಲ್ಪಟ್ಟಿದ್ದಾರೆ ಮತ್ತು ಪರಸ್ಪರ ತಮ್ಮ ಪ್ರೀತಿ ಮತ್ತು ಬಯಕೆಯನ್ನು ವ್ಯಕ್ತಪಡಿಸುತ್ತಿದ್ದಾರೆ.

ನಿನ್ನ ಲಾಲನೆಯು ದ್ರಾಕ್ಷಾರಸಕ್ಕಿಂತಲೂ ಮೇಲು (1:2): ಪ್ರೀತಿ ಮತ್ತು ದ್ರಾಕ್ಷಾರಸಗಳೆರಡೂ ಸಹ ಹರ್ಷ ಮತ್ತು ಮತ್ತನ್ನು ತರಬಲ್ಲವು. ಹಾಗಾಗಿ ಪ್ರಾಚೀನ ಕಾವ್ಯಗಳಲ್ಲಿ ಪ್ರೀತಿ ಮತ್ತು ದ್ರಾಕ್ಷಾರಸವನ್ನು ಒಟ್ಟಾಗಿ ತಿಳಿಸುತ್ತಾರೆ.

ಹೆಸರು ... ಸುಗಂಧ ತೈಲ (1:3): ಎರಡೂ ಇಬ್ರಿಯ ಪದಗಳು ಸಮಾನವಾಗಿವೆ.

ರಾಜನು (1:4): ಬಹುಶಃ ಇದನ್ನು ಹೆಣ್ಣು ತನ್ನ ಭಾವೀಪತಿಯನ್ನು ಪ್ರೀತಿಪೂರ್ವಕವಾಗಿ ಈ ಹೆಸರಿನಿಂದ ಕರೆದಿರಬಹುದು. ಹಾಗಾಗಿ ಇದನ್ನು ಒಂದು ರೂಪಾಲಂಕಾರವಾಗಿ ತಿಳಿದುಕೊಳ್ಳಬೇಕು.

ಯೆರೂಸಲೇಮಿನ ನಾರಿಯರೇ (1:5): ಇವರು ಕುರಿಕಾಯುವ ಹುಡುಗಿಯ ಸ್ನೇಹಿತೆಯರಾಗಿರಬಹುದು. ಅವರು ಒಂದು ವೃಂದವಾಗಿ ಪಾತ್ರವಹಿಸಿದ್ದಾರೆ.

ಕೇದಾರಿನ ಗುಡಾರ (1:5): ಕೇದಾರವು ಇಷ್ಮಾಯೇಲನ ಸಂತತಿಯ ಒಂದು ಕುಲವಾಗಿತ್ತು. ಅವರ ಗುಡಾರಗಳು ಕಪ್ಪು ಕುರಿಯ ಕೂದಲಿನಿಂದ ಮಾಡಿರುವ ನಿಮಿತ್ತ ಅವು ಕಪ್ಪಾಗಿದ್ದವು.

ಜಟಾಮಾಂಸಿ (1:12): ಇದು ಗಿಡದಿಂದ ತೆಗೆಯಲ್ಪಟ್ಟ ಒಂದು ಅಮೂಲ್ಯವಾದ ಸುಗಂಧ ದ್ರವ್ಯವಾಗಿದೆ.

ಎನ್ನಿನಿಯನು/ನನ್ನ ನಲ್ಲನು (1:13): ಈ ಇಬ್ರಿಯ ಹೇಳಿಕೆಯು ಕುರಿಕಾಯುವವಳು ತನ್ನ ಪ್ರಿಯತಮನಿಗಾಗಿ ಬಳಸುವ ಒಂದು ಸಾಮಾನ್ಯವಾದ ಪ್ರೀತಿಯ ಪದವಾಗಿದೆ. ಈಕೆಯು ಇದನ್ನು ಈ ಪುಸ್ತಕದಲ್ಲಿ 31 ಬಾರಿ ಬಳಸುತ್ತಾಳೆ.

ರಕ್ತಬೋಳದ ಚೀಲ (1:13): ವಿವಿಧ ಮರಗಳು ಮತ್ತು ಪೊದೆಗಳಿಂದ ತಯಾರಿಸಿದ ಪರಿಮಳಯುಕ್ತ ರಾಳ.

ಪೊಗೊಂಚಲು (1:14): ಬಿಗಿಯಾಗಿ ಗೊಂಚಲುಗಳಾಗಿ ಹರಡಿರುವ, ಪರಿಮಳಯುಕ್ತ, ಬಿಳಿ ಹೂವುಗಳನ್ನು ಹೊಂದಿರುವ ಪ್ಯಾಲೆಸ್ತೇನ್ ಪೊದೆಸಸ್ಯ.

ಎನ್ಗೆದಿ (1:14): ಮೃತಸಮುದ್ರದ ಪಶ್ಚಿಮ ಭಾಗದಲ್ಲಿರುವ ಒಂದು ಫಲವತ್ತಾದ ಜಯಸಿಸ್. ಇದು ಒಂದು ಒರತೆಯಿಂದ ನೀರುಣಿಸಲ್ಪಡುತ್ತಿತ್ತು.

ಶಾರೋನಿನ ನೆಲಸಂಪಿಗೆ (2:1): ಇದೊಂದು ರೀತಿಯ ಹೂವಾಗಿದೆ (ತಗ್ಗಿನ ತಾವರೆಯೊಂದಿಗಿನ ಸಮಾನತೆ ಗಮನಿಸಿ). ಶಾರೋನು ದಕ್ಷಿಣ ಪ್ಯಾಲೆಸ್ತೇನ್‌ನಲ್ಲಿನ ಮೆಡಿಟರೇನಿಯನ್‌ನೊಂದಿಗಿನ ಒಂದು ಕರಾವಳಿ ಬೈಲಿಗಿರುವ (ಪ್ರಸ್ಥಭೂಮಿ) ಒಂದು ಹೆಸರಾಗಿದೆ.

ಸೇಬು ವೃಕ್ಷ (2:3): ಈ ಮರವು ತಂಪಾದ ನೆರಳು ಮತ್ತು ರುಚಿಕರವಾದ ಹಣ್ಣನ್ನು ಕೊಡುತ್ತಿತ್ತು. ಈ ಸೇಬು ಮರದ ನೆರಳೇ ಪ್ರೇಮಿಗಳು ಸಂಧಿಸುವ ಒಂದು ಸ್ಥಳವಾಗಿತ್ತು.

ಔತಣಶಾಲೆ (2:4): ಇಬ್ರಿಯ ಹೇಳಿಕೆ **"ದ್ರಾಕ್ಷಾರಸದ ಶಾಲೆ"** ಎಂದಾಗಿದೆ.

ನನ್ನ ಮೇಲೆ ಎತ್ತಿದ ಧ್ವಜವು ಪ್ರೀತಿಯೇ (2:4): ಈ ರೂಪಾಲಂಕಾರದ ಅರ್ಥವು ಆಕೆಗಾಗಿನ ಕುರಿಕಾಯುವ ಹುಡುಗನ ಪ್ರೀತಿಯು ಪ್ರತಿಯೊಬ್ಬರಿಗೂ ಸಹ ನೋಡಲು ತೆರೆದಿತ್ತು ಎಂಬುದಾಗಿದೆ. ನಿಶ್ಚಯಿಸಲ್ಪಟ್ಟ ಪ್ರೇಮಿಗಳ ಪ್ರೀತಿಯು ರಹಸ್ಯವಾಗಿರಲಿಲ್ಲ. ಅವರಿಬ್ಬರು ಮುಕ್ತವಾಗಿ ಪರಸ್ಪರ ಒಬ್ಬರಿಗೊಬ್ಬರು ನಿಶ್ಚಯಿಸಿಕೊಂಡಿದ್ದರು.

ತಬ್ಬುವುದಾದರೆ (2:6): ಈ ಇಬ್ರಿಯ ಹೇಳಿಕೆಯನ್ನು ಒಂದು ಬಲವಾದ ಅನುರಾಗಕ್ಕಾಗಿ ಉಪಯೋಗಿಸಬಹುದು. ಹಾಗಾಗಿ ಈ ವಚನವನ್ನು ಒಂದು ಲೈಂಗಿಕ ಅನುಬಂಧ ಎಂಬುದಾಗಿ ಓದಬಾರದು.

ವಚನ 2:7: ಇದೊಂದು ಪಲ್ಲವಿಯಾಗಿದೆ (ನೋಡಿ 3:5, 8:4, 5:8). ಜೋಡಿಗಳು ಈಗಾಗಲೇ ಪ್ರೀತಿಯಲ್ಲಿ ಮುಳುಗಿವೆ, ಆದರೆ ಅವರಿಬ್ಬರೂ ತಮ್ಮ ಪ್ರೀತಿಯು ಸೂಕ್ತ ಸಮಯಕ್ಕೆ ತಲುಪುವವರೆಗೆ ಕಾಯಬೇಕಿದೆ. ಇದು ಪ್ರೀತಿಯು ಪೂರ್ಣವಾಗಿ ತೃಪ್ತಿಗೊಳ್ಳುವ ಮದುವೆಯ ಮೊದಲ ರಾತ್ರಿಯವರೆಗೆ ಕಾಯುವುದಾಗಿದೆ (8:4–5).

ಹುಲ್ಲೆ/ಹರಿಣಿ (2:7): ಇವು ಒಂದು ರೀತಿಯ ನಾಚಿಕೆ ಸ್ವಭಾವದ ಪ್ರಾಣಿಗಳಾಗಿದ್ದು ಸಾಮಾನ್ಯವಾಗಿ ಪ್ರಾಚೀನ ಮಧ್ಯಪೂರ್ವದಲ್ಲಿ ಪ್ರೀತಿಯೊಂದಿಗೆ ಸಂಬಂಧ ಹೊಂದಿವೆ.

ಪ್ರಶ್ನೆಗಳು

1. ಇಲ್ಲಿ ಮಾತಾನಾಡುವರನ್ನು ಗುರುತಿಸಿ ಪಟ್ಟಿ ಮಾಡಿರಿ.
2. 1:16–17 ರಲ್ಲಿ ಕುರಿ ಕಾಯುವವಳು ತಮ್ಮ ಸಂಧಿಸುವ ಸ್ಥಳವನ್ನು ಹೇಗೆ ವರ್ಣಿಸಿದ್ದಾಳೆ?
3. 2:2 ರಲ್ಲಿ ಕುರುಬನು ತನ್ನ ಪ್ರಿಯತಮೆಯನ್ನು ಹೇಗೆ ವರ್ಣಿಸಿದ್ದಾನೆ?
4. 2:5 ರಲ್ಲಿ ಕುರಿ ಕಾಯುವವಳು ತನ್ನ ಪ್ರೀತಿಯನ್ನು ಹೇಗೆ ವರ್ಣಿಸುತ್ತಾಳೆ?

ಪ್ರೇಮಿಗಳು ಪರಸ್ಪರ ಹಾತೊರೆಯುವುದು ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಈ ವಾಕ್ಯಭಾಗದಿಂದ ಸ್ತ್ರೀಯ ಹಿನ್ನಲೆಯ ಬಗ್ಗೆ ನಾವು ಏನು ಕಲಿಯುತ್ತೇವೆ?
2. 1:9–10 ರಲ್ಲಿ ಕುರುಬನು ತನ್ನ ಪ್ರಿಯತಮೆಯನ್ನು ಹೇಗೆ ವರ್ಣಿಸುತ್ತಾನೆ?
3. 1:13–14 ರಲ್ಲಿ ಕುರಿ ಕಾಯುವವಳು ತನ್ನ ಪ್ರಿಯತಮನನ್ನು ಹೇಗೆ ವರ್ಣಿಸುತ್ತಾಳೆ? ನಿಮ್ಮ ಹೇಳಿಕೆಗಳೇನು?
4. 1:15 ರಲ್ಲಿ ಕುರುಬನು ತನ್ನ ಪ್ರಿಯತಮೆಯನ್ನು ಹೇಗೆ ವರ್ಣಿಸುತ್ತಾನೆ? ಇಲ್ಲಿನ ರೂಪಾಲಂಕಾರವನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ?
5. 2:3 ರಲ್ಲಿ ಕುರಿ ಕಾಯುವವಳು ತನ್ನ ಪ್ರಿಯತಮನನ್ನು ಹೇಗೆ ವರ್ಣಿಸುತ್ತಾಳೆ?

ಕುರಿಕಾಯುವವಳ ಕನಸುಗಳು, 3:1–6:3

ಪೀಠಿಕೆ ಮತ್ತು ಟಿಪ್ಪಣಿಗಳು

ಸ್ತ್ರೀಯು ತನ್ನ ಕನಸನ್ನು ತಿಳಿಸುತ್ತಿದ್ದಾಳೆ, ಇದು ಅವರ ಪ್ರೀತಿಯ ಪೂರ್ಣತೆಯ ಬಯಕೆಯಿಂದ ಬಂದದ್ದಾಗಿದೆ. ಇದೊಂದು ಕನಸಾಗಿದೆ. 3:1 (ರಾತ್ರಿ ರಾತ್ರಿಯಲ್ಲಿಯೂ ಹಾಸಿಗೆಯ ಮೇಲೆ ನನ್ನ ಪ್ರಾಣಪ್ರಿಯನನ್ನು ಹುಡುಕಿದೆನು) ಮತ್ತು 5:2 (ನಾನು ನಿದ್ದೆಗೊಂಡಿದ್ದರೂ ನನ್ನ ಹೃದಯವು ಎಚ್ಚರಗೊಂಡಿತ್ತು). ಆಕೆಯ ಕನಸು, ಉದ್ರೇಕದ ಬಯಕೆ, ತನ್ನ ಪ್ರಿಯನನ್ನು ಕಳಕೊಳ್ಳುವ ಭಯ ಮತ್ತು ಕಾವಲುಗಾರನಿಂದ ಅವಮಾನ ಹೊಂದಿದ ದೃಶ್ಯವನ್ನು ಒಳಗೊಂಡಿದೆ (5:7) ಮತ್ತು ತನ್ನ ಪ್ರಿಯತಮ ರಾಜ ಸೊಲೊಮೋನನಂತೆ ಕಾಣುವ ಭವ್ಯ ವ್ಯಕ್ತಿಯಾಗಿ ವಿಚಿತ್ರ ರೂಪಾಂತರಗೊಳ್ಳುವುದು (3:6–11) ಸೇರಿವೆ.

ಕನಸನ್ನು ಈ ರೀತಿ 5 ಭಾಗಗಳಾಗಿ ರಚನೆಗೊಳಿಸಬಹುದು:

- ಸ್ತ್ರೀಯು ತನ್ನ ಪ್ರಿಯನಿಗಾಗಿ ತವಕ ಪಡುತ್ತಾಳೆ, ಆತನನ್ನು ತವಕದಿಂದ ಹುಡುಕುತ್ತಾಳೆ, ಆತನನ್ನು ಕೆಂಡುಕೊಳ್ಳುತ್ತಾಳೆ ಮತ್ತು ಆತನನ್ನು ಒಂದು ವಿಹಿತ ಸ್ಥಳಕ್ಕೆ ಕರೆದೊಯ್ಯುತ್ತಾಳೆ, 3:1–5.
- ಸ್ತ್ರೀಯು ತನ್ನ ಪ್ರಿಯನು ಅರಸನಾದ ಸೊಲೊಮೋನನಾಗಿ ರೂಪಾಂತರಗೊಂಡು ತನ್ನ ವಿವಾಹಕ್ಕೆ ಆತನು ಬರುವುದನ್ನು ಕಾಣುತ್ತಾಳೆ, 3:6–11
- ಸ್ತ್ರೀಯ ಪ್ರಿಯನು ತನ್ನ ಪ್ರಿಯತಮೆಯನ್ನು ವರ್ಣಿಸುತ್ತಾನೆ, ಮತ್ತು ತನ್ನೊಂದಿಗೆ ಓಡಿ ಹೋಗಬೇಕೆಂದು ಕೇಳಿಕೊಳ್ಳುತ್ತಾನೆ, 4:1–5:1.
- ಸ್ತ್ರೀಯು ಬಾಗಿಲು ಬಡಿಯುವುದನ್ನು ಕೇಳಿಸಿಕೊಳ್ಳುತ್ತಾಳೆ ಮತ್ತು ಆಕೆಯು ತವಕದಿಂದ ಹುಡುಕುತ್ತಾಳೆ, ಆದರೆ ಕಾವಲುಗಾರರಿಂದ ಹೊಡೆಸಿಕೊಳ್ಳುತ್ತಾಳೆ, 5:2–7.
- ಕಡೆಯದಾಗಿ ಆಕೆಯು ತನ್ನ ಪ್ರಿಯತಮನನ್ನು ಸ್ನೇಹಿತರಿಗೆ ವರ್ಣಿಸುತ್ತಾಳೆ 5:8–6:3.

ನನ್ನನ್ನು ಹೆತ್ತವಳ ಕೋಣೆಗೆ (3:4): ಆಕೆಯ ತಾಯಿಯ ಮಲಗುವ ಕೋಣೆಯು ಇಬ್ಬರು ಪ್ರೇಮಿಗಳಿಗೆ ಒಂದು ಭದ್ರವಾದ ಮತ್ತು ಸಲಿಗೆಯ ಸ್ಥಳವಾಗಿತ್ತು. 8:2 ರಲ್ಲಿ ಸಹ ಸ್ತ್ರೀಯು ತನ್ನ ಪ್ರಿಯನನ್ನು ಈ ಸ್ಥಳಕ್ಕೆ ಕರೆತರುವ ಆಶೆಯನ್ನು ಹೊಂದಿದ್ದಾಳೆ, ಇಲ್ಲಿ ಆಕೆ ಇದನ್ನು ಸೂಕ್ತ ಸಮಯ ಬರುವ ತನಕ ಮಾಡುವುದಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತಾಳೆ. ಹಾಗಾಗಿ 3:1–4 ರಲ್ಲಿನ ಆಕೆಯ ಹುಡುಕುವಿಕೆಯು ನಿಜವಾದ ಒಂದು ಸಂದರ್ಭವನ್ನು (ಘಟನೆ) ಸೂಚಿಸುತ್ತಿಲ್ಲ, ಆದರೆ ಇದು ಆಕೆಯ ಕನಸಿನ ಒಂದು ಭಾಗವಾಗಿದೆ.

ಗಿಲ್ಯಾದ್ (4:1): ಇದು ಯೊರ್ದನಿನ ಪೂರ್ವದಲ್ಲಿ ಯಬ್ಬೋಕ್ ಹೊಳೆಯಿಂದ ಸುತ್ತುವರಿದ ಗುಡ್ಡಗಾಡು ಪ್ರದೇಶವಾಗಿದೆ. ಇದು ತನ್ನ ಹುಲ್ಲುಗಾವಲುಗಳಿಗೆ ಹೆಸರಾಗಿದೆ.

ದಾವೀದನ ಬುರುಜು (4:4): ಇದರ ಕುರಿತು ಹಳೇ ಒಡಂಬಡಿಕೆಯಲ್ಲಿ ಇಲ್ಲಿ ಮಾತ್ರ ತಿಳಿಸಲಾಗಿದೆ. ಬಹುಶಃ ಯೆರೂಸಲೇಮ್ ಪಟ್ಟಣದ ಗೋಡೆಗಳೊಂದಿಗಿನ ಒಂದು ಬುರುಜಾಗಿತ್ತು.

ವಚನ 4:6 2:17 ರಲ್ಲಿ ಇರುವಂತೆ ಪ್ರಾರಂಭವಾಗುತ್ತದೆ. ಮತ್ತು ತನ್ನ ಪ್ರಿಯತಮೆಯೊಂದಿಗೆ ಸಮಯವನ್ನು ಕಳೆಬೇಕೆಂದು ಗಂಡಿನ ಆಶೆಯನ್ನು ಇದು ಸೂಚಿಸುತ್ತದೆ. "ಬೆಟ್ಟ" ಮತ್ತು ಗುಡ್ಡಗಳು ಬಹುಶಃ ಹೆಣ್ಣಿನ ಸ್ತನಗಳನ್ನು ಸೂಚಿಸುತ್ತವೆ. ಆಕೆಯೊಂದಿಗಿರುವುದು ರೋಮಾಂಚನಕಾರಿ ಸುವಾಸನೆಯನ್ನು ಸವಿಯುವಂತೆ ಇರುತ್ತದೆ.

ಅಮಾನ ... ಶೆನೀರ್ ... ಹೆರ್ಮೋನ್ (4:8): ಹೆರ್ಮೋನ್ ಮತ್ತು ಅಮಾನಗಳು ಪ್ಯಾಲೆಸ್ತೇನ್‌ನ ಉತ್ತರಭಾಗದಲ್ಲಿನ ಪರ್ವತ ಶಿಖರಗಳಾಗಿವೆ. ಇದರರ್ಥ ಗಂಡು ತನ್ನ ಪ್ರೇಯಸಿಯನ್ನು ನಿರ್ಜನ ಮತ್ತು ಅಪಾಯಕಾರಿ ಪ್ರದೇಶಗಳಿಂದ ಕರೆಯುವುದಾಗಿದೆ.

ವಧುವೇ (4:8–5:1 ರಲ್ಲಿ 6 ಬಾರಿ ಉಲ್ಲೇಖಿಸಲಾಗಿದೆ, ಆದರೆ ಪುಸ್ತಕದಲ್ಲಿ ಬೇರೆಲ್ಲಿಯೂ ಇಲ್ಲ): ಈ ವಿಶೇಷಣವನ್ನು ಜೋಡಿಗಳು ಈಗಾಗಲೆ ಮದುವೆಯಾಗಿದ್ದಾರೆ ಎಂದು ಅರ್ಥೈಸಿಕೊಳ್ಳಬಾರದು. ಬದಲಿಗೆ ಅವನ ದೃಶ್ಯ (4:1–5:1) ಹೆಣ್ಣಿನ

ಕನಸಿನಲ್ಲಿಯೂ ನಡೆಯುತ್ತದೆ ಎಂದು ಸೂಚಿಸುತ್ತದೆ, ಏಕೆಂದರೆ ಅವಳು ಮದುವೆಯ ದಿನವು ಏನನ್ನು ತರುತ್ತದೆ ಎಂದು ಎದುರು ನೋಡುತ್ತಾಳೆ.

ದ್ರಾಕ್ಷಾರಸ (4:10): 1:2 ರ ಟಿಪ್ಪಣಿ ನೋಡಿ.

ಉದ್ಯಾನ (4:12): ಪ್ರಾಚೀನ ಮಧ್ಯಪೂರ್ವದ ಉದ್ಯಾನಗಳು ಆಧುನಿಕ ಪಾರ್ಕುಗಳಂತಿದ್ದವು. ಇಲ್ಲಿಯೇ ಪ್ರೇಮಿಗಳು ಸಂಧಿಸುತ್ತಿದ್ದರು. ಅಲ್ಲದೆ ಉಧ್ಯಾನಗಳು ಸ್ತ್ರೀಯ ಲೈಂಗಿಕತೆಯೊಂದಿಗೆ ಸಹ ನಿಕಟ ಸಂಬಂಧ ಹೊಂದಿವೆ. ಹಾಗಾಗಿ ಉಧ್ಯಾನವು ಹೆಣ್ಣಿಗೆ, ಪರಮಗೀತದ ಕುರಿಕಾಯುವವಳಿಗೆ ಒಂದು ರೂಪಾಲಂಕಾರವಾಗಿದೆ. ಬುಗ್ಗೆ, ಬಾವಿ ಸಹ ಇದೇ ಸಂಗತಿಯನ್ನು ಪ್ರತಿಬಿಂಬಿಸುತ್ತದೆ (ಹೋಲಿಸಿ ಜ್ಞಾನೋ. 5:15–19). ಹೆಣ್ಣಿನ ಉದ್ಯಾನ ಮತ್ತು ಬುಗ್ಗೆಯು ಮುಚ್ಚಿದೆ ಮತ್ತು ಮುದ್ರಿಸಿದೆ ಎಂಬುದನ್ನು ಗಮನಿಸಿರಿ. ಆಕೆಯು ತನ್ನನ್ನು ಮತ್ತು ತನ್ನ ಲೈಂಗಿಕತೆಯನ್ನು ತನ್ನ ಪ್ರಿಯತಮನಿಗಾಗಿ ಮಾತ್ರ ಕಾಯ್ದಿರಿಸಿದ್ದಾಳೆ ಎಂಬುದನ್ನು ತೋರಿಸುತ್ತದೆ.

ವಚನ 4:16: ಈ ಪದ್ಯದ ಕೊನೆಯ ಭಾಗವನ್ನು ಮಹಿಳೆ ಮಾತನಾಡಿದ್ದಾಳೆಂದು ವ್ಯಾಕರಣ ತೋರಿಸುತ್ತದೆ. ಆದರೆ ವ್ಯಾಖ್ಯಾನಕಾರರು ಅದರ ಮೊದಲ ಭಾಗದ ಭಾಷಣಕಾರರ ಬಗ್ಗೆ ಒಮ್ಮತಕ್ಕೆ ಬರುವುದಿಲ್ಲ (ನಿಮ್ಮ ಬೈಬಲ್ ಆವೃತ್ತಿಗಳನ್ನು ಹೋಲಿಕೆ ಮಾಡಿ). ಮಹಿಳೆ ತನಗೆ ಆಹ್ವಾನ ನೀಡಬೇಕೆಂಬ ಪುರುಷನ ಬಯಕೆಯನ್ನು ಗಾಳಿಯು ಪ್ರತಿಬಿಂಬಿಸುತ್ತದೆ. ಆದ್ದರಿಂದ ಅವನನ್ನು ಭಾಷಣಕಾರನಾಗಿ ನೋಡುವುದು ಅರ್ಥಪೂರ್ಣವಾಗಿದೆ. ಪದ್ಯದ ದ್ವಿತೀಯಾರ್ಧದಲ್ಲಿ ಅವನ ಆಸೆಯನ್ನು ನೀಡಲಾಗಿದೆ, ಇದನ್ನು ನಿಸ್ಸಂದೇಹವಾಗಿ ಮಹಿಳೆ ಮಾತನಾಡುತ್ತಾಳೆ.

ವಚನ 5:1: ಹೆಣ್ಣು ಈಗಲೂ ಕನಸು ಕಾಣುತ್ತಿದ್ದಾಳೆ (ಹೋಲಿಸಿ 5:2). ತನ್ನ ಕನಸಿನಲ್ಲಿ ಆಕೆಯು ಪ್ರಿಯನು ತನ್ನ ಆಹ್ವಾನಕ್ಕೆ ಸಕಾರಾತ್ಮಕವಾಗಿ ಪ್ರತಿಕ್ರಿಯಿಸುವುದನ್ನು ಆಕೆಯು ಕಾಣುತ್ತಾಳೆ.

ವಚನ 5:7: ಕಾವಲುಗಾರರು ಈ ರೀತಿ ಸ್ತ್ರೀಯನ್ನು ಹೊಡೆದು ದೋಚುತ್ತಾರೆಂದು ನೀವು ವರ್ಣಿಸಬಾರದು. ಆದರೆ ಇದು ಸ್ತ್ರೀಯ ಕನಸಿನಲ್ಲಿ ನಡೆಯುವುದಾಗಿದೆ, ನಿಜ ಜೀವನದಲ್ಲಿ ಅಲ್ಲ.

ವಚನ 6:1–2: ಈ ಮೊದಲು ಸ್ತ್ರೀಯು ತನ್ನ ಪ್ರಿಯನು ಹೋಗಿಬಿಟ್ಟಿದ್ದಾನೆಂದು ದೂರುತ್ತಾಳೆ (ನೋಡಿ 5:6) ಈಗ ಆತನು ಎಲ್ಲಿಗೆ ಹೋಗಿದ್ದಾನೆಂದು ಆಕೆಯ ಸ್ನೇಹಿತರು ಕೇಳುತ್ತಾರೆ. ಅದಕ್ಕೆ ಆಕೆಯು ಆತನ ಮಂದೆ ಮೇಯಿಸಲು ಮತ್ತು ನೆಲದಾವರೆಗಳನ್ನು ಕೊಯ್ಯಲು ತನ್ನ ಉದ್ಯಾನಕ್ಕೆ ಹೋಗಿದ್ದಾನೆಂದು ಹೇಳುತ್ತಾಳೆ. ಇದರರ್ಥ ತಮ್ಮ ಪ್ರೀತಿಯನ್ನು ಸವಿಯಲು ಆತನು ಆಕೆಯ ಬಳಿ ಬಂದಿದ್ದಾನೆ ಎಂಬುದಾಗಿದೆ.

6:3: ಪ್ರೇಮಿಗಳು ಪರಸ್ಪರ ಒಬ್ಬರಿಗೊಬ್ಬರು ತಮ್ಮ ಪ್ರೇಮಕ್ಕೆ ಸಮರ್ಪಿಸಲ್ಪಟ್ಟಿದ್ದಾರೆಂಬ ಘೋಷಣೆಯೊಂದಿಗೆ ಆಕೆಯ ಕನಸು ಮುಕ್ತಾಯವಾಗುತ್ತದೆ. **"ಎನ್ನಿನಿಯನು ನನ್ನವನೇ, ನಾನು ಅವನವಳೇ"** .

ಪ್ರಶ್ನೆಗಳು

1. ತನ್ನ ಕನಸಿನಲ್ಲಿ ಸ್ತ್ರೀಯು ತನ್ನ ಪ್ರಿಯತಮನನ್ನು ಹುಡುಕುತ್ತಿರುತ್ತಾಳೆ. ಆಕೆಯು ಆತನನ್ನು ಕಂಡುಕೊಂಡ ನಂತರ ಎಲ್ಲಿಗೆ ಕರೆತರುತ್ತಾಳೆ?

2. ಸ್ತ್ರೀಯು ತನ್ನ ಕನಸಿನಲ್ಲಿ ಪ್ರಿಯತಮನು ತನ್ನ ಸೌಂದರ್ಯವನ್ನು ವರ್ಣಿಸುವುದನ್ನು ಕೇಳಿಸಿಕೊಳ್ಳುತ್ತಾಳೆ. ಸ್ತ್ರೀ ದೇಹದ ಯಾವ ಭಾಗಗಳನ್ನು ಆತನು ವರ್ಣಿಸುತ್ತಾನೆ (4:1–5)?

3. 4:12–16 ರಲ್ಲಿ ಉದ್ಯಾನವನ್ನು ಹೇಗೆ ವಿವರಿಸಲಾಗಿದೆ? ನಿಮ್ಮ ಸ್ವಂತ ಪದಗಳನ್ನು ಬಳಸಿ ಮತ್ತು ನಿಮ್ಮ ಸತ್ಯವೇದವನ್ನು ಉಲ್ಲೇಖಿಸಬೇಡಿ.

4. 5:2–7 ರಲ್ಲಿ ಸ್ತ್ರೀಯ ದುಃಸ್ವಪ್ನವನ್ನು ಪುನಃ ಹೇಳಿರಿ. ನಿಮ್ಮ ಸ್ವಂತ ಪದಗಳನ್ನು ಬಳಸಿ ಮತ್ತು ಸತ್ಯವೇದವನ್ನು ಉಲ್ಲೇಖಿಸಬೇಡಿ.

5. ತನ್ನ ಕನಸಿನಲ್ಲಿ ಸ್ತ್ರೀಯು ತನ್ನ ಪ್ರಿಯತಮನ ಸೌಂದರ್ಯವನ್ನು ವರ್ಣಿಸುತ್ತಾಳೆ. ಆತನ ದೇಹದ ಯಾವ ಭಾಗಗಳನ್ನು ಆಕೆ ವರ್ಣಿಸುತ್ತಾಳೆ?

6. ಸ್ತ್ರೀಯ ಕನಸು ಹೇಗೆ ಕೊನೆಗೊಳ್ಳುತ್ತದೆ?

ಕುರಿಕಾಯುವವಳ ಕನಸುಗಳು ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಸ್ತ್ರೀಯ ಕನಸಿನಲ್ಲಿ ಅರಸನಾದ ಸೊಲೊಮೋನನ ವಿವಾಹ ಮಹೋತ್ಸವದ ಯಾವ ನೋಟಕ್ಕೆ ಒತ್ತು ಕೊಡಲಾಗಿದೆ (3:6–11)?

2. ತನ್ನ ಪ್ರಿಯತಮೆಯ ಸೌಂದರ್ಯದ ಕುರಿತಾದ ಪ್ರಿಯತಮನ ವರ್ಣನೆಯು (4:1–5, 11) ಪರಮಗೀತವು ಬರೆಯಲ್ಪಟ್ಟ ಪ್ರಾಚೀನ ಮಧ್ಯಪೂರ್ವ ಸಂಸ್ಕೃತಿಗಳ ಮೌಲ್ಯಗಳನ್ನು ಪ್ರತಿಬಿಂಬಿಸುತ್ತವೆ. ಹೇಗೆಂದು ವಿವರಿಸಿರಿ.

3. 4:12 ರಲ್ಲಿ ಪ್ರಿಯತಮೆಯ ಕುರಿತಾದ ಪ್ರೇಮಿಯ ವರ್ಣನೆಯನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ?

4. ತನ್ನ ಪ್ರಿಯತಮನ ಕುರಿತಾದ ಸ್ತ್ರೀಯ ವರ್ಣನೆಯು (5:10–16), ಪರಮಗೀತವು ಬರೆಯಲ್ಪಟ್ಟ ಪ್ರಾಚೀನ ಮಧ್ಯಪೂರ್ವ ಸಂಸ್ಕೃತಿಗಳ ಮೌಲ್ಯಗಳನ್ನು ಪ್ರತಿಬಿಂಬಿಸುತ್ತದೆ. ಹೇಗೆಂದು ವಿವರಿಸಿರಿ.

5. ಪ್ರೇಮಿಗಳ ಪರಸ್ಪರ ವರ್ಣನೆಯಲ್ಲಿ ನಾವು ಅನೇಕ ಬಗೆಯ ಚಿತ್ರಣಗಳನ್ನು ಕಾಣುತ್ತೇವೆ. ಒಂದು ಬಗೆಯ **"ವಿಸ್ತಾರಗೊಂಡ ಉಪಮೆ"** ಎಂದು ಕರೆಯಬಹುದು (ಉದಾಹರಣೆಗೆ ನೋಡಿರಿ 4:4, 5, 5:12, 14). ಈ ಬಗೆಯ ಉಪಮೆಯನ್ನು ನೀವು ಹೇಗೆ ವರ್ಣಿಸುವಿರಿ?

ಪುನಃ ಪ್ರೇಮಿಗಳು ಪರಸ್ಪರ ಹಾತೊರೆಯುವುದು, 6:4–8:4

ಪೀಠಿಕೆ ಮತ್ತು ಟಿಪ್ಪಣಿಗಳು

ಈಗ ಕನಸು ಮುಗಿದಿದೆ. ಪುಸ್ತಕದ ಈ ಭಾಗದಲ್ಲಿ ಜೋಡಿಯು ಪರಸ್ಪರ ಹೊಗಳಿಕೆಯನ್ನು ಹಂಚಿಕೊಳ್ಳುತ್ತಾರೆ.

7:19 ರಲ್ಲಿನ ಸ್ತ್ರೀಯ ಸೌಂದರ್ಯವು 4:1–7 ಅನ್ನು ಪ್ರತಿಧ್ವನಿಸುತ್ತದೆ (5:10–16 ರಲ್ಲಿ ಪುರುಷನ ಬಗ್ಗೆ ಆಕೆಯ ವರ್ಣನೆಯನ್ನು ತಮ್ಮ ದೈಹಿಕ ನೋಟದಲ್ಲಿ ಕಾಮೋತ್ತೇಜಕ ತೃಪ್ತಿಯನ್ನು ಹೊಂದುತ್ತಾರೆ).

ತಿರ್ಚ ... ಯೆರೂಸಲೇಮ್ (6:4): ಕೆಲಸಮಯ ತಿರ್ಚವು ಉತ್ತರ ರಾಜ್ಯದ ರಾಜಧಾನಿಯಾಗಿತ್ತು (ಕ್ರಿ.ಪೂ 920–880). ಯೆರೂಸಲೇಮು ದಕ್ಷಿಣ ರಾಜ್ಯದ ರಾಜಧಾನಿಯಾಗಿದ್ದು ಸೌಂದರ್ಯದ ಪ್ರತೀಕವಾಗಿತ್ತು.

ವಚನ 6:10: ಅರುಣೋದಯ, ಚಂದ್ರನ ಸೌಮ್ಯತೆ, ಸೂರ್ಯನ ಶುಭ್ರತೆಯು ಸ್ತ್ರೀಯ ಸೌಂದರ್ಯವನ್ನು ಪ್ರತಿಬಿಂಬಿಸುತ್ತದೆ.

ಶೂಲಮ್ ಊರಿನವಳೇ (6:13): ಇದು ಸ್ತ್ರೀಯ ಹುಟ್ಟು (ಮೂಲ), ಆಕೆಯು ಪ್ಯಾಲೆಸ್ತೇನಿನ ಉತ್ತರ ಭಾಗ ಶೂಲಮ್ ಊರಿನಿಂದ ಬಂದವಳೆಂಬುದನ್ನು ತಿಳಿಸುತ್ತದೆ.

ದಂತದ ಗೋಪುರ (7:4): ಸ್ತ್ರೀಯ ಕಂಠವು ಒಂದು ಗೋಪುರದಂತಿದೆ. ಇದನ್ನು ಅಮೂಲ್ಯ ದಂತದಿಂದ ಮಾಡಲಾಗಿದೆ.

ಹೆಷ್ಬೊನಿನಲ್ಲಿನ ಬತ್‌ರಬ್ಬೀಮ್ ಬಳಿಯ ಕೊಳಗಳು (7:4): ಮೋವಾಬಿನ ಹೆಶ್ಬೋನ್ ಒಂದು ಬಾರಿ ಸಿಹೋನ ರಾಜನ ನಗರವಾಗಿತ್ತು (ಅರಣ್ಯ ಕಾಂಡ 21:26). ಇದು ಬುಗ್ಗೆಯ ನೀರಿನಿಂದ ತುಂಬಲ್ಪಟ್ಟಿತ್ತು. ಬತ್‌ರಬ್ಬೀಮ್ ಎಂದರೆ "ಅನೇಕರ ಮಗಳು" ಹೆಶ್ಬೋನ್‌ಗೆ ಇದು ಪ್ರಸಿದ್ಧ ಹೆಸರಾಗಿತ್ತು.

ಆಸೆ (7:10): ಈ ಆಸೆಯು ಲೈಂಗಿಕ ಆಸೆಯಾಗಿದೆಯೆಂದ ಹಿನ್ನಲೆಯು ಓದುಗನಿಗೆ ಹೇಳುತ್ತದೆ. ಆಕೆಯ ಮೇಲೆ ಆತನು ಆಸೆಪಡುವುದು ಕುರಿಕಾಯುವವಳಿಗೆ ಆನಂದವನ್ನು ತರುತ್ತದೆ.

ವಚನ 8:1: ಇದು ಇಸ್ರಾಯೇಲ್ ಸಂಸ್ಕೃತಿಯನ್ನು ಸೂಚಿಸುತ್ತದೆ. ಪ್ರೇಮದ ಮುತ್ತುಗಳು ಖಾಸಗಿ ಹಿನ್ನಲೆಯಲ್ಲಿ ಮೀಸಲಾಗಿತ್ತು. ಕುಟುಂಬದ ಪ್ರೇಮದ ಮುತ್ತುಗಳನ್ನು ಸಾರ್ವಜನಿಕವಾಗಿ ಸೂಕ್ತವೆಂದು ಪರಿಗಣಿಸಲಾಗುತ್ತಿತ್ತು.

ಪ್ರೀತಿಯನ್ನು ಹುಟ್ಟಿಸಿಬೆಳೆಯಿಸಬಾರದು (8:4): ಕಡೇಯದಾಗಿ ಸ್ತ್ರೀಯು ತನ್ನ ಪ್ರೀತಿಯನ್ನು ಅತೀ ತೀವ್ರಗೊಳಿಸಿಬಾರದೆಂದು ಇತರ ಸ್ತ್ರೀಯರ ಬಳಿ ಬೇಡಿಕೊಳ್ಳುತ್ತಿದ್ದಾಳೆ. ಪ್ರೇಮಿಗಳ ಪ್ರೀತಿಯು ಸರಿಯಾದ ಸಮಯದಲ್ಲಿ, ಅಂದರೆ ಮದುವೆಯ ಮೊದಲ ರಾತ್ರಿಯ ಹಾಸಿಗೆಯಲ್ಲಿ ಅದರ ಉತ್ತುಂಗವನ್ನೇರುತ್ತದೆ. ಇದನ್ನು ಮುಂದಿನ (8:5) ವಚನದಲ್ಲಿ ಆಕೆಯು ತನ್ನ ಪ್ರಿಯತಮನಿಗೆ ಹೇಳುವ ಮಾತುಗಳು ಸೂಚಿಸುತ್ತವೆ. "ಆ ಸೇಬು ಮರದ ಕೆಳಗೆ ನಿನ್ನನ್ನು ಎಬ್ಬಿಸಿದೆನಲ್ಲಾ" (8:5).

ಪ್ರಶ್ನೆಗಳು

1. 6:4 ರಲ್ಲಿ ಪ್ರೇಮಿಯು ತನ್ನ ಪ್ರಿಯತಮೆಯನ್ನು ಯಾವುದಕ್ಕೆ ಹೋಲಿಸುತ್ತಾನೆ?
2. 6:10 ರಲ್ಲಿ ಸ್ತ್ರೀಯನ್ನು ಯಾವುದಕ್ಕೆ ಹೋಲಿಸುತ್ತಾನೆ?
3. 7:1–7 ರಲ್ಲಿ ಪ್ರೇಮಿಯು ತನ್ನ ಪ್ರಿಯತಮೆಯ ಸೌಂದರ್ಯವನ್ನು ವರ್ಣಿಸುತ್ತಾನೆ. ಆತನು ಸ್ತ್ರೀ ದೇಹದ ಯಾವ ಭಾಗವನ್ನು ವರ್ಣಿಸುತ್ತಾನೆ?
4. ಸ್ತ್ರೀಯು ತನ್ನ ಪ್ರಿಯತಮನನ್ನು ಎಲ್ಲಿಗೆ ಕರೆತರಲು ಬಯಸುತ್ತಾಳೆ?
5. ಯಾಕೆ ಸ್ತ್ರೀಯು ಪ್ರಿಯತಮನು ತನ್ನ ಅಣ್ಣನಾಗಿ ಇರಬೇಕೆಂದು ಆಶಿಸುತ್ತಾಳೆ (8:1)?

ಪುನಃ ಪ್ರೇಮಿಗಳು ಪರಸ್ಪರ ಹಾತೊರೆಯುವುದು ಆಲೋಚಿಸಿರಿ ಮತ್ತು ಚರ್ಚಿಸಿರಿ

1. 6:8–9 ರಲ್ಲಿ ಪ್ರೇಮಿಯು ತನ್ನ ಪ್ರಿಯತಮಳ ಬಗ್ಗೆ ಯಾವ ಅಂಶವನ್ನು ತಿಳಿಸುತ್ತಾನೆ?

2. 7:8–9 (ಪ್ರಿಯತಮೆಯ ಸೌಂದರ್ಯವನ್ನು ವರ್ಣನೆಯ ಅಂತ್ಯ ಮತ್ತು ಆಕೆಯ ಪ್ರತಿಕ್ರಿಯೆಯ ಆರಂಭ) ಅನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ?

ಪ್ರೇಮಿಗಳು ಮದುವೆಯಲ್ಲಿ ಒಂದಾಗುವುದು, 8:5–14

ಪೀಠಿಕೆ ಮತ್ತು ಟಿಪ್ಪಣಿಗಳು

ಪರಮಗೀತವು ಕುರಿಕಾಯುವ ಹುಡುಗಿ ಮತ್ತು ಹುಡುಗನ ನಡುವಿನ ಸಂಬಂಧದಲ್ಲಿನ ಒಂದು ಹೊಸ ಹಂತದೊಂದಿಗೆ ಮುಕ್ತಾಯವಾಗುತ್ತದೆ. ಇಲ್ಲಿಯವರೆಗೂ ಆ ಜೋಡಿಯು ಪರಸ್ಪರ ಇಬ್ಬರೂ ಹಾತೊರೆಯುತ್ತಿದ್ದರು. ಕಡೆಯದಾಗಿ ಅವರು ಮದುವೆಯಾಗುತ್ತಾರೆ. ಅವರ ಸಂಬಂಧವು ಸುಖವಾಗಿ ನೆರವೇರುತ್ತದೆ. ಪುಸ್ತಕದ ಈ ಕೊನೆಯ ವಿಭಾಗದಲ್ಲಿ ನಾವು ಈ ಹಿಂದಿನ ಅಧ್ಯಾಯದಲ್ಲಿನ ಚಿಂತೆ ಮತ್ತು ಕಾಯುವಿಕೆಯು ನೆಮ್ಮದಿಯಿಂದ ಸುಖ ಸಂತೋಷ ಪಡುವುದರೊಂದಿಗೆ ಮುಕ್ತಾಯವಾಗುವುದನ್ನು ಕಾಣಬಹುದು.

ವಚನ 5: ಈ ವಚನದ ಮೊದಲ ಭಾಗದಲ್ಲಿ ಆ ಸ್ತ್ರೀಯ ಕುರಿತಾಗಿದೆ ಮತ್ತು ಎರಡನೇ ಭಾಗದಲ್ಲಿ ಸ್ತ್ರೀಯು ತನ್ನ ಪ್ರಿಯತಮನೊಂದಿಗೆ ಮಾತನಾಡುತ್ತಾಳೆ (ನಿನ್ನ). ಹಾಗೆಯೇ ಈ ಎರಡೂ ಭಾಗದಲ್ಲಿ ಬೇರೆಯವರು ಮಾತಾಡಿರುವ ಸಾಧ್ಯತೆಯೂ ಇದೆ. ಆದರೆ ಎರಡೂ ಕಡೆ ಸಹ ಆ ಸ್ತ್ರೀಯೇ ಮಾತಾಡಲು ಸಹ ಸಾಧ್ಯತೆಯಿದೆ ಮತ್ತು ವಚನದ ಮೊದಲ ಭಾಗದಲ್ಲಿ ಆಕೆ ಬೇರೆಯುವರ ಬಗ್ಗೆ ಹೇಳಿರಬಹುದು.

ಒರಗಿಕೊಂಡು (ವಚನ 5): ಇದು ನಿಕಟವಾದ ಸಂಬಂಧವನ್ನು ಸೂಚಿಸುತ್ತದೆ. ಮತ್ತು ಈ ಪದವು ಜೋಡಿಯು ಈಗ ವಿವಾಹವಾದವರು ಎಂಬುದನ್ನು ತಿಳಿಸುತ್ತದೆ.

ಆ ಸೇಬುಮರದ ಕೆಳಗೆ ನಿನ್ನನ್ನು ಎಬ್ಬಿಸಿದೆನಲ್ಲಾ! (ವಚನ 5): 2:3 ರಲ್ಲಿ ಸೇಬು ಮರವು ಪ್ರೇಮಿಗಳು ಪರಸ್ಪರ ಸಂಧಿಸಲು ಇರುವ ಒಂದು ಸ್ಥಳವಾಗಿತ್ತು. ಇಲ್ಲಿ ಇದು ಲೈಂಗಿಕ ಪ್ರೀತಿಯು ನಡೆಸುವ ಅಂದರೆ ಮಗುವನ್ನು ಹೆರುವ ಸ್ಥಳವಾಗಿದೆ.

ಪ್ರೀತಿಯು ಮರಣದಷ್ಟು ಬಲವಾಗಿದೆ (ವಚನ 6): ಪ್ರೀತಿಯು ಮರಣದಂತೆಯೇ ಪಟ್ಟು ಬಿಡದೆ ಹಠ ಸಾಧಿಸುವುದಾಗಿದೆ, ಯಾವಾಗಲೂ ತನ್ನ ಗುರಿಯನ್ನು ಸಾಧಿಸುವುದಾಗಿದೆ.

ಬಾಲ್ಹಾಮೋನ್ (ವಚನ 11): ಇದೊಂದು ಅಪರಿಚಿತ ಸ್ಥಳ ಇಬ್ರಿಯದಲ್ಲಿ ಹಾಮೋನ್ ಎಂದರೆ ಸಂಪತ್ತು ಎಂದಾಗಿದೆ.

ಪ್ರಶ್ನೆಗಳು

1. "ನಲ್ಲನನ್ನು ಒರಗಿಕೊಂಡು ಬರುವುದರ" ಮಹತ್ವವೇನು (ವಚನ 5)?
2. 8:6–7 ರಲ್ಲಿ ಪ್ರೀತಿಯನ್ನು ಹೇಗೆ ವರ್ಣಿಸಲಾಗಿದೆ?
3. 8:10 ರಲ್ಲಿ ಸ್ತ್ರೀಯು ತನ್ನನ್ನು ಹೇಗೆ ವರ್ಣಿಸಿಕೊಂಡಿದ್ದಾಳೆ?
4. 8:11 ರಲ್ಲಿ ಸೊಲೊಮೋನನ ಬಗ್ಗೆ ನಾವು ಏನನ್ನು ಕಲಿಯುತ್ತೇವೆ?

ಪ್ರೇಮಿಗಳು ಮದುವೆಯಲ್ಲಿ ಒಂದಾಗುವುದು ಆಲೋಚಿಸಿರಿ ಮತ್ತು ಚರ್ಚಿಸಿರಿ

1. 8:6 ರಲ್ಲಿನ "ಮುದ್ರೆ"ಯ ಉಪಮೆಯನ್ನು ವಿವರಿಸಿರಿ.
2. 8:6–7 ರಲ್ಲಿ ವೈವಾಹಿಕ ಪ್ರೀತಿಯ ಬಗ್ಗೆ ನಾಲ್ಕು "ಜ್ಞಾನದ ಹೇಳಿಕೆಗಳು" ಇವೆ. ಅವುಗಳನ್ನು ಪಟ್ಟಿ ಮಾಡಿರಿ.
3. 8:8–9 ಅನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ?
4. 8:12 ರಲ್ಲಿ ಸ್ತ್ರೀಯು ತನ್ನ ಮತ್ತು ಸೊಲೊಮೋನನ ಬಗ್ಗೆ ಯಾವ ಅಂಶವನ್ನು ಹೇಳುತ್ತಾಳೆ?
5. ನೀವು 8:14 ಅನ್ನು ಹೇಗೆ ಅರ್ಥಮಾಡಿಕೊಳ್ಳುತ್ತೀರಿ?

ಪ್ರಶ್ನೆ ಪತ್ರಿಕೆ: ಪರಮಗೀತ

ಪರೀಕ್ಷಾ ಪ್ರಶ್ನೆಗಳು

1. ಪರಮಗೀತದ ಸಾಂಪ್ರದಾಯಿಕ "ಆತ್ಮೀಕ" ಮತ್ತು ಸಾಂಕೇತಿಕ ಅರ್ಥವಿವರಣೆಗಳೊಂದಿಗಿನ ಸಮಸ್ಯೆಗಳನ್ನು ನಿಮ್ಮದೇ ಮಾತಿನಲ್ಲಿ ಸಾರಾಂಶಗೊಳಿಸಿರಿ. ನಿಮ್ಮ ನೋಟ್ಸ್ ಅನ್ನು ಬಳಸಬಾರದು.
2. ಯಾಕೆ ಸಾಂಪ್ರದಾಯಿಕ ಯೆಹೂದ್ಯರು ಮತ್ತು ಕ್ರೈಸ್ತ ಸತ್ಯವೇದ ಬೋಧಕರುಗಳು ಪರಮಗೀತದ ಅಕ್ಷರಶಃ ಅರ್ಥವಿವರಣೆಯನ್ನು ತಿರಸ್ಕರಿಸಿದ್ದಾರೆ ಎಂಬುದನ್ನು ನಿಮ್ಮದೇ ಮಾತಿನಲ್ಲಿ ವಿವರಿಸಿರಿ. ನಿಮ್ಮ ಪಾಠ ಟಿಪ್ಪಣಿಗಳು ಮತ್ತು ಪಠ್ಯಪುಸ್ತಕ ಬಳಸಬಾರದು.
3. ಪರಮಗೀತವು ರಚನೆಗೊಳಿಸಲು ಒಂದು ಕಷ್ಟಕರವಾದ ಪುಸ್ತಕವಾಗಿದೆ ಏಕೆ? ಎದುರಿಸುವ ಸಮಸ್ಯೆಗಳೇನು? ನಿಮ್ಮ ಪಾಠ ಟಿಪ್ಪಣಿಗಳು ಮತ್ತು ಪಠ್ಯಪುಸ್ತಕವನ್ನು ಬಳಸಬಾರದು.
4. ಪರಮಗೀತದ ಕಥೆಯನ್ನು ನಿಮ್ಮದೇ ಮಾತಿನಲ್ಲಿ ಸಾರಾಂಶಗೊಳಿಸಿರಿ. ನಿಮ್ಮ ಪಾಠ ಟಿಪ್ಪಣಿಗಳು ಮತ್ತು ಪಠ್ಯಪುಸ್ತಕ ಬಳಸಬಾರದು.
5. ಪರಮಗೀತದ ಕೆಲವು ಸಾಹಿತ್ಯದ ಲಕ್ಷಣಗಳನ್ನು ವಿವರಿಸಿರಿ. ಪ್ರತಿ ಅಂಶವನ್ನು ಉದಾಹರಿಸಲು ನಿಮ್ಮ ಸತ್ಯವೇದದ ಉದಾಹರಣೆಯನ್ನು ಬಳಿಸಿರಿ. ನಿಮ್ಮ ಪಾಠ ಟಿಪ್ಪಣಿಗಳು ಮತ್ತು ಪಠ್ಯಪುಸ್ತಕ ಬಳಸಬಾರದು.
6. ಪರಮಗೀತದ ನಿಮ್ಮ ಅಧ್ಯಯನವನ್ನು ನೀವು ಪ್ರೋತ್ಸಾಹಿಸುತ್ತೀರಾ? ಯಾಕೆ? ಯಾಕಿಲ್ಲ? ನಿಮ್ಮ ಕಾರಣಗಳನ್ನು ಬರೆಯಿರಿ.

ಪ್ರಲಾಪಗಳು

ಪ್ರಲಾಪಗಳ ಪರಿಚಯ

ಶೀರ್ಷಿಕೆ, ಗ್ರಂಥಕರ್ತ ಮತ್ತು ಕಾಲ

ಇಬ್ರಿಯ ಸತ್ಯವೇದದಲ್ಲಿ ಈ ಚಿಕ್ಕ ಪದ್ಯರೂಪಿ ಪುಸ್ತಕವು **"ಹೇಗೆ"** ಎಂಬುದಾಗಿ ಕರೆಯಲ್ಪಟ್ಟಿದೆ:

ಅಯ್ಯೋ, ಜನಭರಿತವಾಗಿದ್ದ ನಗರಿಯು ಒಂಟಿಯಾಗಿ ಕೂತು ಬಿಟ್ಟಳಲ್ಲಾ !

(ಪ್ರಲಾಪ. 1:1).

ಎರಡನೇ ಅಧ್ಯಾಯ ಮತ್ತು ನಾಲ್ಕನೇ ಅಧ್ಯಾಯನ ಪ್ರಾರಂಭದಲ್ಲಿ ಕಂಡುಬರುವ **"ಹೇಗೆ"** ಎಂಬ ಪದವು (ಕನ್ನಡ **ಪವಿತ್ರ ಗ್ರಂಥ**ದಲ್ಲಿ ಕಾಣುವುದಿಲ್ಲ) ಕ್ರಿ.ಪೂ. 587 ಬಾಬೆಲಿನಿ ಅರಸನಾದ ನೆಬೂಕೆದ್ನೆಚ್ಚರನಿಂದ ನಾಶನಕ್ಕೊಳಗಾದ ಯೆರೂಸಲೇಮು ಎಷ್ಟು ಭಾಧೆಯನ್ನು ಅನುಭವಿಸಿತು ಎಂಬುದನ್ನು ಪ್ರತಿಬಿಂಬಿಸುತ್ತದೆ. ಈ ಪ್ರಲಾಪ ಪುಸ್ತಕವು ಐದು ವಾರ್ಷಿಕ ರಜಾದಿನಗಳಲ್ಲಿ ಸಭಾಮಂದಿರಗಳಲ್ಲಿ ಓದುವ ಐದು ಸುರುಳಿಗಳಲ್ಲಿನ ಒಂದು ಮೆಗಿಲೋತ್ ಆಗಿದೆ. ಅವನ್ನು ಇಬ್ರಿಯ ಸತ್ಯವೇದದಲ್ಲಿ **"ಬರವಣಿಗೆಗಳು"** ಎಂದು ಕರೆಯಲ್ಪಟ್ಟಿವೆ ಮತ್ತು ಅವನ್ನು ಇಬ್ರಿಯ ಸತ್ಯವೇದದ ಕೊನೆಯ ವಿಭಾಗದಲ್ಲಿ ಇಡಲ್ಪಟ್ಟಿವೆ. ಪ್ರಲಾಪಗಳನ್ನು ದೇವಾಲಯದ ನಾಶನಕ್ಕಾಗಿ ಗೋಳಾಡುವ ದಿನದಲ್ಲಿ ಓದಲಾಗುತಿತ್ತು.

ನಮ್ಮ ಸತ್ಯವೇದಗಳಲ್ಲಿ ಪ್ರಲಾಪಗಳನ್ನು ಯೆರೆಮೀಯನ ಪುಸ್ತಕದ ನಂತರ ಇಡಲಾಗಿದೆ. ಇದನ್ನು ಯೆರೆಮೀಯನು ಬರೆದಿರುವ ಸಾಧ್ಯತೆಯಿದೆ, ಆದರೆ ಹೆಚ್ಚಿನ ಅಧುನಿಕ ಸತ್ಯವೇದ ಪಂಡಿತರು ಇದನ್ನು ಒಪ್ಪುವುದಿಲ್ಲ. ಪುಸ್ತಕವು ಅನಾಮದೇಯವಾಗಿದೆ, ಹಾಗಾಗಿ ಇದರ ಗ್ರಂಥಕರ್ತರು ಯಾರೆಂಬುದು ತಿಳಿಯಲಾಗುತ್ತಿಲ್ಲ, ಆದರೆ ಇದನ್ನು ಬರೆದವರು ಖಂಡಿತವಾಗಿ ಪ್ಯಾಲೆಸ್ತೇನಿನಲ್ಲಿ ವಾಸಿಸಿರಬೇಕು.

ಈ ಪುಸ್ತಕವು ಬಹುಶಃ ಕ್ರಿ.ಪೂ. 587 ರಲ್ಲಿ ಯೆರೂಸಲೇಮ್ ನಾಶಗೊಂಡು ಕೆಲವೇ ವರ್ಷಗಳಲ್ಲಿ ಬರೆಯಲ್ಪಟ್ಟಿದೆ. ಪಟ್ಟಣ ಮತ್ತು ದೇವಾಲಯದ ನಾಶನವನ್ನು ಈಗಲೂ ಜ್ಞಾಪಿಸಲಾಗುತ್ತಿದೆ. ಮತ್ತು ಇದರ ಈ ಹಿಂದಿನ ಮಹಿಮೆ ಮತ್ತು ಇಂದಿನ ನಾಶನದ ನಡುವಿನ ತದ್ವಿರುದ್ಧತೆಯಿಂದ ಗ್ರಂಥಕರ್ತನು ಇನ್ನೂ ಸಹ ವ್ಯಥೆಪಡುತ್ತಿದ್ದಾನೆ. ಅಲ್ಲದೆ ತಮ್ಮ ಮೇಲೆ ದೇವರು ದಂಡನೆಯನ್ನು ತಂದಂತೆ ತನ್ನ ಜನರ ಪಾಪದ ಕುರಿತಾದ ಅರಿವು ಸಹ ಆತನಿಗಿದೆ. ಆದರೆ ಈಗ ದೇವರ ಕರುಣೆ ಮತ್ತು ಪ್ರೀತಿಯನ್ನು ಜ್ಞಾಪಿಸಿಕೊಳ್ಳಲು ದೇವ ಜನರಿಗೆ ಸಮಯ ಬಂದಿದೆ.

ಬರವಣಿಗೆಯ ಶೈಲಿ, ಸಾಹಿತ್ಯದ ಲಕ್ಷಣಗಳು ಮತ್ತು ರಚನೆ

ಈ ಇಡೀ ಪುಸ್ತಕವು ಪದ್ಯರೂದಲ್ಲಿದೆ. ಇದರ ಐದು ಅಧ್ಯಾಯಗಳೂ ಸಹ ಯೆರೂಸಲೇಮಿನ ನಾಶನಕ್ಕೆ ಸಂಬಂಧಿಸಿದ ವಿಷಯವಸ್ತು ಆಧರಿಸಿದ ಒಂದೊಂದು ಪ್ರಲಾಪವನ್ನು ಒಳಗೊಂಡಿವೆ. ಒಂದು ಪ್ರಲಾಪವು ಕಷ್ಟದ ಸಮಯದಲ್ಲಿ ಬಂದು ಸಹಾಯಮಾಡಬೇಕೆಂದು ದೇವರನ್ನು ಬೇಡಿಕೊಳ್ಳುವ ಪ್ರಾರ್ಥನೆಯಾಗಿದೆ. ಪ್ರಲಾಪವು ವ್ಯಕ್ತಿಗತವಾಗಿರಬಹುದು (ಒಬ್ಬ ವ್ಯಕ್ತಿಯ ಪ್ರಾರ್ಥನೆ) ಅಥವಾ ಸಾಮಾಹಿಕವಾಗಿರಬಹುದು (ದೇವ ಜನರ ಸಮುದಾಯವು ಕಷ್ಟದಲ್ಲಿ ದೇವರನ್ನು ಬೇಡುವುದು).

ನಾವು ಈ ಹಿಂದೆ **"ಕೀರ್ತನೆಗಳು"** ಪುಸ್ತಕದಲ್ಲಿ ಕಂಡುಬಂದ ಪ್ರಲಾಪಗಳನ್ನು ನೋಡುವಾಗ ರಚನೆಯಲ್ಲಿ ಅವು ಸಾಮಾನ್ಯವಾಗಿ ಸಂಕೀರ್ಣವಾಗಿವೆ. ಆದರೆ ಯಾವಾಗಲೂ ಅವು ಹೆಚ್ಚಾಗಿ ಐದು ಭಾಗಗಳನ್ನು ಹೊಂದಿವೆ: ಸಮಸ್ಯೆಯ ವರ್ಣನೆ, ನಿಷ್ಕಳಂಕ ಹೇಳಿಕೆ, ಸಹಾಯಕ್ಕಾಗಿನ ಮೊರೆ, ನಂಬಿಕೆಯ ಹೇಳಿಕೆ ಮತ್ತು ಕಷ್ಟಗಳು ಮುಗಿದ ನಂತರ ದೇವರನ್ನು ಸೇವಿಸಲು ಪ್ರತಿಜ್ಞೆಮಾಡುವುದು.

ಪ್ರಾಲಾಪದಲ್ಲಿನ 5 ಪ್ರಲಾಪಗಳಲ್ಲಿ ಒಬ್ಬ ವ್ಯಕ್ತಿಯ ಸ್ವರ ಮಾತ್ರವಲ್ಲದೆ ಒಂದು ಸಮುದಾಯದ ಸ್ವರವನ್ನು ಸಹ ನಾವು ಕೇಳುತ್ತೇವೆ. ವ್ಯಕ್ತಿಗತ ಪ್ರಲಾಪವು ಯೆರೂಸಲೇಮನ್ನು ಸೂಚಿಸುತ್ತದೆ (1:1–2) ಅಥವಾ ಯೆರೂಸಲೇಮಿನ ಜನರನ್ನು ಪ್ರತಿನಿಧಿಸುತ್ತದೆ (3:1). ಸಮುದಾಯವು ತಮ್ಮನ್ನು ಅನಾಥರೆಂದು ವರ್ಣಿಸಿಕೊಳ್ಳುವ ನಾಶಕ್ಕೊಳಗಾದ ಪಟ್ಟಣದ

ಜನರಾಗಿದ್ದಾರೆ (5:3). ತಮ್ಮ ರಾಷ್ಟ್ರವು ಅದರ ಪಾಪದ ನಿಮಿತ್ತ ದೇವರಿಂದ ದಂಡನೆಗೊಳಗಾಗಿದೆ ಎಂಬುದನ್ನು ಅವರು ಮನವರಿಕೆಮಾಡಿಕೊಳ್ಳುತ್ತಾರೆ (5:7). ಮತ್ತು ತಮ್ಮ ನಿರೀಕ್ಷೆಯು ಕೇವಲ ದೇವರಲ್ಲಿ ಮಾತ್ರ ಇದೆ ಎಂದು ಅರಿತುಕೊಳ್ಳುತ್ತಾರೆ (5:21).

ಮೊದಲ 4 ಪ್ರಲಾಪಗಳು (ಅಧ್ಯಾಯ 1–4) ಒಗಟು ರೂಪದಲ್ಲಿವೆ, ಇದರರ್ಥ ಪ್ರತೀ ವಚನದ ಮೊದಲ ಅಕ್ಷರ ಅಥವಾ ಪದ್ಯದ ನುಡಿಯು ಇಬ್ರಿಯ ವರ್ಣಮಾಲೆಯ ಕ್ರಮವನ್ನು ಪಾಲಿಸುತ್ತದೆ. ಇಬ್ರಿಯ ವರ್ಣಮಾಲೆಯಲ್ಲಿ 22 ಅಕ್ಷರಗಳಿವೆ, ಹಾಗಾಗಿ ಒಗಟುರೂಪದ ಪದ್ಯವು 22 ಭಾಗಗಳಾಗಿ ರಚಿಸಲ್ಪಟ್ಟಿದೆ. ಈ ಲಕ್ಷಣವನ್ನು ನಾವು ಭಾಷಾಂತರಗಳಲ್ಲಿ ಕಾಣಲಾಗುವುದಿಲ್ಲ.

ದೈವಶಾಸ್ತ್ರ

ಕೀರ್ತನೆ ಪುಸ್ತಕದಲ್ಲಿನ ಹೆಚ್ಚಿನ ಪ್ರಲಾಪಗಳು ಅನ್ಯಾಯಯುತವಾಗಿ ಪಡುತ್ತಿರುವ ಬಾಧೆಗಳಿಗಾಗಿ, ಜನರು ದೇವರ ಮುಂದೆ ತಮ್ಮ ಹೃದಯವನ್ನು ಬಿಚ್ಚಿಡುವ ಪ್ರಾರ್ಥನೆಗಳಾಗಿವೆ. ಆದರೆ ಪ್ರಲಾಪ ಪುಸ್ತಕದಲ್ಲಿನ ಪ್ರಲಾಪಗಳು ವಿಭಿನ್ನವಾಗಿವೆ. ಇಲ್ಲಿ ಗ್ರಂಥಕರ್ತನು ಯೆರೂಸಲೇಮು ಮತ್ತು ಅದರ ಜನರ ಬಾಧೆಗಳು ನ್ಯಾಯಯುತವಾಗಿವೆ ಎಂದು ತಿಳಿದುಕೊಳ್ಳುತ್ತಾನೆ. ಅವರ ಪಾಪಗಳಿಗಾಗಿ ದೇವರು ಅವರನ್ನು ಶಿಕ್ಷಿಸಿದ್ದಾನೆ. ಅವರ ನಿರೀಕ್ಷೆಯು ಈಗ ಕೇವಲ ದೇವರ ಕರುಣೆ ಮತ್ತು ಪ್ರೀತಿಯ ಮೇಲೆ ಆತುಕೊಂಡಿದೆ (3:22–23).

ಪ್ರಲಾಪಗಳಲ್ಲಿ ಅನೇಕ ಪ್ರಾಮುಖ್ಯವಾದ ದೈವಶಾಸ್ತ್ರೀಯ ವಿಷಯವಸ್ತುಗಳಿವೆ, ಉದಾಹರಣೆಗೆ:

ದೇವರ ನ್ಯಾಯ

ಯೆರೂಸಲೇಮಿನ ನಾಶನಕ್ಕೆ ಜನರ ಪಾಪವೇ ಕಾರಣವಾಗಿತ್ತು (1:5, 22, 3:39, 5:16): ಪ್ರವಾದಿಗಳ ಮೂಲಕ ತಮಗೆ ತಿಳಿಸಲ್ಪಟ್ಟ ದೇವರ ಮಾತುಗಳನ್ನು ಅವರು ತಿರಸ್ಕರಿಸಿದರು (2:17). ಆದರೆ ಅವರ ಪಾಪದ ಪರಿಣಾಮವಾಗಿ ಮತ್ತು ಅವರ ಕೆಲವು ಪ್ರವಾದಿಗಳ ಅವಿಧೇಯತೆಯ ನಿಮಿತ್ತ ಅವರ ಮೇಲೆ ದೇವರ ದಂಡನೆ ಬಂದಿತ್ತು (2:14, 4:13). ಹಾಗಾಗಿ ಹಳೇ ಒಡಂಬಡಿಕೆಯ ಅನೇಕ ಪುಸ್ತಕಗಳಲ್ಲಿ ಕಂಡುಬರುವ ದೈವಶಾಸ್ತ್ರದೊಂದಿಗೆ ಒಪ್ಪುತ್ತದೆ (ಉದಾಹರಣೆಗೆ ನೋಡಿ. ಯಾಜಕಕಾಂಡ 26, ಧರ್ಮೋ. 27–30, ಯೆರೆಮೀಯ ಮತ್ತು ಸಮುವೇಲ ಮತ್ತು ಅರಸುಗಳ ಪುಸ್ತಕದಲ್ಲಿ ದಾಖಲಿಸಿದಂತೆ ಇಸ್ರಾಯೇಲ್ಯರ ಅರಸರ ಕುರಿತಾದ ಕಥೆ): ಇಸ್ರಾಯೇಲ್ಯರು ಸೀನಾಯಿ ಒಡಂಬಡಿಕೆಯ ಷರತ್ತುಗಳಿಗೆ ವಿಧೇಯರಾಗುವಾಗೆಲ್ಲ ಅವರು ದೇವರ ಆಶೀರ್ವಾದವನ್ನು ಹೊಂದುತ್ತಿದ್ದರು. ಆದರೆ ಅದರ ಅವಿಧೇಯತೆಯು ಒಡಂಬಡಿಕೆಯ ಶಾಪಗಳು ಮತ್ತು ವಿಭಿನ್ನ ಬಗೆಯ ವಿಪತ್ತುಗಳ ರೂಪದಲ್ಲಿ ನ್ಯಾಯತೀರ್ಪು ಅವರ ಮೇಲೆ ಬರುವಂತೆ ಮಾಡಿತು.

ದೇವರ ನ್ಯಾಯತೀರ್ಪಿನ ದಿನ

ಕ್ರಿ. ಪೂ. 587 ರಲ್ಲಿ ಬಾಬೆಲಿನ ಅರಸನಾದ ನೆಬೂಕದ್ನೆಚ್ಚರನ ಕೈಯಲ್ಲಿ ಯೆರೂಸಲೇಮಿನ ನಾಶನವನ್ನು ವರ್ಣಿಸಲು ಪ್ರಲಾಪವು **"ಕರ್ತನ ಕೋಪದ ದಿನ"** ಎಂಬ ಹೇಳಿಕೆಯನ್ನು ಬಳಸುತ್ತದೆ (1:2, 2:1, 12, 21–22). ಪಾಪಕ್ಕಾಗಿನ ದೇವರ ನ್ಯಾಯತೀರ್ಪು ಅಥವಾ **"ಕರ್ತನ ದಿನ"** ಎಂಬುದು ಹಳೇ ಒಡಂಬಡಿಕೆಯ ಪ್ರವಾದನಾ ಪುಸ್ತಕಗಳಲ್ಲಿನ ಒಂದು ಕೇಂದ್ರ ವಿಷಯವಸ್ತುವಾಗಿದೆ. ಈ ಭಯಭೀತವಾದ ದಿನವು ಒಂದು ಐತಿಹಾಸಿಕ ಹಿನ್ನಲೆಯಲ್ಲಿ ಬರಬಹುದು (ಉದಾ: ಪ್ರಲಾಪಗಳಲ್ಲಿ ನಾವು ಒಂದನ್ನು ಕಂಡಂತೆ). ಅನಂತರ ಅಂತ್ಯಕಾಲದಲ್ಲಿ **"ಕರ್ತನ ದಿನವು"** ಕೊನೆಯದಾಗಿ ಬರುವುದು.

ದೇವರ ನಂಬಿಗಸ್ತಿಕೆ ಮತ್ತು ಕರುಣೆ

ಪುಸ್ತಕದಲ್ಲಿನ ಕೇಂದ್ರ ವ್ಯಾಕ್ಯಭಾಗವು 3:21– 23 ಆಗಿದೆ:

ಹೀಗಿರಲು ನಾನು ನಿನ್ನ ಕರುಣೆಯನ್ನು ನೆನಪಿಗೆ ತಂದುಕೊಳ್ಳುತ್ತೇನೆ,

ಅದರಿಂದ ನನಗೆ ನಿರೀಕ್ಷೆಯುಂಟಾಗುತ್ತದೆ.

ನಾವು ಉಳಿದಿರುವುದು ಯೆಹೋವನ ಕರುಣೆಯೇ;

ಆತನ ಕೃಪಾವರಗಳು ನಿಂತುಹೋಗವು.

ದಿನದಿನವು ಹೊಸದಾಗಿ ಒದಗುತ್ತವೆ;

ನಿನ್ನ ಸತ್ಯಸಂದತೆಯು ದೊಡ್ಡದು.

ಇದು ನೂರಾರು ವರ್ಷಗಳ ಹಿಂದೆ ಇಸ್ರಾಯೇಲ್ಯರು ವಾಗ್ದಾತ್ತ ದೇಶವನ್ನು ಪ್ರವೇಶಿಸಲು ಮೋವಾಬಿನ ಬಯಲಿನಲ್ಲಿ ಪಾಳಯ ಮಾಡಿಕೊಂಡಿರುವಾಗ ಮೋಶೆಯ ಮೂಲಕ ಆಡಿದ ದೇವರ ಮಾತುಗಳನ್ನು ಪ್ರತಿಧ್ವನಿಸುತ್ತದೆ. ಭವಿಷ್ಯದಲ್ಲಿ ಅವರು ಪಾಪಮಾಡಿ ದೇವರ ಶಕ್ಷೆಯನ್ನು ಅನುಭವಿಸಬಹುದು. ಆದರೆ ಒಂದು ವೇಳೆ ಅವರು ಪಶ್ಚಾತ್ತಾಪಪಟ್ಟು ದೇವರ ಕಡೆಗೆ ತಿರುಗಿಕೊಂಡರೆ ಆತನು ಅವರಿಗೆ ದಯೆ ತೋರಿಸಿ ಅವರ ಭವಿಷ್ಯವನ್ನು ಮರುಸ್ಥಾಪಿಸುವನು (ಧರ್ಮೋ. 30:1–10).

ಪ್ರಾರ್ಥನೆ ಮತ್ತು ಗೊಂದಲ

ದೇವರೊಂದಿಗಿನ ನಮ್ಮ ಮುರಿದುಹೋದ ಸಂಬಂಧವನ್ನು ಮರುಸ್ಥಾಪಿಸಲು ಇರುವ ಒಂದೇ ಒಂದು ಮಾರ್ಗವೆಂದರೆ ಆತನೆಡೆಗೆ ತಿರುಗಿಕೊಂಡು, ನಮ್ಮ ಪಾಪಗಳನ್ನು ಅರಿಕೆಮಾಡಿ ಆತನ ನೀತಿವಂತಿಕೆ ಮತ್ತು ಸಾರ್ವಭೌಮತ್ವವನ್ನು ಒಪ್ಪಿಕೊಂಡು ಆತನ ರಕ್ಷಣೆಯಲ್ಲಿ ನಮ್ಮ ನಿರೀಕ್ಷೆಯನ್ನು ಇಡುವುದಾಗಿದೆ (1:8, 18, 20, 3:14–26). ಈ ವಿಷಯವಸ್ತುಗಳು ಕೀರ್ತನೆ ಪುಸ್ತಕದಲ್ಲಿ ಕಂಡುಬರುವ ಪ್ರಲಾಪಗಳನ್ನು ನಮಗೆ ನೆನಪಿಸುತ್ತವೆ.

ಪ್ರಶ್ನೆಗಳು

ಈ ಪ್ರಶ್ನೆಗಳಿಗೆ ಉತ್ತರಗಳನ್ನು ಮೇಲಿನ ಪಠ್ಯದಲ್ಲಿ ಸುಲಭವಾಗಿ ಕಾಣಬಹುದು. ಆದರೆ ನೀವು ಅಲ್ಲಿ ನೋಡುವ ಮೊದಲು ಪ್ರಶ್ನೆಗಳಿಗೆ ಉತ್ತರಿಸಲು ಪ್ರಯತ್ನಿಸಿದರೆ ನೀವು ಇನ್ನಷ್ಟು ಕಲಿಯುವಿರಿ. ನೀವು ಸಾಧ್ಯವಾದಷ್ಟು ನಿಮ್ಮ ಸ್ವಂತ ಪದಗಳನ್ನು ಬಳಸಿದರೆ ಅದು ಉತ್ತಮವಾಗಿರುತ್ತದೆ.

1. ಇಬ್ರಿಯ ಬೈಬಲ್‌ನಲ್ಲಿ ಪ್ರಲಾಪಗಳು ಯಾವ ಹೆಸರನ್ನು ಹೊಂದಿವೆ?
2. ಇಬ್ರಿಯ ಬೈಬಲ್‌ನಲ್ಲಿ ಪ್ರಲಾಪಗಳು ಯಾವ ಸ್ಥಾನವನ್ನು ಹೊಂದಿವೆ?
3. ಯೆಹೂದಿಗಳು ಪ್ರಲಾಪಗಳ ಪುಸ್ತಕವನ್ನು ಯಾವ ಸಂದರ್ಭದಲ್ಲಿ ಓದುತ್ತಾರೆ?
4. ಕೆಲವು ಬೈಬಲ್ ಆವೃತ್ತಿಗಳು ಪುಸ್ತಕವನ್ನು **"ಯೆರೆಮೀಯನ ಪ್ರಲಾಪಗಳು"** ಎಂದು ಏಕೆ ಕರೆಯುತ್ತವೆ?
5. ಪ್ರಲಾಪಗಳ ಲೇಖಕರು ಯಾರು?
6. ಪುಸ್ತಕವನ್ನು ಯಾವಾಗ ಮತ್ತು ಎಲ್ಲಿ ಬರೆಯಲಾಯಿತು?
7. ಪ್ರಲಾಪಗಳಲ್ಲಿ ನಾವು ಯಾವ ರೀತಿಯ ಪಠ್ಯವನ್ನು ಕಾಣುತ್ತೇವೆ?
8. ಪ್ರಲಾಪಗಳು ಹೇಗೆ ರಚನೆಯಾಗಿವೆ?
9. ಕೀರ್ತನೆಗಳ ಪುಸ್ತಕದಲ್ಲಿನ ಒಂದು ಪ್ರಲಾಪ ಮತ್ತು ಪ್ರಲಾಪಗಳ ಪುಸ್ತಕದಲ್ಲಿನ ಒಂದು ಪ್ರಲಾಪಗಳ ನಡುವಿನ ಮುಖ್ಯ ರಚನಾತ್ಮಕ ವ್ಯತ್ಯಾಸವೇನು?
10. ಪ್ರಲಾಪಗಳನ್ನು ಓದುವವರು ಯಾವ ಧ್ವನಿಗಳನ್ನು ಕೇಳುತ್ತಾರೆ?
11. ಐದು ಪ್ರಲಾಪಗಳಲ್ಲಿ ಯಾವುದು ಅಕ್ರೋಸ್ಟಿಕ್ ಅಲ್ಲ?
12. ಅಧ್ಯಾಯ 1 ರಲ್ಲಿರುವ ಕಥೆಗೆ ಹೋಲಿಸಿದರೆ ಅಧ್ಯಾಯ 3 ರಲ್ಲಿರುವ ಅಕ್ರೋಸ್ಟಿಕ್ ಮಾದರಿಯು ಹೇಗೆ ಭಿನ್ನವಾಗಿದೆ?
13. ಕೀರ್ತನೆಗಳ ಪುಸ್ತಕದಲ್ಲಿ ಕಂಡುಬರುವ ಪ್ರಲಾಪಗಳು ಮತ್ತು ಪ್ರಲಾಪಗಳ ಪುಸ್ತಕದಲ್ಲಿ ಕಂಡುಬರುವ ಪ್ರಲಾಪಗಳ ನಡುವಿನ ಮುಖ್ಯ ದೈವಶಾಸ್ತ್ರದ ವ್ಯತ್ಯಾಸವೇನು?
14. ಪ್ರಲಾಪಗಳಲ್ಲಿ ಕಂಡುಬರುವ ನಾಲ್ಕು ಪ್ರಮುಖ ದೈವಶಾಶ್ತ್ರದ ವಿಷಯಗಳನ್ನು ಪಟ್ಟಿ ಮಾಡಿ.

15. ಈ ನಾಲ್ಕು ದೈವಶಾಸ್ತ್ರವನ್ನು ಹೇಗೆ ಪ್ರತಿಬಿಂಬಿಸುತ್ತವೆ ಎಂಬುದನ್ನು ವಿವರಿಸಿ.

ಉಲ್ಲೇಖ

ನಾನು ಪ್ರಲಾಪಗಳು ಘಟಕವನ್ನು (ಅಧ್ಯಯನಗಳು ಮತ್ತು ಉತ್ತರಗಳು) ಸಿದ್ಧಪಡಿಸುವಾಗ ಈ ಕೆಳಗಿನ ಪುಸ್ತಕಗಳು ನನಗೆ ಉಪಯುಕ್ತವಾಗಿದ್ದವು:

ಇಎಸ್‌ವಿ ಅಧ್ಯಯನ ಸತ್ಯವೇದ

ಎನ್‌ಐವಿ ಅಧ್ಯಯನ ಸತ್ಯವೇದ

ಪೊಯೆಟರ್ನಾ (ಗ್ರೇಗರ್ ಆಂಡರ್ಸನ್ ಅವರಿಂದ ಕ್ಲಾಗೊವಿಸೋರ್ನಾ ಎಂಬ ಅಧ್ಯಾಯ)

ಪ್ರಲಾಪಗಳು ಅಧ್ಯಾಯ 1

ಪೀಠಿಕೆ ಮತ್ತು ಟಿಪ್ಪಣಿಗಳು

ಮೊದಲನೇಯ ಪ್ರಲಾಪವು ಯೆರೂಸಲೇಮಿನ ದುಃಖ ಮತ್ತು ನಿರ್ಜನದ ಕುರಿತಾಗಿದೆ. ಇಲ್ಲಿ ಪಟ್ಟಣವು ಗೋಳಾಡುವ ವಿಧವೆ ಎಂಬುದಾಗಿ ವರ್ಣಿಸಲ್ಪಟ್ಟಿದ್ದಾಳೆ. ಈ ಅಧ್ಯಾಯವನ್ನು ಈ ರೀತಿ ರವನೆ ಮಾಡುಬಹುದು:

ಅ. ಯೆರೂಸಲೇಮಿನ ದುರಂತದ ವರ್ಣನೆ, ವಚನ 1–11

ಆ. ಸಹಾಯಕ್ಕಾಗಿ ಯೆರೂಸಲೇಮು ಕೂಗಿಕೊಳ್ಳುವುದು, ವಚನ 12–22

ಕೆಲವು ಮರುಕಳಿಸುವ ಲಕ್ಷಣಗಳು: ಯೆರೂಸಲೇಮಿನ ಪಾಪ, ದೇವರ ಶಿಕ್ಷೆ, ಆಕೆಯ ಸ್ನೇಹಿತರ ದ್ರೋಹ, ಆಕೆಯ ವೈರಿಗಳ ವಿಜಯೋತ್ಸಾಹ, ನಾಶಗೊಂಡ ಪಟ್ಟಣ, ಆಕೆಯ ಜನರ ಸೆರೆ, ಆಕೆಯ ಕಳೆದುಕೊಂಡ ಮಹಿಮೆ, ಆಕೆಯ ದುಃಖದ ಕಣ್ಣೀರು ಮತ್ತು ಆಕೆಯ ತಿರಸ್ಕಾರದ ಮನೋಭಾವನೆ.

ಈ ಅಧ್ಯಾಯದ ಶ್ರೀಮಂತ ಪದ್ಯರೂಪಿ ಭಾಷೆಯ ಚಿತ್ರಣ (ಉಪಮೆ, ರೂಪಾಲಂಕಾರ ಮತ್ತು ವ್ಯಕ್ತೀಕರಣ) ಗಳಿಂದ ತುಂಬಿಕೊಂಡಿದೆ. ಇದರಲ್ಲಿ ವ್ಯಕ್ತೀಕರಣ, ಉಪಮೆ ಮತ್ತು ರೂಪಾಲಂಕಾರಗಳಿಗೆ ಅನೇಕ ಉದಾಹರಣೆಗಳಿವೆ.

ನಗರಿಯು ಕೂತು ಬಿಟ್ಟಳಲ್ಲಾ (ವಚನ 1): ಈ ಮೊದಲ ಪ್ರಲಾಪದಲ್ಲಿ ಯೆರೂಸಲೇಮ್ ನಗರಿಯು ಒಬ್ಬ ಸ್ತ್ರೀಯೋ ಎಂಬಂತೆ ವ್ಯಕ್ತೀಕರಿಸಲ್ಪಟ್ಟಿದ್ದಾಳೆ. ನಗರಗಳನ್ನು ಒಬ್ಬ ಸ್ತ್ರೀಯೋ ಎಂಬಂತೆ ತಿಳಿಸುವುದು ಹಳೇ ಒಡಂಬಡಿಕೆಯ ಕಾವ್ಯಗಳಲ್ಲಿ ಒಂದು ಸಾಮಾನ್ಯವಾದ ಸಾಹಿತ್ಯದ ಪ್ರಕ್ರಿಯೆಯಾಗಿತ್ತು. **"ಯೆರೂಸಲೇಮ್ ಯುವತಿಯೇ, ಚೀಯೋನ್ ಕನ್ಯೆಯೇ"** (2:13) ಯೊಂದಿಗೆ ಹೋಲಿಸಿ.

ಆಕೆಯ ಪ್ರಿಯರು ... ಆಕೆಯ ಮಿತ್ರರು (ವಚನ 2): ಆಕೆಯ ಈ ಹಿಂದಿನ ಮೈತ್ರಿಕೂಟಗಳು.

ನೆಮ್ಮದಿಯಿಲ್ಲದೆ ವಾಸ (ವಚನ 3): ಧರ್ಮೋ. 25:65 ರೊಂದಿಗೆ ಹೋಲಿಸಿ.

ಮಹೋತ್ಸವಗಳು (ವಚನ 4): ಧರ್ಮೋ. 23:14–17 ಮತ್ತು ಯಾಜಕಕಾಂಡ 23 ರೊಂದಿಗೆ ಹೋಲಿಸಿ.

ಅಟ್ಟುವವರಿಗೆ ಬೆಂಗೊಟ್ಟು ಓಡಿ ಹೋಗಿದ್ದಾರೆ (ವಚನ 6): ಯೆರೆಮೀಯ. 52:78 ರೊಂದಿಗೆ ಹೋಲಿಸಿ

ಮುಂದಿನ ಗತಿಯೇನೆಂದು ಮನಸ್ಸಿಗೆ ತರಲಿಲ್ಲ (ವಚನ 9): ದೇವರ ಎಚ್ಚರಿಕೆಯ ಹೊರತಾಗಿಯೂ ಸಹ ಆಕೆಯ ಪರಿಸ್ಥಿತಿ ವಿಭಿನ್ನವಾಗಿ ಇರುವುದೆಂಬುದನ್ನು ಆಕೆಯು ನಿರೀಕ್ಷಿಸಿರಲಿಲ್ಲ (ಯಾಜಕಕಾಂಡ 26:14–26 ಮತ್ತು ಧರ್ಮೋ. 28:15–68 ರೊಂದಿಗೆ ಹೋಲಿಸಿ).

ಯೆಹೋವನೇ, ನನ್ನ ಕಷ್ಟವನ್ನು ಲಕ್ಷಿಸು ... (ವಚನ 9): ಇಲ್ಲಿ ಮೊದಲ ಬಾರಿಗೆ ಯೆರೂಸಲೇಮು ಮಾತನಾಡುತ್ತಾಳೆ. ತನ್ನ ವೈರಿಯು ತನಗೆ ಏನು ಮಾಡಿದ್ದಾಳೆ ಎಂಬುದನ್ನು ಪರಿಗಣಿಸಬೇಕೆಂದು ಆಕೆಯು ದೇವರನ್ನು ಕೇಳಿಕೊಳ್ಳುತ್ತಾಳೆ.

ಬೆಂಕಿ (ವಚನ 13): ಬೆಂಕಿಯು ಹಳೇ ಒಡಂಬಡಿಕೆಯಲ್ಲಿ ನ್ಯಾಯತೀರ್ಪಿಗೆ ಒಂದು ಸಾಮಾನ್ಯಾವಾದ ರೂಪಾಲಂಕಾರವಾಗಿದೆ.

ನನ್ನ ದ್ರೋಹಗಳನ್ನು ನೊಗದ ಕಣ್ಣಿಗಳನ್ನೋ ಎಂಬಂತೆ ನನಗೆ ಬಿಗಿದಿದೆ (ವಚನ 14): ನೊಗವು ಬಲ ಮತ್ತು ಅಧಿಕಾರವನ್ನು ಪ್ರತಿನಿಧಿಸುತ್ತದೆ. ಹಾಗಾಗಿ ದೇವರು ಯೆರೂಸಲೇಮನ್ನು ಸ್ವತಃ ಆಕೆಯ ಪಾಪಗಳ ಬಲದಡಿಯಲ್ಲಿ ಇಟ್ಟಿದ್ದಾನೆ.

ತುಳಿದಿದ್ದಾನೆ (ವಚನ 15): ದೇವರ ನ್ಯಾಯತೀರ್ಪಿಗೆ ಇದು ಹಳೇ ಒಡಂಬಡಿಕೆಯಲ್ಲಿನ ಒಂದು ರೂಪಲಂಕಾರವಾಗಿದೆ.

ನನ್ನ ಕರಳು (ವಚನ 20): ಇಬ್ರಿಯದಲ್ಲಿ ಒಬ್ಬ ವ್ಯಕ್ತಿಯ ಒಳ ಅಂಗಗಳು (ಆಂತರಿಕ ಭಾಗಗಳು) ಆತನ ಭಾವನೆಗಳನ್ನು ಪ್ರತಿನಿಧಿಸುತ್ತವೆ.

ನೀನು ಮುಂತಿಳಿಸಿದ ದಿನ (ವಚನ 21): ತನ್ನ ಪ್ರವಾದಿಗಳ ಮೂಲಕ ಮುಂತಿಳಿಸಿದ ದೇವರ ನ್ಯಾಯತೀರ್ಪಿನ ದಿನ.

ಪ್ರಶ್ನೆಗಳು

1. 1 ನೇ ಅಧ್ಯಾಯದ ಎರಡೂ ಭಾಗಗಳಲ್ಲಿ ಮಾತನಾಡುವವರು ಯಾರು?
2. ಯೆರೂಸಲೇಮಿನ ಹಿಂದಿನ ಮತ್ತು ಇಂದಿನ ಪರಿಸ್ಥಿತಿಗಳ ನಡುವಿನ ತದ್ವಿರುದ್ಧತೆಯನ್ನು ಕವಿಯು ಹೇಗೆ ವರ್ಣಿಸುತ್ತಾನೆ (ವಚನ 1)?
3. ಕವಿಯ ಪ್ರಕಾರ ಯೆರೂಸಲೇಮಿನ ಪ್ರಸ್ತುತ ಸನ್ನಿವೇಶದ ಹಿಂದೆ ಯಾರಿದ್ದಾರೆ (ವಚನ 5)?
4. ಕವಿಯ ಪ್ರಕಾರ ಯೆರೂಸಲೇಮಿನ ಪ್ರಸ್ತುತ ಸನ್ನಿವೇಶಕ್ಕೆ ಕಾರಣವೇನು (ವಚನ 5)?
5. ವಚನ 6 ರಲ್ಲಿ ಯೆರೂಸಲೇಮಿನ ಪಾಪದ ಯಾವ ಪರಿಣಾಮಗಳನ್ನು ತಿಳಿಸಲಾಗಿದೆ?
6. ವಚನ 8 ರಲ್ಲಿ ಯೆರೂಸಲೇಮಿನ ಪಾಪದ ಯಾವ ಪರಿಣಾಮಗಳನ್ನು ತಿಳಿಸಲಾಗಿದೆ?
7. ವಚನ 10 ಮತ್ತು 11 ರಲ್ಲಿ ಯೆರೂಸಲೇಮಿನ ಪಾಪದ ಯಾವ ಪರಿಣಾಮಗಳನ್ನು ತಿಳಿಸಲಾಗಿದೆ?
8. ವಚನ 13 ರಿಂದ 14 ರಲ್ಲಿ ಯೆರೂಸಲೇಮಿನ ಪಾಪದ ಯಾವ ಪರಿಣಾಮಗಳನ್ನು ತಿಳಿಸಲಾಗಿದೆ?
9. ವಚನ 18 ರಲ್ಲಿ ದೇವರ ಕುರಿತಾದ ಯಾವ ತಿಳುವಳಿಕೆಯನ್ನು ಯೆರೂಸಲೇಮು ವ್ಯತ್ತಪಡಿಸುತ್ತದೆ?
10. ಯೆರೂಸಲೇಮಿನ ನರಳಾಟಕ್ಕೆ ಅದರ ವೈರಿಗಳು ಹೇಗೆ ಪ್ರತಿಕ್ರಿಯಿಸುತ್ತಾರೆ?
11. ತನ್ನ ವೈರಿಗಳಿಗಾಗಿನ ಯೆರೂಸಲೇಮಿನ ಪ್ರಾರ್ಥನೆ ಏನು (ವಚನ 21–22)?

ಪ್ರಲಾಪಗಳು ಅಧ್ಯಾಯ 1 ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಯೆರೂಸಲೇಮಿನ ಪಟ್ಟಣವು ವ್ಯಕ್ತೀಕರಿಸಲ್ಪಟ್ಟಿದೆ. ಅದರ ಅರ್ಥ ಅದೊಂದು ಹೆಣ್ಣು ಎಂಬಂತೆ ವರ್ಣಿಸಲ್ಪಟ್ಟಿದೆ. ವ್ಯಕ್ತೀಕರಣದ ಇತರೆ ಯಾವ ಉದಾಹರಣೆಗಳನ್ನು ನೀವು ಈ ಅಧ್ಯಾಯದಲ್ಲಿ ಕಾಣುವಿರಿ?
2. ಈ ಅಧ್ಯಾಯದಲ್ಲಿ ಕವಿಯು ಉಪಯೋಗಿಸುವ ಕೆಲವು ಚಿತ್ರಣ (ಉಪಮೆ ಮತ್ತು ರೂಪಾಲಂಕಾರ) ಗಳನ್ನು ವಿವರಿಸಿರಿ.
3. 20 ನೇ ವಚನದಲ್ಲಿ ಯೆರೂಸಲೇಮಿನ ಪರಿಸ್ಥಿತಿಯನ್ನು ಹೇಗೆ ವಿವರಿಸಲಾಗಿದೆ?
4. ಅಧ್ಯಾಯದ ಕೊನೆಯಲ್ಲಿ ಯೆರೂಸಲೇಮಿನ ಭಾವನೆಗಳನ್ನು ನೀವು ಹೇಗೆ ವಿವರಿಸುವಿರಿ?

ಪ್ರಲಾಪಗಳು ಅಧ್ಯಾಯ 2

ಪೀಠಿಕೆ ಮತ್ತು ಟಿಪ್ಪಣಿಗಳು

ಎರಡನೇಯ ಪ್ರಲಾಪವು ತನ್ನ ಜನರ ಮೇಲಿನ ದೇವರ ನ್ಯಾಯತೀರ್ಪು ಮತ್ತು ಅದರ ಪರಿಣಾಮಗಳ ಕುರಿತಾಗಿದೆ. ಇದು "ಆತನ ಕೋಪದ ದಿನ" ಎಂಬ ಹೇಳಿಕೆಯೊಂದಿಗೆ ಪ್ರಾರಂಭಗೊಂಡು ಅದರೊಂದಿಗೇ ಮುಕ್ತಾಯವಾಗುತ್ತದೆ. ಇದು ನ್ಯಾಯತೀರ್ಪಿನ ದಿನವಾಗಿದೆ. ಈ ಅಧ್ಯಾಯವನ್ನು ಈ ರೀತಿ ರಚನೆ ಮಾಡಬಹುದಾಗಿದೆ.

ಅ. ಯೆರೂಸಲೇಮ್ ಮತ್ತು ಅದರ ಜನರ ಮೇಲಿನ ದೇವರ ನ್ಯಾಯತೀರ್ಪಿನ ಪರಿಣಾಮಗಳು, ವಚನ 1–10

ಆ. ದೇವರಿಗೆ ಮೊರೆಯಿಡುವ ಅಗತ್ಯತೆ, ವಚನ 11–19

ಇ. ದೇವರೇ ನೋಡಿ, ಕಾರ್ಯಮಾಡೆಂದು ಕವಿಯು ಕೇಳಿಕೊಳ್ಳುವುದು.

ಚೀಯೋನ್ ಪುರಿ (1): ಯೇರೂಸಲೇಮ್ ಮತ್ತು ಅದರ ನಿವಾಸಿಗಳು

ಮೋಡ (ವಚನ 1): ಇದು ದೇವರ ಶಿಕ್ಷೆಯ ಕತ್ತಲೆಗೆ ಒಂದು ರೂಪಾಲಂಕಾರವಾಗಿದೆ.

ತನ್ನ ಪಾದಪೀಠ (ವಚನ 1): ಮಂಜೂಷ ಅಥವಾ ಯೆರೂಸಲೇಮಿನ ದೇವಾಲಯಕ್ಕೆ ಇದೊಂದು ರೂಪಾಲಂಕಾರವಾಗಿದೆ.

ಕೊಂಬು (ವಚನ 3): ಬಲದ ಸಂಕೇತ.

ಬಲಗೈ (ವಚನ 3): ಇದು ದೇವರ ಸಹಾಯ ಮತ್ತ ರಕ್ಷಣೆಯನ್ನು ಸೂಚಿಸುತ್ತದೆ.

ತನ್ನ ಸಾನಿಧ್ಯದ ಗುಡಾರ (ವಚನ 6): ಯೆರೂಸಲೇಮಿನ ದೇವಾಲಯ.

ತಲೆಯ ಮೇಲೆ ದೂಳನ್ನು ತೂರಿಕೊಂಡು (ವಚನ 10): ಗೋಳಾಟವನ್ನು ವ್ಯಕ್ತಪಡಿಸುವುದು

ನಿನ್ನ ಪ್ರವಾದಿಗಳು ಕಂಡು ಹೇಳಿದ ಕಣಿಗಳು ವ್ಯರ್ಥ, ನಿಸ್ಸಾರ (ವಚನ 14): ಯೆರೆಮೀಯನು ಸುಳ್ಳು ಪ್ರವಾದಿಗಳ ಬಗ್ಗೆ ಹೇಳಿದ್ದನ್ನು ಹೋಲಿಸಿ (ಉದಾ: ಯೆರೆ. 5:13, 13, 6:13–15, 8:10–12, 14:13–15). ಯೆಹೂದದ ಅಪನಂಬಿಗಸ್ತ ಪ್ರವಾದಿಗಳೇ ದೇವರ ನ್ಯಾಯತೀರ್ಪಿಗೆ ಒಂದು ಪ್ರಮುಖ ಕಾರಣವಾಗಿದ್ದಾರೆ.

ಚಪ್ಪಾಳೆ ಹೊಡೆಯುತ್ತಾರೆ (ವಚನ 15): ಅಪಹಾಸ್ಯದ ಒಂದು ಭಂಗಿ.

ತಾನು ಪುರಾತನ ಕಾಲದಲ್ಲಿ ನುಡಿದ ಮಾತನ್ನು ಈಡೇರಿಸಿದ್ದಾನೆ (ವಚನ 17): ಮೋಶೆಯ ಕಾಲದಿಂದ ಆತನು ತನ್ನ ನಿಜವಾದ ಪ್ರವಾದಿಗಳ ಮೂಲಕ ಮಾಡಿದ ನ್ಯಾಯತೀರ್ಪಿನ ಎಚ್ಚರಿಕೆಯು ಯೆರೂಸಲೇಮಿನ ನಾಶನ ಮತ್ತು ಅದರಲ್ಲಿನ ಜನರ ಸೆರೆಯೊಂದಿಗೆ ನೆರವೇರಿತು.

ವಿರೋಧಿಗಳ ಕೊಂಬನ್ನು ಎತ್ತಿದ್ದಾನೆ (ವಚನ 17): ದೇವರು ಯೆರೂಸಲೇಮಿನ ವಿರೋಧಿಗಳ ಬಲವನ್ನು ಹೆಚ್ಚಿಸಿದ್ದಾನೆ ಎಂದರ್ಥ.

ಕೈಯೆತ್ತಿ ಪ್ರಾರ್ಥಿಸಿರಿ (ವಚನ 19): ಮಧ್ಯಪ್ರವೇಶಿಸಬೇಕೆಂದು ಯಥಾರ್ಥವಾಗಿ ದೇವರನ್ನು ಬೇಡುವುದು

ಪ್ರಶ್ನೆಗಳು

1. ಎರಡನೇ ಅಧ್ಯಾಯದ ಮೂರು ಭಾಗಗಳಲ್ಲಿ ಮಾತನಾಡುವವರು ಯಾರು?
2. ವಚನ 1–3 ರಲ್ಲಿ ಯೆರೂಸಲೇಮಿನ ಮೇಲೆ ದೇವರ ನ್ಯಾಯತೀರ್ಪಿನ ಯಾವ ಹೇಳಿಕೆಗಳು ಪಟ್ಟಿ ಮಾಡಲ್ಪಟ್ಟಿವೆ?
3. ವಚನ 4–5 ರಲ್ಲಿ ದೇವರನ್ನು ಹೇಗ ವರ್ಣಿಸಲಾಗಿದೆ?
4. ವಚನ 6–9 ರ ಪ್ರಕಾರ ದೇವರು ಯೆರೂಸಲೇಮ್ ಮತ್ತು ಅದರ ಜನಗಳಿಗೆ ಏನನ್ನು ಮಾಡಿದ್ದಾನೆ?
5. 10 ನೇ ವಚನದಿಂದ ಯೆರೂಸಲೇಮು ಶೋಕದಲ್ಲಿದೆ ಎಂಬುದನ್ನು ನಾವು ಹೇಗೆ ಅರ್ಥಮಾಡಿಕೊಳ್ಳಬಹುದು?

6. ವಚನ 14 ರಿಂದ ಯೆರೂಸಲೇಮಿನ ಪಾಪದ ಬಗ್ಗೆ ನಾವು ಏನನ್ನು ಕಲಿಯುತ್ತೇವೆ?

7. ವಚನ 17 ರಲ್ಲಿ ದೇವರನ್ನು ಹೇಗೆ ವರ್ಣಿಸಲಾಗಿದೆ?

8. ವಚನ 20–21 ರಲ್ಲಿ ದೇವರಿಗೆ ಯೆರೂಸಲೇಮಿನ ಪರಿಸ್ಥಿತಿಯನ್ನು ಕವಿಯು ಹೇಗೆ ವರ್ಣಿಸುತ್ತಾನೆ?

ಪ್ರಲಾಪಗಳು ಅಧ್ಯಾಯ 2 ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಈ ಅಧ್ಯಾಯದ ಮೊದಲನೇ ಭಾಗವನ್ನು (ವಚನ 1–10) ನೀವು ಹೇಗೆ ರಚನೆಗೊಳಿಸುವಿರಿ?

2. ಈ ಅಧ್ಯಾಯದ ಎರಡನೇ ಭಾಗವನ್ನು (ವಚನ 11–19) ನೀವು ಹೇಗೆ ರಚನೆಗೊಳಿಸುವಿರಿ?

3. ಈ ಅಧ್ಯಾಯದಲ್ಲಿ ಕವಿಯು ಉಪಯೋಗಿಸುವ ಕೆಲವು ಚಿತ್ರಣಗಳನ್ನು (ಉಪಮೆ, ರೂಪಾಲಂಕಾರಗಳು ಮತ್ತು ವ್ಯಕ್ತೀಕರಣ) ವಿವರಿಸಿರಿ.

4. ಕವಿಯು ಸಮಾನಾಂತರತೆಗಳು, ಸಮಾನಾರ್ಥಕ ಹೇಳಿಕೆಗಳು, ಸೂತಕ (ಒಬ್ಬ ವ್ಯಕ್ತಿ ಅಥವಾ ವಸ್ತುವಿನ ಆಶ್ಚರ್ಯಕರ ಸಂಬೋಧನೆ) ಮತ್ತು ಅಲಂಕಾರಿಕ ಪ್ರಶ್ನೆಗಳನ್ನು ಉಪಯೋಗಿಸುವದರಿಂದ ತನ್ನ ಕವನವನ್ನು ಶ್ರೀಮಂತಗೊಳಿಸಿದ್ದಾನೆ. ಈ ಕಾವ್ಯರೂಪಿ ಸಂಗತಿಗಳಿಗೆ ಕೆಲವು ಉದಾಹರಣೆಗಳನ್ನು ಕೊಡಿರಿ.

ಪ್ರಲಾಪಗಳು ಅಧ್ಯಾಯ 3

ಪೀಠಿಕೆ ಮತ್ತು ಟಿಪ್ಪಣಿಗಳು

ಪ್ರಲಾಪ ಪುಸ್ತಕದಲ್ಲಿನ ಉಳಿದ ಅಧ್ಯಾಯಗಳಿಗಿಂತಲೂ ಇದು ವಿಭಿನ್ನವಾಗಿದೆ. ಇಲ್ಲಿ ನಾವು ಒಬ್ಬ ವ್ಯಕ್ತಿಯ ಸ್ವರವನ್ನು ಕೇಳುತ್ತೇವೆ. ಒಬ್ಬ ವ್ಯಕ್ತಿಯು ಯೆರೂಸಲೇಮಿನ ನಾಶನದ ಸಂಬಂಧದೊಂದಿಗೆ ತನ್ನ ವೈಯಕ್ತಿಕ ಬಾಧೆಯನ್ನು ವರ್ಣಿಸುತ್ತಿದ್ದಾನೆ. ಇದು ಕೀರ್ತನೆ ಪುಸ್ತಕದಲ್ಲಿ ಕಂಡು ಬರುವ ಪ್ರಲಾಪಗಳನ್ನು ನೆನಪಿಸುತ್ತದೆ. ಹಾಗಾದರೆ ಈ ವ್ಯಕ್ತಿಯು ಯಾರು? ಆತನು ಪ್ರವಾದಿಯಾದ ಯೆರೆಮೀಯ ಅಥವಾ ಯೆರೂಸಲೇಮಿನ ನಿವಾಸಿಗಳಲ್ಲಿ ಒಬ್ಬನಾದ ಅನಾಮದೇಯ ವ್ಯಕ್ತಿಯಾಗಿರಬಹುದು. ಆದರೆ ಕೆಲವು ಸತ್ಯವೇದ ಪಂಡಿತರುಗಳು ಆತನನ್ನು ಯೆರೂಸಲೇಮ್ ಪಟ್ಟಣದ ವ್ಯಕ್ತೀಕರಣವನ್ನಾಗಿ ಕಲಾಣುತ್ತಾರೆ (ಚಿಯೋನ್ ಕುಮಾರಿಯೇ ಚಿಯೋನ್ ಕನ್ಯೆಯೇ ಎಬಂತೆ). ಈ ಹಿಂದೆ ನಗರಿಯು ಒಬ್ಬ ಸ್ತ್ರೀ ಎಂಬಂತೆ ವ್ಯಕ್ತೀಕರಣಗೊಂಡಿದ್ದಳು. ಇದು ಹಳೇ ಒಡಂಬಡಿಕೆಯ ಪದ್ಯರೂಪಿ ಪ್ರಕ್ರಿಯೆಯಲ್ಲಿ ಸಾಮಾನ್ಯವಾದುದ್ದಾಗಿದೆ. ಆದರೆ ಬಾಧೆಯನ್ನು ನೋಡಿದ ಒಬ್ಬ ವ್ಯಕ್ತಿಯನ್ನು ಒಂದು ನಗರಕ್ಕೆ ಮೂರ್ತೀಕರಣಗೊಳಿಸಿದರೆ ಅದು ಒಂದು ರೀತಿ ಅನಿರೀಕ್ಷಿತ ಮತ್ತು ಆಶ್ಚರ್ಯಕರವಾಗಿ ತೋರುತ್ತದೆ.

ಈ ಅಧ್ಯಾಯವನ್ನು ಕೆಳಕಂಡಂತೆ ರಚನೆ ಮಾಡಬಹುದು:

ಅ. ಬಾಧೆಯ ನಡುವೆಯೂ ದೇವರ ನಂಬಿಗಸ್ತಿಕೆಯನ್ನು ನೆನಪುಮಾಡಿಕೊಳ್ಳುವುದು, ವಚನ 1–39

ಆ. ಪಾಪ ಮತ್ತು ದ್ರೋಹವನ್ನು ಅರಿತುಕೊಳ್ಳುವುದು, ವಚನ 40–47

ಇ. ದೇವರ ಬಿಡುಗಡೆಗಾಗಿ ನಿರೀಕ್ಷಿಸುವುದು. ವಚನ 48–66.

ಆತನ ... ಆತನು (ವಚನ 1–2): ಯೆಹೋವನು

ವಿಷಪದಾರ್ಥ (ವಚನ 15): ಕಹಿಯಾದ ರುಚಿಯನ್ನು ಕೊಡುವ ಒಂದು ಗಿಡ. ಕಷ್ಟ ಮತ್ತು ದುಃಖಕ್ಕೆ ಇದನ್ನು ಒಂದು ರೂಪಾಲಂಕಾರವಾಗಿ ಉಪಯೋಗಿಸಲಾಗಿದೆ.

ನಿರೀಕ್ಷೆ (ವಚನ 21): **"ನಿರೀಕ್ಷೆ ಮತ್ತು ಕಾದುಕೊಂಡಿರು"** ಎಂಬ ಪದಗಳು ಈ ಅಧ್ಯಾಯದಲ್ಲಿನ ಮುಖ್ಯ ಪದಗಳಾಗಿವೆ (ನೋಡಿ. ವಚನ 24, 25, 26, 29,). ಅವು ತನ್ನ ಪ್ರಸ್ತುತ ವೇದನೆಯ ನಡುವೆಯೂ ಒಡಂಬಡಿಕೆಯ ಕರ್ತನಲ್ಲಿನ ಕವಿಯ ನಂಬಿಕೆಯನ್ನು ವ್ಯಕ್ತಪಡಿಸುತ್ತವೆ.

ಯೆಹೋವನೇ ನನ್ನ ಪಾಲು (ವಚನ 24): ಕವಿಯ ಸಂಪೂರ್ಣವಾಗಿ ತನ್ನ ಸ್ವಾಸ್ತ್ಯವಾದ ದೇವರ ಮೇಲೆ ಆತುಕೊಂಡಿದ್ದಾನೆ (ಹೋಲಿಸಿ ಕೀರ್ತನೆ 73:26, 142:8). ಈ ಹೇಳಿಕೆಯು ವಾಗ್ದಾನ ದೇಶವನ್ನು ಹಂಚಿಕೆ ಮಾಡುವ ಸಮಯವನ್ನು ನೆನಪಿಸುತ್ತದೆ. ಆಗ ಲೇವಿ ಕುಟುಂಬನವು ಭೂಮಿಯ ಯಾವುದೇ ಪಾಲನ್ನು ಪಡೆಯಲಿಲ್ಲ, ಯಾಕೆಂದರೆ ದೇವರೇ ಅದರ ಏಕೈಕ ಪಾಲಾಗಿದ್ದನು (ಹೋಲಿಸಿ ಅರಣ್ಯಕಾಂಡ 18:20).

ಯೌವನದಲ್ಲಿ ನೊಗಹೊರುವುದು ಮನುಷ್ಯನಿಗೆ ಲೇಸು (ವಚನ 27): ಇಬ್ರಿಯ ಪಠ್ಯದಲ್ಲಿ ಈ ಹೇಳಿಕೆಯು ಅಧ್ಯಾಯದ ಮೊದಲ ವಚನದಲ್ಲಿ ಕಂಡುಬರುವ **"ಪೆಟ್ಟನ್ನು ತಿಂದವನು ನಾನೇ"** (ವಚನ 1) ಎಂಬ ಹೇಳಿಕೆಯನ್ನು ಪ್ರತಿಧ್ವನಿಸುತ್ತದೆ. ನೊಗ ಎಂಬ ರೂಪಾಲಂಕಾರವನ್ನು ಸತ್ಯವೇದದಲ್ಲಿ ಅನೇಕ ಬಗೆಗಳಲ್ಲಿ ಉಪಯೋಗಿಸಲಾಗಿದೆ. ಸಕಾರಾತ್ಮಕವಾಗಿ ಒಬ್ಬ ವ್ಯಕ್ತಿಯ ಮೇಲೆ ದೇವರ ಅಧಿಕಾರವೆಂಬಂತೆ ಮತ್ತು ನಕಾರಾತ್ಮಕವಾಗಿ ರಾಜಕೀಯ ಶೋಷಣೆಯನ್ನಾಗಿ ಉಪಯೋಗಿಸಲಾಗಿದೆ. ಈ ಪ್ರಲಾಪದಲ್ಲಿ ನೊಗವನ್ನು **"ಬಾಧೆಗೆ"** ಸಮಾನದಾದು ಎಂಬುದಾಗಿ ಅರ್ಥೈಸಿಕೊಳ್ಳಬಹುದು.

ಮೇಲು ಕೇಡುಗಳೆರಡೂ ಸಂಭವಿಸುತ್ತವಲ್ಲಾ (ವಚನ 38): ದೇವರು ನ್ಯಾಯಾಧಿಪತಿ ಮತ್ತು ವಿಮೋಚಕ ಎರಡೂ ಆಗಿದ್ದಾನೆ. ಹಾಗಾಗಿ ಆತನ ಬಾಯಿಂದ ನ್ಯಾಯತೀರ್ಪು ಮತ್ತು ರಕ್ಷಣೆ ಎರಡೂ ಸಹ ಬರುತ್ತವೆ.

ಪ್ರಶ್ನೆಗಳು

1. ವಚನ 1–18 ರಲ್ಲಿ ತನ್ನ ಪರಿಸ್ಥಿತಿಯನ್ನು ಕವಿಯು ಹೇಗೆ ವರ್ಣಿಸುತ್ತಾನೆ? ಈ ವಾಕ್ಯಭಾಗವನ್ನು ನಿಮ್ಮದೇ ಮಾತಿನಲ್ಲಿ ಕೆಲವು ಅಂಶಗಳಲ್ಲಿ ಸಾರಾಂಶಗೊಳಿಸಿರಿ.

2. ದೇವರ ನಂಬಿಗಸ್ತ ಪ್ರೀತಿ ಮತ್ತು ಕರುಣೆಯ ಬಗ್ಗೆ ಕವಿಯು ಯಾವ ಹೇಳಿಕೆಗಳನ್ನು ಕೊಡುತ್ತಾನೆ (ವಚನ 22–23)?
3. ವಚನ 24 ರಲ್ಲಿ ದೇವರೊಂದಿಗಿನ ತನ್ನ ಸಂಬಂಧವನ್ನು ಕವಿಯು ಹೇಗೆ ವರ್ಣಿಸುತ್ತಾನೆ?
4. ವಚನ 25 ರಲ್ಲಿ ದೇವರ ಬಗ್ಗೆ ಕವಿ ಏನೆಂದು ಹೇಳುತ್ತಾನೆ?
5. ಕವಿಯು ಯಾವುದಕ್ಕೆ ಕಾಯುತ್ತಾನೆ (ವಚನ 26)?
6. ವಚನ 31–33 ರಲ್ಲಿ ದೇವರ ಬಗ್ಗೆ ಕವಿಯು ಏನೆಂದು ಹೇಳುತ್ತಾನೆ?
7. ವಚನ 38 ರಲ್ಲಿ ದೇವರ ಬಗ್ಗೆ ಕವಿಯು ಏನೆಂದು ಹೇಳುತ್ತಾನೆ?
8. ವಚನ 39 ರ ಪ್ರಕಾರ ನಮ್ಮ ಮನೋಭಾವನೆ ಹೇಗಿರಬೇಕು?
9. ವಚನ 40–42 ರಲ್ಲಿ ತನ್ನ ಜನರಿಗೆ ಕವಿಯ ಬೋಧನೆ ಏನು?
10. ವಚನ 55–56 ರಲ್ಲಿ ಕವಿಯು ದೇವರನ್ನು ಏನೆಂದು ಕೇಳಿಕೊಳ್ಳುತ್ತಿದ್ದಾನೆ? ಆತನ ಪ್ರಾರ್ಥನೆಯನ್ನು ಕೆಲವು ಅಂಶಗಳಲ್ಲಿ ಪಟ್ಟಿ ಮಾಡಿರಿ.

ಪ್ರಲಾಪಗಳು ಅಧ್ಯಾಯ 3 ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಈ ಪ್ರಲಾಪದಲ್ಲಿ ಕವಿ ಸರ್ವನಾಮಗಳನ್ನು ಹೇಗೆ ಬಳಸುತ್ತಾನೆ ಎಂಬುದನ್ನು ಅಧ್ಯಯನ ಮಾಡಿ: ಅವನು ಎಷ್ಟರ ಮಟ್ಟಿಗೆ ತನಗಾಗಿ ಮಾತ್ರ ಮಾತನಾಡುತ್ತಿದ್ದಾನೆ (“ನಾನು, ನನ್ನ” ಎಂಬ ಸರ್ವನಾಮಗಳನ್ನು ಬಳಸಿ)? ಮತ್ತು ಅವನು ಎಷ್ಟರ ಮಟ್ಟಿಗೆ ತನ್ನ ಜನರನ್ನು ಪ್ರತಿನಿಧಿಸುತ್ತಿದ್ದಾನೆ (“ನಾವು, ನಮ್ಮ” ಎಂಬ ಸರ್ವನಾಮಗಳನ್ನು ಬಳಸಿ)? ಎಷ್ಟರ ಮಟ್ಟಿಗೆ ಅವನು ದೇವರ ಬಗ್ಗೆ ಮಾತನಾಡುತ್ತಿದ್ದಾನೆ (“ಅವನು, ಅವನ” ಎಂಬ ಸರ್ವನಾಮಗಳನ್ನು ಬಳಸಿ)?
2. ವಚನ 1–18 ರಲ್ಲಿ ತನ್ನ ಪರಿಸ್ಥಿತಿಯನ್ನು ವರ್ಣಿಸಲು ಕವಿಯು ಅನೇಕ ಚಿತ್ರಣಗಳನ್ನು (ರೂಪಾಲಂಕಾರ ಮತ್ತು ಉಪಮೆಗಳು) ಉಪಯೋಗಿಸುತ್ತಾನೆ. ಈ ಚಿತ್ರಣದಲ್ಲಿ ಕೆಲವನ್ನು ಮತ್ತು ಗುರುತಿಸಿ ವಿವರಿಸಿರಿ.
3. ವಚನ 21–26 ರ ದೈವಶಾಸ್ತ್ರವನ್ನು ಸಾರಾಂಶಗೊಳಿಸಿರಿ.
4. ವಚನ 43–54 ರಲ್ಲಿ ವ್ಯಕ್ತಪಡಿಸಿದಂತೆ ಕವಿಯ ಭಾವನೆಗಳನ್ನು ನಿಮ್ಮ ಸತ್ಯವೇದ ಉಲ್ಲೇಖಿಸದೇ ಕೆಲವು ಅಂಶಗಳಲ್ಲಿ ಸಾರಾಂಶಗೊಳಿಸಿರಿ.

ಪ್ರಲಾಪಗಳು ಅಧ್ಯಾಯ 4

ಪೀಠಿಕೆ ಮತ್ತು ಟಿಪ್ಪಣಿಗಳು

ನಾಲ್ಕನೇ ಪ್ರಲಾಪವು ಚೀಯೋನಿನ ಹಿಂದಿನ ಮತ್ತು ಪ್ರಸ್ತುತ ಸ್ಥಿತಿಯ ನಡುವಿನ ತದ್ವಿರುದ್ಧತೆಯನ್ನು ತೋರಿಸುತ್ತದೆ. ಇದರಲ್ಲಿನ ಪ್ರಮುಖ ವಿಷಯವಸ್ತುಗಳೆಂದರೆ, ಬರ (ವಚನ 4–10), ಪ್ರವಾದಿಗಳ ಪಾಪವು ನಾಯಕರನ್ನು ಅವನತಿಗೆ ನಡೆಸಿದ್ದು (ವಚನ 7–8, 13–16) ಮತ್ತು ಯೆರೂಸಲೇಮಿನ ಅರಸರುಗಳ ವಿಫಲವಾದ ಹೋರಾಟ (ವಚನ 19–20).

ಈ ಅಧ್ಯಾಯವನ್ನು ಈ ರೀತಿ ರಚನೆ ಮಾಡಬಹುದು:

ಅ. ಯೆರೂಸಲೇಮಿನ ನಿವಾಸಿಗಳ, ವಿಶೇಷವಾಗಿ ಮಕ್ಕಳ ಬಾಧೆ, ವಚನ 1–10

ಆ. ದೇವರು ಯೆರೂಸಲೇಮಿನ ಧಾರ್ಮಿಕ ನಾಯಕರುಗಳನ್ನು ಶಿಕ್ಷಿಸುವುದು, ವಚನ 11–16

ಇ. ದೇವರು ಯೆರೂಸಲೇಮಿನ ರಾಜಕೀಯ ನಾಯಕರನ್ನು ಶಿಕ್ಷಿಸುವುದು, ವಚನ 17–20

ಈ. ಯೆರೂಸಲೇಮಿನ ಬಾಧೆಯ ಅಂತ್ಯ, ವಚನ 21–22

ಬಂಗಾರ ... ಚೊಕ್ಕಚಿನ್ನ (ವಚನ 1): ಇದು ದೇವರನ್ನು ಆದುಕೊಂಡ ಜನರಾದ ಇಸ್ರಾಯೇಲ್ಯರನ್ನು ಸೂಚಿಸುತ್ತದೆ.

ಸಕಲಾತಿ (ವಚನ 5): ಇದು ಬಹು ಬೆಲೆಬಾಳುವ ವಸ್ತ್ರವಾಗಿದೆ, ವೈಭವದ ಸಂಕೇತವಾಗಿದೆ.

ಚೀಯೋನಿನ ಮಧ್ಯದಲ್ಲಿ ಶಿಷ್ಟರ ರಕ್ತವನ್ನು ಸುರಿಸಿದ (ವಚನ 13): ಈ ಹೇಳಿಕೆಯನ್ನು ಅಲಂಕಾರಿಕವಾಗಿ ಅರ್ಥೈಸಿಕೊಳ್ಳಬೇಕಿದೆ. ಯಾಜಕರು ಅಕ್ಷರಶಃವಾಗಿ ಜನರನ್ನು ದೇವಾಲಯದಲ್ಲಿ ಕೊಂದಿರುವುದಿಲ್ಲ. ಆದರೆ ಅವರು ಇಸ್ರಾಯೇಲರನ್ನು ತಪ್ಪಾದ ದಾರಿಯಲ್ಲಿ ನಡೆಸಿದರು ಮತ್ತು ಆ ನಿಮಿತ್ತ ತಮ್ಮ ಮೇಲೆ ದೇವರ ಶಿಕ್ಷೆಯನ್ನು ಬರಮಾಡಿಕೊಂಡರು. ಆ ರೀತಿಯಲ್ಲಿ ಯಾಜಕರು (ಮತ್ತು ಪ್ರವಾದಿಗಳು) ನೀತಿವಂತರ ರಕ್ತಕ್ಕಾಗಿ ಅಪರಾಧಿ ಮನೋಭಾವನೆಯುಳ್ಳವರಾದರು.

ಆಹಾ, ಆ ಯಾಜಕಪ್ರವಾದಿಗಳು ಕುರುಡರಂತೆ ಬೀದಿಗಳಲ್ಲಿ ಅಲೆಯುತ್ತಾರೆ; ರಕ್ತದಿಂದ ಹೊಲಸಾಗಿ ಹೋಗಿದ್ದಾರೆ, ಅವರ ಬಟ್ಟೆಯನ್ನು ಯಾರೂ ಮಟ್ಟರು (ವಚನ 14): ಇಲ್ಲಿ ನಾವು ಮೂರು ಅಲಂಕಾರಿಕ ಹೇಳಿಕೆಗಳನ್ನು ಕಾಣುತ್ತೇವೆ. ಯೆರೂಸಲೇಮಿನಲ್ಲಿ ಬಿಡಲ್ಪಟ್ಟಿರುವ ಪ್ರವಾದಿಗಳು ಮತ್ತು ಯಾಜಕರು ಆತ್ಮೀಕವಾಗಿ ಕುರುಡರಾಗಿದ್ದಾರೆ. ಅವರು ಅಪವಿತ್ರರಾಗಿದ್ದಾರೆ. ಯಾಕೆಂದರೆ ಅವರು ಜನರನ್ನು ತಪ್ಪಾಗಿ ನಡೆಸಿ ಅವರ ರಕ್ತದ ನಿಮಿತ್ತ ಅಪರಾಧ ಮನೋಭಾವವುಳ್ಳವರಾಗಿದ್ದಾರೆ.

ಯೆಹೋವನ ಅಭಿಷಿಕ್ತನು (ವಚನ 20): ಇಸ್ರಾಯೇಲ್ಯರ ಅರಸನಾದ ಚಿದ್ಕೀಯನನ್ನು ಸೂಚಿಸುವುದು (ನೋಡಿ ಯೆರೆಮೀಯ 39:1–7).

ಎದೋಮೆಂಬ ಯುವತಿ (ವಚನ 21): ಎದೋಮ್ ದೇಶವು ಒಬ್ಬ ಸ್ತ್ರೀಯೋ ಎಂಬಂತೆ ವ್ಯಕ್ತೀಕರಿಸಲ್ಪಟ್ಟಿದೆ. ಯೆರೂಸಲೇಮಿನ ನಾಶನದ ಸಮಯದಲ್ಲಿ ಎದೋಮ್ಯರು ಹರ್ಷಿಸಿದರು ಮತ್ತು ಪಟ್ಟಣವನ್ನು ಅವರು ಸುಲಿಗೆ ಮಾಡಿದರು (ನೋಡಿ ಓಬದ್ಯ 11–14).

ಆದರೆ ರೋಷಪಾನದ ಪಾತ್ರೆಯು ನಿನ್ನ ಪಾಲಿಗೂ ಬರುವುದು (ವಚನ 21): ಪಾತ್ರೆಯು ದೇವರ ನ್ಯಾಯತೀರ್ಪಿಗೆ ಒಂದು ರೂಪಾಲಂಕಾರವಾಗಿದೆ.

ಪ್ರಶ್ನೆಗಳು

1. ಈ ಅಧ್ಯಾಯದಲ್ಲಿ ಮಾತನಾಡುವವರು ಯಾರು?
2. ಈ ಅಧ್ಯಾಯದಲ್ಲಿ ಯಾರನ್ನು ಸಂಬೋಧಿಸಲಾಗಿದೆ?

3. ಯೆರೂಸಲೇಮಿನಲ್ಲಿನ ಬರವನ್ನು ಕವಿ ಹೇಗೆ ವರ್ಣಿಸಿದ್ದಾನೆ (ವಚನ 4–5, 8–10)? ನಿಮ್ಮ ಸ್ವಂತ ಮಾತುಗಳನ್ನು ಬಳಸಿ ಮತ್ತು ನಿಮ್ಮ ಸತ್ಯವೇದವನ್ನು ನಕಲು ಮಾಡಬೇಡಿ.
4. ದೇವರು ಯೆರೂಸಲೇಮನ್ನು ಯಾಕೆ ಶಿಕ್ಷಿಸಿದನು (ವಚನ 13)?
5. ವಚನ 13 ಮತ್ತು 14 ರ ಮೇಲಿನ ಟಿಪ್ಪಣಿ ಓದಿ ಈ ವಚನಗಳಲ್ಲಿ ಬಳಸಲಾದ ರೂಪಾಲಂಕಾರಗಳನ್ನು ವಿವರಿಸಿರಿ.
6. ವಚನ 20 ರಲ್ಲಿ "ಯೆಹೋವನ ಅಭಿಷಿಕ್ತನು" ಯಾರು?
7. ಎದೋಮಿಗಾಗಿ ಕವಿ ಯಾವ ಸಂದೇಶವನ್ನು ಹೊಂದಿದ್ದಾನೆ (ವಚನ 22)?
8. ಯೆರೂಸಲಮೇಗೆ ಕವಿ ಯಾವ ಸಂದೇಶವನ್ನು ಹೊಂದಿದ್ದಾನೆ (ವಚನ 22)?

ಪ್ರಲಾಪಗಳು ಅಧ್ಯಾಯ 4 ಆಲೋಚಿಸಿರಿ ಮತ್ತು ಚರ್ಚಿಸಿರಿ

1. ವಚನ 3 ರಲ್ಲಿ ಕವಿಯು ಯಾವ ಅಂಶವನ್ನು ಹೇಳುತ್ತಾನೆ?
2. ವಚನ 5, 7–8 ಮತ್ತು 10 ರಲ್ಲಿ ಕವಿಯು ಯಾವ ಅಂಶವನ್ನು ಹೇಳುತ್ತಾನೆ?
3. ದೇವರು ಯೆರೂಸಲೇಮಿನಗೆ ಕೊಟ್ಟ ಶಿಕ್ಷೆ ಸೊದೋಮಿನ ಶಿಕ್ಷೆಗಿಂತ ಕೆಟ್ಟದಾಗಿದೆ ಎಂದು ಕವಿ ಏಕೆ ಹೇಳಬಹುದು ಎಂಬುದನ್ನು ವಿವರಿಸಿ (ವಚನ 6, ವಚನ 9 ಹೋಲಿಸಿ).
4. ವಚನ 11 ರಲ್ಲಿ ಕವಿಯು ಯಾವ ಅಂಶವನ್ನು ಹೇಳುತ್ತಾನೆ?
5. ಯೆರೆಮೀಯ 37:4–10 ಮತ್ತು 39:1–9 ರಲ್ಲಿ ಕಂಡುಬರುವ ಐತಿಹಾಸಿಕ ಕಥೆಗಳೊಂದಿಗೆ ವಚನ 17–20 ಅನ್ನು ಹೋಲಿಸಿರಿ. ನಿಮ್ಮ ಮುಕ್ತಾಯಗಳೇನು?
6. ಎದೋಮಿನ ಮೇಲಿನ ದೇವರ ದಂಡನೆಯ ಕುರಿತಾದ ಓಬದ್ಯನ ಪ್ರವಾದನೆಯೊಂದಿಗೆ (ಓಬದ್ಯ 8–10) ವಚನ 21 ಅನ್ನು ಹೋಲಿಸಿರಿ. ನಿಮ್ಮ ಮುಕ್ತಾಯಗಳೇನು?

ಪ್ರಲಾಪಗಳು ಅಧ್ಯಾಯ 5

ಪೀಠಿಕೆ ಮತ್ತು ಟಿಪ್ಪಣಿಗಳು

ಐದನೇ ಪ್ರಲಾಪವು ದೇವರ ಕ್ಷಮಾಪಣೆಗಾಗಿ ಯೆಹೂದವು ಮಾಡಿಕೊಳ್ಳುವ ಮನವಿಯ ಕುರಿತ್ತಾದ್ದಾಗಿದೆ. ಈ ಅಧ್ಯಾಯವನ್ನು ಈ ರೀತಿ ರಚನೆ ಮಾಡಬಹುದು:

ಅ. ಪ್ರಾರಂಭಿಕ ವಿಜ್ಞಾಪನೆ, ವಚನ 1

ಆ. ಯೆರೂಸಲೇಮು ಎದುರಿಸಿದ ಸಮಸ್ಯೆಗಳು, ವಚನ 2–18

ಇ. ಮರುಸ್ಥಾಪನೆಗಾಗಿ ಮಾಡುವ ಮುಕ್ತಾಯದ ಒಂದು ಪ್ರಾರ್ಥನೆ, ವಚನ 19–22

ಪುಸ್ತಕವು ಜನರು ದೇವರ ನಿರಂತರವಾದ ಸೌರ್ವಭೌಮತ್ವವನ್ನು ಅರಿಕೆ ಮಾಡುವಾಗ ಮರುಸ್ಥಾಪನೆ ಮತ್ತು ಸುಸ್ಥಿತಿಗಾಗಿನ ಒಂದು ಮನವಿಯೊಂದಿಗೆ ಮುಕ್ತಾಯವಾಗುತ್ತದೆ.

ಯೆಹೋವನೇ ಚಿತ್ತಕ್ಕೆ ತಂದುಕೋ (ವಚನ 1): ಇದು ಈ ಪುಸ್ತಕದಲ್ಲಿನ ಒಂದು ಸಾಮಾನ್ಯವಾದ ವಿಷಯವಸ್ತುವಾಗಿದೆ (ಹೋಲಿಸಿ, 1:11, 20, 2:20, 3:63). ದೇವರು ನೆನಪು ಮಾಡಿಕೊಳ್ಳುವಾಗೆಲ್ಲಾ ಆತನು ಮಧ್ಯಪ್ರವೇಶಿಸುತ್ತಾನೆ ಮತ್ತು ಕಾಪಾಡುತ್ತಾನೆ.

ನಮ್ಮ ಸ್ವಾಸ್ತ್ಯವು (ವಚನ 2): ವಾಗ್ದಾತ್ತ ದೇಶ.

ಹಿಂದಟ್ಟುವವರು (ವಚನ 5): ಈ ಪದವು ಸಾಲಗಾರರು ಎಂದು ಸಹ ಅರ್ಥೈಸುತ್ತದೆ.

ಹೇಗಾದರೂ ಹೊಟ್ಟೆ ತುಂಬಾ ಅನ್ನ ತಿಂಬೋಣ ಎಂದು ಐಗುಪ್ತರಿಗೂ ಅಶ್ಶೂರ್ಯರಿಗೂ ಅಧೀನರಾದೆವು (ವಚನ 6): ಈ ಹೇಳಿಕೆಯನ್ನು ಬಹುಶಃ ಮುಂದಿನ ವಚನ (ನಮ್ಮ ಪಿತೃಗಳು ಪಾಪಮಾಡಿ)ದ ಹಿನ್ನಲೆಯಲ್ಲಿ ಅರ್ಥೈಸಿಕೊಳ್ಳಬೇಕಾಗಿದೆ. ಸುಮಾರು 150 ವರ್ಷಗಳ ಹಿಂದೆ ಇಸ್ರಾಯೇಲಿನ ಉತ್ತರ ರಾಜ್ಯದಲ್ಲಿ ಏನಾಯಿತು ಎಂಬುದನ್ನು ಹೋಶೇಯನು ವಿವರಿಸುತ್ತಾನೆ. ಇಸ್ರಾಯೇಲ್ಯರು ದೇವರಿಗೆ ಅಪನಂಬಿಗಸ್ತರಾಗಿದ್ದರು. ಅವರು ನೆರೆಯ ರಾಷ್ಟ್ರಗಳ ಫಲವತ್ತತೆಯ ದೇವರುಗಳ ಕಡೆಗೆ ತಿರುಗಿಕೊಂಡು ಅಶ್ಶೂರ್ಯ ಮತ್ತು ಐಗುಪ್ತದೊಂದಿಗೆ ಗೆಳೆತನ ಮಾಡಿಕೊಂಡರು. ಈ ಪಾಪಗಳಿಗಾಗಿ ದೇವರು ಅವರನ್ನು ಖಂಡಿಸಿದನು (ನೋಡಿ, ಹೋಶೇಯ 2:5, 8, 5:13, 7:11, 12:1).

ದಾಸರು (ವಚನ 8): ಇದು ಬಾಬೆಲಿನವರಿಗೆ ಒಂದು ವ್ಯಂಗ್ಯದ ಸೂಚನೆಯಾಗಿದೆ.

ಅರಣ್ಯದವರ ಕತ್ತಿ (ವಚನ 9): ಇದು ಪ್ರಯಾಣಿಕರ ಮೇಲೆ ಆಕ್ರಮಣ ಮಾಡುವ ದರೋಡೆಕೋರರಿಗೆ ಒಂದು ರೂಪಾಲಂಕಾರವಾಗಿದೆ.

ಕೈಗಳನ್ನು ಗಲ್ಲಿಗೆ ನೇತಕಟ್ಟಿದರು (ವಚನ 12): ಇಸ್ರಾಯೇಲಿನ ನಾಯಕರುಗಳು ಕೇವಲ ಕೊಲ್ಲಲ್ಪಡದೆ ಅವರ ದೇಹಗಳನ್ನು ಅವಮಾನಕರ ರೀತಿಯಲ್ಲಿ ಪ್ರದರ್ಶಿಸಲಾಗುತಿತ್ತು.

ಬೀಸುವ ಕಲ್ಲನ್ನು ಹೊರುವ ಗತಿ (ವಚನ 13): ಇದು ಸಾಮಾನ್ಯವಾಗಿ ಪ್ರಾಣಿಗಳ ಕೆಲಸವಾಗಿತ್ತೇ ವಿನಃ ಮನುಷ್ಯರದಲ್ಲ.

ಕಿರೀಟವು ನಮ್ಮ ತಲೆಯ ಮೇಲಿಂದ ಬಿದ್ದು ಹೋಗಿದೆ (ವಚನ 16): ಇದು ಯೆರೂಸಲೇಮ್ ಪಟ್ಟಣದ ಹಿಂದಿನ ಮಹಿಮೆಯ ಕೊನೆ ಮತ್ತು ದಾವೀದನ ಕುಲದ ಅರಸರ ಅವನತಿ ಇವೆರೆಡನ್ನೂ ಸಹ ಸೂಚಿಸುತ್ತದೆ.

ನಮ್ಮ ಕಣ್ಣು ಮೊಬ್ಬಾಗಿದೆ (ವಚನ 17): ಖಂಡಿತವಾಗಿ ಕಣ್ಣೀರು ಅವರ ಕಣ್ಣುಗಳನ್ನು ಮೊಬ್ಬಾಗಿಸಿತ್ತು.

ಪ್ರಶ್ನೆಗಳು

1. ಅಧ್ಯಾಯ 5 ರ ಮೂರು ಭಾಗಗಳಲ್ಲಿ ಮಾತನಾಡುವವರು ಯಾರು?

2. ಈ ಪ್ರಲಾಪದಲ್ಲಿ ಯಾರನ್ನು ಸಂಬೋಧಿಸಲಾಗಿದೆ?

3. ಇಸ್ರಾಯೇಲ್ಯರ ಅವಮಾನವನ್ನು ಕೀರ್ತನೆಗಾರನು ಹೇಗೆ ವರ್ಣಿಸಿದ್ದಾನೆ (ವಚನ 2–18)? ಅಂಶಗಳ ಪಟ್ಟಿಯನ್ನು ಮಾಡಿ. ನಿಮ್ಮ ಮಾತುಗಳನ್ನು ಬಳಸಿ ಮತ್ತು ನಿಮ್ಮ ಸತ್ಯವೇದವನ್ನು ಉಲ್ಲೇಖಿಸಬೇಡಿ.
4. ವಚನ 7 ರಲ್ಲಿ ಅವರ ಅವಮಾನ ಮತ್ತು ದುಃಖಕರ ಸನ್ನಿವೇಶಕ್ಕೆ ಕೀರ್ತನೆಗಾರನು ಯಾವ ಕಾರಣವನ್ನು ಕೊಡುತ್ತಾನೆ?
5. 16 ನೇ ವಚನದಲ್ಲಿ ಕೀರ್ತನೆಗಾರನು ಅವರ ಅವಮಾನಕರ ಮತ್ತು ದುಃಖಕರ ಸನ್ನಿವೇಶಕ್ಕೆ ಯಾವ ಕಾರಣವನ್ನು ಕೊಡುತ್ತಾನೆ?
6. ವಚನ 19 ರಲ್ಲಿ ದೇವರ ಕುರಿತಾದ ಯಾವ ತಿಳುವಳಿಕೆಯನ್ನು ಕೀರ್ತನೆಗಾರನು ವ್ಯಕ್ತಪಡಿಸುತ್ತಾನೆ?
7. ವಚನ 21 ರಲ್ಲಿ ಕೀರ್ತನೆಗಾರನು ಯಾವುದಕ್ಕಾಗಿ ಪ್ರಾರ್ಥಿಸುತ್ತಾನೆ?

ಪ್ರಲಾಪಗಳು ಅಧ್ಯಾಯ 5 ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಇಸ್ರಾಯೇಲ್ಯರಿಗೆ ಏನಾಯಿತು ಎಂಬುದನ್ನು **"ನೆನಪಿಟ್ಟುಕೊಳ್ಳಲು"** ಎಂದು ಕೀರ್ತನೆಗಾರನು ದೇವರನ್ನು ಕೇಳಿಕೊಳ್ಳುತ್ತಾನೆ. ಹಾಗಾದರೆ ಈ ಮಾತಿನ ಪ್ರಾಮುಖ್ಯತೆ ಏನಿರಬಹುದು?
2. ಇಸ್ರಾಯೇಲ್ಯರ ಪರಿಸ್ಥಿತಿಗಳನ್ನು ವಿವರಿಸಲು ಕೀರ್ತನೆಗಾರನು ಹೇರಳವಾದ ಚಿತ್ರಣಗಳನ್ನು ಉಪಯೋಗಿಸುತ್ತಾನೆ. ಅಂತಹ ಕೆಲವು ಚಿತ್ರಣಗಳನ್ನು ಗುರುತಿಸಿ ಮತ್ತು ವಿವರಿಸಿರಿ.
3. ಸಮಾನಾಂತರ ಮತ್ತು ಸಮಾನಾರ್ಥಕ ಹೇಳಿಕೆಗಳನ್ನು ಬಳಸುವ ಮೂಲಕ ಕವಿಯು ತನ್ನ ಕಾವ್ಯವನ್ನು ಶ್ರೀಮಂತಗೊಳಿಸುತ್ತಾನೆ. ಈ ಕಾವ್ಯಾತ್ಮಕ ಸಾಧನಗಳಲ್ಲಿ ಕೆಲವನ್ನು ಗುರುತಿಸಿ.

ಜ್ಞಾನೋಕ್ತಿಗಳು – ಉತ್ತರಗಳು

ಪೀಠಿಕೆ ಪರಿಚಯ – ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

ಪ್ರಶ್ನೆ 1 ಕ್ಕೆ ಉತ್ತರ

1. ಜ್ಞಾನೋಕ್ತಿ ಪುಸ್ತಕದಲ್ಲಿ ತಿಳಿಸಿದಂತೆ ಇದರ ಗ್ರಂಥಕರ್ತರುಗಳು:

   ಅ. ಜ್ಞಾನೋ. 1:1, ಸೊಲೊಮೋನ

   ಆ. ಜ್ಞಾನೋ. 10:1, ಸೊಲೊಮೋನ

   ಇ. ಜ್ಞಾನೋ. 22:17, ಜ್ಞಾನಿಗಳು

   ಈ. ಜ್ಞಾನೋ. 24:23, ಜ್ಞಾನಿಗಳು

   ಉ. ಜ್ಞಾನೋ. 25:1, ಸೊಲೊಮೋನ

   ಊ. ಜ್ಞಾನೋ. 30:1, ಆಗೂರ

   ಋ. ಜ್ಞಾನೋ. 31:1, ಅರಸನಾದ ಲೆಮೂವೇಲನ ತಾಯಿ

ಪ್ರಶ್ನೆ 2 ಕ್ಕೆ ಉತ್ತರ

2. ಈ ಆಧಾರಗಳಿಂದ ಇಂದು ನಮ್ಮ ಸತ್ಯವೇದದಲ್ಲಿರುವ ಜ್ಞಾನೋಕ್ತಿ ಪುಸ್ತಕವು ಸಂಗ್ರಹಗಳ ಸಂಗ್ರಹವೆಂಬ ಮುಕ್ತಾಯಕ್ಕೆ ಬರಬಹುದು. ಜ್ಞಾನಸಾಹಿತ್ಯ ಮತ್ತು ರಾಜರುಗಳು ಮತ್ತು ಪ್ರಾಚೀನ ಇಸ್ರಾಯೇಲಿನ ಅವರ ಆಸ್ಥಾನಗಳ ನಡುವೆ ಬಲವಾದ ಸಂಪರ್ಕವಿರುವಂತೆ ತೋರುತ್ತದೆ.

ಪ್ರಶ್ನೆ 3 ಕ್ಕೆ ಉತ್ತರ

3. ಹೆಚ್ಚಿನ ಸಂಗತಿಗಳು ಸೊಲೊಮೋನನಿಂದ ಬಂದಿರುವಂತೆ ತೋರುತ್ತದೆ (ಅಧ್ಯಾಯ 1–22:16, ಅಧ್ಯಾಯ 25–29). ಆತನು ಯಾರು?

   ಅ. ಈತನು ಇಸ್ರಾಯೇಲಿನ ಅರಸನಾಗಿದ್ದು, ದಾವೀದನ ಮಗನೂ ಮತ್ತು ಉತ್ತರಾಧಿಕಾರಿಯೂ ಆಗಿದ್ದನು.

   ಆ. ತನ್ನ ಜ್ಞಾನಕ್ಕೆ ಆತನು ಪ್ರಸಿದ್ಧನಾಗಿದ್ದಾನೆ (1 ಅರಸು. 4:29–30).

   ಇ. ಜ್ಞಾನೋಕ್ತಿಗಳನ್ನು ಬರೆಯುವದರಲ್ಲಿ ಆತನು ಪ್ರಸಿದ್ಧನು (1 ಅರಸು. 4:32).

   ಈ. ಈತನು ಕ್ರಿ.ಪೂ. 970–930 ರ ಅವಧಿಯಲ್ಲಿ ಅವಿಭಜಿತ ಇಸ್ರಾಯೇಲ್ ರಾಜ್ಯದ ಅರಸನಾಗಿದ್ದನು.

ಪ್ರಶ್ನೆ 4 ಕ್ಕೆ ಉತ್ತರ

4. ಸೊಲೊಮೋನನ ಜೊತೆ ಬಳಸಲಾದ ಇನ್ನೊಬ್ಬ ವ್ಯಕ್ತಿಯೆಂದರೆ ಯೆಹೂದದ ಅರಸನಾದ ಹಿಜ್ಕೀಯ. ಈತನ ಲೇಖಕರು ಸಂಗ್ರಹಿಸಿ ಬರೆದರು. ಈತನು ಕ್ರಿ.ಪೂ. 700 ರಲ್ಲಿ ದಕ್ಷಿಣ ರಾಜ್ಯವಾದ ಯೆಹೂದದಲ್ಲಿ ಅರಸನಾಗಿದ್ದನು.

ಪ್ರಶ್ನೆ 5 ಕ್ಕೆ ಉತ್ತರ

5. ಇಲ್ಲಿ ತಿಳಿಸಲ್ಪಟ್ಟ ಇತರ ಗ್ರಂಥಕರ್ತರು:

   ಅ. ಜ್ಞಾನಿಗಳು: ಇವರು ಹಳೇ ಒಡಂಬಡಿಕೆ ಕಾಲದಲ್ಲಿ ಯಾಜಕರು ಮತ್ತು ಪ್ರವಾದಿಗಳೊಂದಿಗೆ ಇದ್ದ ಜನರ ಒಂದು ವಿಶೇಷ ಗುಂಪಾ (ನಾಯಕರು ಅಥವಾ ಬೋಧಕರು) ಗಿರಬಹುದೆಂದು ತೋರುತ್ತದೆ (ಯೆರೆಮೀಯ 18:18).

   ಆ. ಯಾಕೆ ಎಂಬುವವನ ಮಗನಾದ ಆಗೂರ: ಸತ್ಯವೇದದಲ್ಲಿ ಇಲ್ಲಿ ಮಾತ್ರ ಈತನ ಹೆಸರು ಕಂಡುಬರುತ್ತದೆ. ಬಹುಶಃ ಈತನು ಮಸ್ಸಾದ ಕುಲ ಅಥವಾ ಪ್ರಾಂತ್ಯದಿಂದ ಬಂದವನಾಗಿರಬಹುದು.

   ಇ. ಅರಸನಾದ ಲೆಮೂವೇಲನ ತಾಯಿ: ಸತ್ಯವೇದದಲ್ಲಿ ಅರಸನಾದ ಲೆಮೂವೇಲನ ಹೆಸರನ್ನು ಇಲ್ಲಿ ಮಾತ್ರ ಕಾಣಬಹುದು. ಬಹುಶಃ ಈತನೂ ಮಸ್ಸಾ ಕುಲ ಅಥವಾ ಪ್ರಾಂತ್ಯದಿಂದ ಬಂದಿರಬಹುದು. ಯಾಕೆ ಎಂಬುವವನ ಮಗನಾದ ಆಗೂರನಿಗೂ ಈತನಿಗೂ ಸಂಪರ್ಕವಿರಬಹುದು. ಲೆಮೂವೇಲ ಎಂಬುದು ಸೊಲೊಮೋನನಿಗಿರುವ ಇನ್ನೊಂದು ಹೆಸರಾಗಿರಬಹುದೆಂದು ಕೆಲ ಸತ್ಯವೇದ ಪಂಡಿತರು ಹೇಳುವರು.

ಪ್ರಶ್ನೆ 6 ಕ್ಕೆ ಉತ್ತರ

6. ಪ್ರಾಯೋಗಿಕವಾಗಿ ಪ್ರಾಚೀನ ಇಸ್ರಾಯೇಲ್ ರಾಷ್ಟ್ರವನ್ನು ಸುತ್ತುವರಿದ ಸಂಸ್ಕೃತಿಯಲ್ಲಿ ಕಂಡುಬರುವ ಜ್ಞಾನವು, ಹಳೇ ಒಡಂಬಡಿಕೆಯ ಜ್ಞಾನದ ಪುಸ್ತಕಗಳಲ್ಲಿ ಕಂಡುಬರುವ ಜ್ಞಾನದಂತೆ ಧಾರ್ಮಿಕವಾದುದ್ದಾಗಿದೆ. ಆದರೆ ರಾಷ್ಟ್ರಗಳ ಅಥವಾ ಜನಾಂಗಗಳ ಜ್ಞಾನವು ಅವರ ದೇವರ ಸ್ವಭಾವವನ್ನು ಪ್ರತಿಬಿಂಬಿಸುತ್ತದೆ. ಹಳೇ ಒಡಂಬಡಿಕೆಯಲ್ಲಿ ಜ್ಞಾನಪುಸ್ತಕದಲ್ಲಿ ಕಂಡುಬರುವ ಜ್ಞಾನವು ಇಸ್ರಾಯೇಲ್ ದೇವರಾದ ಯೆಹೋವನ ಗುಣಸ್ವಭಾವ ಮತ್ತು ತನ್ನ ಜನರ ಮೇಲೆ ಆತನು ಇಟ್ಟುಕೊಂಡಿರುವ ಅಪೇಕ್ಷೆಗಳನ್ನು ಪ್ರತಿಬಿಂಬಿಸುತ್ತದೆ.

ಪ್ರಶ್ನೆ 7 ಕ್ಕೆ ಉತ್ತರ

7. ಜ್ಞಾನೋಕ್ತಿಗಳು ಪ್ರಾಚೀನ ಇಸ್ರಾಯೇಲ್ ಅರಸರು ಮತ್ತು ಜ್ಞಾನಿಗಳಿಂದ ಬರೆಯಲ್ಪಟ್ಟಿವೆ, ಸಂಗ್ರಹಿಸಲ್ಪಟ್ಟಿವೆ ಮತ್ತು ತಿದ್ದುಪಡಿ ಮಾಡಲ್ಪಟ್ಟಿವೆ. ಇವರೆಲ್ಲರೂ ಪುರುಷರಾಗಿದ್ದು ಮೇಲ್ವರ್ಗಕ್ಕೆ ಸೇರಿದವರಾಗಿದ್ದಾರೆ. ಮೇಲ್ವರ್ಗದಿಂದ ಬಂದ ಅರಸರುಗಳು ಮತ್ತು ಇತರ ನಾಯಕರನ್ನು ತರಬೇತಿಗೊಳಿಸಲು ಸಹ ಜ್ಞಾನೋಕ್ತಿಗಳನ್ನು ಉಪಯೋಗಿಸಲಾಗುತ್ತಿತ್ತು. ಜ್ಞಾನೋಕ್ತಿಗಳು ಮೇಲ್ವರ್ಗದವರ ದೃಷ್ಟಿಕೋನದಿಂದ ಪ್ರಾಚೀನ ಇಸ್ರಾಯೇಲಿನಲ್ಲಿನ ಜೀವಿತವನ್ನು ವರ್ಣಿಸುತ್ತವೆ ಹಾಗಾಗಿ ವೈಯಕ್ತಿಕ ಜ್ಞಾನೋಕ್ತಿಯು ಬಡವರು ಅಥವಾ ಸ್ತ್ರೀಯರ ಬಗ್ಗೆ ತಿಳಿಸುವಾಗ ಇದು ಮೇಲ್ವರ್ಗದ ಪುರುಷನು ಅವರೊಂದಿಗೆ ಹೇಗೆ ವರ್ತಿಸಬೇಕೆಂಬುದನ್ನು ತಿಳಿಸುತ್ತದೆ. ಬಡವರಿಗಾಗಿ ಮತ್ತು ಸ್ತ್ರೀಯರಿಗಾಗಿ ಹೇಗೆ ವರ್ತಿಸಬೇಕೆಂಬುದನ್ನು ತಿಳಿಸುತ್ತದೆ. ಬಡವರಿಗಾಗಿ ಮತ್ತು ಸ್ತ್ರೀಯರಿಗಾಗಿ ಹೆಚ್ಚು ಜ್ಞಾನೋಕ್ತಿಗಳು ಬರೆಯಲ್ಪಟ್ಟಿಲ್ಲ. ಆದರೆ ಬಡವರ ಮತ್ತು ಸ್ತ್ರೀಯರ ಬಗ್ಗೆ ಅನೇಕ ಜ್ಞಾನೋಕ್ತಿಗಳು ಬರೆಯಲ್ಪಟ್ಟಿವೆ.

   ಇನ್ನೊಂದು ವಿಧದಲ್ಲಿ ಹೆಚ್ಚಿನ ಜ್ಞಾನೋಕ್ತಿಗಳು ಹೆಚ್ಚಾಗಿ ಸಾಮಾನ್ಯ ಲಕ್ಷಣವನ್ನು ಹೊಂದಿವೆ. ಒಬ್ಬ ಇಸ್ರಾಯೇಲನು ಒಡಂಬಡಿಕೆಗೆ ಅನುಸಾರವಾದ ಜೀವಿತ, ದೇವರಿಗೆ ಮೆಚ್ಚಿಕೆಯಾದ ಜೀವಿತ, ಆಶೀರ್ವದಿತ ಜೀವಿತ, ಭಯಭಕ್ತಿಯುಳ್ಳ ಜೀವಿತವನ್ನು ಹೇಗೆ ಜೀವಿಸಬೇಕೆಂಬುದನ್ನು ಅವು ವರ್ಣಿಸುತ್ತವೆ.

8. –

ಪ್ರಶ್ನೆ 9 ಕ್ಕೆ ಉತ್ತರ

9. ಒಂದು ಹೇಳಿಕೆಯು ನಮ್ಮ ದೈನಂದಿನ ಅನುಭವಕ್ಕೆ ವಿರೋಧವಾಗಿ ಮತ್ತು ಅಸಂಬದ್ಧವಾಗಿ ತೋರುವಾಗ ಅದು **"ವಿರೋಧಾಭಾಸ"** ವಾಗಿರುತ್ತದೆ. ಇದನ್ನು ಸ್ವಲ್ಪ ಆಳವಾಗಿ ಪರಿಶೋಧಿಸುವಾಗ ಸಾಮಾನ್ಯವಾಗಿ ಅದು ನಾವು ಪ್ರಾರಂಭದಲ್ಲಿ ಯೋಚಿಸದೆ ಇರುವ ಒಂದು ಸತ್ಯವನ್ನು ಪ್ರಕಟಿಸುತ್ತದೆ: ಇದಕ್ಕೆ ಉದಾಹರಣೆ:

   ಅ. **"ಒಬ್ಬ ಧನಿಕನು, ಒಬ್ಬ ಬಡವನಿಗಿಂತ ಶ್ರೀಮಂತನಲ್ಲ"**: ಶ್ರೀಮಂತಿಕೆಯು ಬಹಳಷ್ಟು ಸಂಪತ್ತನ್ನು ಹೊಂದಿರಬೇಕೆಂಬುದಲ್ಲ. ಒಂದು ವೇಳೆ ಒಬ್ಬ ಬಡಮನುಷ್ಯನು ಸಂತೋಷವಾಗಿ ಮತ್ತು ಸಂತುಷ್ಟನಾಗಿದ್ದರೆ ಅದು

ಸಹ ಶ್ರೀಮಂತಿಕೆಯೇ. ಬಡ ಮನುಷ್ಯನು ಸಹ ಅನಾರೋಗ್ಯವಾಗಿದ್ದು, ಒಂದು ಪ್ರೀತಿಸುವ ಕುಟುಂಬವನ್ನು ಹೊಂದಬಹುದು. ಇವು ಅನೇಕ ಶ್ರೀಮಂತ ಜನರಿಗೆ ಇಲ್ಲದೇ ಇರುವ ಸಂಪತ್ತುಗಳಾಗಿವೆ.

ಆ. "ಒಬ್ಬ ನರ್ಸ್ (ದಾದಿಯು) ದಯಾಳುವಾಗಿರಲು, ಕೆಲವೊಮ್ಮೆ ಕಠೋರವಾಗಿರಬೇಕಾಗುತ್ತದೆ": ಬ್ಯಾಂಡೇಜನ್ನು ಕಟ್ಟುವ ಮೊದಲು ನರ್ಸ್ ಗಾಯವನ್ನು ಸ್ವಚ್ಛ ಮಾಡಬೇಕು. ಈ ಸ್ವಚ್ಛಪಡಿಸುವ ಕಾರ್ಯವು ಬಯಳಷ್ಟು ನೋವಿನಿಂದ ಕೂಡಿದ್ದು, ಕಠೋರವಾಗಿ ತೋರಿಬರುತ್ತದೆ. ಆದರೆ ಒಂದು ವೇಳೆ ಈ ರೀತಿಯಲ್ಲಿ ನರ್ಸ್ ಕಠೋರವಾಗಿರದಿದ್ದರೆ ಗಾಯವು ಮಾಯುವುದಿಲ್ಲ. ಹಾಗಾಗಿ ಆಕೆಯ ಕ್ರೂರತ್ವವು, ದಯೆಯ ಒಂದು ಕಾರ್ಯವಾಗಿದೆ.

ಪ್ರಶ್ನೆ 10 ಕ್ಕೆ ಉತ್ತರ

10. "ಮನುಷ್ಯನ ಅನುಭವಗಳಿಂದ ಕಲಿಯುವುದರ" ಅರ್ಥವು– ನಮ್ಮ ಜೀವನದಲ್ಲಿ ಅನುಭವಿಸಿದ ಒಳ್ಳೆಯ ಮತ್ತು ಕೆಟ್ಟ ಸಂಗತಿಗಳನ್ನು ಮುಂದಿನ ಬಾರಿ ಅತ್ಯುತ್ತಮವಾದ ರೀತಿಯಲ್ಲಿ ಮಾಡುವಂತೆ ಉಪಯೋಗಿಸುವುದಾಗಿದೆ ಅಥವಾ ನೀವು ಯೋಚಿಸುವಾಗ ಮತ್ತು ಕಾರ್ಯಮಾಡುವ ರೀತಿಯನ್ನು ಸುಧಾರಿಸಲು ಈ ಅನುಭವಗಳನ್ನು ಉಪಯೋಗಿಸಬಹುದಾಗಿದೆ. ಉದಾ: ಒಂದು ಬಾರಿ ಒಬ್ಬ ಸ್ನೇಹಿತನಿಂದ ನೀವು ಮೋಸ ಹೋಗಿದ್ದರೆ, ಭವಿಷ್ಯದಲ್ಲಿ ಯಾರನ್ನ ನಂಬಬೇಕು ಎಂಬುದರ ಬಗ್ಗೆ ನೀವು ಜಾಗೃತವಾಗಿರುವಿರಿ.

ಪ್ರಶ್ನೆ 11 ಕ್ಕೆ ಉತ್ತರ

11. 19:22ರಲ್ಲಿ ಕಂಡುಬರುವ ಜ್ಞಾನೋಕ್ತಿಯು "ಸಂಬಂಧಿತ ಮೌಲ್ಯ" ವನ್ನು ತಿಳಿಸುತ್ತದೆ: ಇಲ್ಲಿ ಎರಡು ನಕರಾತ್ಮಕ ಅಂಶಗಳನ್ನು ತಿಳಿಸಲಾಗಿದೆ. ಬಡವರಾಗಿರುವುದು ಮತ್ತು ಅಪ್ರಾಮಾಣಿಕರಾಗಿರುವುದು. ಆದರೆ ಅಪ್ರಾಮಾಣಿಕನಾಗಿರುವುದು ಬಡವನಿಗಿಂತಲೂ ಕೀಳಾಗಿದೆ. ಯಾಕೆಂದರೆ ಸಮಾಜದಲ್ಲಿ ಬಡ ಮನುಷ್ಯನನ್ನು ಸೇರಿಸಿಕೊಳ್ಳಬಹುದು ಆದರೆ ಅಪ್ರಾಮಾಣಿಕ ಅಥವಾ ಸುಳ್ಳುಗಾರನನ್ನು ಸೇರಿಸಿಕೊಳ್ಳುವುದಿಲ್ಲ.

ಪ್ರಶ್ನೆ 12 ಕ್ಕೆ ಉತ್ತರ

12. ಜ್ಞಾನೋಕ್ತಿಗಳು ಓದುಗನನ್ನು ಪರಾಮರ್ಶೆಗೆ ಆಮಂತ್ರಿಸುತ್ತವೆ. ಜ್ಞಾನಸಾಹಿತ್ಯದ ಉದ್ದೇಶವು ದೇವರಲ್ಲಿ ಭಯಭಕ್ತಿಯುಳ್ಳವರು ಒಡಂಬಡಿಕೆಯ ಕರ್ತನಿಗೆ ವಿಧೇಯರಾಗಿ ಆತನಿಗೆ ಮೆಚ್ಚಿಕೆಯಾದ ರೀತಿಯಲ್ಲಿ ಜೀವಿಸುವಂತೆ ಸಹಾಯಿಸುವುದಾಗಿದೆ. ಈ ರೀತಿ ಮಾಡಲು ಜ್ಞಾನವು ಬಳಸುವ ಒಂದು ತಂತ್ರವೆಂದರೆ ಎರಡು ಆಯ್ಕೆಗಳನ್ನು ವರ್ಣಿಸುವುದಾಗಿದೆ. ಅವೆಂದರೆ, ಜ್ಞಾನಿಗಳ ಮಾರ್ಗ (ಒಡಂಬಡಿಕೆಗೆ ವಿಧೇಯರಾಗುವ ಭಯಭಕ್ತಿಯುಳ್ಳ ಜನರು) ಮತ್ತು ದುಷ್ಟರ ಮಾರ್ಗ (ಒಡಂಬಡಿಕೆಗೆ ಅವಿಧೇಯರಾಗುವ ಭಕ್ತಿಹೀನ ಜನರು). ಓದುಗನು ಈ ಆಯ್ಕೆಗಳನ್ನು ಪರಾಮರ್ಶಿಸಿ, ದೇವರಿಗೆ ಮೆಚ್ಚಿಕೆಯಾಗುವ, ಆಶೀರ್ವಾದದ ಮಾರ್ಗವಾದ ಜ್ಞಾನದ ಮಾರ್ಗವನ್ನು ಆಯ್ಕೆ ಮಾಡಿಕೊಳ್ಳಬೇಕೆಂದು ಕರೆಕೊಡುತ್ತದೆ.

ಮುನ್ನುಡಿ: ಉದ್ದೇಶ ಮತ್ತು ವಿಷಯವಸ್ತು (1:1–7) – ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಈ ವಾಕ್ಯಭಾಗದಲ್ಲಿ ಅತೀ ಪ್ರಾಮುಖ್ಯ ಅಂಶವೆಂದರೆ, ವಚನ 7. ಇಡೀ ಜ್ಞಾನೋಕ್ತಿ ಪುಸ್ತಕವೇ ಇದರ ಮೇಲೆ ನೇತಾಡುತ್ತದೆ ಎಂದೂ ಸಹ ಹೇಳಬಹುದು. ಇಲ್ಲಿ ಸೊಲೊಮೋನನು ಒಂದು ಪ್ರಮುಖ ವಾಸ್ತವಾಂಶವನ್ನು ಹೇಳುತ್ತಾನೆ: **"ದೇವರ ಭಯದಲ್ಲಿ ಜ್ಞಾನವನ್ನು ಕಂಡುಕೊಳ್ಳಬಹುದು".** ಒಂದು ವೇಳೆ ನಾವು ದೇವರ ಎಲ್ಲಾ ನಿಜವಾದ ತಿಳುವಳಿಕೆಯು, ದೇವರು ತನ್ನನ್ನು ನಮಗೆ ಪ್ರಕಟಿಸಿಕೊಳ್ಳುವಾಗ, ಆತನಿಗೆ ನಾವು ಗೌರವಯುತವಾಗಿ ವಿಧೇಯರಾಗುವುದರಿಂದ ಬರುತ್ತದೆಂಬುದನ್ನು ಅರಿತುಕೊಳ್ಳದೇ ಹೋದರೆ, ನಾವು ನೈತಿಕ ಶಿಸ್ತು ಮತ್ತು ಜ್ಞಾನವನ್ನು ತಿರಸ್ಕರಿಸುವ ಮೂರ್ಖರಾಗುತ್ತೇವೆ.

2. ನನ್ನ ಸತ್ಯವೇದ ಭಾಷಾಂತರದಲ್ಲಿ ನಾನು ವಚನ 2–4 ರಲ್ಲಿ ಜ್ಞಾನೋಕ್ತಿಗಳ ಉದ್ದೇಶಗಳನ್ನು ವಿವರಿಸುವ ಈ ಪದ ಮತ್ತು ಹೇಳಿಕೆಗಳನ್ನು ಕಂಡುಕೊಂಡೆನು:

   ಅ. ಜ್ಞಾನವನ್ನು ಪಡೆಯುವುದು (ವಚನ 2): ಇದು **"ಬೌದ್ಧಿಕ ತಿಳುವಳಿಕೆ"** ಮತ್ತು **"ಜೀವನದ ಕೌಶಲ್ಯ"** ಎಂಬುದನ್ನು ಸೂಚಿಸುತ್ತದೆ. ಜ್ಞಾನವು ಬೌದ್ಧಿಕ ಮತ್ತು ಪ್ರಾಯೋಗಿಕ ಅಂಶಗಳೆರಡನ್ನೂ ಸಹ ಒಳಗೊಂಡಿದೆ.

   ಆ. ಶಿಕ್ಷೆಯನ್ನು ಪಡೆಯುವುದು (ಶಿಸ್ತು) (ವಚನ 2): ಇದು **"ಜೀವನದ ಕೌಶಲ್ಯ"**ವನ್ನು ಸೂಚಿಸುತ್ತದೆ.

   ಇ. ಬುದ್ಧಿವಾದವನ್ನು ಗ್ರಹಿಸಿಕೊಳ್ಳುವುದು (ವಚನ 2): ಇದು ಬೌದ್ಧಿಕ ತಿಳುವಳಿಕೆಯನ್ನು ಸೂಚಿಸುತ್ತದೆ.

   ಈ. ಒಂದು ಶಿಕ್ಷಿತ (ಶಿಸ್ತಿನ) ಮತ್ತು ವಿವೇಕವುಳ್ಳ ಜೀವಿತವನ್ನು ಸಂಪಾದಿಸುವುದು (ವಚನ 3): ಇದು ಜೀವನದ ಕೌಶಲ್ಯವನ್ನು ಸೂಚಿಸುತ್ತದೆ.

   ಉ. ನೀತಿ ಮತ್ತು ನ್ಯಾಯವಾದುದ್ದನ್ನು ಮಾಡುವುದು (ವಚನ 3): ಇದು ಜೀವನದ ಕೌಶಲ್ಯವನ್ನು ಸೂಚಿಸುತ್ತದೆ.

   ಊ. ಮೂಢರಿಗೆ ಜಾಣತವನ್ನು ಕೊಡುವುದು (ವಚನ 4): ಇದು ಬೌದ್ಧಿಕ ಜ್ಞಾನ ಮತ್ತು ಜೀವನ ಕೌಶಲ್ಯವೆರಡನ್ನೂ ಸೂಚಿಸುತ್ತದೆ.

   ಋ. ಯೌವನಸ್ಥರಿಗೆ ತಿಳುವಳಿಕೆಯನ್ನೂ ಬುದ್ಧಿಯನ್ನೂ ಕೊಡುವುದು (ವಚನ 4): ಇದು ಬೌದ್ಧಿಕ ತಿಳುವಳಿಕೆ ಮತ್ತು ಜೀವನ ಕೌಶಲ್ಯವೆರಡನ್ನೂ ಸೂಚಿಸುವುದು. ಗಮನಿಸಿ: ಇವೆಲ್ಲವುಗಳಿಗೂ ಅಸ್ತಿವಾರವು **"ದೇವರ ಭಯ"**ವಾಗಿದೆ. ಅಂದರೆ ಎಲ್ಲಾ ಜ್ಞಾನವನ್ನು ದೇವರಿಗೆ ವಿಧೇಯರಾಗುವುದರ ಮೇಲೆ ಕಾಣಬಹುದಾಗಿದೆ. ಇದು ಜೀವನದ ಕೌಶಲ್ಯವಾಗಿದೆ. ಬೌದ್ಧಿಕ ಅಥವಾ ತತ್ವಶಾಸ್ತ್ರಕ್ಕಿಂತಲೂ ಹೆಚ್ಚಿನದಾಗಿದೆ.

3. ಸತ್ಯವೇದ ಭಾಷಾಂತರದಲ್ಲಿ ವಚನ 4–5 ರ ಪ್ರಕಾರ ಜ್ಞಾನೋಕ್ತಿಗಳು ಈ ರೀತಿ ವ್ಯಕ್ತಿಗತವಾಗಿದೆ:

   ಅ. ಮೂಢರಿಗೆ (ವಚನ 4): ಇವರು ಬುದ್ಧಿಹೀನರು (9:4), ಅನುಭವವಿಲ್ಲದವರಾಗಿದ್ದಾರೆ.

   ಆ. ಯೌವನಸ್ಥರಿಗೆ (ವಚನ 4): ಇವರಿಗೆ ಬೌದ್ಧಿಕ ಮತ್ತು ಪ್ರಾಯೋಗಿಕ ತಿಳುವಳಿಕೆ ಬೇಕಾಗಿದೆ. ಆಗ ಅವರು ಜ್ಞಾನವಂತರಾಗಿ ಯೋಚಿಸಿ ಮಾತನಾಡಬಹುದು.

   ಇ. ಜ್ಞಾನಿಗಳಿಗೆ (ವಚನ 5): ಇದರಿಂದ ಇವರು ಪಾಂಡಿತ್ಯ ಹೊಂದಿ ಇನ್ನೂ ಜ್ಞಾನಿಗಳಾಗಬಹುದು.

   ಈ. ವಿವೇಕಿಗಳಿಗೆ (ವಚನ 5): ಈಗಾಗಲೇ ಜ್ಞಾನಿಗಳಾಗಿದ್ದವರಿಗೆ ಸಹ ಮಾರ್ಗದರ್ಶನ ಬೇಕಾಗಿದೆ.

4. ಜ್ಞಾನೋಕ್ತಿ ಪುಸ್ತಕದಲ್ಲಿ ಯಾವ ರೀತಿಯ ಸಾಹಿತ್ಯವನ್ನು ಕಾಣಬಹುದು ಎಂಬುದನ್ನು ಸೂಚಿಸಲು ವಚನ 6 ರಲ್ಲಿ ಇಬ್ರಿಯ ಪದ್ಯವು ನಾಲ್ಕು ಪದಗಳನ್ನು ಒಳಗೊಂಡಿದೆ:

   ಅ. ಗಾದೆ (ಉದಾ: 1:7)

   ಆ. ಸಾಮ (ಉದಾ: 6:6–9)

   ಇ. ನುಡಿ (ಉದಾ: 32:17)

   ಈ. ಒಗಟು (ಉದಾ: 30:10–19)

ಮುನ್ನುಡಿ ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. –
2. ಇಲ್ಲಿ ನನ್ನದೇ ಆದ ಕೆಲವು ಆಲೋಚನೆಗಳಿವೆ: ಜೀವನವು ಬೌದ್ಧಿಕ ಜ್ಞಾನಕ್ಕಿಂತ ಪ್ರಾಮುಖ್ಯವಾದುದ್ದಾಗಿದೆ. ಅಳವಡಿಕೆ ಮತ್ತು ಜೀವನದ ಕಲೆಗಳು ಸಿದ್ಧಾಂತಕ್ಕಿಂತಲೂ ಪ್ರಾಮುಖ್ಯವಾಗಿದೆ. ನೈತಿಕ ಸ್ವಭಾವವು ನಮ್ಮ ಮಾತಿಗಿಂತಲೂ ಪ್ರಾಮುಖ್ಯವಾಗಿದೆ. ಅಲ್ಲದೆ: ಜ್ಞಾನವು ನಿಜವಾದ ದೇವರ ತಿಳುವಳಿಕೆ ಮತ್ತು ದೇವರಿಗೆ ಭಯಪಡುವುದರ ಮೇಲೆ ಆಧಾರಿತಗೊಂಡಿರಬೇಕು.

ಜ್ಞಾನದ ಮೊದಲ ವೈರಿ (ಅಧ್ಯಾಯ 1, 2, 4) – ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. 1:8–19 ರಲ್ಲಿ ಮಾತನಾಡುವವರು ಇವರಾಗಿದ್ದಾರೆ:

   ಅ. 1:8–10: ಬೋಧಕರು, ತಮ್ಮ ಯೌವನಸ್ಥ ವಿದ್ಯಾರ್ಥಿಗಳು ತಮ್ಮ ತಂದೆ ತಾಯಿಗಳಿಂದ ಪಡೆದ ಬೋಧನೆ ಮತ್ತು ಸಲಹೆಗಳನ್ನು ಸೂಚಿಸಿ ಮಾತನಾಡುವರು.

   ಆ. 1:11–14: ಗುಂಪಿನ ಸದಸ್ಯರು ಮಾತನಾಡುತ್ತಾರೆ.

   ಇ. 1:15–19: ಬೋಧಕರು ಮಾತನಾಡುತ್ತಾರೆ.

2. 1:8–19 ರಲ್ಲಿ ಬಳಸಲಾದ ರೂಪಾಲಂಕಾರಗಳು:

   ಅ. ಪುಷ್ಪಕಿರೀಟ ಮತ್ತು ಹಾರ (1:9): ತಂದೆತಾಯಿಗಳ ಬೋಧನೆಗಳು ಸುಂದರವಾಗಿದ್ದು ಅವು ಮಗನ ಜೀವನವನ್ನು ಸಿಂಗರಿಸುವವು.

   ಆ. ಜೀವದೊಡನೆ ನುಂಗಿಬಿಡುವ (1:12): ಗುಂಪಿನ ಸದಸ್ಯರು ನಿರಪರಾಧಿಯ ಜೀವವನ್ನು ಹಾಳು ಮಾಡುವರು.

   ಇ. ಪಕ್ಷಿಗಳ ಕಣ್ಣೆದುರು ಬಲೆಯನ್ನೊಡ್ಡುವುದು (1:17): ದುಷ್ಟ ಗುಂಪಿನ ಅಪರಾಧಗಳು ಮೂರ್ಖತನದಿಂದ ಕೂಡಿವೆ ಎಂದು ಬೋಧಕನು ಹೇಳುತ್ತಾನೆ. ಯಾವ ಬೇಟೆಗಾರನೂ ಸಹ ಹಕ್ಕಿಗಳಿಗೆ ಕಾಣುವಂತೆ ಬಲೆ ಹಾಕುವುದಿಲ್ಲ.

3. –

4. ಯೌವನಸ್ಥ ವಿದ್ಯಾರ್ಥಿಗಳು ಪಾಪಿಗಳ ಗುಂಪನ್ನು ಸೇರದಂತೆ ತಡೆಯಲು ಬೋಧಕನು ಬಳಸುವ ಅಂಶಗಳು ಇಂತಿವೆ:

   ಅ. ಗುಂಪು ಕಾರ್ಯಗಳು ದೀರ್ಘಕಾಲ ಸಫಲವಾಗುವುದಿಲ್ಲ (1:17–18).

   ಆ. ಗುಂಪುಗಾರರೇ ತಮ್ಮನ್ನು ಹಾಳು ಮಾಡಿಕೊಳ್ಳುತ್ತಾರೆ (1:18–19).

   ಇ. ಗುಂಪುಗಾರರ ಕಾರ್ಯಗಳು ಪಾಪಮಯವಾಗಿದ್ದು, ಹಿಂಸೆ ಮತ್ತು ರಕ್ತದಿಂದ ಕೂಡಿವೆ (1:16).

5. ದುಷ್ಟರ ಮಾರ್ಗಗಳನ್ನು ಬೋಧಕನು ಈ ರೀತಿಯಾಗಿ ವರ್ಣಿಸುತ್ತಾನೆ (2:12–15, 22):

   ಅ. ಅವರು ಕೆಟ್ಟದ್ದಾಗಿ ಮಾತನಾಡುತ್ತಾರೆ (ಅನೈತಿಕ, ಭ್ರಷ್ಟ, ದುಷ್ಟ, ಕೆಟ್ಟ).

   ಆ. ಅವರು ಕತ್ತಲಲ್ಲಿ ನಡೆಯುವುದಕ್ಕಾಗಿ ನೇರ ಮಾರ್ಗಗಳನ್ನು ತೊರೆಯುವರು (ಅವರ ಜೀವನ ಕೆಟ್ಟದ್ದಾಗಿ, ಪಾಪಮಯವಾಗಿರುತ್ತದೆ).

   ಇ. ಅವರು ಕೆಟ್ಟದ್ದನ್ನು ಮಾಡುವುದರಲ್ಲಿ ಸಂತೋಷಿಸುವರು.

   ಈ. ಅವರ ಮಾರ್ಗಗಳು ವಕ್ರವಾಗಿವೆ.

   ಉ. ಅವರು ದೇಶದೊಳಗಿಂದ ಕೀಳಲ್ಪಡುವರು. ಅಂದರೆ ಅವರಿಗೆ ಭವಿಷ್ಯವೇ ಇಲ್ಲ.

6. 4:10–19 ರಲ್ಲಿ "ತಂದೆಯ ಮಾತನ್ನು" ಕಾಣುತ್ತೇವೆ ಅವು ಈ ರೀತಿ ರಚಿಸಲ್ಪಟ್ಟಿವೆ:

   ಅ. ಕಂದಾ, (ವಚನ 10)

   ಆ. ನನ್ನ ಮಾತನ್ನು ಕೇಳು, (ವಚನ 10–13)

   ಇ. ನನ್ನ ಉಪದೇಶ ಹಿಡಿ, ಅವನ್ನು ಕಾಪಾಡಿಕೋ, (ವಚನ 13)

   ಈ. ದುಷ್ಟರ ಮಾರ್ಗದಿಂದ ದೂರವಾಗಿರು, (ವಚನ 14–17)

7. 4:10–19 ರಲ್ಲಿ ದುಷ್ಟರ ಮಾರ್ಗಗಳು ಈ ರೀತಿ ವರ್ಣಿಸಲ್ಪಟ್ಟಿವೆ:

   ಅ. ಯಾರಿಗಾದರೂ ಕೇಡು ಮಾಡದಿದ್ದರೆ ದುಷ್ಟರಿಗೆ ನೆಮ್ಮದಿಯಾಗುವುದಿಲ್ಲ (ವಚನ 16).

ಆ. ಅವರು ದುಷ್ಟತನ ಮತ್ತು ಹಿಂಸೆಯಲ್ಲಿಯೇ ಬದುಕುವರು (ವಚನ 17).

ಜ್ಞಾನದ ಮೊದಲ ವೈರಿ ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ಸಮಾನಾಂತರತೆಗೆ ಉದಾಹರಣೆಗಳು:

   ಅ. ಸಮಾನಾರ್ಥಕ ಸಮಾನಾಂತರತೆ, ವಚನ 1:8 ಈ ವಚನದ ಎರಡು ಭಾಗಗಳು ಸಮಾನಾರ್ಥಕವಾಗಿವೆ. "ತಂದೆ" ಮತ್ತು "ತಾಯಿ" ತದ್ವಿರುದ್ಧವಲ್ಲ. ಅವರಿಬ್ಬರೂ ಪೋಷಕರಾಗಿದ್ದಾರೆ. "ಉಪದೇಶ" ಮತ್ತು "ಬೋಧನೆ" ಎರಡೂ ಸಮಾನಾರ್ಥಕಗಳಾಗಿವೆ.

   ಆ. ವಚನ 1:9 ಸಹ ಸಮಾನಾರ್ಥಕ ಸಮಾನಾಂತರತೆಯಾಗಿದೆ.

   ಇ. ವಚನ 16: ಸಂಯೋಜಿತ ಸಮಾನಾಂತರತೆಯಾಗಿದೆ. ಇದು ವಿದ್ಯಾರ್ಥಿಗಳು ಯಾಕೆ ಪಾಪಿಗಳ ಆಮಂತ್ರಣವನ್ನು ತಿರಸ್ಕರಿಸಬೇಕೆಂಬುದಕ್ಕೆ ಕಾರಣಗಳನ್ನು ಕೊಡುತ್ತದೆ.

ಜ್ಞಾನದ ಮೊದಲ ವೈರಿ ಅಸೈನ್‌ಮೆಂಟ್‌ಗೆ ಮಾಹಿತಿ

ಅಧ್ಯಾಯ 1–7 ರಲ್ಲಿ ಹತ್ತು "ತಂದೆಯ ಮಾತು" ಗಳನ್ನು ಕಾಣಬಹುದು. ನಾನು ಈ ರೀತಿಯ ಶೀರ್ಷಿಕೆ ಮತ್ತು ರಚನೆಗಳನ್ನು ಸೂಚಿಸುತ್ತೇನೆ.

1. ದುಷ್ಟ ಜನರ ಗುಂಪು, 1:8–19

   ಅ. ವಚನ 8

   ಆ. ವಚನ 8

   ಇ. ವಚನ 9

   ಈ. ವಚನ 10–15

   ಉ. ವಚನ 16–19

2. ದುಷ್ಟ ಜನರನ್ನು ಮತ್ತು ಜಾರಸ್ತ್ರೀಯ ಶೋಧನೆಯಿಂದ ದೂರವಿರಬೇಕೆಂಬ ಮಾತು, 2:1–22

   ಅ. ವಚನ 1

   ಆ. ವಚನ 1–5

   ಇ. ವಚನ 4, 6, 7–12

   ಈ. ವಚನ 9, 12, 16–19

   ಉ. ವಚನ 21–22

3. ದೇವರಿಗಾಗಿನ ಕಾರ್ಯದ ಬಗೆಗಿನ ಮಾತು, 3:1–12

   ಅ. ವಚನ 1

   ಆ. ವಚನ 1

   ಇ. ವಚನ 3–4

   ಈ. ವಚನ 9–12

   ಉ. ವಚನ 10, 11

4. ನೆರೆಯವರಿಗಾಗಿನ ಕರ್ತವ್ಯದ ಬಗೆಗಿನ ಮಾತು, 3:21–35

   ಅ. ವಚನ 21

ಆ. ವಚನ 21

ಇ. ವಚನ 22

ಈ. ವಚನ 23, 24, 26, 27–31

ಉ. ವಚನ 32–35

5. ಜ್ಞಾನದ ಬಗೆಗಿನ ಮಾತು, 4:1–9

ಅ. ವಚನ 1

ಆ. ವಚನ 1–2

ಇ. ವಚನ 9

ಈ. ವಚನ 3–7

ಉ. ವಚನ 8

6. ದುಷ್ಟರ ಮಾರ್ಗದಿಂದ ದೂರವಿರಬೇಕೆಂಬ ಮಾತು, 4:10–19

ಅ. ವಚನ 10

ಆ. ವಚನ 10

ಇ. ವಚನ 13

ಈ. ವಚನ 14–17

ಉ. ವಚನ 18–19

7. ಜಾಗರೂಕತೆಯ ಬಗ್ಗೆ ಮಾತು, 4:20–27

ಅ. ವಚನ 20

ಆ. ವಚನ 20

ಇ. ವಚನ 21–22

ಈ. ವಚನ 23–27

ಉ. ವಚನ 26

8. ಲೈಂಗಿಕ ಅನೈತಿಕತೆಯ ಅಪಾಯಗಳ ಕುರಿತಾದ ಮಾತು, ವಚನ 5:1–23

ಅ. ವಚನ 1

ಆ. ವಚನ 1

ಇ. ವಚನ 2

ಈ. ವಚನ 3–20

ಉ. ವಚನ 21–23

9. ಜಾರಸ್ತ್ರೀಯಿಂದ ದೂರವಿರಬೇಕೆಂಬ ಮಾತು, 6:20–35

ಅ. ವಚನ 20

ಆ. ವಚನ 20

ಇ. ವಚನ 21

ಈ. ವಚನ 23–26

ಉ. ವಚನ 27–35

10. ಶೋಧಕಳ ಮಾರ್ಗದಲ್ಲಿ ಹೋಗಬಾರದೆಂಬುದರ ಬಗೆಗಿನ ಮಾತು, 7:1–27

ಅ. ವಚನ 1

ಆ. ವಚನ 1

ಇ. ವಚನ 3

ಈ. ವಚನ 25, 6–23

ಉ. ವಚನ 27

ಜ್ಞಾನದ ಎರಡನೇ ವೈರಿ (ಅಧ್ಯಾಯ 1, 5, 6, 7) – ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. "ಯಾಕೆ ಜಾರಸ್ತ್ರೀಯ ಮನೆಯು ಪಾತಾಳಕ್ಕೆ ಇಳಿಯುವ ದಾರಿ" ಎಂಬುದನ್ನು ಹಿಂದಿನ ಎರಡು ವಚನಗಳಿಂದ ಆಕೆಯ ಬಗ್ಗೆ ಪಡೆಯುವ ಮಾಹಿತಿಗಳಿಂದ ನಾವು ತಿಳಿದುಕೊಳ್ಳಬಹುದು. ನಮ್ಮ ಸತ್ಯವೇದದಲ್ಲಿನ "ಜಾರಸ್ತ್ರೀ" ಎಂಬ ಪದವು "ಅವಿವೇಕಿ ಹೆಂಗಸು" ಎಂಬ ಅರ್ಥಕೊಡುವ ಇಬ್ರಿಯ ಹೇಳಿಕೆಯ ಭಾಷಾಂತರವಾಗಿದೆ. ಎರಡು ವಿಧದಲ್ಲಿ ಈ ಸ್ತ್ರೀಯು ಅವಿವೇಕಿ ಸ್ತ್ರೀ ಎಂಬುದಾಗಿ ಅರ್ಥೈಸಿಕೊಳ್ಳಬಹುದು:

   - ಅವಳು ತನ್ನ ಗಂಡನನ್ನು ಬಿಟ್ಟವಳಾಗಿದ್ದಾಳೆ ಮತ್ತು ಆಕೆಯ ವಿವಾಹ ಮುರಿದುಬಿಟ್ಟಿದೆ (2:17). ಈಗ ಆಕೆ ಅವಿವೇಕಿ ಜೀವನ ಶೈಲಿಯಲ್ಲಿ ಮತ್ತು ಲೈಂಗಿಕ ಅನೈತಿಕತೆಯಲ್ಲಿ ಭಾಗಿಯಾಗಿದ್ದಾಳೆ.

   - ದೇವರ ಮುಂದೆ ಮಾಡಿಕೊಂಡ ಒಡಂಬಡಿಕೆಯನ್ನೂ ಸಹ ಆಕೆ ತಿರಸ್ಕರಿಸಿದ್ದಾಳೆ (2:17), ಕೇವಲ ಮದುವೆಯ ಒಡಂಬಡಿಕೆಯನ್ನಷ್ಟೇ ಅಲ್ಲ, ಆತ್ಮೀಕ ಒಡಂಬಡಿಕೆಯನ್ನೂ ಸಹ ಮುರಿದಿದ್ದಾಳೆ. ಈಗ ಆಕೆ ಎಂದಿಗೂ ದೇವಜನರ ಗುಂಪಿಗೆ ಮತ್ತು ದೇವರಿಗೆ ಸೇರಿದವಳಲ್ಲ. ತನ್ನ ಆತ್ಮೀಕ ಅವಿವೇಕತನದ ನಿಮಿತ್ತ ಆಕೆಗೆ ದೇವರಲ್ಲಿ ಯಾವುದೇ ಜೀವವಿಲ್ಲ ಮತ್ತು ಆಕೆಯ ಅಂತ್ಯವು ಮರಣವಾಗಿದೆ (2:18). ಪರಿಣಾಮವಾಗಿ ಆಕೆಯೊಂದಿಗೆ ಲೈಂಗಿಕವಾಗಿ ಪಾಲ್ಗೊಂಡವನು ಆತ್ಮೀಕವಾಗಿ ಸಹ ಆಕೆಯೊಂದಿಗೆ ಸೇರಿಕೊಂಡು, ಜೀವಮಾರ್ಗಕ್ಕೆ ಆತನು ಹಿಂತಿರುಗುವುದಿಲ್ಲ (2:19).

2. ಜಾರಸ್ತ್ರೀಯು 5:3–6 ರಲ್ಲಿ ಈ ರೀತಿಯಾಗಿ ವರ್ಣಿಸಲ್ಪಟ್ಟಿದ್ದಾಳೆ:

   ಅ. ಆಕೆಯು ಸುಂದರ ಮತ್ತು ಶೋಧನೆಯ ಪದಗಳಿಂದ ನಯವಾಗಿ ಮಾತನಾಡುತ್ತಾಳೆ, 5:3.

   ಆ. ಆಕೆ ಹೇಳುವುದನ್ನು ನೀವು ನಂಬಿದರೆ ಸಂಕಟದಲ್ಲಿ ಬೀಳಬೇಕಾಗುತ್ತದೆ, 5:4.

   ಇ. ಆಕೆಯ ಅಂತ್ಯವು ಮರಣ ಮತ್ತು ನಾಶನವಾಗಿದೆ, 5:5.

   ಈ. ಆಕೆ ಯೋಚನಾರಹಿತಳು ಮತ್ತು ತನ್ನ ಮಾರ್ಗವು ತಪ್ಪಾಗಿದೆ ಮತ್ತು ಪಾಪಮಯವಾಗಿದೆ ಎಂಬುದನ್ನು ಆಕೆ ಗ್ರಹಿಸದವಳಾಗಿದ್ದಾಳೆ, 5:6.

3. ಯೌವನಸ್ಥನು ಜಾರಸ್ತ್ರೀಯ ಬಳಿಗೆ ಹೋಗಬಾರದೆಂಬುದಕ್ಕೆ 5:7–14 ರಲ್ಲಿನ ಕಾರಣಗಳು ಇಂತಿವೆ:

   ಅ. ಅವರು ತಮ್ಮ ಜೀವವನ್ನು ಹಾಳುಮಾಡಿಕೊಂಡು ತಮ್ಮ ಸಂಪತ್ತನ್ನು ಪರರ ಪಾಲು ಮಾಡಿಕೊಳ್ಳಬೇಕಾಗುತ್ತದೆ, 5:9–10

   ಆ. ತದನಂತರ ತಾವು ಮಾಡಿದ್ದಕ್ಕಾಗಿ ಪಶ್ಚಾತ್ತಾಪಪಡಬೇಕಾಗುತ್ತದೆ, 5:11

   ಇ. ತಮ್ಮ ಜ್ಞಾನದ ಬೋಧಕರುಗಳಿಗೆ ಕಿವಿಗೊಡಲಿಲ್ಲವಲ್ಲಾ ಎಂದು ಮರುಗಬೇಕಾಗುತ್ತದೆ, 5:12–13

   ಈ. ಸ್ಥಳೀಯ ಸಮುದಾಯದ (ಸಭೆ) ಮುಂದೆ ಹೆಸರನ್ನು ಕಳೆದುಕೊಳ್ಳಬೇಕಾಗುತ್ತದೆ, 5:14

4. ಯೌವನಸ್ಥನು ತನ್ನ ಲೈಂಗಿಕ ಸುಖವನ್ನು ಮದುವೆಯ ಚೌಕಟ್ಟಿನೊಳಗೆ ಇಟ್ಟುಕೊಳ್ಳಬೇಕೆಂಬುದನ್ನು ಪ್ರಬೋಧಿಸಲು 5:15–17 ರಲ್ಲಿ ತಿಳಿಸಲಾದ "ನೀರಿನ ರೂಪಾಲಂಕಾರ" ಗಳು ಇವಾಗಿವೆ:

   ಅ. ಕೊಳ ಮತ್ತು ಬಾವಿ (5:15) ಇವೆರಡು ಆತನ ಹೆಂಡತಿಗಾಗಿನ ರೂಪಾಲಂಕಾರಗಳು.

   ಆ. ಒರತೆ ಮತ್ತು ಕಾಲುವೆಗಳು (5:16) ಇವೂ ಸಹ ಆತನ ಹೆಂಡತಿಗಾಗಿನ ರೂಪಾಲಂಕಾರಗಳು.

   ಇ. ಬೈಲಿನಲ್ಲಿ ಮತ್ತು ಚೌಕದಲ್ಲಿ ಹರಿಯಬಾರದು. "ಪರರು ನಿನ್ನೊಂದಿಗೆ ಸೇರಿ ಕುಡಿಯಬಾರದು" (5:17). ಅಂದರೆ ಲೈಂಗಿಕ ಕ್ರಿಯೆಯು ವೈವಾಹಿಕ ಚೌಕಟ್ಟಿನೊಳಗೆ ನಡೆಯಬೇಕು.

5. ವೈವಾಹಿಕ ಪ್ರೀತಿಯು 5:18–19 ರಲ್ಲಿ ಈ ರೀತಿಯಾಗಿ ತಿಳಿಸಲ್ಪಟ್ಟಿದೆ:

   ಅ. ಅದು ಆನಂದಕರವಾಗಿದೆ, ವಚನ 18

ಆ. ಅದು ದೈಹಿಕವಾದುದ್ದಾಗಿದೆ, ವಚನ 19 (ಪ್ರೀತಿಗಾಗಿ ಬಳಸಲಾದ ಇಬ್ರಿಯ ಪದವು ಇಲ್ಲಿ "ಲೈಂಗಿಕ ಕ್ರಿಯೆ" ಎಂಬುದಾಗಿ ಅರ್ಥೈಸುತ್ತದೆ).

6. ಯೌವನಸ್ಥನು ಜಾರಸ್ತ್ರೀಯನ್ನು ಬಿಟ್ಟು ತನ್ನ ಪತ್ನಿಯನ್ನು ಆರಿಸಿಕೊಳ್ಳಲು ಸಹಾಯಿಸಲು 5:20–23 ರಲ್ಲಿ ಬೋಧಕನು ಈ ವಾದ/ಉಪದೇಶಗಳನ್ನು ಬಳಸುತ್ತಾನೆ:

ಅ. ದೇವರಿಗೆ ಪ್ರತಿಯೊಬ್ಬರ ಮಾರ್ಗ ತಿಳಿದಿದೆ, ಆತನಿಗೆ ಮರೆಯಾದದ್ದು ಒಂದೂ ಇಲ್ಲ. ಆತನು ಪ್ರತಿಯೊಬ್ಬರ ಜೀವನ ಶೈಲಿಯನ್ನು ಪರೀಕ್ಷಿಸುತ್ತಾನೆ (5:21).

ಆ. ಅನೈತಿಕ ಜೀವನ ಶೈಲಿಯು ಒಬ್ಬ ಯೌವನಸ್ಥನನ್ನು ಬೀಳಿಸುತ್ತವೆ ಮತ್ತು ನಂತರ ಆತನು ಅದಕ್ಕೆ ದಾಸನಾಗುವನು (5:22).

ಇ. ಆತನ ನೈತಿಕ ಜೀವನಕ್ಕೆ ಪರಿಣಾಮವಿದೆ: ಆತನಿಗೆ ನೈತಿಕ ಶಿಸ್ತು ಇಲ್ಲದಿದ್ದರೆ ಆತನು ಸಾಯುತ್ತಾನೆ (5:23).

7. 6:20–35 ರ ವಚನ ಭಾಗವನ್ನು "ನನ್ನ ಸತ್ಯವೇದ" ಭಾಷಾಂತರದಲ್ಲಿ "ವ್ಯಭಿಚಾರಕ್ಕೆ ವಿರುದ್ಧವಾಗಿ ಎಚ್ಚರಿಕೆ" ಎಂದು ಕರೆಯಲಾಗಿದೆ:

ಅ. ಈ ವಾಕ್ಯಭಾಗವನ್ನು ಈ ರೀತಿಯಾಗಿ ರಚನೆ ಮಾಡಬಹುದು:

- ತಂದೆತಾಯಿಗಳ ಆಜ್ಞೆ ಮತ್ತು ಉಪದೇಶವನ್ನು ಕೈಗೊಳ್ಳಬೇಕೆಂದು ಬೋಧಕನು ತನ್ನ ಯೌವನಸ್ಥ ವಿದ್ಯಾರ್ಥಿಯನ್ನು ಎಚ್ಚರಿಸುತ್ತಾನೆ (6:20–21).
- ತಂದೆತಾಯಿಯ ಬೋಧನೆಯು ಯೌವನಸ್ಥ ವಿದ್ಯಾರ್ಥಿಯನ್ನು ನಡೆಸುವುದು ಮತ್ತು ಮಾರ್ಗದರ್ಶಿಸುವುದು (6:22–23).
- ಆತನ ತಂದೆತಾಯಿಯ ಉಪದೇಶವು ಆತನನ್ನು ಕೆಟ್ಟ ಹೆಂಗಸಿನಿಂದ ದೂರವಿರಿಸುವುದು, 6:24.
- ವೇಶ್ಯಾವಾಟಿಕೆಗೆ ವಿರುದ್ಧವಾಗಿ ಎಚ್ಚರಿಕೆ ಮತ್ತು ವ್ಯಭಿಚಾರದ ಅಪಾಯಗಳ ವರ್ಣನೆ, (6:25–35).

ಆ. ವಚನ 27–28 ರಲ್ಲಿರುವ ಉದಾಹರಣೆಗಳು:

- ಇಲ್ಲಿ ಎರಡು ಉದಾಹರಣೆಗಳಿವೆ:
  - ಮಡಿಲಲ್ಲಿ ಬೆಂಕಿಯಿಟ್ಟುಕೊಂಡರೆ ಬಟ್ಟೆ ಸುಡುತ್ತದೆ.
  - ಧಗಧಗಿಸುವ ಕೆಂಡದ ಮೇಲೆ ನಡೆದರೆ ಕಾಲು ಸುಡುತ್ತದೆ.
- ಒಬ್ಬ ಪುರುಷನು ಪರಸ್ತ್ರೀಯೊಂದಿಗೆ ವ್ಯಭಿಚಾರ ಮಾಡಿದರೆ ಅದರ ಘೋರ ಪರಿಣಾಮ ಎದುರಿಸಬೇಕಾಗುತ್ತದೆಂಬ ಸತ್ಯವನ್ನು ಈ ಉದಾಹರಣೆಗಳು ತಿಳಿಸುತ್ತವೆ.

ಇ. ವ್ಯಭಿಚಾರವನ್ನು ಬೋಧಕನು ಕಳ್ಳತನಕ್ಕೆ ಹೋಲಿಸುತ್ತಾನೆ, 6:30–35:

- ಕಳ್ಳನು ಹಸಿವೆಯನ್ನು ನೀಗಿಸಲು ಕಳವು ಮಾಡಿದರೆ ಅದನ್ನು ಕ್ಷಮಿಸಬಹುದು, ಆದರೆ ವ್ಯಭಿಚಾರವನ್ನು ಕ್ಷಮಿಸಲಾಗುವುದಿಲ್ಲ.
- ಕಳ್ಳನನ್ನು ಹಿಡಿದರೆ ಆತನು ದಂಡವನ್ನು ಕಟ್ಟಬಹುದು, ಆದರೆ ವ್ಯಭಿಚಾರಕ್ಕೆ ಎಂದಿಗೂ ದಂಡ ಕಟ್ಟಲೂ ಸಾಧ್ಯವಿಲ್ಲ.
- ವ್ಯಭಿಚಾರಿಯ ನಾಚಿಕೆ ಮತ್ತು ಅವಮಾನವನ್ನು ತೆಗೆದುಹಾಕಲು ಸಾಧ್ಯವಿಲ್ಲ. ಸದಾಕಾಲ ಆತನ ಹೆಸರು ಕೆಟ್ಟುಹೋಗುವುದು.

8. 7:1–27 ರಲ್ಲಿ "ತಂದೆಯ ಮಾತು" ಗಳನ್ನು ಈ ರೀತಿಯಾಗಿ ರಚನೆ ಮಾಡಬಹುದು:

ಅ. "ನನ್ನ ಕಂದಾ", ವಚನ 1

ಆ. ಆಜ್ಞೆಗಳನ್ನು ಪಾಲಿಸಬೇಕೆಂಬ ಪ್ರಬೋಧನೆ, ವಚನ 1–4

ಇ. ಆಜ್ಞೆಗಳನ್ನು ಪಾಲಿಸುವುದರ ಪ್ರಯೋಜನಗಳು, ವಚನ 2–5

ಈ. ಮುಖ್ಯ ವಿಷಯ ವಸ್ತು: ವೇಶ್ಯಾಸ್ತ್ರೀಯ ಅನೇಕ ವ್ಯಾಮೋಹದ ಮಾರ್ಗಗಳು, ವಚನ 6–23

ಉ. ವೇಶ್ಯಾಸ್ತ್ರೀಗೆ ಒಪ್ಪಿಸಿಕೊಡುವುದರ ಫಲಿತಾಂಶ ಮರಣ ಮತ್ತು ಸಮಾಧಿಯಾಗಿದೆ, ವಚನ 27

9. 7:1–27 ರ ವಿವಿಧ ಭಾಗಗಳಲ್ಲಿ ಮಾತನಾಡುವವರು ಇವರಾಗಿದ್ದಾರೆ:

ಅ. ಬೋಧಕ/ತಂದೆಯು ಮಗನೊಂದಿಗೆ ಮಾತನಾಡುವುದು, ವಚನ 1–5

ಆ. ಬೋಧಕ/ತಂದೆಯು ತನ್ನ ಮಗನಿಗೆ ಒಬ್ಬ ಯೌವನಸ್ಥನ ಮತ್ತು ಜಾರಸ್ತ್ರೀಯ ಕಥೆಯನ್ನು ಹೇಳುತ್ತಾನೆ, ವಚನ 6–23.

- "ಕಥೆಯ ಜಾರಸ್ತ್ರೀಯು ಒಬ್ಬ ಯೌವನಸ್ಥನೊಂದಿಗೆ ಮಾತನಾಡುತ್ತಾಳೆ, ವಚನ 14–20.

ಇ. ಬೋಧಕ/ತಂದೆಯು ಮಗನನ್ನು ಮತ್ತು ಇತರ ಯೌವನಸ್ಥರನ್ನು ಎಚ್ಚರಿಸುತ್ತಾನೆ, ವಚನ 24–27.

10. ವಚನ 3–4 ರಲ್ಲಿ 4 ರೂಪಾಲಂಕಾರಗಳಿವೆ: ಪ್ರತೀ ವಚನದಲ್ಲೂ ಸಮಾನಾರ್ಥಕ ಸಮಾನಾಂತರತೆಗಳಿವೆ. ಪ್ರತೀ ವಚನದಲ್ಲಿನ ರೂಪಾಲಂಕಾರಗಳು ಸಹ ಒಂದೇ ಅರ್ಥವನ್ನು ಕೊಡುತ್ತವೆ:

ಅ. ವಚನ 3 ರಲ್ಲಿನ ರೂಪಾಲಂಕಾರಗಳು (ಬೆರಳಿಗೆ ಉಂಗುರವಾಗಿ ಇಟ್ಟುಕೊಳ್ಳುವುದು ನಮಗೆ ಪ್ರಾಮುಖ್ಯವಾದುದ್ದನ್ನು ನೆನಪು ಮಾಡಿಕೊಳ್ಳುವಂತೆ ಇಟ್ಟಕೊಳ್ಳುವುದು ಮತ್ತು **"ಹೃದಯದ ಹಲಗೆಯಲ್ಲಿ ಬರೆ"** ಎಂಬುದು ಸಹ ಅವನ್ನು ಮರೆಯುವುದಿಲ್ಲ ಎಂಬರ್ಥವಾಗಿ ಇವೆರಡರ ಅರ್ಥ ಸಹ **"ನೆನಪಿನಲ್ಲಿಟ್ಟುಕೋ"** ಎಂಬುದಾಗಿದೆ.

ಆ. ವಚನ 4 ರಲ್ಲಿನ ರೂಪಾಲಂಕಾರಗಳು (ಜ್ಞಾನವು ನಿನ್ನ ಅಕ್ಕ ಮತ್ತು ವಿವೇಕವು ಆಪ್ತಮಿತ್ರಳು) ಇವೆರಡೂ ಸಹ ಜ್ಞಾನ/ತಿಳುವಳಿಕೆಯನ್ನು ನಿಮ್ಮ ಅತೀ ಆಪ್ತ ಸಂಗಾತಿಯನ್ನಾಗಿ ಮಾಡಿಕೋ ಎಂದರ್ಥವಾಗಿದೆ.

11. ಈ ರೀತಿಯಲ್ಲಿ ಜಾರಸ್ತ್ರೀಯು ಒಬ್ಬ ಯೌವನಸ್ಥನನ್ನು ಮೋಹಿಸುತ್ತಾಳೆ, 7:6–23:

ಅ. ಆಕೆ ವೇಶ್ಯಾ ವಸ್ತ್ರ ಧರಿಸುತ್ತಾಳೆ, ವಚನ 10

ಆ. ಆಕೆ ಆತನನ್ನು ಹಿಡಿದುಕೊಂಡು ಮುದ್ದಾಡುತ್ತಾಳೆ, ವಚನ 13

ಇ. ಮನೆಯಲ್ಲಿ ಯಾವುದೇ ಗೊಂದಲವಿಲ್ಲದೆ ಕಾಮ ಸುಖವನ್ನು ಪಡಬಹುದೆಂಬ ಭರವಸೆ ಕೊಟ್ಟು ಅನೇಕ ವರ್ಣರಂಜಿತ ಮಾತುಗಳಿಂದ ಆತನನ್ನು ಪ್ರೇರಿಸಿ ತನ್ನ ಮನೆಗೆ ಕರಕೊಂಡು ಹೋಗುತ್ತಾಳೆ.

12. ಬೋಧಕನು/ತಂದೆಯು ಜಾರಸ್ತ್ರೀಯ ಬಗ್ಗೆ ಯೌವನಸ್ಥನಿಗೆ ಎಚ್ಚರಿಸಲು 7:24–27 ರಲ್ಲಿ ಈ ರೀತಿಯ ಎಚ್ಚರಿಕೆ ಸಮರ್ಥನೆಗಳನ್ನು ಬಳಸುತ್ತಾನೆ:

ಅ. ಅನೇಕರು ಜಾರಸ್ತ್ರೀಯ ಶೋಧನೆಗೆ ಬಿದ್ದು ಹಾಳಾಗಿದ್ದಾರೆ, ವಚನ 26

ಆ. ಆ ಅಪರಾಧಿಗಳ ಜೀವನವು ನಾಶವಾಗಿದೆ, ವಚನ 26

ಇ. ಜಾರಸ್ತ್ರೀಯ ಬಳಿಗೆ ಹೋಗುವುದು ಮರಣಕ್ಕೆ ನಡೆಸುತ್ತದೆ, ವಚನ 27

ಜ್ಞಾನದ ಮೂರನೇ ಮತ್ತು ನಾಲ್ಕನೇ ವೈರಿಗಳು (ಅಧ್ಯಾಯ 1–7) – ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಶಿಕ್ಷಕನು ಸೋಮಾರಿಗೆ ತಿಳಿಹೇಳಲು ಇರುವೆಯ ಉದಾಹರಣೆಯನ್ನು ಕೊಡುತ್ತಾನೆ (6:6–9).

   ಅ. ಇರುವೆಯ ಜೀವನ ಮತ್ತು ಕೆಲಸವು ಸೋಮಾರಿಯ ಜೀವನ ಮತ್ತು ಕೆಲಸಕ್ಕಿಂತ ಸಂಪೂರ್ಣವಾಗಿ ವಿಭಿನ್ನವಾಗಿರುತ್ತದೆ.

   ಆ. ಏನು ಮಾಡಬೇಕೆಂದು ಹೇಳಲು ಇರುವೆಗೆ ಅರಸ/ಪ್ರಭುವಿಲ್ಲ, ಆದರೆ ಯೌವನಸ್ಥನು ಪ್ರಭು/ಅರಸನಿಗೆ ವಿಧೇಯನಾಗಿ, ಸೇವೆ ಮಾಡುವುದಕ್ಕಾಗಿ ತರಬೇತಿ ಹೊಂದುತ್ತಾನೆ.

   ಇ. ಭವಿಷ್ಯತ್ತಿಗಾಗಿ ಸಿದ್ಧಪಡಿಸಲು ಇರುವೆಯು ಕಷ್ಟಪಟ್ಟು ದುಡಿಯುತ್ತದೆ, ಆದರೆ ಯೌವನಸ್ಥನು ಸೋಮಾರಿಯಾಗಿದ್ದು ಕಷ್ಟಪಟ್ಟು ದುಡಿಯಲು, ಭವಿಷ್ಯತ್ತಿಗಾಗಿ ಸಿದ್ಧಗೊಳ್ಳಲು ಇಷ್ಟಪಡುವುದಿಲ್ಲ.

2. 6:11 ಒಂದು ಸಮಾಂತರ ಸಮಾನಾಂತರತೆಯನ್ನು ಒಳಗೊಂಡಿದೆ. ಈ ಎರಡು ಉಪಮೆಗಳು ಸಹ ಒಂದೇ ಅರ್ಥವನ್ನು ಕೊಡುತ್ತವೆ (ದಾರಿಗಳ್ಳನಂತೆ, ಪಂಜುಗಳ್ಳನಂತೆ): ಒಂದು ವೇಳೆ ಯೌವನಸ್ಥನು ಸೋಮಾರಿಯಾಗಿ ಮುಂದುವರೆದರೆ ಆತನು ಬಡತನ/ಕೊರತೆಗಳಿಗೆ ಸಿಲುಕಬೇಕಾಗುತ್ತದೆ.

3. 6:7–11 ರಲ್ಲಿ ಪ್ರತೀ ವಚನ ಸಹ ಒಂದೊಂದು ಸಮಾಂತರ ಸಮಾನಾಂತರತೆಯನ್ನು ಒಳಗೊಂಡಿದೆ (ಕನ್ನಡ ಭಾಷಾಂತರದಲ್ಲಿ ಸ್ಪಷ್ಟವಾಗಿಲ್ಲ). ವಾಕ್ಯಭಾಗದ ಪದ್ಯರೂಪಿ ರಚನೆ ಈ ರೀತಿಯಾಗಿದೆ:

   ಅ. ವಚನ 7: **“ನಾಯಕ”** ಮತ್ತು **“ಪ್ರಭು ಅಥವಾ ಅಧಿಕಾರಿ”** ಸಮಾನಾರ್ಥಕಗಳಾಗಿವೆ.

   ಆ. ವಚನ 8: **“ಸುಗ್ಗಿಯಲ್ಲಿ ತೀನಿಯನ್ನು ಕೂಡಿಸುವುದು”**, ಕೊಯ್ಲಿನ ಕಾಲದಲ್ಲಿ ಸಂಗ್ರಹಿಸಿಟ್ಟುಕೊಳ್ಳುವುದಕ್ಕೆ ಸಮಾನಾರ್ಥಕವಾಗಿದೆ.

   ಇ. ವಚನ 9 ರಲ್ಲಿನ ಎರಡು ಸಾಲು ಸಮಾನಾರ್ಥಕಗಳಾಗಿವೆ.

   ಈ. ವಚನ 11: ಬಡತನ ಮತ್ತು ಕೊರತೆ, ದಾರಿಗಳ್ಳನಂತೆ ಮತ್ತು ಪಂಜುಗಳ್ಳನಂತೆ ಇವೆರಡೂ ಸಮಾನಾರ್ಥಕ ಸಮಾನಾಂತರತೆಗಳಾಗಿವೆ.

4. ಅಧ್ಯಾಯ 1 ರಲ್ಲಿನ ವಾಕ್ಯಭಾಗದಿಂದ ಈ ತೀರ್ಮಾನಕ್ಕೆ ಬರಬಹುದು: ಮಗನು ತಂದೆಯ ಉಪದೇಶವನ್ನು ಕೇಳದೆ, ತಾಯಿಯ ಬೋಧನೆಯನ್ನು ತೊರೆದರೆ ಮತ್ತು ಜ್ಞಾನದ ಕರೆಯನ್ನು ತಿರಸ್ಕರಿಸಿ, ಆಕೆಯ ಉಪದೇಶವನ್ನು ಅಲಕ್ಷಿಸಿದರೆ ಆತನ ಜೀವನವು ದುರಂತದಲ್ಲಿ ಅಂತ್ಯಗೊಳ್ಳುತ್ತದೆ.

5. ಅಧ್ಯಾಯ 3 ರಲ್ಲಿನ ವಚನಗಳಿಂದ ಈ ತೀರ್ಮಾನಕ್ಕೆ ಬರಬಹುದು: ತಂದೆಯ ಉಪದೇಶವನ್ನು ಮರೆಯಬಾರದೆಂದು ಮಗನಿಗೆ ಪ್ರಬೋಧಿಸಲಾಗಿದೆ ಮತ್ತು ಆತನು ತನ್ನ ಬೋಧಕನ ಆಜ್ಞೆಗಳನ್ನು ಪಾಲಿಸಬೇಕೆಂದು ಕೇಳಿಕೊಳ್ಳಲಾಗಿದೆ. ಅಲ್ಲದೆ ದೇವರ ಶಿಕ್ಷೆ ಮತ್ತು ಗದರಿಕೆಯನ್ನು ತಾತ್ಸಾರ ಮಾಡಬಾರದೆಂದು ಆತನಿಗೆ ತಿಳಿಸಲಾಗಿದೆ. ಆದರೆ ಒಂದು ವೇಳೆ ಆತನು ಆ ರೀತಿ ಮಾಡಿದರೆ ಆತನು ಗರ್ವಿಷ್ಠ ಕುಚೋದ್ಯಗಾರನಾಗುತ್ತಾನೆ.

6. ಅಧ್ಯಾಯ 5 ರ ವಚನಗಳಿಂದ (ವಾಕ್ಯಭಾಗ) ಈ ತೀರ್ಮಾನಕ್ಕೆ ಬರಬಹುದು: ಇಲ್ಲಿ ತನ್ನ ಬೋಧಕನ ಜ್ಞಾನೋಪದೇಶಕ್ಕೆ ಕಿವಿಗೊಡಬೇಕೆಂದು ಮಗನಿಗೆ ಪ್ರಬೋಧಿಸಲಾಗಿದೆ. ಒಂದು ವೇಳೆ ಆತನು ಈ ರೀತಿ ಪಾಲಿಸದಿದ್ದರೆ ನಂತರ ತನ್ನ ಜೀವನದಲ್ಲಿ ತನ್ನ ಬೋಧಕರಿಗೆ ವಿಧೇಯನಾಗಲಿಲ್ಲವಲ್ಲಾ ಎಂದು ಪರಿತಪಿಸಬೇಕಾಗುತ್ತದೆ.

7. ಅಧ್ಯಾಯ 7 ರ ವಾಕ್ಯಭಾಗದಿಂದ ಈ ತೀರ್ಮಾನಕ್ಕೆ ಬರಬಹುದು: ಮಗನು ತನ್ನ ಬೋಧಕನ ಆಜ್ಞೆ ಮತ್ತು ಉಪದೇಶಗಳನ್ನು ಪಾಲಿಸಬೇಕೆಂದು ಪ್ರಬೋಧಿಸಲಾಗಿದೆ. ಒಂದು ವೇಳೆ ಆತನು ಇದಕ್ಕೆ ಗಮನ ಕೊಡದೆ ಹೋದರೆ ಆತನು ತಪ್ಪಿಹೋಗುತ್ತಾನೆ ಮತ್ತು ಆತನ ಇಡೀ ಜೀವನವು ಹಾಳಾಗುತ್ತದೆ.

ಜ್ಞಾನದ ಮೂರನೇ ಮತ್ತು ನಾಲ್ಕನೇ ವೈರಿಗಳು ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ಈ ರೀತಿಯಲ್ಲಿ ಜ್ಞಾನದ ಮೊದಲೆರಡು ವೈರಿಗಳು, ಕೊನೆಯ ಎರಡು ವೈರಿಗಳಿಗಿಂತ ವಿಭಿನ್ನವಾಗಿದ್ದಾರೆ:

   ಅ. **"ಕೆಟ್ಟ ಜನರ ಗುಂಪು"** ಮತ್ತು **"ಜಾರಸ್ತ್ರೀ"** ಹೊರಗಣ ವೈರಿಗಳಾಗಿದ್ದಾರೆ. ಇವೆರಡೂ ಯೌವನಸ್ಥ ಪುರುಷರ ಸ್ವಂತ ವ್ಯಕ್ತಿತ್ವಗಳಲ್ಲ ಆದರೆ **"ಸೋಮಾರಿತನ"** ಮತ್ತು **"ಪರಿಹಾಸ್ಯ/ ಕುಚೋದ್ಯತನ"** ಗಳು ಒಳಗಣ ವೈರಿಗಳಾಗಿವೆ. ಇವೆರಡೂ ಒಬ್ಬ ಯೌವನಸ್ಥನ ಸ್ವಂತ ವ್ಯಕ್ತಿತ್ವಗಳಾಗಿವೆ.

   ಆ. ಇನ್ನೊಂದು ವಿಧದಲ್ಲಿ ಯೌವನಸ್ಥರು ತಮ್ಮ ವೈರಿಗಳಿಗೆ ಕಿವಿಗೊಡಬಾರದು. ಅವು ಅವರ ಸ್ವಂತ ವ್ಯಕ್ತಿತ್ವದ ಭಾಗವಾಗಿರಲಿ ಅಥವಾ ಭಾಗವಾಗಿರದೇ ಇರಲಿ. ಅಲ್ಲಿ ಯಾವಾಗಲೂ ಆಯ್ಕೆ ಇದೆ. ಜೀವನದಲ್ಲಿ ಸರಿಯಾದ ಮತ್ತು ತಪ್ಪಾದ ಮಾರ್ಗವನ್ನು ಆಯ್ಕೆ ಮಾಡಿಕೊಳ್ಳುವುದು ಅವರಿಗೆ ಬಿಟ್ಟದ್ದು. ಒಂದು ವೇಳೆ ಅವರು ತಪ್ಪಾದ ಆಯ್ಕೆ ಮಾಡಿಕೊಂಡು, ಕುಚೋದ್ಯಗಾರರಾದರೆ ಅವರು ತಮ್ಮನ್ನೇ ದೂರಿಕೊಳ್ಳಬೇಕಾಗುತ್ತದೆ.

ಜ್ಞಾನದ ರೂಪುರೇಖೆಗಳು (ಅಧ್ಯಾಯ 1–4) – ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಜ್ಞಾನವು ಒಂದು ಸಾರ್ವಜನಿಕ ನಿವೇದಕವಾಗಿದೆ (1:20–23):

   ಅ. ಆಕೆಯು ಸಾರ್ವಜನಿಕವಾಗಿ ಕರೆಯುತ್ತಾಳೆ (ವಚನ 20–21). ಆಕೆಯು ಮುಕ್ತವಾಗಿ ಮಾತನಾಡುವವಳು, ತನ್ನ ಅಭಿಪ್ರಾಯದ ಪರವಾಗಿ ನಿಲ್ಲುವವಳು ಮತ್ತು ಜನರು ತನ್ನ ನಿಯಮಗಳನ್ನು ತಿಳಿಯಬೇಕೆಂದು ಆಕೆ ಆಶಿಸುತ್ತಾಳೆ ಎಂಬುದನ್ನು ತಿಳಿಸಲಾಗಿದೆ.

   ಆ. ಜನರು ತನ್ನ ಮಾತನ್ನು ಕೇಳಿ, ವಿಧೇಯರಾಗಬೇಕೆಂದು ಆಕೆ ಬಯಸುತ್ತಾಳೆ, (ವಚನ 23, 33).

   ಇ. ಆಕೆಯು ತನ್ನನ್ನು ತಿರಸ್ಕರಿಸುವವರನ್ನು ಮತ್ತು ಆಕೆಯ ಬುದ್ಧಿವಾದವನ್ನು ಲಕ್ಷ್ಯಕ್ಕೆ ತಾರದವರನ್ನು ನೋಡಿ ನಗುತ್ತಾಳೆ (ವಚನ 24–26).

   ಈ. ಆಕೆ ತನ್ನನ್ನು ತಿರಸ್ಕರಿಸಿದವರ ಕೂಗಿಗೆ ಕಿವಿಗೊಡುವುದಿಲ್ಲ (ವಚನ 27–30).

   ಉ. ಹಾಗಾಗಿ ಜನರು ಆಕೆಯೊಂದಿಗೆ ಹೇಗೆ ವರ್ತಿಸುತ್ತಾರೆಂಬುದು ಅತೀ ಪ್ರಾಮುಖ್ಯವಾಗಿದೆ. ಆಕೆಯನ್ನು ಅಲಕ್ಷಿಸಲಾಗದು. ನಾವು ಆಕೆಯ ಬುದ್ಧಿವಾದಕ್ಕೆ ಕಿವಿಗೊಟ್ಟು ಆಕೆಯ ಮಾರ್ಗಗಳನ್ನು ಪಾಲಿಸಬೇಕು ಇಲ್ಲದಿದ್ದರೆ ನಮ್ಮ ಅಂತ್ಯವು ದುರಂತಮಯವಾಗಿರುತ್ತದೆ.

2. ಜ್ಞಾನವು ಹುಡುಕುವ ಒಂದು ನಿಧಿಯಾಗಿದೆ (2:1–9):

   ಅ. ತನಗೆ ಕಿವಿಗೊಡುವವನಿಗೆ ಆಕೆಯು ಬುದ್ಧಿ ಮತ್ತು ವಿವೇಕವನ್ನು ಕೊಡುತ್ತಾಳೆ (ವಚನ 2–5).

   ಆ. ಆಕೆಯು ಅಮೂಲ್ಯಳು, ಹಾಗಾಗಿ ಜನರು ಬೆಳ್ಳಿಯನ್ನು ಮತ್ತು ನಿಕ್ಷೇಪವನ್ನು ಹುಡುಕಿದಂತೆ ನಾವು ಅದನ್ನು ಹುಡುಕಬೇಕಾಗಿದೆ (ವಚನ 4).

   ಇ. ಜನರು ದೇವರನ್ನು ಮತ್ತು ಆತನಿಗೆ ಭಯಪಡುವುದು ಎಂದರೆ ಏನೆಂದು ತಿಳಿದುಕೊಳ್ಳಬೇಕಾದರೆ ಅವರು ಜ್ಞಾನಕ್ಕೆ ಕಿವಿಗೊಟ್ಟು ಆಕೆ ಹೇಳುವುದು ತಮ್ಮ ಜೀವಿತಕ್ಕೆ ಅಳವಡಿಸಿಕೊಳ್ಳಬೇಕು (ವಚನ 5).

3. ಜ್ಞಾನದ ಮನೋಹರವಾದ ವ್ಯಕ್ತಿತ್ವ (2:10–15):

   ಅ. ಜ್ಞಾನವು ಒಬ್ಬ ಮನುಷ್ಯನ ಹೃದಯದೊಳಗೆ ಪ್ರವೇಶಿಸಬಲ್ಲದು (ವಚನ 10).

   ಆ. ಜ್ಞಾನವನ್ನು ತಿಳಿದುಕೊಳ್ಳುವುದು ಆನಂದಮಯವಾದುದ್ದಾಗಿದೆ (ವಚನ 10).

   ಇ. ಜ್ಞಾನವನ್ನು ತಿಳಿದುಕೊಂಡರೆ ಜನರಿಂದ ರಕ್ಷಣೆ (ಭದ್ರತೆ) ದೊರೆತು ದುಷ್ಟಜನರಿಂದ ತಪ್ಪಿಸಿಕೊಳ್ಳಬಹುದಾಗಿದೆ (ವಚನ 11–15).

4. ಜ್ಞಾನವು ಒಂದು ಜೀವದ ಮರವಾಗಿದೆ (3:13–18):

   ಅ. ಜ್ಞಾನವು ಬೆಳ್ಳಿ ಬಂಗಾರಕ್ಕಿಂತಲೂ, ಹವಳಕ್ಕಿಂತಲೂ ಬೆಲೆಬಾಳುವಂಥದ್ದಾಗಿದೆ (ವಚನ 14–15).

   ಆ. ಆಕೆಯನ್ನು ಕಂಡುಕೊಳ್ಳುವುದೇ ಒಂದು ಆಶೀರ್ವಾದವಾಗಿದೆ: ಆಕೆಯು ಜನರಿಗೆ ದೀರ್ಘಾಯುಷ್ಯ, ಧನ ಮತ್ತು ಘನತೆಯನ್ನು ಕೊಡುತ್ತದೆ (ವಚನ 13, 16).

   ಇ. ಆಕೆಯೊಂದಿಗೆ ಜೀವಿಸುವವರಿಗೆ ಸುಖ ಮತ್ತು ಸಮಾಧಾನವಿರುತ್ತದೆ (ವಚನ 17).

   ಈ. ಆಕೆಯು ತನ್ನೊಂದಿಗೆ ಜೀವಿಸುವವರಿಗೆ ಜೀವದ ಮೂಲ (ಜೀವದ ಮರ) ವಾಗಿದ್ದಾಳೆ (ವಚನ 18).

5. ಜ್ಞಾನವು ಗಮನಹರಿಸುವಂಥದ್ದು, ಗಳಿಸುವಂಥದ್ದು ಮತ್ತು ಅಪ್ಪಿಕೊಳ್ಳುವುದಾಗಿದೆ (4:1–9):

   ಅ. ಜ್ಞಾನವು ಪರಮೋಚ್ಚವಾದುದ್ದಾಗಿದೆ (ವಚನ 7).

   ಆ. ಆಕೆಯನ್ನು ಹೊಂದಿಕೊಳ್ಳುವವರನ್ನು ಆಕೆಯು ಕಾಪಾಡುತ್ತಾಳೆ (ವಚನ 6).

   ಇ. ಆಕೆಯನ್ನು ಶ್ರೇಷ್ಠಳೆಂಬುದಾಗಿ ಪರಿಗಣಿಸುವವರನ್ನು ಆಕೆಯು ಉನ್ನತಿಗೆ ತರುತ್ತಾಳೆ (ವಚನ 8).

ಈ. ತನ್ನನ್ನು ಅಪ್ಪಿಕೊಳ್ಳುವವರನ್ನು ಆಕೆಯು ಘನಪಡಿಸುತ್ತಾಳೆ (ವಚನ 8).

ಉ. ತನ್ನೆಡೆಗೆ ಗಮನ ಹರಿಸುವವರ ತಲೆಗೆ ಆಕೆಯು ಪುಷ್ಪಮಾಲೆಯನ್ನಿಡುತ್ತಾಳೆ (ವಚನ 9).

6. ಜ್ಞಾನವು ನ್ಯಾಯದ ಪರವಾಗಿ ನಿಲ್ಲುತ್ತದೆ (2:6–15):

ಅ. ಯಥಾರ್ಥ ಚಿತ್ತರಿಗೆ ಮತ್ತು ದೋಷವಿಲ್ಲದೆ ನಡೆಯುವವರಿಗೆ ಮತ್ತು ನ್ಯಾಯವನ್ನು ಪಾಲಿಸುವವರಿಗೆ ದೇವರು ಜ್ಞಾನದ ಮೂಲಕ ಜಯವನ್ನು ಮತ್ತು ಸಂರಕ್ಷಣೆಯನ್ನು ಕೊಡುತ್ತಾನೆ (ವಚನ 6–8).

ಆ. ಜ್ಞಾನವು ಒಬ್ಬ ವ್ಯಕ್ತಿಯ ಹೃದಯದೊಳಗೆ ಪ್ರವೇಶಿಸುವಾಗ ಯಾವುದು ಸರಿಯಾದದ್ದು, ನ್ಯಾಯವಾದದ್ದು ಮತ್ತು ಸಮರ್ಪಕವಾದದ್ದು ಎಂಬುದಾಗಿ ಆತನು ಅರಿತುಕೊಳ್ಳುವನು (ವಚನ 10).

ಇ. ಜ್ಞಾನವು ಆತನನ್ನು ದುರ್ಮಾರ್ಗದವರಿಂದಲೂ, ಕೆಟ್ಟ ಮಾತನಾಡುವುದರಿಂದಲೂ, ದುಷ್ಟರಿಂದಲೂ ಕಾಪಾಡುತ್ತದೆ (ವಚನ 12–15).

7. ಜ್ಞಾನವು ಸೃಷ್ಟಿಯ ಕ್ರಮದಲ್ಲಿಯೇ ನೇಮಿತವಾದದ್ದು (3:19–20):

ಅ. ದೇವರು ಲೋಕವನ್ನು ಜ್ಞಾನದಿಂದಲೇ ಸೃಷ್ಟಿಸಿದನು (ವಚನ 19).

ಆ. ದೇವರು ಜ್ಞಾನದಿಂದಲೇ ಲೋಕವನ್ನು ಕ್ರಮಪಡಿಸಿದನು (ವಚನ 20).

ಇ. ಹಾಗಾಗಿ ದೇವರ ಸೃಷ್ಟಿಗೆ ಜ್ಞಾನವು ಪ್ರಾಮುಖ್ಯವಾಗಿರಬೇಕಾದರೆ ಆಕೆಯನ್ನು ಸ್ವೀಕರಿಸಲು ಜನರಿಗೆ ಅದು ಎಷ್ಟೋ ಪ್ರಾಮುಖ್ಯವಾಗಿರಬೇಕಲ್ಲವೇ?

ಜ್ಞಾನದ ಪ್ರಯೋಜನಗಳು, ದೇವರು ಹಗೆ ಮಾಡುವ ಸಂಗತಿಗಳು (ಅಧ್ಯಾಯ 3, 4, 6) – ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. 3:1–10 ಮತ್ತು 3:21–26ರಲ್ಲಿ ತಿಳಿಸಲಾದ ಜ್ಞಾನದ ಪ್ರಯೋಜನಗಳು ಇಂತಿವೆ:

   ಅ. ದೀರ್ಘಾಯುಷ್ಯ ಮತ್ತು ಸುಕ್ಷೇಮ (ವಚನ 2): ಇವು ನಾವು ಕಲಿತ ಉಪದೇಶವನ್ನು ಮರೆಯದೆ ಪಾಲಿಸುವುದರ ಫಲಿತಾಂಶಗಳಾಗಿವೆ (ವಚನ 1).

   ಆ. ದೇವರ ಮತ್ತು ಮನುಷ್ಯರ ದಯೆ ಮತ್ತು ಸಮ್ಮತಿ (ವಚನ 4): ಪ್ರೀತಿ ಸತ್ಯತೆಗಳನ್ನು ಗೌರವಿಸುವುದರ ಫಲಿತಾಂಶ ಇದಾಗಿದೆ (ವಚನ 3).

   ಇ. ದೇವರು ನಮ್ಮ ಮಾರ್ಗಗಳನ್ನು ಸರಾಗ ಮಾಡುತ್ತಾನೆ (ವಚನ 6): ಇದು ಸ್ವಬುದ್ಧಿ ಆಧಾರ ಮಾಡಿಕೊಳ್ಳದೆ ದೇವರಲ್ಲಿ ಭರವಸವಿಡುವುದರ ಫಲಿತಾಂಶವಾಗಿದೆ (ವಚನ 5).

   ಈ. ದೇಹಕ್ಕೆ ಆರೋಗ್ಯ ಮತ್ತು ಎಲುಬಿಗೆ ಸಾರ (ವಚನ 8): ಇದು ದೇವರಿಗೆ ಭಯಪಟ್ಟು ಕೆಟ್ಟದ್ದನ್ನು ತೊರೆದುಬಿಡುವುದರ ಫಲಿತಾಂಶವಾಗಿದೆ (ವಚನ 7).

   ಉ. ದೇವರು ನಮ್ಮ ಬೆಳೆಯನ್ನು ಆಶೀರ್ವದಿಸುವನು (ವಚನ 10): ಇದು ದೇವರನ್ನು ನಮ್ಮ ಆದಾಯ ಮತ್ತು ದಶಮಾಂಶದಿಂದ ಸನ್ಮಾನಿಸುವುದರ ಫಲಿತಾಂಶವಾಗಿದೆ.

   ಊ. ನಾವು ಎಡಬಿಡದೆ ನಿರ್ಭಯವಾಗಿ ನಡೆಯಬಹುದು (ವಚನ 23).

   ಋ. ರಾತ್ರಿವೇಳೆ ನಾವು ಭಯಪಡದೆ ಸುಖವಾಗಿ ನಿದ್ರಿಸುತ್ತೇವೆ (ವಚನ 24).

   ಎ. ಫಕ್ಕನೆ ಬರುವ ಅಪಾಯಕ್ಕೆ ಹೆದರುವುದಿಲ್ಲ (ವಚನ 25).

   ಏ. ನಮ್ಮ ಕಾಲು ಪಾಶಕ್ಕೆ ಸಿಕ್ಕಿಬೀಳದಂತೆ ದೇವರು ಕಾಪಾಡುವನು (ವಚನ 25).

2. ಹಿಂದಿನ ಪ್ರಶ್ನೆಯ ಉತ್ತರ ನೋಡಿರಿ.

3. 4:20–27 ರ ಪ್ರಕಾರ ನಮ್ಮ ದೈನಂದಿನ ಜೀವಿತಕ್ಕಾಗಿ ಜ್ಞಾನದ ನುಡಿಗಳಿಗೆ ಕಿವಿಗೊಡುವುದು ಈ ರೀತಿ ಅರ್ಥೈಸುತ್ತದೆ:

   ಅ. ನಮ್ಮ ಹೃದಯ (ಆಲೋಚನೆ, ಮನಸ್ಸು): ನಾವಿದನ್ನು ಕಾಯ್ದುಕೊಳ್ಳಬೇಕು. ನಮ್ಮ ಸುತ್ತಮುತ್ತಲ ಪಾಪಮಯ ಸಂಗತಿಗಳಿಂದ ಹೊಲಸಾಗದಂತೆ ನೋಡಿಕೊಳ್ಳಬೇಕು.

   ಆ. ನಮ್ಮ ಬಾಯಿ: ನಾವು ಸುಳ್ಳನ್ನಾಡಬಾರದು, ಚಾಡಿ ಹೇಳಬಾರದು.

   ಇ. ನಮ್ಮ ಕಣ್ಣುಗಳು: ನಮ್ಮ ಕಣ್ಣುಗಳು ಆಚೀಚೆ ಹರಿಯದಂತೆ ನಾವು ನೋಡಿಕೊಳ್ಳಬೇಕು. ನಮ್ಮ ನೋಟದ ಮೂಲಕವೇ ಅನೇಕ ಶೋಧನೆಗಳು ನಮ್ಮ ಜೀವಿತದೊಳಗೆ ನುಗ್ಗುತ್ತವೆ. ಹಾಗಾಗಿ ನಾವು ನಮ್ಮ ದೃಷ್ಟಿಯನ್ನು ಪರಲೋಕದ ಗುರಿಯ ಮೇಲೆ ಇಡಬೇಕಾಗಿದೆ.

   ಈ. ನಮ್ಮ ಕಾಲುಗಳು: ನಮ್ಮ ಕಾಲುಗಳು ತಪ್ಪಾದ ಮಾರ್ಗದಲ್ಲಿ ನಡೆಯದಂತೆ ನಾವು ನೋಡಿಕೊಳ್ಳಬೇಕು. ನೀತಿಯ ಮಾರ್ಗದಿಂದ ನಾವು ದೂರವಿರಬಾರದು.

4. ದೇವರು ಹಗೆ ಮಾಡುವ ಏಳು ವಸ್ತುಗಳು (6:16–19):

   ಅ. ಹೆಮ್ಮೆಯ ಕಣ್ಣು (ಅಹಂಕಾರ, ಕೋಪ)

   ಆ. ಸುಳ್ಳಿನ ನಾಲಿಗೆ (ಸುಳ್ಳು)

   ಇ. ನಿರ್ದೋಷ ರಕ್ತವನ್ನು ಸುರಿಸುವ ಕೈ (ಕೊಲೆಗಾರರು)

   ಈ. ದುರಾಲೋಚನೆಗಳನ್ನು ಕಲ್ಪಿಸುವ ಹೃದಯ

   ಉ. ಕೇಡು ಮಾಡಲು ತ್ವರೆಪಡುವ ಕಾಲು

ಊ. ಅಸತ್ಯವಾಡುವ ಸುಳ್ಳು ಸಾಕ್ಷಿ

ಋ. ಒಡಹುಟ್ಟಿದವರಲ್ಲಿ ಜಗಳಗಳನ್ನು ಬಿತ್ತುವವನು

ಜ್ಞಾನವು ವರ್ಣಿಸಲ್ಪಟ್ಟದ್ದು (ಅಧ್ಯಾಯ 8) – ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಅಧ್ಯಾಯ 8 ಅನ್ನು ಈ ರೀತಿ ರಚಿಸಬಹುದು:

   ಅ. ಜ್ಞಾನವು ದಾರಿಯ ಪಕ್ಕ, ನಡುಬೀದಿಯಲ್ಲಿ ಕರೆಯುವವಳು ಎಂಬುದಾಗಿ ಪರಿಚಯಿಸಲ್ಪಟ್ಟಿದೆ, ವಚನ 1–3

   ಆ. ಮನುಷ್ಯರು ತನಗೆ ಕಿವಿಗೊಡಬೇಕೆಂದು ಜ್ಞಾನವು ಕರೆಯುತ್ತಾಳೆ, ವಚನ 4–11

   ಇ. ಜನರು ಯಾಕೆ ತನಗೆ ಕಿವಿಗೊಡಬೇಕೆಂದು ಜ್ಞಾನವು ವಿವರಿಸುತ್ತಾಳೆ, ವಚನ 12–21

   ಈ. ಜ್ಞಾನ ಮತ್ತು ಸೃಷ್ಟಿ, ವಚನ 22–23

   ಉ. ಜನರು ತನಗೆ ಕಿವಿಗೊಟ್ಟು, ಜ್ಞಾನಿಗಳಾಗಬೇಕೆಂದು ಜ್ಞಾನವು ಪ್ರಬೋಧಿಸುತ್ತಾಳೆ.

2. 8:1–11 ರ ಪ್ರಶ್ನೆಗಳಿಗೆ ಉತ್ತರಗಳು:

   ಅ. ಜನರ ಗಮನ ಸೆಳೆಯಲು ಜ್ಞಾನವು ಸಾರ್ವಜನಿಕ ಸ್ಥಳಗಳಲ್ಲಿ ಕರೆಯುತ್ತಾಳೆ.

   ಆ. ಜ್ಞಾನವು ವಿಶೇಷವಾಗಿ ಮೂಢರನ್ನು ಮತ್ತು ಜ್ಞಾನಹೀನರನ್ನು ಸೂಚಿಸಿ, ಜನಸಾಮಾನ್ಯರನ್ನು ಸಂಬೋಧಿಸುತ್ತಾಳೆ. ಆಕೆಯ ಕರೆಯು ಎಲ್ಲಾ ಯೌವನಸ್ಥರು, ಬಡವ ಮತ್ತು ಶ್ರೀಮಂತ, ಮೇಲ್ವರ್ಗ ಮತ್ತು ಕೆಳವರ್ಗ, ಪುರುಷ ಮತ್ತು ಸ್ತ್ರೀಯರಿಗಾಗಿದೆ.

   ಇ. ಜ್ಞಾನವು ಶ್ರೇಷ್ಠವಾದ ಮತ್ತು ಯಥಾರ್ಥವಾದ ಸಂಗತಿಗಳನ್ನು ಹೇಳುವುದರಿಂದ ಆಕೆಯ ಮಾತುಗಳು ಸತ್ಯ ಮತ್ತು ನೀತಿಭರಿತವಾಗಿರುವದರಿಂದ ಜನರು ಅದಕ್ಕೆ ಕಿವಿಗೊಡಬೇಕು.

   ಈ. ಜ್ಞಾನಕ್ಕೆ ಕಿವಿಗೊಡುವುದರಿಂದ ಜಾಣತನ ಮತ್ತು ಬುದ್ಧಿ ಬರುತ್ತದೆ. ದೇವರಿಗೆ ಮೆಚ್ಚಿಕೆಯಾದ ಜೀವಿತವನ್ನು ಹೇಗೆ ಜೀವಿಸಬೇಕೆಂಬುದನ್ನು ಕಲಿಯುತ್ತೇವೆ. ತಿಳುವಳಿಕೆಯ ಹೃದಯ ಬರುತ್ತದೆ.

3. 8:12–21 ರ ಉತ್ತರಗಳು:

   ಅ. ಈ ಕಾರಣಗಳಿಗಾಗಿ ಜನರು ಜ್ಞಾನಕ್ಕೆ ಕಿವಿಗೊಡಬೇಕು:

   - ಆಕೆಯೊಂದಿಗೆ ಜಾಣ್ಮೆ, ತಿಳುವಳಿಕೆಯಿದೆ (ವಚನ 12).
   - ಸದ್ಯೋಚನೆ, ಸುಜ್ಞಾನ, ಸಾಮರ್ಥ್ಯ ಮತ್ತು ವಿವೇಕ ಆಕೆಗಿದೆ (ವಚನ 14).
   - ಆಕೆಯ ಮೂಲಕವೇ ರಾಜರು ಮತ್ತು ಭೂಪತಿಗಳು ನ್ಯಾಯದಿಂದ ಆಳುವರು (15–16).
   - ಆಕೆಯ ಬಳಿ ಧನ, ಘನತೆ, ಸಂಪತ್ತುಗಳಿವೆ (ವಚನ 18).

   ಆ. **"ದೇವರಿಗೆ ಭಯಪಡುವುದು"** (8:13), ಕೆಟ್ಟದ್ದನ್ನು ದ್ವೇಷಿಸುವ ಹಿನ್ನಲೆಯಲ್ಲಿ ಉಪಯೋಗಿಸಲ್ಪಟ್ಟಿದೆ. ಆದರೆ ಇಡೀ ವಾಕ್ಯಭಾಗದ ಹಿನ್ನಲೆಯು – ನಾವು ಜ್ಞಾನವನ್ನು ಪ್ರೀತಿಸುವಾಗ, ಆಕೆಯ ಉಪದೇಶಕ್ಕೆ ಕಿವಿಗೊಡುವಾಗ, ಆಕೆಯ ಜಾಣತನ ಮತ್ತು ತಿಳುವಳಿಕೆಯನ್ನು ಸ್ವೀಕರಿಸುವಾಗ ಮತ್ತು ನೀತಿಯ ಮಾರ್ಗದಲ್ಲಿ ನಡೆಯುವಾಗ ನಾವು ದೇವರಿಗೆ ಭಯಪಡುತ್ತೇವೆ, ಅದರ ಪರಿಣಾಮವಾಗಿ ಕೆಟ್ಟದ್ದನ್ನು, ಗರ್ವವನ್ನು ನಾವು ದ್ವೇಷಿಸುತ್ತೇವೆ.

4. 8:22–31 ರ ಉತ್ತರಗಳು:

   ಅ. ಇಲ್ಲಿ ಜ್ಞಾನವು ತನ್ನ ವೈಯಕ್ತಿಕ ಸಾಕ್ಷಿಯನ್ನು ಕೊಡುತ್ತಾಳೆ. ಆಕೆಯ ಮುಖ್ಯ ಅಂಶಗಳು:

   - ಸೃಷ್ಟಿಗಿಂತ ಮೊದಲೇ ಆಕೆಯಿದ್ದಳು, ವಚನ 22–29
   - ಆಕೆಯ ಮೂಲಕವೇ ದೇವರು ಲೋಕವನ್ನು ಸೃಷ್ಟಿಸಿದನು, ವಚನ 30–31

ಆ. ವಚನ 31 ರಿಂದ ನಾವು ಜ್ಞಾನವು (ದೇವರು) ಕೇವಲ ತನ್ನ ಸೃಷ್ಟಿಗಳಲ್ಲಷ್ಟೇ ಸಂತೋಷಿಸದೆ (ನದಿ, ಪರ್ವತ, ಹೊಲ, ನಕ್ಷತ್ರ, ಮೋಡ), ಮನುಷ್ಯರಲ್ಲಿ ಸಹ ಆನಂದಿಸುತ್ತಾಳೆ ಎಂಬುದನ್ನು ಅರ್ಥೈಸಿಕೊಳ್ಳಬಹುದು. ದೇವರು ಮನುಷ್ಯನನ್ನು ಸೃಷ್ಟಿಸಿದ ನಂತರವೇ ತನ್ನ ಸೃಷ್ಟಿಯು ಒಳ್ಳೆಯದು ಎಂದು ಹೇಳಿದನು (ಆದಿ. 1:31).

ಇ. ಈ ವಾಕ್ಯಭಾಗದ ಸ್ವರಭಾವವು ಆನಂದಮಯ ಮತ್ತು ಭವ್ಯವಾದುದ್ದಾಗಿದೆ. ಇದು ದೇವರು ಸಂತೋಷದ ಮತ್ತು ವೈಭವಯುತವಾದ ದೇವರಾಗಿದ್ದಾನೆ, ಆತನು ಮತ್ತು ಆತನ ಅದ್ಭುತವಾದ ಸೃಷ್ಟಿಯ ಬಗ್ಗೆ ನಾವು ಹರ್ಷಿಸಬೇಕೆಂದು ಇದು ಹೇಳುತ್ತದೆ.

5. 8:32–36 ರ ಉತ್ತರಗಳು:

ಅ. ಈ ವಾಕ್ಯಭಾಗವನ್ನು ಈ ರೀತಿಯಾಗಿ ರಚನೆ ಮಾಡಬಹುದು:

- ಜ್ಞಾನಕ್ಕೆ ಕಿವಿಗೊಡಲು ಕರೆ, ವಚನ 32
- ಜ್ಞಾನಕ್ಕೆ ಕಿವಿಗೊಡುವಾಗ ಜನರು ಧನ್ಯರಾಗುತ್ತಾರೆ, ವಚನ 32
- ಆಶೀರ್ವಾದಗಳು, ವಚನ 35
- ಎಚ್ಚರಿಕೆಗಳು, ವಚನ 36

ಆ. ಇವರು ಧನ್ಯರಾಗಿದ್ದಾರೆ: ಜ್ಞಾನದ ಮಾರ್ಗಗಳನ್ನು ಅನುಸರಿಸಿ ನಡೆಯುವವರು (ವಚನ 32) ಮತ್ತು ಜ್ಞಾನದ ಉಪದೇಶವನ್ನು ಬಿಡದೇ ಕೇಳುವವರು (ವಚನ 33).

ಇ. ಕಡೆಯ ಎರಡು ವಚನಗಳನ್ನು ಈ ರೀತಿ ವಿವರಿಸಬಹುದು:

- ನಮಗೆ ಒಂದು ಆಯ್ಕೆಯಿದೆ.
- ಒಂದು ಜ್ಞಾನವನ್ನು ನಮ್ಮ ಜೀವಿತದೊಳಗೆ ಸ್ವಾಗತಿಸಿ ಆಕೆಯ ಉಪದೇಶವನ್ನು ಪಾಲಿಸುವುದು. ಆಗ ನಮಗೆ ದೇವರಿಂದ ಜೀವ ಮತ್ತು ಕಟಾಕ್ಷ ದೊರೆಯುತ್ತದೆ (ವಚನ 35).
- ಆಥವಾ ಜ್ಞಾನವನ್ನು ನಮ್ಮ ಜೀವಿತಕ್ಕೆ ಬರಮಾಡದೆ ತಿರಸ್ಕರಿಸಿದರೆ, ನಮ್ಮ ಮೇಲೆ ಕೇಡು ಮತ್ತು ಮರಣವನ್ನು ಬರಮಾಡಿಕೊಳ್ಳುತ್ತೇವೆ (ವಚನ 36).

ಜ್ಞಾನವು ವರ್ಣಿಸಲ್ಪಟ್ಟದ್ದು ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ಎರಡು ಕಾರಣಗಳಿಂದಾಗಿ ಜ್ಞಾನವು ವಿಶೇಷವಾಗಿ ಪ್ರಭುಗಳು, ನಾಯಕರುಗಳು ಮತ್ತು ಭೂಪತಿಗಳ ಮೇಲೆ ತನ್ನ ಗಮನವನ್ನು ಹರಿಸುತ್ತಾಳೆ:

ಅ. ಅವರು ರಾಷ್ಟ್ರೀಯ ನಾಯಕರುಗಳಾಗಿದ್ದರು ಮತ್ತು ಜ್ಞಾನೋಕ್ತಿ ಪುಸ್ತಕದಲ್ಲಿನ ವಿಷಯವು ಬಹುಶಃ ಇಸ್ರಾಯೇಲ್ ರಾಷ್ಟ್ರಕ್ಕೆ ಭವಿಷ್ಯದ ನಾಯಕರುಗಳನ್ನು ಸಿದ್ಧಪಡಿಸಲು ಉಪಯೋಗಿಸಿದ್ದಿರಬಹುದು.

ಆ. ಯಾವುದೇ ಹಿನ್ನಲೆಯ ನಾಯಕರುಗಳಿಗೆ ಸಹ ಜ್ಞಾನದ ಅಗತ್ಯತೆಯಿದೆ. ಆಕೆಯು ಅವರಿಗೆ ಜಾಣತನ, ತಿಳುವಳಿಕೆ, ಬುದ್ಧಿವಾದ, ಸರಿಯಾದ ನ್ಯಾಯನಿರ್ಣಯ, ವಿವೇಕವನ್ನು ಕೊಡುತ್ತಾಳೆ.

2. –

3. –

4. 8:22–31ನ್ನು ಕೊಲೊಸ್ಸೆ 1:15–17, ಇಬ್ರಿಯ 1:2 ಮತ್ತು ಯೋಹಾನ 1:1–5 ರೊಂದಿಗೆ ಹೋಲಿಸುವಾಗ ಕೆಳಕಂಡ ಮುಕ್ತಾಯಕ್ಕೆ ಬರಬಹುದು:

ಅ. ಹೊಸ ಒಡಂಬಡಿಕೆಯ ಬರಹಗಾರರು (ಪೌಲ ಮತ್ತು ಯೋಹಾನ) ತಮ್ಮ ಪತ್ರಿಕೆಗಳನ್ನು ಬರೆಯುವಾಗ, ಜ್ಞಾನೋಕ್ತಿಯ ವಾಕ್ಯಭಾಗಗಳನ್ನು ತಮ್ಮ ಮನಸ್ಸಿನಲ್ಲಿಟ್ಟುಕೊಂಡಿದ್ದಿರಬಹುದು.

ಆ. ಯೇಸು ಕ್ರಿಸ್ತನ ಬಗ್ಗೆ ಜ್ಞಾನೋಕ್ತಿಗಳಿಂದ ವಾಕ್ಯಭಾಗವನ್ನು ಉಪಯೋಗಿಸುವ ಸಾಧ್ಯತೆಯಿದೆ. ಇಲ್ಲಿರುವ ಜ್ಞಾನವು ಸ್ವತಃ ದೇವಕುಮಾರನೇ ಆಗಿದ್ದಾನೆ (ಮ್ಯಾಥ್ಯೀವ್ ಹೆನ್ರಿ).

ಇ. ಜ್ಞಾನೋಕ್ತಿಯಲ್ಲಿನ ಜ್ಞಾನವನ್ನು ದೇವರ ಗುಣಸ್ವಭಾವದಲ್ಲಿ ಒಂದು ವ್ಯಕ್ತೀಕರಣವಾಗಿ ಸಹ ಕಾಣಬಹುದು.

ಜ್ಞಾನ ಮತ್ತು ಅಜ್ಞಾನದ ನಡುವಿನ ಆಯ್ಕೆ (ಅಧ್ಯಾಯ 9) – ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಅಧ್ಯಾಯ 9 ಅನ್ನು ನಾವು ಈ ರೀತಿಯಾಗಿ ರಚನೆ ಮಾಡಬಹುದು:

   ಅ. ಜ್ಞಾನ ಮತ್ತು ಆಕೆಯ ಆಮಂತ್ರಣ, ವಚನ 1–6

   ಆ. ಧರ್ಮನಿಂದಕ, ವಚನ 7–9

   ಇ. ಯೆಹೋವನ ಭಯ, ವಚನ 10–12

   ಈ. ಅಜ್ಞಾನ ಮತ್ತು ಆಕೆಯ ಆಮಂತ್ರಣ, ವಚನ 13–17

   ಉ. ಮುಕ್ತಾಯ, ವಚನ 18

2. ಇಬ್ಬರು ಸ್ತ್ರೀಯರ ನಡುವಿನ (ಜ್ಞಾನ ಮತ್ತು ಅಜ್ಞಾನ) ಹೋಲಿಕೆ ಮತ್ತು ಅವರಿಬ್ಬರ ಆಹ್ವಾನಗಳು:

   ಅ. ಅವರಿಬ್ಬರೂ ಸಹ ಬುದ್ಧಿಹೀನರನ್ನು ಆಹ್ವಾನಿಸುತ್ತಾರೆ.

   ಆ. ಜ್ಞಾನವು ಔತಣವನ್ನು ಸಿದ್ಧಪಡಿಸಿ, ದಾಸಿಯರನ್ನು ಕಳುಹಿಸುತ್ತಾರೆ.

   ಇ. ಜ್ಞಾನವು ತನ್ನ ಮನೆಯನ್ನು ಉತ್ತಮವಾಗಿ ಕಟ್ಟಿಕೊಂಡಿದ್ದಾಳೆ, ಆದರೆ ಮೂಢಳು ಹಾಗೆ ಮಾಡಿಲ್ಲ.

   ಈ. ಅವರಿಬ್ಬರೂ ಸಹ ಅತಿಥಿಗಳಿಗೆ ಆಹಾರವನ್ನು ಮತ್ತು ಪಾನವನ್ನು ಬಡಿಸುತ್ತಾರೆ.

   ಉ. ಜ್ಞಾನವೆಂಬಾಕೆಯು ಬಡಿಸುವ ಆಹಾರ ಮನೆಯಲ್ಲೇ ಸಿದ್ಧಪಡಿಸಿದ್ದು ಆದರೆ ಮೂಢಳ ಆಹಾರವು ಕದ್ದು ತಂದದ್ದಾಗಿದೆ.

   ಊ.ಜ್ಞಾನವು ತನ್ನ ಅತಿಥಿಗಳಿಗೆ ಹಳೇಯ ಜೀವಿತವನ್ನು ಬಿಟ್ಟು, ವಿವೇಕ ಮಾರ್ಗದಲ್ಲಿ ನಡೆಯಬೇಕೆಂದು ಪ್ರಬೋಧಿಸುತ್ತಾಳೆ. ಮೂಢಳು ತನ್ನ ಮನೆಯು ಸತ್ತವರಿಂದ ಕೂಡಿದ್ದೆಂದು ಹೇಳುವುದಿಲ್ಲ (ಪ್ರೇತನಿವಾಸ).

   ಋ.ಜ್ಞಾನವೆಂಬಾಕೆಯ ಮನೆ ಜೀವದ ಮಾರ್ಗ, ಮೂಢಳ ಮನೆ ಮರಣ ಮಾರ್ಗವಾಗಿದೆ.

3. "ಧರ್ಮನಿಂದಕನು" (ವಚನ 7–8) ಜ್ಞಾನದ ಆಮಂತ್ರಣವನ್ನು ತಿರಸ್ಕರಿಸುವವನಾಗಿದ್ದಾನೆ. ಆತನು ಕೇವಲ ಮೂರ್ಖನಾಗಿರದೆ ಜ್ಞಾನದ ಬೋಧನೆ ಮತ್ತು ಜೀವಮಾರ್ಗವನ್ನೂ ಸಹ ವಿರೋಧಿಸುತ್ತಾನೆ. ಹಾಗಾಗಿ ಆತನನ್ನು ಸರಿಪಡಿಸುವುದು ವ್ಯರ್ಥ.

4. ಜ್ಞಾನವಂತನು (ವಚನ 8–9) ಜ್ಞಾನದ ಆಮಂತ್ರಣವನ್ನು ಸ್ವೀಕರಿಸುವವನಾಗಿದ್ದಾನೆ. ಆತನು ಜ್ಞಾನದ ಬೋಧನೆಗೆ ಕಿವಿಗೊಟ್ಟು ಆಕೆಯ ಜೀವ ಮಾರ್ಗವನ್ನು ಹಿಂಬಾಲಿಸಲು ಪ್ರಯತ್ನಿಸುತ್ತಾನೆ. ನೀವು ಒಬ್ಬ ಜ್ಞಾನಿಯನ್ನು ಗದರಿಸಿದರೆ ಆತನು ನಿಮಗೆ ಕಿವಿಗೊಟ್ಟು ನಿಮ್ಮನ್ನು ಪ್ರೀತಿಸುವನು.

5. ವಚನ 10–12 ಜ್ಞಾನೋಕ್ತಿ ಪುಸ್ತಕದ ಮೊದಲ ಭಾಗ (ಅಧ್ಯಾಯ 1–9) ವನ್ನು ಸರಿಯಾಗಿ ಅರ್ಥೈಸಿಕೊಳ್ಳಲು ಕೇಂದ್ರವಾಗಿವೆ ಎಂದು ನಾನೆಣಿಸುತ್ತೇನೆ. ಇದಕ್ಕೆ ಎರಡು ಕಾರಣಗಳಿವೆ, ಅವೆಂದರೆ:

   ಅ. "ಯೆಹೋವನ ಭಯ" (ವಚನ 10) ವು ಹಳೇ ಒಡಂಬಡಿಕೆಯ ಜ್ಞಾನ ಸಾಹಿತ್ಯದಲ್ಲಿನ ಪ್ರಮುಖ ವಿಷಯಾಂಶವಾಗಿದೆ. ಜ್ಞಾನವು ದೇವರ ಮೇಲಿನ ಗೌರವಯುತವಾದ ವಿಧೇಯತೆಯ ಮೇಲೆ ಕಟ್ಟಲ್ಪಡದಿದ್ದರೆ ಅದು ನಿಜವಾದ ಜ್ಞಾನವೇ ಅಲ್ಲ.

   ಆ. ಪುಸ್ತಕದ ಮೊದಲ ಭಾಗವು ಪ್ರಾಥಮಿಕವಾಗಿ ಸರಿಯಾದ ಆಯ್ಕೆಯನ್ನು ಮಾಡುವುದರ ಕುರಿತಾಗಿದೆ. ನಾವು ಜ್ಞಾನಿಗಳಾಗಿದ್ದು ಜೀವಕ್ಕೆ ನಡೆಸುವ ಜ್ಞಾನ ಮತ್ತು ಆಕೆಯ ಮಾರ್ಗಗಳನ್ನು ಆರಿಸಿಕೊಳ್ಳಬೇಕು.

ಜ್ಞಾನದ ವಿಧಾನಗಳು – ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಅಧ್ಯಾಯ 25:

   ಅ. ಇಲ್ಲಿ ಕಂಡುಬರುವ ರೂಪಾಲಂಕಾರಗಳು:

   - ಮೃದು ವಚನವು ಎಲುಬನ್ನು ಮುರಿಯುವುದು (ವಚನ 15).
   - ಜೇನನ್ನು ಅತೀಯಾಗಿ ತಿನ್ನುವುದು ಒಳ್ಳೇದಲ್ಲ (ವಚನ 16).
   - ವೈರಿಯನ್ನು ದೇವರಿಗೆ ಬಿಟ್ಟುಬಿಡಬೇಕು (ವಚನ 22).
   - ಜಗಳಗಂಟಿ ಹೆಂಡತಿಯೊಂದಿಗೆ ವಾಸಿಸುವುದು ಕಷ್ಟ (ವಚನ 24).

2. ಈ ವಚನಗಳಲ್ಲಿನ ಸೋಮಾರಿಯನ್ನು ವರ್ಣಿಸಲು ಬಳಸಲಾದ ಚಿತ್ರಣಗಳನ್ನು ತಿಳಿಸಿರಿ:

   ಅ. 6:6: ಸೋಮಾರಿಯು ಶ್ರಮಪಟ್ಟು ದುಡಿಯುವ ಇರುವೆಗೆ ತದ್ವಿರುದ್ಧವಾಗಿದ್ದಾನೆ.

   ಆ. 10:26: ಸೋಮಾರಿಯ ಸಹಾಯವು ಹಲ್ಲುಗಳಿಗೆ ಹುಳಿಯೂ, ಕಣ್ಣುಗಳಿಗೆ ಹೊಗೆಯೂ ಇರುವಂತಿರುತ್ತದೆ.

   ಇ. 15:19: ಸೋಮಾರಿಯ ದಾರಿ ಮುಳ್ಳುಬೇಲಿಯಂತಿರುತ್ತದೆ.

   ಈ. 19:24: ಸೋಮಾರಿಯು ಸ್ವತಃ ಉಣ್ಣಲು ಸಹ ಮೈಗಳ್ಳನಾಗಿರುವನು.

   ಉ. 22:13: ಸೋಮಾರಿಯು ಯಾವಾಗಲೂ ನೆವದೊಂದಿಗೆ ಬರುತ್ತಾನೆ. ಇದೊಂದು ರೀತಿ ಹಾಸ್ಯಸ್ಪದವಾಗಿದೆ.

   ಊ. 26:14: ಸೋಮಾರಿಯು ನಿದ್ರೆಯನ್ನು ಪ್ರೀತಿಸುತ್ತಾನೆ. ಇದು ಇನ್ನೂ ವ್ಯಂಗ್ಯವಾಗಿದೆ. ಕದವು ತಿರುಗಣಿಗೆ ಅಂಟಿಕೊಂಡಿರುವಂತೆ ಸೋಮಾರಿಯು ಹಾಸಿಗೆಗೆ ಅಂಟಿಕೊಂಡಿರುತ್ತಾನೆ.

3. **"ಅದಕ್ಕಿಂತ ಲೇಸು"** ಎಂಬ ಜ್ಞಾನೋಕ್ತಿಗೆ ಟಿಪ್ಪಣಿಗಳು:

   ಅ. 15:16ರಲ್ಲಿ ಯೆಹೋವನ ಭಯವು ಬಡತನಕ್ಕೆ ನಡೆಸಿದರೂ ಸಹ ಇದು ಬಹುಧನಕ್ಕಿಂತಲೂ ಆಶಿಸತಕ್ಕದ್ದಾಗಿದೆ.

   ಆ. 21:19ರಲ್ಲಿ ಕಾಡುವ ಜಗಳಗಂಟಿಯ ಸಹವಾಸಕ್ಕಿಂತಲೂ ಕಾಡಿನ ವಾಸವೇ ಲೇಸು. ಯಾವ ಮನುಷ್ಯನು ಕಾಡಿನಲ್ಲಿ ವಾಸಿಸಲು ಬಯಸುವುದಿಲ್ಲ. ಆದರೆ ಜಗಳಗಂಟಿಯ ಜೊತೆಗಿರುವುದಕ್ಕಿಂತ ಅದೇ ಸೂಕ್ತವೆನಿಸುತ್ತದೆ. ಹೆಂಡತಿಯು ಜಗಳಗಂಟಿಯಾಗಿರದಿದ್ದರೆ ಗಂಡನು ಮದುವೆಯ ಚೌಕಟ್ಟಿನಡಿಯಲ್ಲಿ ಬದುಕಲು ಅಪೇಕ್ಷಿಸುತ್ತಾನೆ.

   ಇ. 22:1: ಬಹುಧನಕ್ಕಿಂತಲೂ ಒಳ್ಳೆಯ ಹೆಸರು ಉತ್ತಮ: ಓದುಗನು ಲೌಕಿಕ ಒಳ್ಳೆಯ ಸಂಗತಿಗಳಿಗಿಂತ (ಸಂಪತ್ತು ಮತ್ತು ಐಶ್ವರ್ಯ) ಆತ್ಮೀಕವಾಗಿ ಒಳ್ಳೆಯ ಸಂಗತಿಗಳನ್ನು (ಒಳ್ಳೆಯ ಹೆಸರು) ಆಶಿಸಬೇಕೆಂದು ತಿಳಿಸಲಾಗಿದೆ. ಒಂದು ವೇಳೆ ಓದುಗನು ಈ ಆತ್ಮೀಕ ಆಯ್ಕೆಯನ್ನು ತಿಳಿದುಕೊಂಡು, ಆರಿಸಿಕೊಂಡರೆ ಆತನು ಜ್ಞಾನಿಯೂ, ದೇವರಿಗೆ ಭಯಪಡುವವನೂ ಆಗಿರುತ್ತಾನೆ.

ಸೊಲೊಮೋನನ ಜ್ಞಾನೋಕ್ತಿಗಳ ಮುಖ್ಯ ಸಂಗ್ರಹ (10:1–22:16) – ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಯಾವುದಕ್ಕೆ ವಿರುದ್ಧವಾಗಿ ಈ ಜ್ಞಾನೋಕ್ತಿ ಓದುಗನನ್ನು ಎಚ್ಚರಿಸುತ್ತವೆ?

   ಅ. 10:26 ಸೋಮಾರಿತನ

   ಆ. 11:7 ದುಷ್ಟತನ

   ಇ. 12:16 ಕೋಪ

   ಈ. 14:35 ಅವಮಾನಕಾರಿ ಸ್ವಭಾವ

   ಉ. 15:4 ಬಲತ್ಕಾರ/ ವಂಚನೆಯ ಮಾತು

   ಊ. 15:24 ಅಹಂಕಾರ

   ಋ. 15:27 ದುರಾಸೆ ಮತ್ತು ಲಂಚ

2. ಓದುಗನು ಏನು ಮಾಡಬೇಕೆಂದು ಅಥವಾ ಓದುಗನಿಗೆ ಎಂತಹ ಗುಣಸ್ವಭಾವವಿರಬೇಕೆಂದು ಈ ಜ್ಞಾನೋಕ್ತಿಗಳು ತಿಳಿಸುತ್ತವೆ?

   ಅ. 10:8 ವಿದೇಯತೆಯಿಂದಿರಬೇಕು

   ಆ. 11:4 ನೀತಿವಂತನಾಗಿರಬೇಕು

   ಇ. 11:22 ಸಾಮಾನ್ಯ ಜ್ಞಾನ

   ಈ. 11:24 ಉದಾರತೆ

   ಉ. 12:11 ಶ್ರಮ

   ಊ. 13:7 ಉಪಕಾರ

   ಋ. 14:12 ಜ್ಞಾನ/ವಿವೇಕ

   ಎ. 14:21 ಗೌರವ ಮತ್ತು ದಯೆ

3. ಈ ಜ್ಞಾನೋಕ್ತಿಗಳಲ್ಲಿ ತದ್ವಿರುದ್ಧವಾಗಿರುವ ಗುಣಸ್ವಭಾವಗಳು ಇಂತಿವೆ:

   ಅ. 10:12 ಪ್ರೀತಿ ಮತ್ತು ದ್ವೇಷ

   ಆ. 10:17 ವಿಧೇಯತೆ ಮತ್ತು ಅವಿಧೇಯತೆ

   ಇ. 11:1 ಪ್ರಮಾಣಿಕತೆ ಮತ್ತು ಅಪ್ರಾಮಾಣಿಕತೆ

   ಈ. 11:2 ಗರ್ವ ಮತ್ತು ದೀನತೆ

   ಉ. 11:16 ದಯೆ ಮತ್ತು ಬಲತ್ಕಾರ

   ಊ. 11:17 ದಯಾಳುತನ ಮತ್ತು ಕ್ರೂರತೆ

   ಋ. 12:19 ಸತ್ಯ ಮತ್ತು ಸುಳ್ಳು

   ಎ. 14:29 ಸಹನೆ ಮತ್ತು ಅಸಹನೆ

   ಏ. 14:30 ಶಾಂತತೆ ಮತ್ತು ಕ್ರೋಧ

ಜ್ಞಾನಿಗಳ ನುಡಿಗಳು (22:17–24:34) – ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಜ್ಞಾನಿಗಳ ನುಡಿಗಳು ಜ್ಞಾನೋಕ್ತಿಗಳ ಎರಡು ಸಂಗ್ರಹಗಳನ್ನು ಒಳಗೊಂಡಿದೆ:

   ಅ. ಜ್ಞಾನಿಗಳ ಮೂವತ್ತು ನುಡಿಗಳು 22:17 ರಿಂದ ಪ್ರಾರಂಭವಾಗಿ 24:22 ರೊಂದಿಗೆ ಮುಕ್ತಾಯವಾಗುತ್ತವೆ.

   ಆ. ಜ್ಞಾನಿಗಳ ಉಳಿದ ನುಡಿಗಳು 24:23 ರಿಂದ ಪ್ರಾರಂಭವಾಗಿ 24ನೇ ಅಧ್ಯಾಯದೊಂದಿಗೆ ಮುಕ್ತಾಯವಾಗುತ್ತವೆ.

2. –

3. ಜ್ಞಾನೋಕ್ತಿಗಳ ಮೊದಲ ಸಂಗ್ರಹದ ಪೀಠಿಕೆಯಲ್ಲಿ (22:17–21) ಗ್ರಂಥಕರ್ತನು ತನ್ನ ಉದ್ದೇಶವನ್ನು ತಿಳಿಸುತ್ತಾನೆ:

   ಅ. ಓದುಗನಿಗೆ ಜ್ಞಾನ/ತಿಳುವಳಿಕೆಯನ್ನು ಕೊಡುವುದು.

   ಆ. ದೇವರಲ್ಲಿ ಭರವಸವಿಡುವಂತೆ ಓದುಗನಿಗೆ ಸಹಾಯಿಸುವುದು.

   ಇ. ಯಾವುದು ಸರಿಯಾದದ್ದು ಎಂದು ಓದುಗನಿಗೆ ತಿಳಿಸುವುದು.

4. ತನ್ನ ಸಂಗ್ರಹವು **"ಮೂವತ್ತು ನುಡಿಗಳನ್ನು"** ಒಳಗೊಂಡಿದೆ ಎಂದು ಗ್ರಂಥಕರ್ತನು ಹೇಳುತ್ತಾನೆ (ಜ್ಞಾ.22:22–24:22):

   - ಮೊದಲ ಮಾತು (22:22–23): ಬಡತನ ಮತ್ತು ದರಿದ್ರರನ್ನು ಸೂರೆ ಮಾಡಬೇಡ.
   - ಎರಡನೇ ಮಾತು (22:24–25): ಕೆಟ್ಟವರ ಪ್ರಭಾವಕ್ಕೆ ಒಳಗಾಗಬೇಡ.
   - ಮೂರನೇ ಮಾತು (22:26–27): ಸಾಲವು ಜೀವನವನ್ನು ಹಾಳುಮಾಡುವುದು.
   - ನಾಲ್ಕನೇ ಮಾತು (22:28): ನೆರೆಯವರಿಂದ ಕದ್ದುಕೊಳ್ಳಬೇಡ.
   - ಐದನೇ ಮಾತು (22:29): ಚಟುವಟಿಕೆಯುಳ್ಳವನಾಗಿರು.
   - ಆರನೇ ಮಾತು (23:1–3): ಐಶ್ವರ್ಯವಂತನ ಸತ್ಕಾರದಿಂದ ಮೋಸಹೋಗಬೇಡ.
   - ಏಳನೇ ಮಾತು (23:4–5): ಧನಿಕನಾಗಲು ದುಡಿಯಬೇಡ.
   - ಎಂಟನೇ ಮಾತು (23:6–8): ಲೋಭಿಯ ಸತ್ಕಾರದಿಂದ ಮೋಸಹೋಗಬೇಡ.
   - ಒಂಭತ್ತನೇ ಮಾತು (23:9): ಮೂಢನಿಂದ ಎಚ್ಚರಿಕೆಯಾಗಿರು.
   - ಹತ್ತನೇ ಮಾತು (23:10–11): ಅನಾಥರ ಹೊಲವನ್ನು ಸೂರೆ ಮಾಡಬೇಡ.
   - ಹನ್ನೊಂದನೇ ಮಾತು (23:12): ಜ್ಞಾನವನ್ನು ಪಡೆ.
   - ಹನ್ನೆರಡನೇ ಮಾತು (23:13–14): ನಿನ್ನ ಮಕ್ಕಳನ್ನು ಶಿಕ್ಷೆಗೊಳಪಡಿಸು.
   - ಹದಿಮೂರನೇ ಮಾತು (23:15–16): ನಿನ್ನ ಮಕ್ಕಳು ಜ್ಞಾನದಲ್ಲಿ ಬೆಳೆಯುವಾಗ ಆನಂದಿಸು.
   - ಹದಿನಾಲ್ಕನೇ ಮಾತು (23:17–18): ದೇವರಿಗೆ ಭಯಪಡು.
   - ಹದಿನೈದನೇ ಮಾತು (23:29–21): ಕುಡುಕನಾಗಬೇಡ.
   - ಹದಿನಾರನೇ ಮಾತು (23:22–25): ತಂದೆ ತಾಯಂದಿರಿಂದ ಜ್ಞಾನವನ್ನು ಕಲಿತು ಅವರನ್ನು ಹರ್ಷಪಡಿಸು.
   - ಹದಿನೇಳನೇ ಮಾತು (23:26–28): ವೇಶ್ಯೆಯರಿಂದ ದೂರವಿರು.

- ಹದಿನೆಂಟನೇ ಮಾತು (23:29–35): ಮಧ್ಯಪಾನದಿಂದ ದೂರವಿರು.
- ಹತ್ತೊಂಭತ್ತನೇ ಮಾತು (24:3–4): ದುಷ್ಟ ಸ್ನೇಹಿತರಿಂದ ಎಚ್ಚರಿಕೆಯಾಗಿರು.
- ಇಪ್ಪತ್ತನೇ ಮಾತು (24:3–4): ಈ ಲೋಕದಲ್ಲಿ ನಿನ್ನ ಜೀವನವನ್ನು ಕಟ್ಟುವಾಗ ಜ್ಞಾನವನ್ನು ಉಪಯೋಗಿಸು.
- ಇಪ್ಪತ್ತೊಂದನೇ ಮಾತು (24:5–6): ನಿಜವಾದ ಜ್ಞಾನದಲ್ಲಿ ನಿನ್ನ ಬಲವನ್ನು ಕಂಡುಕೋ.
- ಇಪ್ಪತ್ತೆರಡನೇ ಮಾತು (24:7): ಮೂರ್ಖನಾಗಿರಬೇಡ.
- ಇಪ್ಪತ್ಮೂರನೇ ಮಾತು (24:8–9): ದುಷ್ಟತನ ಕಲ್ಪಿಸುವುದು ಮೂರ್ಖತನ ಮತ್ತು ಪಾಪವಾಗಿದೆ.
- ಇಪ್ಪತ್ನಾಲ್ಕನೇ ಮಾತು (24:10): ಪ್ರತಿಕೂಲ ಸಮಯದಲ್ಲಿ ಧೈರ್ಯವಾಗಿರು.
- ಇಪ್ಪತ್ತೈದನೇ ಮಾತು (24:11–12): ನೀತಿವಂತನಾಗಿರು ಮತ್ತು ಪ್ರಾಮಾಣಿಕನಾಗಿರು.
- ಇಪ್ಪತ್ತಾರನೇ ಮಾತು (24:13–14): ಜ್ಞಾನವು ನಿನಗೆ ಒಳ್ಳೆಯದು ಮತ್ತು ಪ್ರಯೋಜನಕಾರಿ ಆಗಿದೆ.
- ಇಪ್ಪತ್ತೇಳನೇ ಮಾತು (24:15–16): ನೀತಿವಂತರಿಗೆ ವಿರೋಧವಾಗಿ ದುಷ್ಟರೊಡನೆ ಕೈಜೋಡಿಸಬೇಡ.
- ಇಪ್ಪತ್ತೆಂಟನೇ ಮಾತು (24:17–18): ವೈರಿಗಳ ಆಪತ್ತಿನಲ್ಲಿ ಸಂತೋಷಿಸಬೇಡ.
- ಇಪ್ತತೊಂಭತ್ತನೇ ಮಾತು (24:1–20): ದುಷ್ಟರ ಅಭಿವೃದ್ಧಿಗೆ ಉರಿಗೊಳ್ಳಬೇಡ.
- ಮೂವತ್ತನೇ ಮಾತು (24:21–22): ದೇವರು ಮತ್ತು ಆತನ ರಾಜನ ಅಧಿಕಾರವನ್ನು ತಿಳಿದುಕೋ.

5. ತಮ್ಮ ಮುಂದಿನ ಮಾತುಗಳಲ್ಲಿ **"ಜ್ಞಾನಿಗಳು"** ಹೇಳುವ ಅಂಶಗಳೇನೆಂದರೆ (ಜ್ಞಾ.24:23–34):
   ಅ. ನ್ಯಾಯಸ್ಥಾನದಲ್ಲಿ ಪಕ್ಷಪಾತ ತೋರಿಸಬೇಡ (ವಚನ 23–26)
   ಆ. ಕೆಲಸವನ್ನು ಉತ್ತಮವಾಗಿ ಯೋಜಿಸು (ವಚನ 27)
   ಇ. ನ್ಯಾಯಸ್ಥಾನದಲ್ಲಿ ಸುಳ್ಳುಸಾಕ್ಷಿ ಕೊಡಬೇಡ (ವಚನ 28–29)
   ಈ. ಸೋಮಾರಿಯಾಗಿರಬೇಡ (ವಚನ 30–34)

ಜ್ಞಾನಿಗಳ ನುಡಿಗಳು ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. **"ಇವು ಕೂಡ ಜ್ಞಾನಿಗಳ ಉಕ್ತಿಗಳೇ"** ಎಂಬ ವಾಕ್ಯಭಾಗದ ರಚನೆಯು (24:23–34) ಎರಡು ಸುತ್ತನ್ನು ಒಳಗೊಂಡಿದೆ:
   ಅ. ಮೊದಲ ಸುತ್ತು:
      - ನ್ಯಾಯವಿಚಾರಣೆಯಲ್ಲಿನ ನ್ಯಾಯದ ಬಗೆಗಿನ ಹೇಳಿಕೆ (23–26)
      - ದೈನಂದಿನ ಜೀವಿತದ ಬಗ್ಗೆ ಒಂದು ಪ್ರಾಯೋಗಿಕ ಪಾಠ (ವಚನ 27)
   ಆ. ಎರಡನೇ ಸುತ್ತು:
      - ನ್ಯಾಯಸ್ಥಾನದಲ್ಲಿನ ನ್ಯಾಯದ ಬಗೆಗಿನ ಹೇಳಿಕೆ (ವಚನ 28–29)
      - ದೈನಂದಿನ ಜೀವನದ ಬಗೆಗಿನ ಒಂದು ಪಾಠ (ವಚನ 30–34)

ಹಿಜ್ಕೀಯನು ಸಂಗ್ರಹಿಸಿದ ಜ್ಞಾನೋಕ್ತಿಗಳು (25:1–29:27) – ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಯಾವುದರ ವಿರುದ್ಧವಾಗಿ ಈ ಜ್ಞಾನೋಕ್ತಿಗಳು ಓದುಗನನ್ನು ಎಚ್ಚರಿಸುತ್ತವೆ?

   ಅ. 25:14 ಜಂಭ

   ಆ. 25:18 ಸುಳ್ಳುಸಾಕ್ಷಿ

   ಇ. 25:27 ಸ್ವಂತ ಮಾನ

   ಈ. 26:6 ಮೂಢನಲ್ಲಿ ಭರವಸವಿಡುವುದು

   ಉ. 27:20 ತೃಪ್ತಿಯಿಲ್ಲದ ಮನುಷ್ಯನ ಬಯಕೆ

   ಊ.27:21 ಹೊಗಳಿಕೆಗೆ ಬೀಳುವುದು

   ಋ. 28:3 ಹಿಂಸಕ ನಾಯಕರುಗಳು

   ಎ. 28:9 ಧರ್ಮಶಾಸ್ತ್ರ (ಉಪದೇಶ) ಮೀರುವುದು

2. ಓದುಗನು ಕೆಳಕಂಡವುಗಳನ್ನು ಮಾಡಬೇಕೆಂದು ಅಥವಾ ಈ ರೀತಿಯ ಗುಣಸ್ವಭಾವವನ್ನು ಓದುಗರು ಹೊಂದಿರಬೇಕೆಂದು ಈ ಜ್ಞಾನೋಕ್ತಿಗಳು ಆಜ್ಞಾಪಿಸುತ್ತವೆ?

   ಅ. 25:6–7 ದೀನತೆ

   ಆ. 25:12 ಬುದ್ಧಿವಾದಕ್ಕೆ ಸಿದ್ಧನಿರುವುದು

   ಇ. 25:19 ಜನರೊಂದಿಗೆ ವ್ಯವಹರಿಸುವಾಗ ಎಚ್ಚರಿಕೆಯಿಂದಿರುವುದು.

   ಈ. 25:28 ಆತ್ಮಸ್ವಾಧೀನತೆ

   ಉ. 26:18–19 ಜನರೊಂದಿಗೆ ಮಾತನಾಡುವಾಗ ಎಚ್ಚರಿಕೆಯಾಗಿರುವುದು.

   ಊ. 27:19 ಉತ್ತಮವಾಗಿ ಸೇವೆ ಮಾಡುವುದು

   ಋ. 29:14 ಸರಿಯಾಗಿ ನ್ಯಾಯವಿಚಾರಿಸುವುದು

   ಎ. 29:17 ಮಕ್ಕಳನ್ನು ಉತ್ತಮವಾಗಿ ಬೆಳೆಸುವುದು

3. ಈ ರೀತಿಯ ಸ್ವಭಾವ ಅಥವಾ ಗುಣ ಅಥವಾ ವ್ಯಕ್ತಿಗಳು ಈ ಜ್ಞಾನೋಕ್ತಿಗಳಲ್ಲಿ ತದ್ವಿರುದ್ಧವಾಗಿದ್ದಾರೆ:

   ಅ. 25:4–5 ರಾಜನ ಮೇಲಿನ ಒಳ್ಳೆಯ ಮತ್ತು ಕೆಟ್ಟ ಪ್ರಭಾವ

   ಆ. 25:6–7 ಗರ್ವ ಮತ್ತು ದೀನತೆ

   ಇ. 25:8–10 ವ್ಯಾಜ್ಯವನ್ನು ನ್ಯಾಯಸ್ಥಾನದಲ್ಲಿ ಬಗೆಹರಿಸುವುದು ಮತ್ತು ವ್ಯಾಜ್ಯವನ್ನು ಸರಿಯಾಗಿ ಬಗೆಹರಿಸುವುದು

   ಈ. 27:12 ಜ್ಞಾನಿ ಮತ್ತು ಮೂರ್ಖ

   ಉ. 28:1 ದುಷ್ಟನು ಮತ್ತು ನೀತಿವಂತನು

   ಊ. 28:19 ಕಷ್ಟಪಟ್ಟು ದುಡಿಯುವುದು ಮತ್ತು ವ್ಯರ್ಥ ಕಾಲಹರಣ ಮಾಡುವುದು

   ಋ. 28:28 ಬಡವರಿಗೆ ಉದಾರವಾಗಿ ದಾನಮಾಡುವುದು ಮತ್ತು ಬಡವರ ಬಗ್ಗೆ ಯೋಚಿಸದೆ ಇರುವುದು

4. ಜ್ಞಾನೋಕ್ತಿ 27:23–27 ರ ಪ್ರಕಾರ ಹಿಂಡುಗಳನ್ನು ಬೆಳೆಸುವುದರಿಂದ ಆಗುವ ಪ್ರಯೋಜನಗಳು:

   ಅ. ಕುರಿಗಳಿಂದ ಉಡುಪು ದೊರೆಯುತ್ತದೆ (ವಚನ 26)

   ಆ. ಆಡುಗಳಿಂದ ಹೊಲದ ಕ್ರಯ ಸಿಗುತ್ತದೆ (ವಚನ 26), ಮಾರಿದರೆ ಹಣ ಸಿಗುತ್ತದೆ.

   ಇ. ಆಡುಗಳಿಂದ ಹಾಲು ಸಿಗುತ್ತದೆ (ವಚನ 27)

ಆಗೂರ ಮತ್ತು ಅರಸನಾದ ಲೆಮೂವೇಲನ ಮಾತುಗಳು (30:1–31:9) – ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಆಗೂರನು ತನ್ನನ್ನು ಈ ರೀತಿಯಾಗಿ ವರ್ಣಿಸಿಕೊಳ್ಳುತ್ತಾನೆ (30:1–3)

   ಅ. ನಾನು ಪಶುಪ್ರಾಯನು

   ಆ. ವಿವೇಕವಿಲ್ಲದವನು

   ಇ. ನಾನು ಜ್ಞಾನವನ್ನು ಪಡೆದುಕೊಂಡಿಲ್ಲ.

   ದೇವರ ಮತ್ತು ಮನುಷ್ಯರ ಮುಂದೆ ತನ್ನ ದೀನತೆಯನ್ನು ತೋರಿಸಿಕೊಳ್ಳುವುದಕ್ಕಾಗಿ ಆಗೂರನು ಹೀಗೆ ಹೇಳುತ್ತಿದ್ದಾನೆಂದು ನಾನೆಣಿಸುತ್ತೇನೆ.

2. ಆಗೂರನು ದೇವರ ವಾಕ್ಯವನ್ನು (ಮಾತನ್ನು) ಈ ರೀತಿಯಾಗಿ ವರ್ಣಿಸುತ್ತಾನೆ (30:5–6):

   ಅ. ದೇವರ ಮಾತು ಶುದ್ಧವಾದದ್ದು

   ಆ. ಆತನ ಮಾತಿಗೆ ನಾವು ಏನನ್ನು ಸೇರಿಸಲಾಗದು

3. ಆಗೂರನು ತನಗಾಗಿ ದೇವರಲ್ಲಿ ಈ ರೀತಿ ವಿಜ್ಞಾಪಿಸಿಕೊಳ್ಳುತ್ತಾನೆ (30:7–9):

   ಅ. ಆತನ ಮೊದಲ ಮನವಿ: ತನ್ನಿಂದ ಕಪಟ ಮತ್ತು ಸುಳ್ಳನ್ನು ತೊಲಗಿಸುವುದು

   ಆ. ಆತನ ಎರಡನೇ ಮನವಿ: ಬಡತನ ಅಥವಾ ಐಶ್ವರ್ಯ ಕೊಡದೆ ಜೀವನದ ಕನಿಷ್ಠ ಅಗತ್ಯತೆಗಳೊಂದಿಗೆ ಆತನನ್ನು ಸಂತುಷ್ಟನಾಗಿರುವಂತೆ ಮಾಡುವುದು

4. ತಂದೆತಾಯಿಯನ್ನು ಸನ್ಮಾನಿಸದವರು ಈ ರೀತಿಯಾಗಿ ವರ್ಣಿಸಲ್ಪಟ್ಟಿದ್ದಾರೆ (30:11–14 ಮತ್ತು 30:17):

   ಅ. ಅವರು ತಂದೆತಾಯಿಯನ್ನು ಆಶೀರ್ವದಿಸದೆ ಶಪಿಸುವರು

   ಆ. ಅವರು ಗರ್ವಿಷ್ಠರು

   ಇ. ತಾವೇ ಶುದ್ಧರೆಂಬುದಾಗಿ ಅವರೆಣಿಸುತ್ತಾರೆ, ಆದರೆ ಅವರು ಪಾಪಿಗಳಾಗಿದ್ದಾರೆ.

   ಈ. ತಂದೆತಾಯಿಗಳನ್ನು ಅವರು ಕೀಳಾಗಿ ನೋಡುವರು

   ಉ. ತಂದೆತಾಯಿಯನ್ನು ಅವರು ಹಾಸ್ಯ ಮಾಡುವರು

   ಊ. ತಂದೆತಾಯಿಗೆ ಅವಿಧೇಯರಾಗುವರು

   ಎ. ಅವರಿಗೆ ಶಿಕ್ಷೆಯಾಗುತ್ತದೆ

5. ಜ್ಞಾನೋಕ್ತಿ 30:20 ರಿಂದ ಜಾರಸ್ತ್ರೀಯ ಬಗ್ಗೆ ನಾವು ಎರಡು ಸಂಗತಿಗಳನ್ನು ಕಲಿಯುತ್ತೇವೆ:

   ಅ. ಆಹಾರವನ್ನು ತಿಂದು ಖುಷಿಪಡುವ ರೀತಿಯಲ್ಲಿ ಆಕೆಯು ತನ್ನ ಪಾಪಮಯ ಜೀವಿತವನ್ನು ಸಂತೋಷಪಡುತ್ತಾಳೆ.

   ಆ. ತಾನೊಬ್ಬ ಪಾಪಿಯೆಂಬುದನ್ನು ಆಕೆ ಅಲ್ಲಗಳೆಯುತ್ತಾಳೆ

6. ಜ್ಞಾನೋಕ್ತಿ 30:32–33 ರಿಂದ ಮೂರ್ಖರ ಬಗ್ಗೆ ನಾವು 3 ಸಂಗತಿಗಳನ್ನು ಕಲಿಯುತ್ತೇವೆ:

   ಅ. ಮೂರ್ಖನು ಉಬ್ಬಿಕೊಳ್ಳುವವನಾಗಿದ್ದಾನೆ: ತನ್ನನ್ನು ತಾನೇ ಹೆಚ್ಚಿಸಿಕೊಳ್ಳುತ್ತಾನೆ.

   ಆ. ಮೂರ್ಖನು ಭ್ರಷ್ಟನಾಗಿದ್ದಾನೆ: ದುರಾಲೋಚನೆ ಮಾಡುತ್ತಾನೆ.

   ಇ. ಮೂರ್ಖನ ದುರಾಲೋಚನೆಗಳು ಕೋಪ ಮತ್ತು ಜಗಳಗಳಾಗಿ ಪರಿಣಮಿಸುತ್ತವೆ.

7. ಅರಸನ ತಾಯಿಯು ತನ್ನ ಮಗನನ್ನು ಈ ರೀತಿ ವರ್ಣಿಸುತ್ತಾಳೆ (31:2):

   ಅ. ಆತನು ಆಕೆಯ ಗರ್ಭಪುತ್ರನಾಗಿದ್ದಾನೆ. ಆಕೆಯು ಆತನನ್ನು 9 ತಿಂಗಳು ಹೊತ್ತಿದ್ದಾಳೆ, ನೋವಿನಿಂದ ಹೆತ್ತಿದ್ದಾಳೆ. ಹಾಗಾಗಿ ಆತನಿಗೆ ಉಪದೇಶಿಸಲು ಆಕೆಗೆ ಹಕ್ಕುಂಟು.

   ಆ. ಆತನು ಆಕೆಯ ಹರಕೆಯ ಮಗನಾಗಿದ್ದಾನೆ. ಹಾಗಾಗಿ ಲೆಮೂವೇಲನನ್ನು ದೇವರಿಂದ ಬಂದ ಬಹುಮಾನವೆಂಬುದಾಗಿ ಆಕೆ ಪರಿಗಣಿಸುತ್ತಾಳೆ.

8. ತನ್ನ ಮಗನಿಗಾಗಿ, ಅರಸನ ತಾಯಿಯ ಬುದ್ಧಿಮಾತುಗಳು (31:3–9):

   ಅ. ಆಕೆಯು ಆತನಿಗೆ ನಿನ್ನ ತ್ರಾಣವನ್ನು ಸ್ತ್ರೀಯಲ್ಲಿ ಒಪ್ಪಿಸಬೇಡ ಅಂದರೆ ಸೂಳೆಯರೊಂದಿಗೆ ಭಾಗಿಯಾಗಬೇಡ ಎಂದು ಹೇಳುತ್ತಾಳೆ.

   ಆ. ಆಕೆಯು ಆತನಿಗೆ ದ್ರಾಕ್ಷಾರಸವನ್ನು ಕುಡಿಯಬೇಡ ಎಂದು ಹೇಳುತ್ತಾಳೆ.

   ಇ. ದೀನದರಿದ್ರರಿಗೆ ನ್ಯಾಯವನ್ನು ತೀರಿಸಬೇಕೆಂದು ಆಕೆ ಆತನಿಗೆ ಹೇಳುತ್ತಾಳೆ.

ಆಗೂರ ಮತ್ತು ಅರಸನಾದ ಲೆಮೂವೇಲನ ಮಾತುಗಳು ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. 30:4 ರಲ್ಲಿ ಆಗೂರನು ದೇವರನ್ನು ಸೂಚಿಸಿ ಹೇಳುತ್ತಿರುವನೆಂದು ನಾನು ಎಣಿಸುತ್ತೇನೆ. ದೇವರು ಪರಲೋಕದಲ್ಲಿದ್ದಾನೆ ಆದರೆ ಆತನು ಭೂಲೋಕಕ್ಕೆ ಇಳಿದುಬಂದಿದ್ದಾನೆ.

2. ಇಲ್ಲಿ ಕಂಡುಬರುವ ಸಂಖ್ಯಾತ್ಮಕ ಜ್ಞಾನೋಕ್ತಿಗಳ ವಿಶ್ಲೇಷಣೆ ಇಂತಿದೆ:

   ಅ. ಜ್ಞಾನೋ. 30:15–16: ಇಲ್ಲಿ ನಾವು 2, 3, 4 ಸಂಖ್ಯೆಗಳು ತೃಪ್ತಿಗೊಳ್ಳದ ಸಂಗತಿಗಳ ಬಗೆಗಿನ ಎರಡು ಜ್ಞಾನೋಕ್ತಿಗಳನ್ನು ಕಾಣುತ್ತೇವೆ. **"ಕೊಡು, ಕೊಡು"** ಎನ್ನುವ ಜಿಗಣೆಯ ಎರಡು ಹೆಣ್ಣು ಮಕ್ಕಳು. ಇಂಗ್ಲೀಷ್ ಮತ್ತು ಇತರ ಭಾಷೆಗಳಲ್ಲಿ ಜಿಗಣೆಯು, ಬೇರೆ ಜನರಿಂದ ಲಾಭ ಪಡೆಯುವ ಮನುಷ್ಯನಿಗೆ ಒಂದು ರೂಪಾಲಂಕಾರವಾಗಿದೆ. ಬಹುಶಃ ಈ ರೂಪಾಲಂಕಾರವನ್ನು ಪ್ರಾಚೀನ ಪ್ಯಾಲೆಸ್ತೇನ್‌ನಲ್ಲಿ ಸಹ ಬಳಸಲಾಗುತ್ತಿತ್ತು. ಎರಡನೇ ಜ್ಞಾನೋಕ್ತಿಯಲ್ಲಿ ತೃಪ್ತಿಹೊಂದದ ನಾಲ್ಕು ಸಂಗತಿಗಳಂಟು: ಪಾತಾಳ, ಹೆರದ ಗರ್ಭ, ಒಣ ಭೂಮಿ, ಮತ್ತು ಉರಿಯುವ ಬೆಂಕಿ. ಈ ತೃಪ್ತಿಹೊಂದದ ಸಂಗತಿಗಳ ಪಟ್ಟಿಗೆ ಇಲ್ಲಿ ಯಾವುದೇ ಹಿನ್ನಲೆ ಅಥವಾ ಮುಕ್ತಾಯವಿಲ್ಲ. ಬಹುಶಃ ಮನುಷ್ಯನ ಜೀವಿತದಲ್ಲಿನ ಎಲ್ಲಾ ಗುರಿ ಮತ್ತು ಸನ್ನಿವೇಶಗಳು ಸಾಗುತ್ತಲೇ ಇರುತ್ತವೆ ಎಂದು ಸಾಮಾನ್ಯ ಅರ್ಥದಲ್ಲಿ ಜೀವನವನ್ನು ಉದಾಹರಿಸುವ ರೀತಿ ಇದಾಗಿರಬಹುದು (ಹೋಲಿಸಿ ಪ್ರಸಂಗಿ 1:3–7).

   ಆ. ಜ್ಞಾನೋ. 30:18–19: ಪುನಃ ಇಲ್ಲಿ ಸಂಖ್ಯೆಯು ಹೆಚ್ಚಾಗುವುದನ್ನು ಕಾಣಬಹುದು (ಮೂರು, ನಾಲ್ಕು). **ಇಎಸ್‌ವಿ ಅಧ್ಯಯನ ಸತ್ಯವೇದವು** ಇದನ್ನು ವಚನ 20 ರಲ್ಲಿನ ಜಾರಳ ಹಿನ್ನಲೆಯ ಒಂದು ಒಗಟಾಗಿ ಕಾಣುತ್ತದೆ: ಈ ನಾಲ್ಕು ಸಂಗತಿಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಅಂಶವೇನು? ವಚನ 20 ಒಗಟಿನ ಅರ್ಥಕ್ಕಿರುವ ಸುಳಿವಾಗಿದೆ. ಜಾರಳು ತಿಂದು ಬಾಯಿ ಒರೆಸಿಕೊಂಡು ನಾನು ತಪ್ಪು ಮಾಡಿಲ್ಲ ಎಂದುಕೊಳ್ಳುತ್ತಾಳೆ. ಅಕ್ಷರಶಃವಾಗಿ ಆಕೆ ಹೇಳುವುದು ಸರಿ. ತಿನ್ನುವುದು ತಪ್ಪಲ್ಲ. ಆದರೆ ಇಲ್ಲಿ ತಿನ್ನುವುದರ ಸಾಂಕೇತಿಕವಾಗಿ ಆಕೆಯ ವ್ಯಭಿಚಾರದ ಜೀವನವಾಗಿದೆ. ತಿಂದ ನಂತರ ಬಾಯನ್ನು ಒರೆಸಿಕೊಳ್ಳುವುದು, ಅಕ್ರಮವಾದ ಲೈಂಗಿಕ ಕ್ರಿಯೆಯ ನಂತರ ಆಕೆಯು ತನ್ನನ್ನು ಶುದ್ಧಪಡಿಸಿಕೊಳ್ಳುವುದನ್ನು ಸೂಚಿಸುತ್ತದೆ. ವಚನ 19ರಲ್ಲಿನ ಹದ್ದು, ಸರ್ಪ ಮತ್ತು ಹಡಗು ತಮ್ಮ ಹಿಂದೆ ಯಾವುದೇ ಜಾಡನ್ನು ಬಿಟ್ಟು ಹೋಗುವುದಿಲ್ಲ.

   ಇ. ಜ್ಞಾನೋ. 30:21–23: ಇಲ್ಲಿ ಸಹ ಸಂಖ್ಯೆಯು ಹೆಚ್ಚುತ್ತದೆ. ಇಲ್ಲಿ ವರ್ಣಿಸುವ ನಾಲ್ಕು ವ್ಯಕ್ತಿಗಳು ಸಹಿಸಿಕೊಳ್ಳದವರಾಗಿದ್ದಾರೆ, ಯಾಕೆಂದರೆ ಅವರಿಂದ ನಿಭಾಯಿಸಲು ಆಗದಂತಹ (ತಿಳುವಳಿಕೆಯಿಲ್ಲದ) ಸ್ಥಾನದಲ್ಲಿ ಅವರನ್ನು ಕೂರಿಸಲಾಗಿದೆ.

3. ದಕ್ಷಿಣ ಭಾರತದ ವಿಶ್ವಾಸಿಗಳಾದ ನಾವು ಆಗೂರನ ಮಾತುಗಳಿಂದ ಕಲಿಯಬಹುದಾದ ಕೆಲವು ಸಂಗತಿಗಳು ಇಂತಿವೆ:

   ಅ. ದೀನರಾಗಿರುವುದು: ನಮ್ಮ ತಿಳುವಳಿಕೆ ಮತ್ತು ಜ್ಞಾನವು ಯಾವಾಗಲೂ ಸೀಮಿತವಾದದ್ದಾಗಿದೆ. ನಾವು ಏನಾಗಿದ್ದೇವೋ ಅದಕ್ಕಿಂತ ಮಿಗಿಲಾಗಿ ಜ್ಞಾನಿಗಳಾಗಿ ನಟಿಸಬಾರದು. ದೇವರ ಕುರಿತಾದ ನಮ್ಮ ತಿಳುವಳಿಕೆ ಮತ್ತು

ಆತನು ತನ್ನ ಸೃಷ್ಟಿಯ ಮೂಲಕ ಮಾಡುವ ಆತನ ಕಾರ್ಯಗಳ ಕುರಿತಾದ ನಮ್ಮ ಜ್ಞಾನವು ಅಲ್ಪವೆಂಬುದನ್ನು ನಾವು ಅರಿಯಬೇಕು.

ಆ. ದೇವರ ಮಾತಿನ ಸತ್ಯ ಮತ್ತು ಮೌಲ್ಯ, ಅಲ್ಲದೆ ಅದನ್ನು ಸರಿಯಾಗಿ ಬಳಸುವುದರ ಪ್ರಾಮುಖ್ಯತೆ (30:5–6).

ಇ. ಆಗೂರನು ತನಗಾಗಿ ಮಾಡುವ ಪ್ರಾರ್ಥನೆಯು ಪಾಲಿಸಲು ಯೋಗ್ಯವಾಗಿದೆ (30:7–9):

- ಕಪಟ ಮತ್ತು ಸುಳ್ಳಿನಿಂದ ನಮ್ಮನ್ನು ಕಾಪಾಡು ದೇವರೆ.
- ದೇವರೆ ನಮ್ಮ ಅನುದಿನದ ಆಹಾರವನ್ನು ದಯಪಾಲಿಸು ಮತ್ತು ನಮ್ಮ ಜೀವಿತದಲ್ಲಿ ನಿನ್ನನ್ನೇ ಯಾವಾಗಲೂ ಪ್ರಥಮ ಸ್ಥಾನದಲ್ಲಿರಿಸಲು ಸಹಾಯ ಮಾಡು.

ಈ. ನಮ್ಮ ತಂದೆತಾಯಿಗಳನ್ನು ಗೌರವಿಸುವುದು, ಸನ್ಮಾನಿಸುವುದು ಮತ್ತು ಅವರನ್ನು ಪೋಷಿಸುವುದು (30:11–14).

ಉ. ನಾವು ಯಾರೆಂಬುದಾಗಿ ತಿಳಿದುಕೊಳ್ಳುವುದು (30:21–23).

ಊ. ದುರಾಲೋಚನೆ ಮಾಡದಿರುವುದು (30:32–33).

4. ದಕ್ಷಿಣ ಭಾರತದ ವಿಶ್ವಾಸಿಗಳಾದ ನಾವು ಲೆಮೂವೇಲನ ತಾಯಿಯ ಬುದ್ಧಿಮಾತುಗಳಿಂದ ಕಲಿಯಬಹುದಾದ ಸಂಗತಿಗಳು (31:3–9):

ಅ. ಲೈಂಗಿಕ ಶೋಧನೆಗಳಿಂದ ದೂರವಿರುವುದು.

ಆ. ಭೌತಿಕ ಶೋಧನೆಗಳಿಂದ ದೂರವಿರುವುದು (ದ್ರಾಕ್ಷಾರಸವಷ್ಟೇ ಅಲ್ಲ, ಆದರೆ ಹೊಟ್ಟೆಬಾಕತನ, ಧನದ ಆಸೆ, ಐಶ್ವರ್ಯದಾಸೆ).

ಇ. ನಮ್ಮ ಸುತ್ತಲಿನವರ ಅಗತ್ಯತೆಗಾಗಿ ನಮ್ಮ ಕಣ್ಣು, ಹೃದಯ ಮತ್ತು ಮನಸ್ಸನ್ನು ಮುಕ್ತವಾಗಿಡುವುದು. ದೀನದರಿದ್ರರಿಗೆ ನ್ಯಾಯ ತೀರಿಸುವುದು.

ಹಿನ್ನುಡಿ: ಗುಣವತಿಯಾದ ಸತಿ (31:10–31) – ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. "ಗುಣವತಿಯಾದ ಸತಿಯ" ಮನೆಯು ಈ ರೀತಿಯಾಗಿ ವರ್ಣಿಸಲ್ಪಟ್ಟಿದೆ:
   - ಆಕೆಯ ಮನೆಯಲ್ಲಿ ಎಣ್ಣೆ ಮತ್ತು ಸೆಣಬಿನ ಕೆಲಸವಿದೆ (ವಚನ 13).
   - ಅಲ್ಲಿ ಕೆಲಸದಾಳುಗಳಿದ್ದಾರೆ (ವಚನ 15).
   - ಹೊಲ ಮತ್ತು ತೋಟವನ್ನು ಖರೀದಿಸಲು ಹಣವಿದೆ (ವಚನ 16).
   - ವ್ಯಾಪಾರವಿದೆ (ವಚನ 18).
   - ಅಲ್ಲಿ ಬಡವರಿಗೆ ಸಹಾಯ/ದಾನಧರ್ಮ ಕಾರ್ಯವಿದೆ (ವಚನ 20).
   - ಮನೆಯಲ್ಲಿ ಹೊದಿಯಲು ಸಾಕಷ್ಟು ಹೊದಿಕೆಯಿದೆ (ವಚನ 22).
   - ಪ್ರತೀಕಾರ್ಯವನ್ನು ಅಚ್ಚುಕಟ್ಟಾಗಿ ನಿಭಾಯಿಸುವ ಗುಣವತಿಯಾದ ಪತ್ನಿಯು ಮನೆಯ ಕೇಂದ್ರವಾಗಿದ್ದಾಳೆ (ವಚನ 10).
2. "ಗುಣವತಿಯಾದ ಸತಿಯು" ಈ ರೀತಿ ವರ್ಣಿಸಲ್ಪಟ್ಟಿದ್ದಾಳೆ:
   - ಆಕೆಯು ಪ್ರೀತಿ ಮತ್ತು ನಂಬಿಗಸ್ತಿಕೆಯಿಂದ ತುಂಬಿದವಳು.
   - ಆಕೆಯು ಕಾಳಜಿವಹಿಸುವವಳು, ಶ್ರಮಪಟ್ಟು ದುಡಿಯುವವಳು (13–15).
   - ಆಕೆ ಬಲಿಷ್ಠಳು (ವಚನ 17).
   - ಆಕೆ ವಿವೇಚನೆಯುಳ್ಳವಳು (ವಚನ 18).
   - ಆಕೆ ದಯಾಳು, ಉದಾರಿ (ವಚನ 20).
   - ಆಕೆ ಕಾಳಜಿಯುಳ್ಳವಳು (ವಚನ 22).
   - ಆಕೆ ಜ್ಞಾನವುಳ್ಳವಳು (ವಚನ 26).
   - ಆಕೆ ದೇವರಿಗೆ ಭಯಪಡುವವಳು (ವಚನ 30).
3. ಆಕೆಯ ಕುರಿತಾಗಿ ಅವಳ ಕುಟುಂಬವು ಈ ರೀತಿ ಯೋಚಿಸುತ್ತದೆ:
   - ಆಕೆ ಬಗ್ಗೆ ಗಂಡನಿಗೆ ಸಂಪೂರ್ಣ ಭರವಸವಿದೆ (ವಚನ 11).
   - ಆಕೆಯ ಗಂಡ ಮತ್ತು ಮಕ್ಕಳು ಅವಳನ್ನು ಹೊಗಳುವರು ಮತ್ತು ಧನ್ಯಳೆಂದು ಹೇಳುವರು (ವಚನ 28).
4. ಸಮುದಾಯ ನಾಯಕರು ಆಕೆಯನ್ನು ಹೊಗಳುವರು (ಪ್ರಶಂಶಿಸುವರು) (ವಚನ 31).
5. ವಾಕ್ಯಭಾಗದ ಕೊನೆಯಲ್ಲಿ ವಿರೋಧಾತ್ಮಕ ಸಮಾನಾಂತರತೆಗೆ ಎರಡು ಉದಾ:

   ಅ. ವಚನ 29: ಗುಣವತಿಯಾದ ಸತಿಯು ಉಳಿದ ಎಲ್ಲಾ ಸ್ತ್ರೀಯರನ್ನು ಮೀರಿಸುತ್ತಾಳೆ

   ಆ. ವಚನ 30: ದೇವರಿಗೆ ಭಯಪಡುವವಳು, ಸೌಂದರ್ಯವತಿಯೊಂದಿಗೆ ತದ್ವಿರುದ್ಧಳಾಗಿದ್ದಾಳೆ.
6. ಜ್ಞಾನೋ. 1:7 ಮತ್ತು 31:30 ರ ಹೋಲಿಕೆಯಿಂದ ನಾನು ಈ ಮುಕ್ತಾಯಕ್ಕೆ ಬರುತ್ತೇನೆ:

ಅ. ಈ ಎರಡೂ ವಚನಗಳು "ದೇವರ ಭಯಕ್ಕೆ" ಒತ್ತು ಕೊಡುತ್ತವೆ. ಹಾಗಾಗಿ ಜ್ಞಾನೋಕ್ತಿಯ ಪ್ರಾರಂಭ ಮತ್ತು ಮುಕ್ತಾಯವೆರಡೂ ಒಂದೇ ಅಂಶವಾಗಿದೆ. "ಯೆಹೋವನ ಭಯ" ಎಂಬ ವಿಷಯವು ಹಳೇ ಒಡಂಬಡಿಕೆಯ ಧರ್ಮ ಅಂದರೆ ನಂಬಿಕೆ ಮತ್ತು ಜೀವನವೆರಡನ್ನೂ ಸಾರಾಂಶಗೊಳಿಸುತ್ತದೆ.

ಆ. "ಯೆಹೋವನ ಭಯ" ಮತ್ತು ಜ್ಞಾನದ ನಡುವೆ ನಿಕಟವಾದ ಸಂಬಂಧವಿದೆಯೆಂದು ಜ್ಞಾನೋಕ್ತಿ ಪುಸ್ತಕದ ಪ್ರಾರಂಭದಲ್ಲೇ ಓದುಗನಿಗೆ ತಿಳಿಸಲಾಗಿದೆ.

ಇ. ಹಳೇ ಒಡಂಬಡಿಕೆಯ ಹಿನ್ನಲೆಯಲ್ಲಿ ಜ್ಞಾನೋಕ್ತಿ ಪುಸ್ತಕದ ಜ್ಞಾನವು ಮುಖ್ಯವಾಗಿ "ಪ್ರಾಯೋಗಿಕ ಜ್ಞಾನ" ವಾಗಿದೆ (ನೀತಿಶಾಸ್ತ್ರ).

ಹಿನ್ನುಡಿ ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. –

2. –

3.

ಅ. ಆಕೆಯು ಹವಳಕ್ಕಿಂತಲೂ ಬಹು ಅಮೂಲ್ಯಳು (ವಚನ 10): 3:1 ಮತ್ತು 8:11 ರಲ್ಲಿನ ಜ್ಞಾನದ ವರ್ಣನೆಯೊಂದಿಗೆ ಹೋಲಿಸಿರಿ.

ಆ. ಆಕೆಯು ಮನೆಗೆ ಬೇಕಾದ ಆಹಾರ ಒದಗಿಸುತ್ತಾಳೆ (ವಚನ 14–15): 9:1–6 ರಲ್ಲಿನ ಜ್ಞಾನದ ವರ್ಣನೆಯೊಂದಿಗೆ ಹೋಲಿಸಿರಿ. ಆಕೆಯು ಮಾಂಸವನ್ನು ಸಿದ್ಧಪಡಿಸಿ, ದ್ರಾಕ್ಷಾರಸದೊಂದಿಗೆ ಸಿದ್ಧಳಾಗಿ ಜನರನ್ನು ತನ್ನ ಮನೆಗೆ ಆಹ್ವಾನಿಸುತ್ತಿದ್ದಾಳೆ.

ಇ. ಆಕೆಯು ಜ್ಞಾನ ಮತ್ತು ಬುದ್ಧಿಯಿಂದ ಮಾತನಾಡುತ್ತಾಳೆ (ವಚನ 26). 4:5–6 ರಲ್ಲಿ ಜ್ಞಾನದ ವರ್ಣನೆಯೊಂದಿಗೆ ಹೋಲಿಸಿರಿ.

ಈ. ಆಕೆಯು ಉಳಿದ ಎಲ್ಲಾ ಸ್ತ್ರೀಯರನ್ನು ಮೀರಿಸುತ್ತಾಳೆ (ವಚನ 29). ಈ ಹೇಳಿಕೆಯಿಂದ ನಮಗೆ ಆಕೆಯು ನಿಜವಾಗಲೂ ಒಬ್ಬ ಸ್ತ್ರೀಯೋ ಅಥವಾ ಆಕೆಯು ಬೇರೆ ಏನನ್ನಾದರೂ ಸೂಚಿಸುತ್ತದೋ ಎಂದೆನಿಸುತ್ತದೆ.

4. ಇದು ಯಾವ ರೀತಿಯ ಪಠ್ಯವಾಗಿದೆ ಎಂಬುದಕ್ಕೆ ಡೇವಿಡ್ ಅಟ್ಕಿನ್‌ಸನ್‌ರವರ ಟಿಪ್ಪಣಿ ಇಂತಿದೆ: ಈ ದಿನ ಒಂದು ವರ್ಣನೆಯಾಗಿ ನಾವು ತೆಗೆದುಕೊಳ್ಳುವ ಈ ವಚನದ ಬಗ್ಗೆ ಒಂದು ಆದರ್ಶವಾದವಿದೆ. ಈ ವರ್ಣನೆಯು ಅನೇಕ ಕ್ರೈಸ್ತೀಯ ಪತ್ನಿಯಂದಿರಿಗೆ ತಾವು ಇದಕ್ಕಿಂತ ಸರಿ ಹೊಂದುವುದಿಲ್ಲವೆಂಬ ಭಾವನೆಯನ್ನುಂಟು ಮಾಡುತ್ತದೆ. ಈ ವಾಕ್ಯಭಾಗವನ್ನು "ಮನೆಯಲ್ಲಿನ ಜ್ಞಾನದ ವರ್ಣನೆ" ಎಂಬುದಾಗಿ ಅರ್ಥೈಸಿಕೊಂಡರೆ ಏನಾಗುತ್ತದೆಂಬುದನ್ನು ನೋಡೋಣ. ಹೆಚ್ಚಾಗಿ ಈ ಸುಂದರವಾದ ಕವನದಲ್ಲಿ ನಾವು ಕಾಣುವುದು ಆಶೀರ್ವದಿಸಲ್ಪಟ್ಟ ಜೀವಿತದಿಂದ ತುಂಬಿದ ಗುಣವತಿಯಾದ ಸತಿಯ ಆದರ್ಶಮಯ ಚಿತ್ರಣವಷ್ಟೇ ಅಲ್ಲ. ಇದರಲ್ಲಿ ಇರುವುದು ಜ್ಞಾನದ ಜೀವನವು ಹೇಗಿರುತ್ತದೆ ಎಂಬುದಾಗಿದೆ. ಜ್ಞಾನವು ಒಂದು ಮರ್ಮಮಯವಾದ ಅಂಶವಲ್ಲ. ಇಲ್ಲೇ ದೇವರ ಜ್ಞಾನವು ಕ್ರಿಯಾತ್ಮಕತೆ, ಜವಾಬ್ದಾರಿ, ಮನೆಯನ್ನು ನಿಭಾಯಿಸುವ ಕಲೆ, ಇತರರಿಗೆ ಆಹಾರವನ್ನು ಪೂರೈಸುವುದು ಮತ್ತು ಬಡವರ ಪರವಾಗಿ ಇರುವುದರಲ್ಲಿ ವ್ಯಕ್ತವಾಗಿದೆ.

ಜ್ಞಾನದ ಮೌಲ್ಯಗಳು – ಉತ್ತರಗಳು

ಪ್ರೀತಿ ಮತ್ತು ನಂಬಿಗಸ್ತಿಕೆ – ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಪ್ರೀತಿಯು ಜ್ಞಾನದ ಮೌಲ್ಯಗಳಲ್ಲೇ ಉನ್ನತವಾದುದ್ದಾಗಿದೆ. ಇದಕ್ಕೆ ಎರಡು ಮುಖ್ಯ ಕಾರಣಗಳೆಂದರೆ:

   ಅ. "ಪ್ರೀತಿ" ಯು ದೇವರ ಗುಣಸ್ವಭಾವ ಮತ್ತು ಆತನ ಕಾರ್ಯವನ್ನು ಸೂಚಿಸುತ್ತದೆ. ತನ್ನ ಜನರು ತನ್ನಂತೆಯೇ ಇರಬೇಕೆಂದು ದೇವರು ಅಪೇಕ್ಷಿಸುತ್ತಾನೆ. ಪ್ರೀತಿಯು ಜ್ಞಾನಿಗಳ ಗುಣವಾಗಿರಬೇಕು (ದೇವರನ್ನು ಪ್ರೀತಿಸುವವರು ಭಯಪಡುವವರು).

   ಆ. ಇಡೀ ಹಳೇ ಒಡಂಬಡಿಕೆಯ ಬೋಧನೆಯನ್ನು ಸಾರಾಂಶಗೊಳಿಸಲು ಯೇಸು ಕ್ರಿಸ್ತನು "ಪ್ರೀತಿ" ಎಂಬ ಪದವನ್ನು ಬಳಸುತ್ತಾರೆ: "ನಿನ್ನ ದೇವರನ್ನು ಮತ್ತು ನೆರೆಯವರನ್ನು ಪ್ರೀತಿಸು" .

2. ಪ್ರೀತಿಯ ಕುರಿತಾದ ಈ ಎರಡು ಇಬ್ರಿಯ ಪದಗಳ ಪ್ರಾಮುಖ್ಯತೆ:

   ಅ. **ಏಹಬ್:** ಇದು "ಹೃದಯದ ಪ್ರೀತಿ" ಯಾಗಿದ್ದು, ನಿಮ್ಮ ಸ್ನೇಹಿತರಿಗಾಗಿನ ಒಂದು ಪ್ರೀತಿಯಾಗಿದೆ. ಇದು ಹೆಚ್ಚಿನ ಜನರು ತಮ್ಮ ವೈರಿಗಳಿಗಾಗಿ ಇಟ್ಟುಕೊಂಡಿರುವ ದ್ವೇಷಕ್ಕೆ ವಿರುದ್ಧವಾದುದ್ದಾಗಿದೆ. ಇದು ದೇವರಿಗಾಗಿ ಮನುಷ್ಯನ ಪ್ರೀತಿಯನ್ನು ವ್ಯಕ್ತಪಡಿಸಲು ಸತ್ಯವೇದ ಬಳಸುವ ಪದ ಸಹ ಇದಾಗಿದೆ.

   ಆ. **ಹೆಸೆದ್:** ಹೆಚ್ಚಾಗಿ ಈ ಪದವು "ಸ್ಥಿರವಾದ ಪ್ರೀತಿ" ಅಥವಾ "ನಂಬಿಗಸ್ಥ ಪ್ರೀತಿ" ಎಂಬುದಾಗಿ ಭಾಷಾಂತರಿಸಲ್ಪಟ್ಟಿದೆ. ಇದು ದೇವರು ಮನುಷ್ಯನಿಗೆ ತೋರುವ ಪ್ರೀತಿಯಾಗಿದೆ. ಕಾಲಕಾಲಕ್ಕೆ ಬದಲಾಗದ ಪ್ರೀತಿಯಾಗಿದೆ, ಇದು ಸ್ಥಿರವಾಗಿರುವ ಪ್ರೀತಿಯಾಗಿದೆ. ಇದು ಹಳೇ ಒಡಂಬಡಿಕೆಯ ಪ್ರೀತಿ ಮತ್ತು ಹೊಸ ಒಡಂಬಡಿಕೆಯ ಅಗಾದ ಪ್ರೀತಿ, ಪಾಪಮಯ ಮನುಷ್ಯನಿಗಾಗಿನ ದೇವರ ತ್ಯಾಗಮಯ ಪ್ರೀತಿಯಾಗಿದೆ. ಜ್ಞಾನೋಕ್ತಿ ಪುಸ್ತಕವು ಈ ಪದವನ್ನು ದೇವರ ಅಚಲ (ಸ್ಥಿರ) ವಾದ ಪ್ರೀತಿಗೆ ಉಪಯೋಗಿಸುತ್ತದೆ.

3. ಜ್ಞಾನೋಕ್ತಿ 3:3–4 ಹಳೇ ಒಡಂಬಡಿಕೆಯ ಆತ್ಮಿಕತೆಯಲ್ಲಿ ಪ್ರೀತಿ ಮತ್ತು ನಂಬಿಗಸ್ತಿಕೆಯ ಪ್ರಾಮುಖ್ಯತೆಯನ್ನು ತೋರಿಸುತ್ತದೆ:

   ಅ. ವಚನ 3: ಪ್ರೀತಿಸತ್ಯತೆಗಳು ನಿನ್ನನ್ನು ಬಿಡದಿರಲಿ ಎಂದು ಓದುಗ (ಮಗ) ನಿಗೆ ಹೇಳುತ್ತದೆ. ದೇವರಿಗೆ ಮತ್ತು ಆತನ ಪ್ರೀತಿಸತ್ಯತೆಗಳಿಗೆ ನಿಕಟವಾಗಿರುವುದರ ಪ್ರಾಮುಖ್ಯತೆಯನ್ನು ತಿಳಿಸಲು ಎರಡು ರೂಪಾಲಂಕಾರಗಳನ್ನು ಬಳಸುತ್ತದೆ:

   - "ದೇವರ ಪ್ರೀತಿಸತ್ಯತೆಗಳನ್ನು ನಿನ್ನ ಕೊರಳಿಗೆ ಕಟ್ಟು" . ಈ ರೀತಿಯಲ್ಲಿ ಸುಂದರವಾದ ಬಂಗಾರದ ನೆಕ್ಲೆಸ್ ಅದರ ಒಡೆಯನ ಬಳಿ ಭದ್ರವಾಗಿರುತ್ತದೆ.

   - "ದೇವರ ಪ್ರೀತಿಸತ್ಯತೆಗಳನ್ನು ನಿನ್ನ ಹೃದಯದ ಹಲಗೆಯಲ್ಲಿ ಬರೆ" . ದೇವರು ಕಲ್ಲಿನ ಹಲಗೆಯ ಮೇಲೆ ದಶಾಜ್ಞೆಗಳನ್ನು ಬರೆದನು. ಇದು ಅವುಗಳ ಪ್ರಾಮುಖ್ಯತೆಯನ್ನು ಸೂಚಿಸುತ್ತದೆ. ಹೃದಯವು ಒಬ್ಬ ವ್ಯಕ್ತಿಯ ಕೇಂದ್ರಭಾಗವಾಗಿದೆ, ಇದು ಆತನ ಇಡೀ ವ್ಯಕ್ತಿತ್ವವನ್ನು ಪ್ರತಿನಿಧಿಸುತ್ತದೆ.

   ಆ. ವಚನ 4 ಇದರ ಪರಿಣಾಮವನ್ನು ಸೂಚಿಸುತ್ತದೆ: ಓದುಗನು (ಮಗನು) ದೇವರಿಂದಲೂ, ಮನುಷ್ಯರಿಂದಲೂ ಗೌರವಿಸಲ್ಪಡುತ್ತಾನೆ.

4. ಜ್ಞಾನೋ. 11:25 ಮತ್ತು 15:27 ರಲ್ಲಿ ದುರಾಸೆ ಮತ್ತು ಉದಾರತೆಗಳು ಈ ರೀತಿಯಾಗಿ ಮೌಲ್ಯಮಾಪನ ಮಾಡಲ್ಪಟ್ಟಿವೆ:

   ಅ. ದುರಾಸೆಯು ನಕಾರಾತ್ಮಕವಾಗಿದ್ದು ಇದು ಕೇವಲ ನಿಮಗೆ ಮಾತ್ರವಲ್ಲ ನಿಮ್ಮ ಕುಟುಂಬಕ್ಕೇ ಕಷ್ಟ ಮತ್ತು ನಾಶನವನ್ನು ತರುತ್ತದೆ. ಲಂಚ ಕೇಳುವುದು ನಿನ್ನನ್ನು ದುರಾಸೆಯುಳ್ಳವನೆಂಬುದಾಗಿ ತೋರಿಸುತ್ತದೆ.

ಆ. ಉದಾರತೆಯು ಸಕಾರಾತ್ಮಕವಾದುದ್ದಾಗಿದೆ. ಜನರೊಂದಿಗೆ ಉದಾರವಾಗಿರುವುದೆಂದರೆ ಅವರನ್ನು ಪುನಶ್ಚೇತನಗೊಳಿಸಿದಂತೆ (ಅವರಿಗೆ ಕೊಟ್ಟಂತೆ). ನಿಮ್ಮ ಉದಾರತೆಗೆ ಪ್ರತಿಫಲವಿದೆ: ನೀವೇ ಪುಷ್ಟಿಗೊಳ್ಳುವಿರಿ.

5. 11:13, 25, 12:25, 14:21, 25, 17:17, 18:24 ಮತ್ತು 19:22 ಅನ್ನು ಆಧರಿಸಿ ಜ್ಞಾನದ ಸ್ನೇಹದ ಮೌಲ್ಯಗಳು: ಒಬ್ಬ ಒಳ್ಳೇ ಸ್ನೇಹಿತನು ಹೀಗಿರಬೇಕು:

ಅ. ಒಬ್ಬ ಒಳ್ಳೇ ಸ್ನೇಹಿತನು ಪ್ರಾಮಾಣಿಕ ಮತ್ತು ನಂಬಿಗಸ್ತನಾಗಿರಬೇಕು. ಇದರರ್ಥ ಆತನು ಇತರರ ಬಗ್ಗೆ ಚಾಡಿಯನ್ನಾಗಲಿ, ಸುಳ್ಳನ್ನಾಗಲಿ ಹೇಳಬಾರದು. ಅಲ್ಲದೆ ಆತನು ರಹಸ್ಯಗಳನ್ನು ಮುಚ್ಚುವವನಾಗಿರುತ್ತಾನೆ ಎಂದರ್ಥ. ಆತನು ನಿಮ್ಮನ್ನು ವಂಚಿಸುವುದಿಲ್ಲ.

ಆ. ಒಬ್ಬ ಒಳ್ಳೇ ಸ್ನೇಹಿತನು ದಯಾಳು ಮತ್ತು ಉದಾರಿಯಾಗಿರುತ್ತಾನೆ. ಇದರರ್ಥ ನಿಮ್ಮ ಅಗತ್ಯತೆಯಲ್ಲಿ ಆತನು ಸಹಾಯ ಮಾಡುವನು. ಅಲ್ಲದೇ ನೀವು ದುಃಖದಲ್ಲಿರುವಾಗ ಆತನು ನಿಮಗೆ ಉತ್ತೇಜನ ನೀಡುವನು.

ಇ. ಒಬ್ಬ ಒಳ್ಳೇ ಸ್ನೇಹಿತನು ಈಗಾಗಲೇ ಇರುವ ತನ್ನ ಸ್ನೇಹಿತನಿಗೆ ಮಾತ್ರ ತನ್ನ ಸ್ನೇಹ ಮತ್ತು ಉದಾರತೆಯನ್ನು ಸೀಮಿತಗೊಳಿಸುವುದಿಲ್ಲ. ಆತನು ಅಗತ್ಯವಿರುವವರೆಲ್ಲರಿಗೂ ದಯಾಳುವಾಗಿರುವನು. ಆತನು ಯಾರನ್ನೂ ಕೀಳಾಗಿ ನೋಡುವುದಿಲ್ಲ.

ಈ. ಆದರೆ ಒಬ್ಬ ಒಳ್ಳೇ ಸ್ನೇಹಿತನು ಶ್ರೀಮಂತನೂ ಮತ್ತು ಪ್ರಭಾವಶಾಲಿಯೂ ಆಗಿರಬೇಕೆಂದಿಲ್ಲ. ಐಶ್ವರ್ಯ ಮತ್ತು ಅಧಿಕಾರಕ್ಕಿಂತ ಪ್ರಾಮಾಣಿಕತೆಯು ಅತೀ ಪ್ರಾಮುಖ್ಯವಾದುದ್ದಾಗಿದೆ.

6. ಶಿಸ್ತು ಪ್ರೀತಿಯ ಮಧ್ಯೆ ಒಂದು ಸಕಾರಾತ್ಮಕವಾದ ಸಂಬಂಧವಿದೆಯೆಂದು ಜ್ಞಾನೋಕ್ತಿ ಪುಸ್ತಕವು ಹೇಳುತ್ತದೆ. ಈ ಲೋಕದಲ್ಲಿ ಸಾಮರಸ್ಯದಿಂದ ಕಾರ್ಯ ಮಾಡಲು ಜನರಿಗೆ ಶಿಸ್ತು ಬೇಕಿದೆ. ಹಾಗೇ ಮುಂದೆ ಜವಾಬ್ದಾರಿಯುಳ್ಳವರಾಗಲು ಪೋಷಕರು ಮಕ್ಕಳನ್ನು ಶಿಕ್ಷಿಸಬೇಕಿದೆ. ಆದರೆ ಅಂತಹ ಶಿಕ್ಷೆಯು ಪ್ರೀತಿಯಿಂದ ಆಗಬೇಕಿದೆ ವಿನಃ ಕೋಪದಿಂದಲ್ಲ. ಅಲ್ಲದೆ ಒಬ್ಬ ಯೌವನಸ್ಥನು ಶಿಕ್ಷೆಯನ್ನು ಉತ್ತಮ ಮನೋಭಾವದಿಂದ ಸ್ವೀಕರಿಸಬೇಕು. ತನ್ನ ಪೋಷಕರು ತನ್ನನ್ನು ಪ್ರೀತಿಸುತ್ತಾರೆ ಮತ್ತು ತನಗಾಗಿ ಅವರು ಒಳ್ಳೇದನ್ನೇ ಬಯಸುತ್ತಾರೆಂಬುದನ್ನು ಆತನು ತಿಳಿದಿರಬೇಕು. ಶಿಕ್ಷೆ ಅಥವಾ ಶಿಸ್ತು ತಂದೆತಾಯಿಯ ಒಂದು ಪ್ರಾಮುಖ್ಯವಾದ ಅಂಶವಾಗಿದೆ ಎಂಬುದನ್ನು ಆತನು ಗ್ರಹಿಸಿಕೊಳ್ಳಬೇಕು.

ನ್ಯಾಯ ಮತ್ತು ನೀತಿ – ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಜ್ಞಾನೋ. 20:22 ಮತ್ತು 21:15 ರಿಂದ ದೇವರು ಮತ್ತು ನ್ಯಾಯದ ಬಗ್ಗೆ ನಾವು ಈ ಸಂಗತಿಗಳನ್ನು ಕಲಿಯಬಹುದು:

   ಅ. ನ್ಯಾಯವನ್ನು ನಾವು ನಮ್ಮ ಕೈಗೆ ತೆಗೆದುಕೊಳ್ಳಬಾರದು, ಆದರೆ ಅದನ್ನು ದೇವರಿಗೆ ಬಿಡಬೇಕು.

   ಆ. ದೇವರ ನ್ಯಾಯಕ್ಕಾಗಿ ನಾವು ತಾಳ್ಮೆಯಿಂದ ಕಾದಿರಬೇಕು.

   ಇ. ದೇವರ ನ್ಯಾಯವು ಪ್ರತ್ಯಕ್ಷವಾಗುವಾಗ ಅದು ನೀತಿವಂತರಿಗೂ ಮತ್ತು ದುಷ್ಟರಿಗೂ ಸ್ಪಷ್ಟವಾಗಿ ತೋರಿಬರುತ್ತದೆ.

   ಈ. ದೇವರ ನ್ಯಾಯವು ನೀತಿಯುಳ್ಳದ್ದಾಗಿರುತ್ತದೆ. ಇದು ದೇವಜನರಿಗೆ ಆಶೀರ್ವಾದವನ್ನು ತಂದರೆ ದುಷ್ಟರಿಗೆ ಭಯ ಮತ್ತು ದುರಂತ (ಆಪತ್ತು) ವನ್ನು ತರುತ್ತದೆ.

2. ನಮ್ಮ ಮಾನುಷಿಕ ನ್ಯಾಯವು **"ದೇವರ ನ್ಯಾಯದಿಂದ"** ತಿದ್ದುಪಡಿ ಮತ್ತು ರೂಪಾಂತರಗೊಳ್ಳಲು ನಾವು ಅನುವು ಮಾಡಿಕೊಡಬೇಕು, ಯಾಕೆಂದರೆ – ನೀತಿವಂತಿಕೆಯು ದೇವರಿಂದಲೇ ಬರುತ್ತದೆ. ನಾವು ತಿಳಿದಿರುವಂತಹ ನ್ಯಾಯವು ಈ ಪ್ರಸ್ತುತ ಲೋಕದ ಗುಣಮಟ್ಟದಿಂದ ಭ್ರಷ್ಟಗೊಂಡಿದೆ ಮತ್ತು ದೇವರ ನೀತಿವಂತಿಕೆಯ ಬಗೆಗಿನ ನಮ್ಮ ತಿಳುವಳಿಕೆಯು ಸೀಮಿತವಾದುದ್ದಾಗಿದೆ. ಆದರೆ ದೇವರ ವಾಕ್ಯವನ್ನು ಆಳವಾಗಿ ತಿಳಿದುಕೊಂಡು, ದೇವರೊಂದಿಗೆ ನಾವು ನಿಕಟವಾದ ಅನ್ಯೋನ್ಯತೆಯಿಂದ ನಡೆದರೆ, ಒಳ್ಳೇದು ಮತ್ತು ಕೆಟ್ಟದ್ದರ ಬಗೆಗಿನ ನಮ್ಮ ಜ್ಞಾನ, ನ್ಯಾಯದ ಕುರಿತಾದ ನಮ್ಮ ತಿಳುವಳಿಕೆಯು ಹೆಚ್ಚೆಚ್ಚಾಗಿ ದೇವರ ನೀತಿ ಮತ್ತು ಆತನ ದೈವಿಕ ನ್ಯಾಯಕ್ಕೆ ರೂಪಾಂತರವಾಗಿರುತ್ತದೆ.

3. ಜ್ಞಾನೋ. 22:2, 14:31 ಮತ್ತು 17:5 ರಿಂದ ದೇವರು, ಆತನ ಜನರ ಮತ್ತು ಬಡವರ ನಡುವಿನ ಸಂಬಂಧದ ಬಗ್ಗೆ ನಾವು ಈ ಸಂಗತಿಗಳನ್ನು ಕಲಿಯಬಹುದು:

   ಅ. ದೇವರು ಬಡವರನ್ನು, ಧನಿಕರನ್ನು ಸೃಷ್ಟಿಸಿದವನಾಗಿದ್ದಾನೆ. ಇದರರ್ಥ ಬಡವರೂ ಸಹ ದೇವರ ಸ್ವರೂಪದಲ್ಲಿಯೇ ಸೃಷ್ಟಿಸಲ್ಪಟ್ಟಿದ್ದಾರೆ. ಹಾಗಾಗಿ ಬಡವರು ಮತ್ತು ಶ್ರೀಮಂತರ ಮಧ್ಯೆ ಯಾವುದೇ ಮೂಲಭೂತವಾದ ವ್ಯತ್ಯಾಸವಿಲ್ಲ.

   ಆ. ಬಡವರನ್ನು ಕೀಳಾಗಿ ನೋಡುವುದು ಒಂದು ರೀತಿಯಲ್ಲಿ ದೇವರಿಗೆ ಅಗೌರವ ತೋರಿಸಿದಂತೆ. ಬಡವರನ್ನು ನೋಡಿಕೊಳ್ಳುವ ನಮ್ಮ ಬಗೆಯು ದೇವರೊಂದಿಗಿನ ನಮ್ಮ ಸಂಬಂಧವನ್ನು ಸೂಚಿಸುತ್ತದೆ.

   ಇ. ಬಡವರೊಂದಿಗೆ ನಾವು ಹೇಗೆ ವರ್ತಿಸುತ್ತೇವೆ ಎಂಬುದರ ಆಧಾರದ ಮೇಲೆ ದೇವರು ನಮಗೆ ಪ್ರತಿಫಲವನ್ನು ಕೊಡುತ್ತಾನೆ. ಒಂದು ವೇಳೆ ನಾವು ಬಡವರನ್ನು ಗೌರವಿಸಿ, ಸನ್ಮಾನಿಸಿ ಅವರಿಗೆ ಸಹಾಯ ಮಾಡಿದರೆ ಖಂಡಿತವಾಗಿ ದೇವರ ಆಶೀರ್ವಾದವನ್ನು ಮುನ್ನೋಡಬಹುದು. ಆದರೆ ಬಡವರನ್ನು ಹಿಂಸಿಸಿ, ಹೀಯಾಳಿಸಿದರೆ ದೇವರ ನ್ಯಾಯತೀರ್ಪು ನಮ್ಮ ಮೇಲೆ ಬರುತ್ತದೆ.

4. ಜ್ಞಾನೋಕ್ತಿ 15:25, 18:23, 19:7, 21:13 ಮತ್ತು 22:9 ರಿಂದ ಬಡವರ ಪರಿಸ್ಥಿತಿ ಮತ್ತು ದೇವಜನರಿಂದ ನಾವು ಅವರೊಂದಿಗೆ ಹೇಗೆ ವ್ಯವಹರಿಸಬೇಕೆಂಬುದರ ಬಗ್ಗೆ ಈ ಸಂಗತಿಗಳನ್ನು ಕಲಿಯಬಹುದು:

   ಅ. ದೇವರು ಬಡವರ ರಕ್ಷಕನಾಗಿದ್ದಾನೆ. ವಿಧವೆಯರು, ಅನಾಥರು ಮತ್ತು ಪರದೇಶಿಗಳು ಪ್ರಾಚೀನ ಇಸ್ರಾಯೇಲಿನಲ್ಲಿನ ಬಡವರಾಗಿದ್ದರು.

   ಆ. ಒಬ್ಬ ಬಡವನು ಧನಿಕನಿಂದ ದಯೆಯನ್ನು ನಿರೀಕ್ಷಿಸುವಂತಿರಲಿಲ್ಲ. ಬಡವನು ಕೇವಲ ದೇವರಿಂದ ಮಾತ್ರ ಕರುಣೆಯನ್ನು ಅಪೇಕ್ಷಿಸಬಹುದು.

   ಇ. ಬಡವನು ತನ್ನ ಸ್ವಂತ ಜನರಿಂದ ತಿರಸ್ಕಾರವನ್ನು ಹೊಂದಬಹುದು. ಕೇವಲ ದೇವರು ಮಾತ್ರ ಬಡವನನ್ನು ತಿರಸ್ಕರಿಸುವುದಿಲ್ಲ.

   ಈ. ಬಡವನಿಗೆ ಸ್ನೇಹಿತನು ದೊರೆಯುವುದು ಕಷ್ಟ. ಇದರರ್ಥ ದೇವರು ಮಾತ್ರ ಬಡವನಿಗೆ ನಂಬತಕ್ಕ ಮತ್ತು ನಿಜವಾದ ಸ್ನೇಹಿತನಾಗಿದ್ದಾನೆ.

   ಉ. ಒಬ್ಬ ಮನುಷ್ಯನು ಬಡವರೊಂದಿಗೆ ವರ್ತಿಸುವ ರೀತಿಯಿಂದ ದೇವರು ಆತನನ್ನು ಪರೀಕ್ಷಿಸುತ್ತಾನೆ. ನಾವು ಬಡವರ ಮೊರೆಯನ್ನು ಕೇಳಿದರೆ ದೇವರು ನಮ್ಮ ಪ್ರಾರ್ಥನೆಯನ್ನು ಆಲಿಸುತ್ತಾನೆ. ನಾವು ನಮಗಿರುವ

ಸಂಪನ್ಮೂಲಗಳನ್ನು ಬಡವರೊಂದಿಗೆ ಹಂಚಿಕೊಂಡರೆ ದೇವರು ತನ್ನ ಸಂಪನ್ಮೂಲಗಳನ್ನು ನಮ್ಮೊಂದಿಗೆ ಹಂಚಿಕೊಂಡು ನಮ್ಮನ್ನು ಆಶೀರ್ವದಿಸುತ್ತಾನೆ.

ಊ. ದೇವಜನರಾದ ನಾವು ದೇವರ ನೀತಿ ಮತ್ತು ನ್ಯಾಯವನ್ನು ಪ್ರತಿಬಿಂಬಿಸಬೇಕು.

- ನಾವು ಬಡವರನ್ನು ರಕ್ಷಿಸುವವರಾಗಿರಬೇಕು.
- ನಾವು ಬಡವರಿಗೆ ಕರುಣೆಯನ್ನು ತೋರಿಸಬೇಕು.
- ನಾವು ಬಡವರಿಗೆ ಆಶ್ರಯ ಕೊಡಬೇಕು.
- ಬಡವರಿಗೆ ಸ್ನೇಹಿತರಾಗಬೇಕು.
- ಬಡವರ ಮೊರೆಗೆ ಕಿವಿಮುಚ್ಚಿಕೊಳ್ಳಬಾರದು.

5. ಜ್ಞಾನೋ. 11:1, 20:10, 20:23, 20:17, 17:26, 18:5, 19:28, 21:28, 12:17 ಮತ್ತು 17:13 ರಿಂದ ಆರ್ಥಿಕ ಮತ್ತು ನ್ಯಾಯಸ್ಥಾನದ ಪ್ರಾಮಾಣಿಕತೆಯ ಬಗ್ಗೆ ನಾವು ಈ ಸಂಗತಿಗಳನ್ನು ಕಲಿಯುತ್ತೇವೆ:

ಅ. ಒಬ್ಬ ದೇವಮನುಷ್ಯನು ಮೋಸಗಾರನಾಗಿರಬಾರದು. ಅನ್ಯಾಯವಾಗಿ ಗಳಿಸುವವರನ್ನು ದೇವರು ಶಿಕ್ಷಿಸುತ್ತಾನೆ.

ಆ. ದೇವಮನುಷ್ಯನು ನಿರ್ದೋಷಿಗಳನ್ನು ಶಿಕ್ಷಿಸಬಾರದು. ಬಡವನಿಗೆ ನ್ಯಾಯವನ್ನು ತಪ್ಪಿಸಬಾರದು.

ಇ. ದೇವಮನುಷ್ಯನು ಸರಿಯಾದುದ್ದನ್ನು ಮಾಡುತ್ತಾ ದುಡಿಯುವ ಅಧಿಕಾರಿಗಳನ್ನು ದಂಡಿಸಬಾರದು (ಅವರ ಬಗ್ಗೆ ದೂರು ಹೇಳಬಾರದು).

ಈ. ದೇವಮನುಷ್ಯನು ನ್ಯಾಯಾಲದಲ್ಲಿ ನ್ಯಾಯವನ್ನೇ ಪಾಲಿಸಬೇಕು. ಆತನು ಸುಳ್ಳುಸಾಕ್ಷಿ ಹೇಳಬಾರದು.

ಉ. ದೇವಮನುಷ್ಯನು ದುಷ್ಟತನಕ್ಕೆ ಅನುವು ಮಾಡಿಕೊಡಬಾರದು. ದುಷ್ಟರೊಂದಿಗೆ ಕೈ ಜೋಡಿಸಬಾರದು.

ಊ. ದೇವಮನುಷ್ಯನು ಲಂಚ ತೆಗೆದುಕೊಳ್ಳಬಾರದು. ಲಂಚ ನ್ಯಾಯವನ್ನು ಹಾಳುಮಾಡುತ್ತದೆ.

6. ಜ್ಞಾನೋ. 15:9, 10:3, 10:7, 10:11, 12:5 ಮತ್ತು 12:21 ರಲ್ಲಿ ನೀತಿವಂತರು ಮತ್ತು ದುಷ್ಟರು ಈ ರೀತಿಯಾಗಿ ತದ್ವಿರುದ್ಧವಾಗಿದ್ದಾರೆ:

ಅ. ದೇವರ ಸ್ವಭಾವ: ಆತನು ನೀತಿವಂತರನ್ನು ಪ್ರೀತಿಸುತ್ತಾನೆ ಆದರೆ ದುಷ್ಟರನ್ನು ದ್ವೇಷಿಸುತ್ತಾನೆ (15:9).

ಆ. ದೇವರು ನೀತಿವಂತರಿಗೆ ಒದಗಿಸುತ್ತಾನೆ ಆದರೆ ದುಷ್ಟರಿಗಲ್ಲ (10:3).

ಇ. ಭವಿಷ್ಯದಲ್ಲಿ ಅವರ ಹೆಸರು: ಶಿಷ್ಟರ ಸ್ಮರಣೆಯು ಆಶೀರ್ವಾದಕ್ಕೆ ಆಸ್ಪದವಾಗುವುದು. ದುಷ್ಟರ ನಾಮವು ನಿರ್ನಾಮವಾಗುವುದು (10:7).

ಈ. ಇತರ ಜನರ ಮೇಲೆ ಅವರ ಪ್ರಭಾವ: ನೀತಿವಂತನು ಇತರರಿಗೆ ಆಶೀರ್ವಾದವನ್ನು ತರುವನು, ದುಷ್ಟನು ಇತರರಿಗೆ ಹಿಂಸೆ (ಬಲತ್ಕಾರ) ಮತ್ತು ನಾಶನವನ್ನು ತರುವನು (10:11).

ಉ. ಅವರ ನೈತಿಕ ಗುಣಲಕ್ಷಣ: ನೀತಿವಂತರು ನ್ಯಾಯ ನಡಿಸುವರು (ದೇವರ ನ್ಯಾಯವನ್ನು ಪ್ರತಿಬಿಂಬಿಸುವರು), ದುಷ್ಟರು ಮೋಸವನ್ನು ಕಲ್ಪಿಸುವರು (12:5).

ಊ. ದೇವರ ರಕ್ಷಣೆ: ದೇವರು ನೀತಿವಂತರನ್ನು ಕಾಪಾಡುವನು ಆದರೆ ದುಷ್ಟರನ್ನು ಕಾಪಾಡುವುದಿಲ್ಲ (12:21).

7. ಜ್ಞಾನೋ. 12:22, 13:6, 14:5, 14:8, 15:26, 17:20, 20:7, 20:11, 21:8, 22:11, 10:7 ಮತ್ತು 16:31 ರಿಂದ ದೇವರು ತನ್ನ ಜನರಿಂದ ಅಪೇಕ್ಷಿಸುವ ವೈಯಕ್ತಿಕ ಪ್ರಾಮಾಣಿಕತೆಯ ಬಗ್ಗೆ ನಾವು ಅನೇಕ ಸಂಗತಿಗಳನ್ನು ಕಲಿಯುತ್ತೇವೆ. ವೈಯಕ್ತಿಕ ಪ್ರಾಮಾಣಿಕತೆಯೊಂದಿಗೆ ದೇವಜನರಾದ ನಮ್ಮ ಕೆಲವು ಗುಣಸ್ವಭಾವಗಳು ಇಂತಿವೆ:

ಅ. ನಾವು ಪ್ರಾಮಾಣಿಕರು ಮತ್ತು ಸತ್ಯವಂತರು (12:22).

ಆ. ನಮ್ಮ ನೀತಿವಂತಿಕೆಯು ನಮ್ಮನ್ನು ಕಾಪಾಡುತ್ತದೆ (13:6).

ಇ. ನಾವು ಯಥಾರ್ಥ ಮತ್ತು ಸತ್ಯಸಾಕ್ಷಿಗಳಾಗಿದ್ದೇವೆ (14:5).

ಈ. ನಮ್ಮ (ಮಾತು) ಆಲೋಚನೆಗಳು ದೇವರನ್ನು ಮೆಚ್ಚಿಸುವಂತಿವೆ (15:26).

ಉ. ನಮ್ಮ ಮನಸ್ಸು ಭ್ರಷ್ಟವಾಗಿಲ್ಲ, ನಮ್ಮ ಮಾತುಗಳು ವಂಚನೆಯಿಂದ ತುಂಬಿಲ್ಲ (17:20).

ಊ. ನಮ್ಮ ಜೀವಿತವು ನಿರ್ದೋಷವಾಗಿರುತ್ತದೆ (20:7).

ಋ. ನಾವು ಸವಿಮಾತನಾಡುವವರು, ನಮ್ಮ ದೇಶದ ನಾಯಕರುಗಳು ಸಹ ನಮ್ಮನ್ನು ಗೌರವಿಸಬೇಕು (22:11).

ಎ. ನಮ್ಮ ಒಳ್ಳೆಯ ಹೆಸರು ನಮ್ಮ ಸಾವಿನ ನಂತರ ಸಹ ಇರುವುದು (10:7).

ಏ. ನಾವು ಉತ್ತಮ ರೀತಿಯಲ್ಲಿ ವೃದ್ಧಾಪ್ಯ ತಲುಪುತ್ತೇವೆ, ದೇವರು ನಮ್ಮೊಂದಿಗಿದ್ದು, ನಮ್ಮನ್ನು ಆಶೀರ್ವದಿಸಿದ್ದಾನೆಂದು ಜನರು ತಿಳಿದುಕೊಳ್ಳುವರು (16:31).

ಕುಟುಂಬ – ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಜ್ಞಾನೋಕ್ತಿ 18:22, 19:14, 12:4 ಮತ್ತು 14:1 ರಿಂದ "ಒಬ್ಬ ಉತ್ತಮ (ಒಳ್ಳೆಯ) ಪತ್ನಿ" ಯ ಬಗ್ಗೆ ನಾವು ಈ ಸಂಗತಿಗಳನ್ನು ಕಲಿಯುತ್ತೇವೆ:

   ಅ. ಒಬ್ಬ ಗಂಡನು (ಪುರುಷನು) ಒಬ್ಬ ಒಳ್ಳೆಯ ಹೆಂಡತಿಯನ್ನು ಪಡೆಯುವುದು ಅತೀ ಪ್ರಾಮುಖ್ಯವಾದುದ್ದಾಗಿದೆ. ಆಕೆಯು ಆತನ ಜೀವನಕ್ಕೆ ಕ್ರಮ ಮತ್ತು ಸ್ಥಿರತೆಯನ್ನು ತರುವಳು. ತಮ್ಮ ಮನೆ ಮತ್ತು ಕುಟುಂಬದ ಬಗ್ಗೆ ಆತನು ಆಕೆಯಲ್ಲಿ ಭರವಸವಿಡಬಹುದು. ಆತನು ಆಕೆಯ ಬಗ್ಗೆ ಹೆಮ್ಮೆ ಮತ್ತು ಸಂತೋಷಪಡುವನು. ಆಕೆಯು ಆತನಿಗೆ ಗೌರವವನ್ನು ತರುವಳು.

   ಆ. ಮಾನ ಕಳೆಯುವ ಪತ್ನಿಯು ಗಂಡನಿಗೆ ಕಷ್ಟ ಮತ್ತು ದುಃಖವನ್ನು ತಂದೊಡ್ಡುವಳು. ಆಕೆಯು ಆತನ ಎಲುಬಿಗೆ ಕ್ಷಯದಂತಿರುವಳು.

   ಇ. ಒಳ್ಳೆಯ ಹೆಂಡತಿಯು ದೇವರಿಂದ ಬಂದ ವರವಾಗಿದ್ದಾಳೆ. ಪುರುಷನು ತನ್ನಿಷ್ಟದ ಪತ್ನಿಯನ್ನು ಹುಡುಕುವನು. ಆತನ ತಂದೆತಾಯಿ ಆತನಿಗೆ ಸರಿಹೊಂದುವ ಹುಡುಗಿಯನ್ನೇ ಹುಡುಕುವರು. ಸಭಾಪಾಲಕರು ಸಹ ಈ ಹುಡುಕುವ ಮತ್ತು ಆಯ್ಕೆ ಮಾಡುವ ಕಾರ್ಯದಲ್ಲಿ ಭಾಗಿಯಾಗುವರು. ದೇವರು ಕಡೇ ಮಾತನ್ನು ಹೇಳುವವರೆಗೂ ಇವೆಲ್ಲಾ ಪ್ರಯತ್ನಗಳೂ ಸಹ ವ್ಯರ್ಥವೇ.

   ಈ. ಒಬ್ಬ ಪತ್ನಿಯ ಗುಣವು ಆಕೆಯು ತನ್ನ ಮನೆ ಮತ್ತು ಕುಟುಂಬವನ್ನು ನಿಭಾಯಿಸುವುದರಲ್ಲಿ ತೋರಿಬರುತ್ತದೆ. ಆಕೆಯು ಬುದ್ಧಿ ಮತ್ತು ಜ್ಞಾನವಂತಳಾಗಿರುತ್ತಾಳೆ.

   ಉ. ಒಬ್ಬ ಪತ್ನಿಯ ಗುಣಸ್ವಭಾವವು ಸಮಾಜದಿಂದ ಗಮನಿಸಲ್ಪಡುತ್ತದೆ.

2. ಜ್ಞಾನೋ. 5:18–20, 15:17, 19:13, 21:19 ಮತ್ತು 12:4 ರಿಂದ ವೈವಾಹಿಕ ಜೀವನ (ದಾಂಪತ್ಯ) ದ ಬಗ್ಗೆ ನಾವು ಈ ಸಂಗತಿಗಳನ್ನು ಕಲಿಯುತ್ತೇವೆ:

   ಅ. ದಾಂಪತ್ಯ ಜೀವನವು ಲೈಂಗಿಕ ಸುಖ (ತೃಪ್ತಿ) ವನ್ನು ಕೊಡುತ್ತದೆ. ಲೈಂಗಿಕತೆಯು ದಾಂಪತ್ಯ ಜೀವನದ ಒಂದು ಭಾಗವಾಗಿದೆ.

   ಆ. ಲೈಂಗಿಕ ಕ್ರಿಯೆಯು ವೈವಾಹಿಕ ಚೌಕಟ್ಟಿನೊಳಗೇ ನಡೆಯಬೇಕು. ವಿವಾಹದ ಹೊರಗಿನ ಲೈಂಗಿಕ ಕ್ರಿಯೆಯು ವ್ಯಭಿಚಾರವಾಗಿರುತ್ತದೆ.

   ಇ. ವಿವಾಹಗಳು ನಿರಂತರವಾಗಿ ಹಾಗೇ ಇರಬೇಕು. ನೀನು ಯೌವನಸ್ಥನಾಗಿರುವಾಗ ಮದುವೆಯಾದ ಹೆಣ್ಣು ನೀನು ಮುದುಕನಾದಾಗಲೂ ಸಹ ನಿನ್ನ ಪತ್ನಿಯೇ ಆಗಿರುತ್ತಾಳೆ.

   ಈ. ಕೌಟಂಬಿಕ ಜೀವನವನ್ನು ಸಂತೋಷಗೊಳಿಸಲು ವೈಭೋಗ ಮತ್ತು ಒಳ್ಳೆಯ ಆಹಾರಕ್ಕಿಂತಲೂ ಅತೀ ಪ್ರಾಮುಖ್ಯ ಸಂಗತಿಗಳಿವೆ:

   - ಗಂಡ ಹೆಂಡತಿಯ ನಡುವಿನ ಪ್ರೀತಿ ಅತೀ ಪ್ರಾಮುಖ್ಯವಾದುದ್ದಾಗಿದೆ.
   - ಗಂಡ ಹೆಂಡತಿಯ ನಡುವೆ ಸಾಮರಸ್ಯವಿರಬೇಕು.
   - ಗಂಡ ಹೆಂಡತಿಯ ಮಧ್ಯೆ ಯಾವುದೇ ಒತ್ತಾಯ, ವಾದವಿವಾದ ಮತ್ತು ಅಪಮಾನಕರ ಸ್ವಭಾವಗಳಿರಬಾರದು.

3. ಜ್ಞಾನೋ. 22:6, 19:18, 14:26, 10:1, 15:20, 17:6 ಮತ್ತು 19:13 ರಿಂದ ಮಕ್ಕಳನ್ನು ಬೆಳೆಸುವುದರ ಬಗ್ಗೆ ಈ ಸಂಗತಿಗಳನ್ನು ನಾವು ಕಲಿಯುತ್ತೇವೆ:

   ಅ. ಮಕ್ಕಳನ್ನು ತರಬೇತಿಗೊಳಿಸಬೇಕು, ಸರಿಯಾದ ಮಾರ್ಗಕ್ಕನುಸಾರವಾಗಿ ಶಿಕ್ಷಿಸಬೇಕು. ಇದು ತಂದೆತಾಯಿಗಳ ಕರ್ತವ್ಯ. ತಂದೆತಾಯಿಗಳು ಈ ಕರ್ತವ್ಯವನ್ನು ತಿಳಿದಿರಬೇಕು.

ಆ. ಬಾಲ್ಯದಲ್ಲಿ ನಡೆಯುವ ಸಂಗತಿಯು ಮಗುವಿನ ಮುಂದಿನ ಜೀವನದ ಮೇಲೆ ಪ್ರಭಾವ ಬೀರುತ್ತದೆ. ಮಗುವನ್ನು ಬೆಳೆಸುವುದು ಜೀವ–ಮರಣದ ವಿಷಯವಾಗಿದೆ. ತನ್ನ ಬಾಲ್ಯದಲ್ಲಿ ಮಗುವು ಒಳ್ಳೇದು–ಕೆಟ್ಟದ್ದು, ಜ್ಞಾನ–ಮೂರ್ಖತನದ ನಡುವಿನ ವ್ಯತ್ಯಾಸವನ್ನು ಕಲಿಯುತ್ತದೆ.

ಇ. ತಂದೆತಾಯಿಗಳು ಮಕ್ಕಳನ್ನು ಬೆಳೆಸುವ ರೀತಿಯು ಭವಿಷ್ಯದ ಸಂತತಿಯ ಸಂಬಂಧದ ಮೇಲೆ ಪ್ರಭಾವ ಬೀರುತ್ತದೆ. ನಮ್ಮ ಪೋಷಣೆಯಿಂದ ಮುಂದೆ ಮಕ್ಕಳು ಜ್ಞಾನಿಗಳಾದರೆ, ನಾವು ವೃದ್ಧರಾಗುವಾಗ ಅವರು ನಮಗೆ ಸಂತೋಷವೂ, ಆಶೀರ್ವಾದವೂ ಆಗುವರು. ಅವರು ಮೂರ್ಖರಾದರೆ ನಮಗೆ ದುಃಖವು, ಚಿಂತೆಯೂ ಆಗುವುದು.

ಈ. ಈಗಿನ ಮಕ್ಕಳ ಬೆಳವಣಿಗೆಯು ಮುಂದಿನ ಪೀಳಿಗೆಯ ಮೇಲೆ ಪ್ರಭಾವ ಬೀರುತ್ತದೆ. ನಾವು ನಮ್ಮ ಮಕ್ಕಳನ್ನು ಉತ್ತಮವಾಗಿ ಬೆಳೆಸಿದರೆ ಮುಂದೆ ಅವರೂ ಸಹ ತಮ್ಮ ಮಕ್ಕಳನ್ನು ಚೆನ್ನಾಗಿ ಬೆಳೆಸುವರು. ಹಾಗಾಗಿ ನಾವು ಮಕ್ಕಳಿಗಾಗಿ ಏನೇನು ವ್ಯಯ ಮಾಡುತ್ತೇವೋ (ನಮ್ಮ ಸಮಯ, ತರಬೇತಿ, ಒಳ್ಳೇ ಶಿಕ್ಷಣ, ಪ್ರೀತಿ, ಶಿಸ್ತು, ಆತ್ಮೀಕ ಮೌಲ್ಯ) ಅವು ಭವಿಷ್ಯದ ಪೀಳಿಗೆಗೆ ಆಶೀರ್ವಾದಕರವಾಗಿರುವವು.

4. ಜ್ಞಾನೋಕ್ತಿ 13:1, 15:5, 17:25, 20:20, 19:26 ಮತ್ತು 17:6 ರಿಂದ ತಂದೆತಾಯಂದಿರಗಾಗಿನ ಗೌರವದ ಬಗ್ಗೆ ನಾವು ಕಲಿಯುವ ಸಂಗತಿಗಳು:

ಅ. ಮಕ್ಕಳು ಜ್ಞಾನಿಗಳಾಗಿರಬಹುದು ಅಥವಾ ಮೂರ್ಖರಾಗಿರಬಹುದು. ಅವರು ತಮ್ಮ ಪೋಷಕರೊಂದಿಗೆ ವರ್ತಿಸುವ ರೀತಿಯಲ್ಲಿ ಅವರ ಜ್ಞಾನ ಮತ್ತು ಮೂರ್ಖತನವು ತೋರಿಬರುತ್ತದೆ.

ಆ. ಮಕ್ಕಳು ತಂದೆತಾಯಂದಿರ ಉಪದೇಶವನ್ನು ಕೇಳಿ ಅದರಂತೆ ನಡೆಯಬೇಕು. ಅವರು ಬುದ್ಧಿವಾದ ಮತ್ತು ಶಿಸ್ತನ್ನು ಸರಿಯಾದ ಮನೋಭಾವದಿಂದ ಸ್ವೀಕರಿಸಬೇಕು. ಅವರು ಬದಲಾಗಲು ಮತ್ತು ಸುಧಾರಿಸಲು ಸಿದ್ಧರಿರಬೇಕು. ಅವರು ತಂದೆತಾಯಿಯನ್ನು ದೂಷಿಸಬಾರದು.

ಇ. ಮಕ್ಕಳು ತಂದೆತಾಯಿಯನ್ನು ಶಪಿಸಬಾರದು. ಬದಲಾಗಿ ಅವರು ತಂದೆತಾಯಿಗಳನ್ನು ಹರಸಬೇಕು. ತಂದೆತಾಯಿಗಳ ಬಗ್ಗೆ ಒಳ್ಳೆಯದನ್ನೆ ಮಾತಾಡಬೇಕು. ತಂದೆತಾಯಂದಿರ ಕಾಳಜಿಗಾಗಿ ಅವರು ಕೃತಜ್ಞರಾಗಿರಬೇಕು. ತಂದೆತಾಯಿಯನ್ನು ಶಪಿಸುವವರನ್ನು ದೇವರು ಶಿಕ್ಷಿಸುತ್ತಾನೆ.

ಈ. ಮಕ್ಕಳು ತಂದೆತಾಯಂದಿರನ್ನು ಹೊಡೆದು ಓಡಿಸಬಾರದು. ತಂದೆತಾಯಿಯನ್ನು ಪೋಷಿಸಬೇಕು. ವೃದ್ಧಾಪ್ಯದಲ್ಲಿ ಕಾಳಜಿವಹಿಸಬೇಕು. ಇದು ಅವರಿಗೆ ಕೇವಲ ಭದ್ರತೆಯನ್ನಲ್ಲದೆ ಹರ್ಷ ಮತ್ತು ಹೆಮ್ಮೆಯನ್ನು ತರುವುದು.

ಉ. ಮಕ್ಕಳು ತಮ್ಮ ತಂದೆತಾಯಂದಿರ ಬಗ್ಗೆ ಹೆಮ್ಮೆ ಪಡಬೇಕು. ಇಂದಿನ ಆಧುನಿಕ ಸಮಾಜದಲ್ಲಿ ಹೆಚ್ಚಾಗಿ ಮಕ್ಕಳು ತಮ್ಮ ತಂದೆತಾಯಂದಿರ ಬಗ್ಗೆ ನಾಚಿಕೆ ಪಡುತ್ತಾರೆ. ಯಾಕೆಂದರೆ ಅವರು ಅವಿದ್ಯಾವಂತರು, ಹಳೇಯ ಶೈಲಿಯಲ್ಲಿ ಬಟ್ಟೆ ಧರಿಸುವುದು, ಅವರು ಹಳ್ಳಿಯಿಂದ ಬಂದವರು, ಅವರು ಬಡಕುಟುಂಬದವರೆಂದು ಇವರು ನಾಚಿಕೆಪಡುತ್ತಾರೆ. ಆದರೆ ಇಂತಹ ನಾಚಿಕೆಯು ದೇವರಿಗೆ ವಿರುದ್ಧವಾದುದ್ದೆಂದು ಜ್ಞಾನವು ನಮಗೆ ಬೋಧಿಸುತ್ತದೆ.

5. ಜ್ಞಾನೋ. 19:14, 13:22, 11:29 ಮತ್ತು 14:18 ಗಳಿಂದ ಆಸ್ತಿ ಅಥವಾ ಸ್ವಾಸ್ಥ್ಯದ ಬಗ್ಗೆ ನಾವು ಈ ಸಂಗತಿಗಳನ್ನು ಕಲಿಯುತ್ತೇವೆ:

ಅ. ಪ್ರಾಚೀನ ಇಸ್ರಾಯೇಲ್ ಸಮಾಜದಲ್ಲಿ ಎರಡು ರೀತಿಯ ಆಸ್ತಿ/ಸ್ವಾಸ್ಥ್ಯಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡಲಾಯಿತು. ಒಂದು ಭೌತಿಕ ಆಸ್ತಿ/ಸ್ವಾಸ್ಥ್ಯ (ಆಸ್ತಿ ಮತ್ತು ಸಂಪತ್ತು) ಮತ್ತು ಅಭೌತಿಕ ಆಸ್ತಿ (ಹೆಸರು ಮತ್ತು ಕೀರ್ತಿ). ಅಭೌತಿಕ ಆಸ್ತಿಯು ಭೌತಿಕ ಆಸ್ತಿಗಿಂತಲೂ ಹೆಚ್ಚು ಪ್ರಾಮುಖ್ಯವೆಂದು ಜ್ಞಾನವು ನಮಗೆ ಬೋಧಿಸುತ್ತದೆ.

ಆ. ಕೇವಲ ದೇವರಲ್ಲಿ ಭಕ್ತಿಯುಳ್ಳವರು (ಒಳ್ಳೆಯ ಮನುಷ್ಯ, ಜ್ಞಾನಿ, ನೀತಿವಂತ) ಮಾತ್ರ ಈ ಅಭೌತಿಕ ಸ್ವಾಸ್ಥ್ಯವನ್ನು ತಮ್ಮ ಮುಂದಿನ ಪೀಳಿಗೆಗೆ ಕೊಡುವರು.

ಇ. ಕೇವಲ ದೇವರಲ್ಲಿ ಭಯಭಕ್ತಿಯುಳ್ಳವನು ಮಾತ್ರ ಆಸ್ತಿಯನ್ನು ಚೆನ್ನಾಗಿ ನೋಡಿಕೊಳ್ಳುತ್ತಾನೆ.

ಈ. ಮೂರ್ಖರು (ಪಾಪಿಗಳು, ಧರ್ಮನಿಂದಕರು, ಅನೀತಿವಂತರು) ಎಂದಿಗೂ ಸಹ ಸ್ವಾಸ್ಥ್ಯವನ್ನು ಚೆನ್ನಾಗಿ ನೋಡಿಕೊಳ್ಳಲಾರರು.

ಕೆಲಸ – ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಕೆಲಸದ ಬಗ್ಗೆ ಹಳೇ ಒಡಂಬಡಿಕೆಯಲ್ಲಿನ ಗೊಂದಲವೇನೆಂದರೆ ಕೆಲಸದ ಸಕಾರಾತ್ಮಕ ದೃಷ್ಟಿಕೋನ ಮತ್ತು ನಕಾರಾತ್ಮಕ ದೃಷ್ಟಿಕೋನದ ನಡುವಿನ ಗೊಂದಲವಾಗಿದೆ. ಸಕಾರಾತ್ಮಕವಾಗಿ ಕೆಲಸವು ಸ್ವತಃ ದೇವರ ಕ್ರಿಯಾತ್ಮಕ ಚಟುವಟಿಕೆ, ಪೋಷಣೆ ಮತ್ತು ಒದಗಿಸುವಿಕೆಯ ಪ್ರತಿಬಿಂಬವಾಗಿದೆ. ನಕಾರಾತ್ಮಕವಾಗಿ ಕೆಲಸವು ಒಂದು ರೀತಿಯಲ್ಲಿ ಶ್ರಮಪಡುವುದು, ಎಂದೂ ಮುಗಿಯದ್ದು, ಆಹಾರ ಮತ್ತು ನಿರ್ವಾಹಣೆಗಾಗಿ ಬೆವರು ಹರಿಸುವುದಾಗಿದೆ.

2. ಕೆಳಕಂಡ ಜ್ಞಾನೋಕ್ತಿಗಳಿಂದ ಸೋಮಾರಿ ಮತ್ತು ಆತನ ಸೋಮಾರಿತನದ ಬಗ್ಗೆ ನಾವು ಈ ಸಂಗತಿಗಳನ್ನು ಕಲಿಯುತ್ತೇವೆ:

   ಅ. ಜ್ಞಾನೋ. 19:24: ಸೋಮಾರಿಯು ತಾನು ಏನನ್ನು ತಿನ್ನುತ್ತೇನೆ ಎಂದು ಸಹ ತಿಳಿಯಲಾರದಷ್ಟು ಆಲಸ್ಯಗಾರನಾಗಿದ್ದಾನೆ.

   ಆ. ಜ್ಞಾನೋ. 20:4: ಮೈಗಳ್ಳನು ತನ್ನ ಸೋಮಾರಿತನದ ಫಲವಾಗಿ ಹಸಿವೆಗೊಳ್ಳುವನು. ಇಲ್ಲಿ ಹೊಲಗೇಯುವ ಒಂದು ಚಿತ್ರಣವನ್ನು ತೆಗೆದುಕೊಳ್ಳಲಾಗಿದೆ. ಒಳ್ಳೆಯ ಬೆಳೆಯು ಅನೇಕ ತಿಂಗಳ ಹಿಂದೆ ಕಷ್ಟಪಟ್ಟು ಹೊಲವನ್ನು ಸಿದ್ಧಪಡಿಸಿ, ಬಿತ್ತನೆ ಮಾಡಿದ್ದರ ಫಲವೆಂದು ಪ್ರತಿಯೊಬ್ಬ ರೈತನೂ ತಿಳಿದಿರುವನು.

   ಇ. ಜ್ಞಾನೋ. 21:25: ಸೋಮಾರಿಯು ಹೆಚ್ಚು ಕಾಲ ಇರುವುದಿಲ್ಲ. ಆತನು ಆಹಾರ ಮತ್ತು ಜೀವನದ ಇತರ ಅಗತ್ಯತೆಗಳ ಕೊರತೆಯಿಂದ ಬಳಲುವನು. ಯಾಕೆಂದರೆ ಕೆಲಸ ಮಾಡಲು ಆತನು ಮೈಗಳ್ಳನಾಗಿದ್ದಾನೆ. ಆತನು ತನ್ನ ಹೊಲವನ್ನು ಗೈಯುವುದಿಲ್ಲ.

   ಈ. ಜ್ಞಾನೋ. 22:13: ಕೆಲಸದಿಂದ ದೂರವಿರಲು ಸೋಮಾರಿಯು ಅನೇಕ ರೀತಿಯ ನೆಪಗಳಿಂದ ಬರುವನು. ಬೀದಿಯಲ್ಲಿ ಈತನನ್ನು ಕೊಲ್ಲಲು ಸಿಂಹವು ಕಾದುಕೊಂಡಿರುವುದು ಅಸಾಧ್ಯವಾದ ಮಾತು.

3. ಕೆಲಸದ ಗುಣಮಟ್ಟದ ಬಗ್ಗೆ ಕೆಳಕಂಡ ಜ್ಞಾನೋಕ್ತಿಗಳಿಂದ ನಾವು ಈ ಸಂಗತಿಗಳನ್ನು ಕಲಿಯಬಹುದು:

   ಅ. 18:9: ನಮ್ಮ ಕೆಲಸದ ಗುಣಮಟ್ಟವು ಉತ್ತಮವಾಗಿರಬೇಕು. ಕೆಲಸಗಳ್ಳತನವು ಕೆಡುಕನೊಂದಿಗೆ ಹೋಲಿಸಲ್ಪಟ್ಟಿದೆ. ಅದೇ ರೀತಿ ತೀರಾ ಕೀಳುಮಟ್ಟದ ಕೆಲಸವು ಹಾಳಾಗುತ್ತದೆ.

   ಆ. 21:5: ಆತುರದ ಮತ್ತು ಅವ್ಯವಸ್ಥೆಯ ಕೆಲಸವು ನಮ್ಮ ಜೀವನಾವಶ್ಯಕತೆಗಳನ್ನು ಒದಗಿಸುವುದಿಲ್ಲ.

   ಇ. 12:27: ಮೈಗಳ್ಳತನವು ನಮ್ಮ ಕೆಲಸದ ಗುಣಮಟ್ಟವನ್ನು ಕೆಡಿಸುತ್ತದೆ. ಇದನ್ನು ಸಿಕ್ಕ ಬೇಟೆಯನ್ನು ಸರಿಯಾಗಿ ನೋಡಿಕೊಳ್ಳದ ಮೈಗಳ್ಳನ ರೂಪಾಲಂಕಾರದಿಂದ ತಿಳಿಸಲಾಗಿದೆ. ಇದನ್ನು ತನ್ನ ಸಂಪತ್ತನ್ನು (ಆಸ್ತಿ) ಚೆನ್ನಾಗಿ ನೋಡಿಕೊಳ್ಳುವ ಚಟುವಟಿಕೆಯುಳ್ಳವನಿಗೆ ತದ್ವಿರುದ್ಧವಾಗಿದೆ.

4. ಜ್ಞಾನೋ. 14:15, 16:26 ಮತ್ತು 20:13 ರಿಂದ ಪರಿಶ್ರಮದ ಬಗ್ಗೆ ನಾವು ಈ ಸಂಗತಿಗಳನ್ನು ಕಲಿಯುತ್ತೇವೆ:

   ಅ. ಪರಿಶ್ರಮವು ನಮಗೆ ಆಹಾರವನ್ನು ತಂದುಕೊಡುತ್ತದೆ.

   ಆ. ನಮ್ಮ ಆಹಾರದ ಅವಶ್ಯಕತೆಯು ನಮ್ಮನ್ನು ಕಷ್ಟಪಟ್ಟು ದುಡಿಯುವಂತೆ ಉತ್ತೇಜಿಸುತ್ತದೆ.

ಆರೋಗ್ಯ ಮತ್ತು ಭದ್ರತೆ – ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. "ಆರೋಗ್ಯ" ಮತ್ತು ಹಳೇ ಒಡಂಬಡಿಕೆಯ ಶಾಲೋಂ (ಸಮಾಧಾನ) ಪರಸ್ಪರ ಹೊಂದಿಕೊಂಡಿವೆಯೆಂಬುದನ್ನು ಈ ಅಧ್ಯಾಯದ ಪೀಠಿಕೆಯಲ್ಲಿ ವಿವರಿಸಲಾಗಿದೆ.

2. ಜ್ಞಾನೋಕ್ತಿ 3:7–8 ಒಂದು "ನಂಬಿಕೆಯ ಹೇಳಿಕೆಯಾಗಿದೆ" . ಇದು ಮನುಷ್ಯನ ಜ್ಞಾನ ಮತ್ತು ದೇವರ ಭಯವನ್ನು ತದ್ವಿರುದ್ಧವಾಗಿಸುತ್ತದೆ. ಓದುಗನು ಸರಿಯಾದ ಆಯ್ಕೆಯನ್ನು ಮಾಡಲು ಉತ್ತೇಜಿಸುವುದು ಇದರ ಉದ್ದೇಶವಾಗಿದೆ. ಈ ಆಯ್ಕೆಯು ದೇವರಿಗೆ ಭಯಪಡುವುದಾಗಿದೆ, ಜೀವಕ್ಕೆ ನಡೆಸುವ ನೀತಿ ಮಾರ್ಗದಲ್ಲಿ ನಡೆಯುವುದಾಗಿದೆ, ದೇವರನ್ನು ಪ್ರೀತಿಸಿ ಆತನನ್ನೇ ಸೇವಿಸುವುದಾಗಿದೆ. ಇದು ಜ್ಞಾನದ ಮಾರ್ಗವಾಗಿದೆ, ದೇವರನ್ನು ಮೆಚ್ಚಿಸುವ ಒಂದು ಒಳ್ಳೆಯ ಆಯ್ಕೆಯಾಗಿದೆ. ನಾವು ಆರಿಸಿಕೊಳ್ಳಬೇಕಾದ ಆಯ್ಕೆ ಇದಾಗಿದೆ. ಜ್ಞಾನದ ಬೋಧನೆಯು "ದೇಹಕ್ಕೆ ಆರೋಗ್ಯವೂ, ಎಲುಬಿಗೆ ಸಾರವನ್ನು ಕೊಡುತ್ತದೆ" ಎಂಬುದಾಗಿ ಹೇಳುತ್ತದೆ. ಆದರೆ ಇದು ಯಾವಾಗಲೂ ಸತ್ಯವಲ್ಲವೆಂದು ನಮಗೆಲ್ಲ ಗೊತ್ತು. ದೇವಭಕ್ತರು ಸಹ ಆಗಾಗ್ಗೆ ಬಲಹೀನತೆ ಮತ್ತು ಅನಾರೋಗ್ಯಕ್ಕೆ ತುತ್ತಾಗುವುದು ಮನುಷ್ಯರಾದ ನಮ್ಮ ಅನುಭವವಾಗಿದೆ. ಆದಾಗ್ಯೂ ಸಹ ದೇವರನ್ನು ಪ್ರೀತಿಸಿ, ಕೆಟ್ಟದ್ದನ್ನು ನಿರಾಕರಿಸುವುದು ಸರಿಯಾದ ಆಯ್ಕೆಯಾಗಿದೆ. ದೇವರು ಈ ಪಾಪಮಯ ಜಗತ್ತನ್ನು ನೂತನ ಪಡಿಸುವಾಗ ಮತ್ತು ತನ್ನ ಸಮಾಧಾನದಡಿಯಲ್ಲಿ (ಶಾಲೋಂ) ತರುವಾಗ ಆತನನ್ನು ಆರಿಸಿಕೊಂಡವರೆಲ್ಲರೂ ಗಟ್ಟಿಯಾದ ಮತ್ತು ಆರೋಗ್ಯವಂತ ಶರೀರವನ್ನು ಹೊಂದಿಕೊಳ್ಳುವರು. ಆದರೆ ತಮ್ಮ ಸ್ವಂತ ಮಾನುಷಿಕ ಜ್ಞಾನವನ್ನು ಆತುಕೊಂಡವರು ತೆಗೆದು ಹಾಕಲ್ಪಡುವರು. ಮರಣವೇ ಅವರ ಅಂತ್ಯ.

3. ಜ್ಞಾನೋ. 12:25, 18:14, 13:12 ಮತ್ತು 14:30 ರಿಂದ ಜೀವಿತದ ನೋಟದ ಬಗ್ಗೆ ನಾವು ಈ ಸಂಗತಿಗಳನ್ನು ಕಲಿಯುತ್ತೇವೆ:

   ಅ. ಜೀವಿತದ ಬಗ್ಗೆ ನಮಗೆ ಸಕಾರಾತ್ಮಕವಾದ ಭಾವನೆಯಿರಬೇಕು. ಹಾಗಾಗಿ ನಮ್ಮ ಜೀವಿತದಲ್ಲಿನ ಸಕಾರಾತ್ಮಕ ಅಂಶಗಳ ಬಗ್ಗೆ ನಾವು ದೃಷ್ಟಿಯಿಟ್ಟು, ಇತರ ಜನರ ಜೀವನದಲ್ಲೂ ಸಕಾರಾತ್ಮಕ ಅಂಶಗಳನ್ನು ಕಾಣುವಂತೆ ಸಹಾಯಿಸಬೇಕು.

   ಆ. ನಮ್ಮ ಮನಸ್ಸಿನ (ಅಂತರಂಗ) ಆರೋಗ್ಯವು, ನಮ್ಮ ದೇಹದ ಆರೋಗ್ಯಕ್ಕಿಂತಲೂ ಬಹುಪ್ರಾಮುಖ್ಯವಾಗಿದೆ. ಹಾಗಾಗಿ ನಮ್ಮ ದೃಷ್ಟಿಯು ಹೆಚ್ಚಾಗಿ ನಮ್ಮ ಆತ್ಮೀಕ, ಮಾನಸಿಕ ಮತ್ತು ಭಾವನಾತ್ಮಕ ಆರೋಗ್ಯದ ಮೇಲೆ ಇರಬೇಕೇ ವಿನಃ ಶಾರೀರಿಕ ಅಂಶಗಳ ಮೇಲೆ ಅಲ್ಲ.

   ಇ. ನಮ್ಮ ಮನಸ್ಸಿನ ಸ್ಥಿತಿಯು ನಮ್ಮ ದೇಹಸ್ಥಿತಿಯ ಮೇಲೆ ಪರಿಣಾಮವನ್ನು ಬೀರುತ್ತದೆ. ನಮ್ಮ ಆತ್ಮವು ಕುಂದಿಹೋಗಿದ್ದರೆ, ಮನಸ್ಸು ಗಲಿಬಿಲಿಗೊಂಡಿದ್ದರೆ, ಭಾವನೆಗಳಿಗೆ ಧಕ್ಕೆಯಾದರೆ ಆಗ ನಮ್ಮ ದೇಹವೂ ಸಹ ತನ್ನ ಸ್ಥಿಮಿತವನ್ನು ಕಳಕೊಳ್ಳುತ್ತದೆ.

   ಈ. ನಾವು ಪರಸ್ಪರ ಒಬ್ಬರಿಗೊಬ್ಬರು ಉತ್ತೇಜಿಸಬೇಕು. ಉತ್ತೇಜನದ ಒಂದು ಮಾತು ಒಬ್ಬ ವ್ಯಕ್ತಿಯ ಜೀವನವನ್ನೇ ಬದಲಿಸಬಲ್ಲದು.

   ಉ. ನಕಾರಾತ್ಮಕವಾದ ಸಂಗತಿಗಳನ್ನು ನಾವು ದೂರವಿರಿಸಬೇಕು. ಯಾಕೆಂದರೆ ಅವು ನಮ್ಮ ಜೀವನವನ್ನು ಹಾಳು ಮಾಡುತ್ತವೆ. ಉದಾ: ನಿರೀಕ್ಷೆಯಿಲ್ಲದಿರುವುದು, ಮಾನಸಿಕ ಚಿಂತೆ, ಖಿನ್ನತೆ ಮತ್ತು ದ್ವೇಷ.

4. ಜ್ಞಾನೋ. 14:13, 14:10, 17:3 ಮತ್ತು 21:2 ರಿಂದ ಒಬ್ಬ ವ್ಯಕ್ತಿಯ ಹೃದಯದ ಬಗ್ಗೆ ನಾವು ಈ ಸಂಗತಿಗಳನ್ನು ಕಲಿಯುತ್ತೇವೆ:

   ಅ. ದೇವರೊಬ್ಬನೇ ಮನುಷ್ಯನ ಹೃದಯವನ್ನು ಬಲ್ಲವನಾಗಿದ್ದಾನೆ. ಅದರೊಳಗೆ ಏನೇನು ನಡೆಯುತ್ತಿದೆ ಎಂಬುದನ್ನು ಆತನೊಬ್ಬನೇ ಪರೀಕ್ಷಿಸುವವನಾಗಿದ್ದಾನೆ.

   ಆ. ಕೇವಲ ದೇವರೊಬ್ಬನಿಗೇ ಸರಿ ಮತ್ತು ತಪ್ಪಿನ ನಡುವಿನ ವ್ಯತ್ಯಾಸ ಗೊತ್ತು. ನಾವು ಮಾರ್ಗದರ್ಶನಕ್ಕಾಗಿ ಆತನನ್ನು ಮತ್ತು ಆತನ ವಾಕ್ಯವನ್ನು ನೋಡಬೇಕು.

ಇ. ನಮ್ಮ ಸಂಗಡಿಗರನ್ನು ನಾವು ತೀರ್ಪು ಮಾಡಬಾರದು. ಯಾಕೆಂದರೆ ಒಬ್ಬ ಮನುಷ್ಯನ ಹೃದಯ ಮತ್ತು ಮನಸ್ಸಿನ ಕುರಿತಾದ ನಮ್ಮ ತಿಳುವಳಿಕೆಯು ಅಲ್ಪವಾದುದ್ದಾಗಿದೆ. ತೀರ್ಪನ್ನು ದೇವರಿಗೇ ಬಿಡಬೇಕು.

ಈ. ಒಬ್ಬ ಮನುಷ್ಯನ ಬಾಹ್ಯ ಸ್ವಭಾವದಿಂದ ಆತನ ನಿಜವಾದ ಪರಿಸ್ಥಿತಿಯನ್ನು ಸಂಪೂರ್ಣವಾಗಿ ತಿಳಿದುಕೊಳ್ಳುವುದು ಕಷ್ಟ. ಆತನು ಅಳುವ ಹೃದಯದಿಂದ ನಗಬಹುದು.

5. ಜ್ಞಾನೋ. 19:23, 12:21, 10:9 ಮತ್ತು 10:25 ರಿಂದ ಆರೋಗ್ಯ ಮತ್ತು ಭದ್ರತೆಯ ಬಗ್ಗೆ ನಾವು ಈ ಸಂಗತಿಗಳನ್ನು ಕಲಿಯುತ್ತೇವೆ:

ಅ. ನಮ್ಮ ಭದ್ರತೆಯು ನಮ್ಮಲ್ಲಲ್ಲ ಬದಲಾಗಿ ದೇವರಲ್ಲಿರಬೇಕಾಗಿದೆ.

ಆ. ನಾವು ದೇವರಿಗೆ ಭಯಪಡಬೇಕು. ನಾವು ನೀತಿವಂತರಾಗಿರಬೇಕು. ನಾವು ಪ್ರಾಮಾಣಿಕ ಜನರಾಗಿರಬೇಕು. ಇವೇ ನಾವು ದೇವಜನರೆಂಬುದನ್ನು ತೋರಿಸುತ್ತದೆ. ನಾವು ದೇವಜನರಾಗಿರುವುದರಿಂದ ಸಂರಕ್ಷಣೆ, ಭದ್ರತೆ ಮತ್ತು ಸುರಕ್ಷಿತತೆ ಕುರಿತಾದ ವಾಗ್ದಾನಗಳನ್ನು ನಾವು ಸ್ವಂತಪಡಿಸಿಕೊಳ್ಳಬಹುದು. ಬಹುಶಃ ಈ ಆಶೀರ್ವಾದಗಳನ್ನು ನಾವು ಕೂಡಲೇ ಅನುಭವಿಸದೇ ಇರಬಹುದು, ಆದರೆ ಅವು ಎಂದೆಂದಿಗೂ ನನ್ನೊಂದಿಗಿರುತ್ತವೆ.

ಆರೋಗ್ಯ ಮತ್ತು ಭದ್ರತೆ ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. –

2. ದುಷ್ಟನು ತುಟಿಗಳ ದೋಷದಿಂದ ಬೋನಿಗೆ ಬೀಳುವನು, ಶಿಷ್ಟನು ಇಕ್ಕಟ್ಟಿನಿಂದ ಪಾರಾಗುವನು (12:13) ಇದೊಂದು ನಂಬಿಕೆಯ ಹೇಳಿಕೆ.

ಭೌತಿಕ ಸೌಕರ್ಯ – ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಈ ಅಧ್ಯಾಯದ ಮೂರು ಸತ್ಯಗಳನ್ನು ಪೀಠಿಕೆಯಲ್ಲಿ ನೋಡಿರಿ.
2. ಜ್ಞಾನೋ. 10:3 ಮತ್ತು 13:25 ರಿಂದ ಆಹಾರದ ಬಗ್ಗೆ ನಾವು ಕಲಿಯುವ ಸಂಗತಿಗಳು:

   ಅ. ದೇವರು ನಮಗೆ ಆಹಾರವನ್ನು ಕೊಡುವವನಾಗಿದ್ದಾನೆ. ಜನರ ಅಗತ್ಯತೆಗಳ ಬಗ್ಗೆ ಆತನು ಕಾಳಜಿ ವಹಿಸುತ್ತಾನೆ.

   ಆ. ಈ ಸತ್ಯವು ಒಂದು ನಂಬಿಕೆಯ ಹೇಳಿಕೆಯಾಗಿದೆ. ಕೆಲವೊಮ್ಮೆ ನಮ್ಮ ಅನುಭವವು ಇದಕ್ಕೆ ತದ್ವಿರುದ್ಧವಾಗಿದ್ದರೂ ಇದು ಸತ್ಯವೆಂದು ನಾವು ನಂಬುತ್ತೇವೆ.
3. ಜ್ಞಾನೋ. 22:9 ಮತ್ತು 25:21 ರ ಪ್ರಕಾರ ನಮ್ಮ ನೆರೆಯವರಿಗಾಗಿನ ನಮ್ಮ ಋಣ (ಹಂಗು):

   ಅ. ದೇವರಿಂದ ನಾವು ಹೊಂದಿದ ಆಶೀರ್ವಾದಗಳನ್ನು ಕೊರತೆಯಿಲ್ಲದವರೊಂದಿಗೆ ನಾವು ಹಂಚಿಕೊಳ್ಳಬೇಕು.

   ಆ. ನಾವು ಆಶೀರ್ವಾದಗಳನ್ನು ಹಂಚಿಕೊಳ್ಳುವಾಗ, ದೇವರು ಇನ್ನೂ ಹೆಚ್ಚಾಗಿ ನಮ್ಮನ್ನು ಆಶೀರ್ವದಿಸುತ್ತಾನೆ.

   ಇ. ಹಸಿವೆ ಮತ್ತು ಬಾಯಾರಿಕೆಯಿಂದ ಬಳಲುತ್ತಿರುವವರಿಗೆಲ್ಲ ಸಹಾಯ ಮಾಡುವ ಹಂಗು ದೇವಜನರಾದ ನಮ್ಮ ಮೇಲಿದೆ.
4. ಜ್ಞಾನೋಕ್ತಿ ಪುಸ್ತಕದಲ್ಲಿ ಧನ ಅಥವಾ ಸಂಪತ್ತು ಬಡತನಕ್ಕೆ ವಿರುದ್ಧವಾಗಿದೆ. ಹಾಗಾಗಿ ಇದರರ್ಥ **"ಸಾಕಷ್ಟನ್ನು ಹೊಂದಿರುವುದು"** .
5. ಜ್ಞಾನೋ. 13:11, 10:4 ಮತ್ತು 14:23 ರ ಪ್ರಕಾರ ನಾವು ಸಾಕಷ್ಟನ್ನು ಹೀಗೆ ಪಡೆಯುತ್ತೇವೆ:

   ಅ. ಪ್ರಾಮಾಣಿಕವಾಗಿ ಹಣ ಗಳಿಸುವುದರಿಂದ

   ಆ. ನಮ್ಮ ಸಂಪನ್ಮೂಲಗಳನ್ನು ಜ್ಞಾನದಿಂದ ಬಳಸುವುದರಿಂದ

   ಇ. ಶ್ರಮಪಟ್ಟು ದುಡಿಯುವುದರಿಂದ

   ಈ. ಬರೀ ಮಾತಾಡದೇ ಕೆಲಸ ಮಾಡುವುದರಿಂದ
6. ಜ್ಞಾನೋ. 10:22 ಮತ್ತು 13:21 ರ ಪ್ರಕಾರ ಸಂಪತ್ತು (ಭಾಗ್ಯ) ಎರಡು ಮೂಲಗಳಿಂದ ಬರುತ್ತದೆ:

   ಅ. ದೇವರಿಂದ, ಎಲ್ಲಾ ಆಶೀರ್ವಾದಗಳು ಆತನಿಂದಲೇ ಬರುತ್ತವೆ.

   ಆ. ನಮ್ಮ ನೀತಿವಂತಿಕೆಯ ಜೀವಿತದ ಫಲವಾಗಿ. ಇದು ನಂಬಿಕೆಯ ಹೇಳಿಕೆಯಾಗಿದ್ದು, ತನ್ನ ಜನರಿಗಾಗಿನ ದೇವರ ವಾಗ್ದಾನವಾಗಿದೆ.
7. ಜ್ಞಾನೋ. 14:10, 18:11 ಮತ್ತು 13:22 ರ ಪ್ರಕಾರ ಸಂಪತ್ತನ್ನು ಇವುಗಳಿಗಾಗಿ ಉಪಯೋಗಿಸಬಹುದು:

   ಅ. ಸ್ನೇಹಿತರನ್ನು ಮಾಡಿಕೊಳ್ಳಲು. ಈ ರೀತಿಯಲ್ಲಿ ಅನ್ಯರು ಮಾಡುತ್ತಾರೆ. ದೇವರಿಗೆ ಭಯಪಡುವವರು ಬಡವರನ್ನು ಸುಲಿಯುವುದಿಲ್ಲ. ಬದಲಾಗಿ ಕಷ್ಟದಲ್ಲಿರುವವರಿಗೆ ಸಹಾಯಿಸಲು ಅವರು ತಮ್ಮ ಧನವನ್ನು ಉಪಯೋಗಿಸುವರು.

   ಆ. ಭದ್ರತೆಗಾಗಿ: ದುಷ್ಟರು ಇದನ್ನು ಮಾಡುತ್ತಾರೆ. ದೇವರಿಗೆ ಭಯಪಡುವವರು ತಮ್ಮ ಭದ್ರತೆಯು ತಮ್ಮ ಸಂಪತ್ತಿನಲ್ಲಿಲ್ಲ, ಬದಲಾಗಿ ದೇವರಲ್ಲಿದೆ ಎಂದು ತಿಳಿದಿದ್ದಾರೆ.

   ಇ. ಮುಂದಿನ ಪೀಳಿಗೆಗೆ ವರ್ಗಾಯಿಸಲು. ನೀತಿವಂತನು ಈ ರೀತಿ ಮಾಡಿದರೆ ನಡೆಯುತ್ತದೆ, ಆದರೆ ಆತನು ಬಹಳಷ್ಟು ಸಂಪತ್ತಿಗಿಂತ ಒಂದು ಒಳ್ಳೆಯ ಹೆಸರನ್ನು ಆಸ್ತಿಯಾಗಿ ಬಿಟ್ಟು ಹೋಗುವುದು ಅತೀ ಪ್ರಾಮುಖ್ಯವಾಗಿದೆ.
8. ನಮ್ಮ ಸಂಪತ್ತು ನಮ್ಮನ್ನು ಉದಾರತೆಗೆ ನಡೆಸಬೇಕು (11:24).
9. ಧನ/ ಸಂಪತ್ತು ಎರಡು ರೀತಿಯಲ್ಲಿ ಅಪಾಯಕರವಾಗಿದೆ (13:8):

   ಅ. ಧನವಂತನು ದಾಳಿ ಮತ್ತು ಸೂರೆಗೆ ಒಳಗಾಗಬಹುದು. ಆತನ ಅಮೂಲ್ಯ ಸಂಪತ್ತೆಲ್ಲಾ ಕಳ್ಳತನಕ್ಕೊಳಗಾಗಬಹುದು. ಆತನಿಗೆ ಜೀವ ಬೆದರಿಕೆ ಬರಬಹುದು.

ಆ. ಧನಿಕನಿಗೆ ಇದಕ್ಕಿಂತ ಅತೀ ಅಪಾಯಕರವಾದದ್ದು ಆತನು ತನ್ನ ಸಂಪತ್ತಿನಲ್ಲಿ (ಹಣ) ಮುಳುಗಿ ಹೋಗುವುದು, ಇದರಿಂದ ದೇವರನ್ನು ಸೇವಿಸಲಾಗದೇ, ತನ್ನ ಸಂಪತ್ತನ್ನೇ (ಹಣ) ಸೇವಿಸುವಂತಾಗುವುದು. ಅದಕ್ಕಾಗಿಯೇ ಯೇಸುವು ತನ್ನ ಶಿಷ್ಯರಿಗೆ ಹಣದ ಅಪಾಯದ ಬಗ್ಗೆ ಎಚ್ಚರಿಸಿದನು (ಮತ್ತಾಯ 6:24).

10. ಜ್ಞಾನೋ. 13:18, 14:20 ಮತ್ತು 19:4 ರ ಪ್ರಕಾರ ಬಡತನವು ಇವುಗಳನ್ನು ತರುತ್ತದೆ:

ಅ. ನಂಬಿಕೆ: ಆದರೆ ನೀತಿವಂತರಿಗೆ ಬಡತನವು ನಾಚಿಕೆಯೆನಿಸುವುದಿಲ್ಲ. ಬದಲಾಗಿ ಅವರು ಬಡವರನ್ನು ಗೌರವ, ಪ್ರೀತಿ ಮತ್ತು ಕಾಳಜಿಯಿಂದ ನೋಡುವರು.

ಆ. ನೆರೆಯವರಿಂದ ದೂರ ಮಾಡುತ್ತದೆ.

ಇ. ಸ್ನೇಹಿತರನ್ನು ಅಗಲಿಸುತ್ತದೆ.

ನಾಲಿಗೆಯ ಬಳಕೆ – ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಚಾಡಿಯ ಬಗ್ಗೆ ಜ್ಞಾನೋಕ್ತಿ ಹೀಗೆನ್ನುತ್ತದೆ:

   ಅ. 16:28: ಚಾಡಿಯು ಮಿತ್ರರನ್ನು ಅಗಲಿಸುತ್ತದೆ.

   ಆ. 20:19: ನಾವು ಚಾಡಿಯನ್ನು ದೂರವಿರಿಸಬೇಕು, ಯಾಕೆಂದರೆ ಚಾಡಿ ಹೇಳುವವರನ್ನು ನಂಬಲಾಗದು.

   ಇ. 18:8: ರುಚಿಯಾದ ಆಹಾರ ತಿನ್ನುವಂತೆ ಜನರು ಚಾಡಿ ಮಾತನ್ನು ಪ್ರೀತಿಸುವರು. ಆಹಾರ ಹೊಟ್ಟೆಗೆ ಹೋದರೆ, ಚಾಡಿಯು ಮನಸ್ಸಿನೊಳಕ್ಕೆ ಹೋಗಿ ಅದನ್ನು ಹಾಳುಮಾಡುತ್ತದೆ.

2. ಜಗಳದ ಬಗ್ಗೆ ಇವನ್ನು ಕಲಿಯುತ್ತೇವೆ:

   ಅ. 17:19: ಜಗಳವು ಪಾಪವಾಗಿದ್ದು, ಅದು ನಾಶನಕ್ಕೆ ನಡೆಸುತ್ತದೆ.

   ಆ. 18:6: ಜಗಳವು ಜ್ಞಾನಹೀನತೆಯಾಗಿದೆ. ಅಲ್ಲದೆ ಅಪಾಯಕಾರಿ.

   ಇ. 13:10: ಹೆಮ್ಮೆ ಸಹ ಜಗಳಕ್ಕೆ ನಡೆಸುತ್ತದೆ.

   ಈ. 22:10: ಜ್ಞಾನದ ಮಾರ್ಗವನ್ನು ಪಾಲಿಸಲು ಒಪ್ಪದ ಧರ್ಮನಿಂದಕನನ್ನು ಓಡಿಸಿದರೆ ಜಗಳ ನಿಲ್ಲುತ್ತದೆಂದು ಜ್ಞಾನೋಕ್ತಿ ಹೇಳುತ್ತದೆ.

   ಉ. 17:14: ಜಗಳವು ಸಿಟ್ಟಿಗೆ ನಡೆಸುತ್ತದೆ.

3. ಎರಡು ಬಗೆಯ ಕೋಪಗಳಿವೆ:

   ಅ. ನೀತಿಯ ಕೋಪ: ಇದು ಈ ಲೋಕದಲ್ಲಿ ದುಷ್ಟತನದ ಬಗ್ಗೆ ಬರುವ ಕೋಪ. ದೇವಾಲಯದಲ್ಲಿ ಮಾರುವವರು ಮತ್ತು ಕೊಳ್ಳುವವರನ್ನು ಕಂಡಾಗ ಇದೇ ರೀತಿಯ ಕೋಪ ಯೇಸು ಕ್ರಿಸ್ತನಿಗೂ ಸಹ ಬಂದಿತ್ತು. ಒಂದು ವೇಳೆ ಮಿತಿ ಮೀರಿದರೆ ಈ ನೀತಿಯ ಕೋಪ ಸಹ ಪಾಪಕ್ಕೆ ನಡೆಸಬಲ್ಲದು.

   ಆ. ಪಾಪಮಯವಾದ ಕೋಪ: ನಮಗೆ ಅವಮಾನ ಆದಾಗ ಮತ್ತು ಜನರು ನಮ್ಮನ್ನು ವಿರೋಧಿಸುವಾಗ ಈ ಕೋಪ ನಮಗೆ ಬರುತ್ತದೆ. ಈ ರೀತಿಯ ಕೋಪವು ಸ್ವಾರ್ಥ ಮತ್ತು ಗರ್ವದಿಂದ ಬರುತ್ತದೆ.

4. ಕೋಪದ ಬಗ್ಗೆ ಜ್ಞಾನೋಕ್ತಿ ಹೀಗನ್ನುತ್ತದೆ:

   ಅ. 14:17: ಕೋಪವು ಮೂರ್ಖತನಕ್ಕೆ ನಡೆಸುತ್ತದೆ. ನಾವು ಕೋಪಗೊಳ್ಳುವಾಗ ಬುದ್ಧಿಯಿಲ್ಲದ ತೀರ್ಮಾನಗಳನ್ನು ತೆಗೆದುಕೊಳ್ಳುತ್ತೇವೆ.

   ಆ. 14:29: ಈ ಜ್ಞಾನೋಕ್ತಿಯು ತಾಳ್ಮೆ ಮತ್ತು ಮುಂಗೋಪವನ್ನು ತದ್ವಿರುದ್ಧವಾಗಿಸುತ್ತದೆ. ಜ್ಞಾನಿಗಳು ತಾಳ್ಮೆಯಿಂದಿರುತ್ತಾರೆ, ಮುಂಗೋಪಿಗಳು ಮೂರ್ಖರಾಗಿ ನಡಕೊಳ್ಳುತ್ತಾರೆ.

   ಇ. 15:1: ಕೋಪಿಷ್ಟನೊಂದಿಗೆ ಸಿಟ್ಟಿನಿಂದ ಮಾತನಾಡಬಾರದು. ಅದು ಆತನನ್ನು ಇನ್ನೂ ಸಿಟ್ಟಿಗೆಬ್ಬಿಸುತ್ತದೆ. ಆತನೊಂದಿಗೆ ಮೃದುವಾಗಿ ಉತ್ತರಿಸಬೇಕು. ಆಗ ಆತನು ತಣ್ಣಗಾಗುವನು.

   ಈ. 15:18: ಕೋಪವು ಜಗಳವನ್ನೆಬ್ಬಿಸುತ್ತದೆ. ಹಾಗಾಗಿ ನಾವು ತಾಳ್ಮೆಯಿಂದಿರಬೇಕು.

5. ಜ್ಞಾನೋ. 15ನೇ ಅಧ್ಯಾಯ ಮಾತು ಮತ್ತು ನಾಲಿಗೆಯ ಬಳಕೆ ಬಗ್ಗೆ ಹೀಗನ್ನುತ್ತದೆ:

   ಅ. 15:1: ಒಬ್ಬ ವ್ಯಕ್ತಿಗೆ ಹೇಗೆ ಉತ್ತರಿಸುತ್ತೇವೆಂಬುದು ಪ್ರಾಮುಖ್ಯವಾಗಿದೆ. ಮೃದುವಾಗಿ ಉತ್ತರಿಸಿದರೆ ಆತ ಕೋಪಗೊಳ್ಳುವುದಿಲ್ಲ. ಬಿರುಸಾಗಿ ಉತ್ತರಿಸಿದರೆ ಸಿಟ್ಟೇರುತ್ತದೆ.

   ಆ. 15:2: ನಾವು ಮಾತನಾಡುವ ಬಗೆಯು ನಾವು ಯಾರೆಂಬುದನ್ನು ತಿಳಿಸುತ್ತದೆ. ಜ್ಞಾನಿಗಳ ನುಡಿಯು ಅವರ ಜ್ಞಾನವನ್ನು ತಿಳಿಸುತ್ತದೆ. ಜ್ಞಾನಹೀನರ ಮಾತು ಅವರ ಮೂರ್ಖತನವನ್ನು ತೋರಿಸುತ್ತದೆ.

ಇ. 15:4: ನಾವಾಡುವ ಮಾತುಗಳು ನಾವು ವ್ಯವಹರಿಸುವ ಜನರ ಮೇಲೆ ಪ್ರಭಾವ ಬೀರುತ್ತವೆ. ನಮ್ಮ ಸಂತೈಸುವ ಮತ್ತು ಉತ್ತೇಜನದ ಮಾತುಗಳು ಅವರನ್ನು ಬಲಪಡಿಸುತ್ತವೆ. ಬಲತ್ಕಾರದ ನುಡಿಗಳು ಅವರ ಮನಸ್ಸನ್ನು ಮುರಿಯುತ್ತದೆ.

ಈ. 15:7: ನಮ್ಮ ಮಾತುಗಳು ನಮ್ಮ ಪರಿಸರದ ಮೇಲೆ ಪರಿಣಾಮಬೀರುತ್ತವೆ. ಕೇವಲ ನಮ್ಮ ಜ್ಞಾನದ ನುಡಿಗಳು ಬೇರೆಯವರಿಗೆ ತಿಳುವಳಿಕೆಯನ್ನು ಹರಡುವವು.

ಉ. 15:8: ದೇವರು ಹೃದಯವನ್ನು ನೋಡುತ್ತಾನೆ. ನೀತಿವಂತರು ಆತನನ್ನು ಆರಾಧಿಸುವಾಗ ಆತನು ಅದನ್ನು ಮೆಚ್ಚುತ್ತಾನೆ. ಆದರೆ ದುಷ್ಟರ ಯಜ್ಞವನ್ನು ಆತನು ತಿರಸ್ಕರಿಸುತ್ತಾನೆ.

ಊ.15:29: ದೇವರು ಶಿಷ್ಟರ ಬಿನ್ನಹವನ್ನು ಕೇಳುತ್ತಾನೆ ಮತ್ತು ಅವರ ಪ್ರಾರ್ಥನೆಗೆ ಉತ್ತರಿಸುತ್ತಾನೆ. ಆದರೆ ದುಷ್ಟರ ಬಿನ್ನಹಕ್ಕೆ ದೂರವಾಗಿರುತ್ತಾನೆ.

6. ಈ ವಚನಗಳಿಂದ ಸತ್ಯವನ್ನು ನುಡಿಯುವುದರ ಬಗ್ಗೆ ನಾವು ಈ ಸಂಗತಿಗಳನ್ನು ಕಲಿಯುತ್ತೇವೆ:

ಅ. 12:19: ಸತ್ಯದ ಮಾತುಗಳು ಶಾಶ್ವತವಾಗಿರುತ್ತವೆ, ಆದರೆ ಸುಳ್ಳು ಕ್ಷಣಿಕವಾಗಿರುತ್ತದೆ. ಹಾಗಾಗಿ ನಾವು ಯಾವಾಗಲೂ ಸತ್ಯವನ್ನೇ ಆಡಬೇಕು.

ಆ. 12:22: ಜನರು ಸತ್ಯವನ್ನೇ ನುಡಿಯಬೇಕೆಂದು ದೇವರು ಆಶಿಸುತ್ತಾನೆ. ಆದರೆ ಸುಳ್ಳನ್ನು ಆತನು ದ್ವೇಷಿಸುತ್ತಾನೆ. ಸೈತಾನನು ಸುಳ್ಳಿಗೆ ತಂದೆಯಾಗಿದ್ದಾನೆ. ದೇವರು ಬೆಳಕು ಮತ್ತು ಸತ್ಯದ ಮೂಲವಾಗಿದ್ದು ಸತ್ಯವನ್ನು ಪ್ರೀತಿಸುತ್ತಾನೆ.

ಇ. 16:13: ಈ ಲೋಕದ ರಾಜರು ಸತ್ಯವಂತ ಮತ್ತು ಪ್ರಾಮಾಣಿಕ ಜನರೊಂದಿಗೆ ಕಾರ್ಯಮಾಡಲು ಬಯಸುವರು.

ಈ. 17:7: ಸುಳ್ಳುಮಾತನ್ನು ಉತ್ತಮರು ದ್ವೇಷಿಸುತ್ತಾರೆ.

ಉ. 14:9: ಸುಳ್ಳು ಮಾತನ್ನಾಡುವವನು ನಾಶವಾಗುತ್ತಾನೆ.

ಪ್ರಸಂಗಿ – ಉತ್ತರಗಳು

ಪ್ರಸಂಗಿ ಓದಿರಿ ಮತ್ತು ಉತ್ತರಿಸಿ ಮೇಲಿನ ಟಿಪ್ಪಣಿಗಳು

1. –
2. ಗ್ರಂಥಕರ್ತನ ಬಗ್ಗೆ:

   ಅ. ವಾಕ್ಯಭಾಗಗಳು:

   - 1:1: ದಾವೀದನ ಮಗನೂ, ಯೆರೂಸಲೇಮಿನಲ್ಲಿ ಆಳುವ ಅರಸನೂ ಆಗಿದ್ದ ಪ್ರಸಂಗಿಯ ಮಾತುಗಳು.
   - 1:12: ಪ್ರಸಂಗಿಯಾದ ನಾನು ಯೆರೂಸಲೇಮಿನಲ್ಲಿ ಇಸ್ರಾಯೇಲ್ಯರಿಗೆ ಅರಸನಾಗಿದ್ದೆನು.
   - 1:16: ನಾನು ಮನಸ್ಸಿನಲ್ಲಿ ಯೋಚಿಸುತ್ತಾ – "ಅಹಾ ನನಗಿಂತ ಮೊದಲು ಯೆರೂಸಲೇಮನ್ನು ಆಳಿದವರೆಲ್ಲರಿಗಿಂತಲೂ ಹೆಚ್ಚು ಜ್ಞಾನವನ್ನು ಸಂಪಾದಿಸಿಕೊಂಡಿದ್ದೇನೆ.
   - 2:4–9: ಇದು 1 ಅರಸು 4–11ನೇ ಅಧ್ಯಾಯದ ಸಾರಾಂಶವಾಗಿದ್ದು ಇಲ್ಲಿ ಸೊಲೊಮೋನನ ಮನೆ ಕಟ್ಟುವ ಕಾರ್ಯ, ತೋಟ, ಉದ್ಯಾನ, ಆತನ ಘನತೆ ಮತ್ತು ಅನೇಕ ಪತ್ನಿಯಂದಿರ ಬಗ್ಗೆ ವರ್ಣಿಸಲಾಗಿದೆ.
   - 12:9–10: ಪ್ರಸಂಗಿಯು ಜ್ಞಾನಿಯಾಗಿದ್ದಲ್ಲದೆ ಜನರಿಗೆ ತಿಳುವಳಿಕೆಯನ್ನು ಬೋಧಿಸುತ್ತಾ ಬಂದನು. ಅನೇಕಾನೇಕ ಜ್ಞಾನೋಕ್ತಿಗಳನ್ನು ಧ್ಯಾನಿಸಿ, ಪರೀಕ್ಷಿಸಿ ಕ್ರಮಪಡಿಸಿದನು. ಪ್ರಸಂಗಿಯು ಯಥಾರ್ಥ ಭಾವದಿಂದ ರಚಿಸಿದ ಒಪ್ಪಿಗೆಯ ಸತ್ಯದ ಮಾತುಗಳನ್ನು ಹುಡುಕಿ ಆರಿಸಿದನು.

   ಆ. ಆತನನ್ನು ಕ್ವೋಹೆಲೆತ್ (ಗುಂಪುಗೂಡಿಸುವವನು) ಎಂದು ಕರೆಯಲಾಗಿದೆ. ಪ್ರಸಂಗಿಯ ಗ್ರಂಥಕರ್ತನು ತನಗೆ ಈ ಹೆಸರನ್ನು ಯಾಕೆ ಕೊಟ್ಟುಕೊಳ್ಳುತ್ತಾನೆಂದು ತಿಳಿಯಲು ಸಾಧ್ಯವಾಗುತ್ತಿಲ್ಲ. ಬಹುಶಃ ಆತನು ಒಬ್ಬ ಜ್ಞಾನದ ಬೋಧಕನಾಗಿದ್ದು, ಲೋಕದಲ್ಲಿನ ಮನುಷ್ಯನ ಅಸ್ತಿತ್ವದ ಬಗೆಗಿನ ಅನ್ವೇಷಣೆಯಿಂದ ತಾನು ಪಡೆದ ಜ್ಞಾನವನ್ನು ವಿದ್ಯಾರ್ಥಿಗಳನ್ನು ಗುಂಪುಗೂಡಿಸಿ ಅವರಿಗೆ ತಿಳಿಸುವವನಾಗಿದ್ದೇನೆಂಬ ವಾಸ್ತವಾಂಶವನ್ನು ತಿಳಿಸಲು ಆತನು ಬಯಸುತ್ತಿರಬಹುದು.

   ಇ. ಪ್ರಸಂಗಿಯ ಗ್ರಂಥಕರ್ತನ ನಿರ್ಣಯ ಮುಕ್ತಾಯದ ಕುರಿತು: ಗ್ರಂಥಕರ್ತನು ಯಾರೆಂಬುದು ಖಚಿತತೆಯಿಲ್ಲ. ಮೇಲ್ಕಂಡ ವಾಕ್ಯಭಾಗಗಳನ್ನು ಅರ್ಥೈಸಿಕೊಳ್ಳುವ ಮತ್ತು ವ್ಯಾಖ್ಯಾನಿಸುವ ಬಗೆಯನ್ನು ಸತ್ಯವೇದ ಪಂಡಿತರು ಒಪ್ಪುವುದಿಲ್ಲ. ಕೆಲವರು ಸೊಲೊಮೋನನು ಎನ್ನುತ್ತಾರೆ. ಆತನು ಸೊಲೊಮೋನನಾಗಿರಲು ಸಾಧ್ಯವಿಲ್ಲವೆಂದು ಇನ್ನಿತರರು ಹೇಳುತ್ತಾರೆ.

3. ಮೂರನೇ ರಚನೆಯು ಉತ್ತಮವಾದುದ್ದೆಂದು ನಾನೆಣಿಸುತ್ತೇನೆ. ಇದು ಇಡೀ ಪುಸ್ತಕಕ್ಕೆ ಒಂದು ಹೊರನೋಟವನ್ನು ಕೊಡುತ್ತದೆ. ನಾನಿದನ್ನು ಗಮನವಿಟ್ಟು ಓದುವಾಗ ಪುಸ್ತಕದ ಪ್ರತೀ ಭಾಗವು ಯಾವುದರ ಕುರಿತಾಗಿದೆ ಎಂಬುದಕ್ಕೆ ಒಂದು ಉತ್ತಮ ಚಿತ್ರಣವು ಸಿಗುತ್ತದೆ.

4. –
5. "ವ್ಯರ್ಥ", "ಗಾಳಿಯನ್ನು ಹಿಂದಟ್ಟಿದ ಹಾಗೆ" ಮತ್ತು "ಆಕಾಶದ (ಸೂರ್ಯನ) ಕೆಳಗೆ" ಎಂಬ ಪ್ರಮುಖ ಹೇಳಿಕೆಗಳು ಈ ರೀತಿಯಾಗಿ ಪರಸ್ಪರ ಸಂಬಂಧ ಹೊಂದಿವೆ:

   ಅ. "ಆಕಾಶದ ಕೆಳಗೆ" ಎಂಬುದು ಪತನದ ನಂತರ ಭೂಮಿ ಮೇಲಿನ ಮನುಷ್ಯನ ಅಸ್ತಿತ್ವಕ್ಕಾಗಿ ಬೋಧಕನು ಬಳಸುವ ಒಂದು ರೂಪಾಲಂಕಾರವಾಗಿದೆ. ಒಬ್ಬ ಮನುಷ್ಯನು ಅರ್ಥ ಮತ್ತು ಸುಖ, ಜ್ಞಾನ ಮತ್ತು ಸಂಪತ್ತುಗಳಿಗಾಗಿ ಹುಡುಕುವಾಗ ಈ ಜೀವಿತವು ಪರಿಶ್ರಮದಿಂದ ತುಂಬಿದೆ. ಇದು ಹತಾಶೆಯಿಂದ ಕೂಡಿದೆ.

   ಆ. ಮನುಷ್ಯನ ಅಸ್ತಿತ್ವವನ್ನು ಸಾರಾಂಶಗೊಳಿಸಲು ಬೋಧಕನು "ಹೇಬೆಲ್" ಎಂಬ ಇಬ್ರಿಯ ಪದವನ್ನು ಬಳಸುತ್ತಾನೆ. ಈ ಲೋಕದಲ್ಲಿನ ಜೀವನವೆಲ್ಲವೂ ವ್ಯರ್ಥವಾಗಿದೆ. ಈ ಪದದ ಮೂಲ ಅರ್ಥ "ಉಸಿರು ಅಥವಾ ಹಬೆ" ಎಂದಾಗಿದೆ. ಹಾಗಾಗಿ ಈ ಲೋಕದಲ್ಲಿನ ಮನುಷ್ಯ ಜೀವಿತವು ಗತಿಸಿಹೋಗುವಂಥದ್ದು, ಹಾರಿ ಹೋಗುವಂತದ್ದು, ಹಿಡಿಯಲಾರದ್ದು ಆಗಿದೆ. ಈ ಪದಕ್ಕಿರುವ ಇನ್ನೊಂದು ಅರ್ಥ "ಅರ್ಥವಿಲ್ಲದ್ದು, ನಿಷ್ಪ್ರಯೋಜಕ".

ಇ. **"ಗಾಳಿಯನ್ನು ಹಿಂದಟ್ಟಿದ ಹಾಗೆ"** ಎಂಬ ರೂಪಾಲಂಕಾರವು ಪ್ರಯೋಜನವಿಲ್ಲದ್ದು ಮತ್ತು ಅಸಾಧ್ಯವಾದುದ್ದನ್ನು ಸೂಚಿಸುತ್ತದೆ. ಗಾಳಿಯನ್ನು ಹಿಡಿಯಲು ಪ್ರಯತ್ನಿಸಿದರೆ ಅದರಿಂದ ಆಗುವ ಪ್ರಯೋಜನವೇನು? **"ಗಾಳಿಯನ್ನು ಹಿಂದಟ್ಟುವುದು"** ವ್ಯರ್ಥಕ್ಕೆ ಒಂದು ಸಮಾನಾರ್ಥಕವಾಗಿದೆ. ಮಾನವ ಜೀವನವು ವ್ಯರ್ಥವಾಗಿದೆ. ಅದು ಗಾಳಿಯನ್ನು ಹಿಂದಟ್ಟುವ ಹಾಗೆ ಇದೆ.

6. ಇಬ್ರಿಯ ಪದ ಹೇಬೆಲ್ ಮತ್ತು ಕನ್ನಡ ಪದ ವ್ಯರ್ಥ.

7. ಪ್ರಸಂಗಿ ಪುಸ್ತಕದಲ್ಲಿನ ಹೆಚ್ಚುವರಿ ಮುಖ್ಯ ಹೇಳಿಕೆಗಳು:

   ಅ. ಜ್ಞಾನ: (ಸುಮಾರು 50 ಬಾರಿ ಬಂದಿದೆ) ಮತ್ತು ತಿಳುವಳಿಕೆ (ಸುಮಾರು 30 ಸಾರಿ). ಹಾಗಾಗಿ ಜ್ಞಾನ, ತಿಳುವಳಿಕೆಗಳು ಪ್ರಸಂಗಿ ಪುಸ್ತಕದ ಮುಖ್ಯ ಪದವಾಗಿದೆ. ಇದು ಪ್ರಸಂಗಿಯು **"ಜ್ಞಾನ ಸಾಹಿತ್ಯ"** ಪ್ರಬೇದಕ್ಕೆ ಸೇರಿದೆ ಎಂಬುದನ್ನು ತೋರಿಸುತ್ತದೆ. ಆದರೆ ಪ್ರಸಂಗಿ ಮತ್ತು ಜ್ಞಾನೋಕ್ತಿಗಳು ಜ್ಞಾನ/ ತಿಳುವಳಿಕೆಯನ್ನು ಅರ್ಥೈಸಿಕೊಳ್ಳುವ ಬಗೆ ವಿಭಿನ್ನವಾಗಿದೆ. ಜ್ಞಾನೋಕ್ತಿ ಪುಸ್ತಕದಲ್ಲಿ ಜ್ಞಾನವು ಯಾವಾಗಲೂ ಸಕಾರಾತ್ಮಕವಾಗಿದೆ, ಆದರೆ ಪ್ರಸಂಗಿಯಲ್ಲಿ ಜ್ಞಾನದ ವರ್ಣನೆಯು ವಿಭಿನ್ನವಾಗಿದೆ.

   ಆ. ಶ್ರಮ (ಪ್ರಯಾಸ): ಇದನ್ನು ಪ್ರಸಂಗಿಯಲ್ಲಿ ಸುಮಾರು 40 ಬಾರಿ ಕಾಣಬಹುದು. ಶ್ರಮ ಮತ್ತು ಪ್ರಯಾಸವು ಈ ಲೋಕದಲ್ಲಿ ಮನುಷ್ಯನಿಗೆ ಬಂದ ಪಾಲಾಗಿವೆ (9:9). ಖಂಡಿತವಾಗಿ ಮನುಷ್ಯನ ಶ್ರಮವೂ ವ್ಯರ್ಥವಾದುದ್ದಾಗಿದೆ (2:1, 14, 21, 15:16).

   ಇ. ತಿನ್ನು ಮತ್ತು ಕುಡಿ (2:4, 3:12–13, 5:17, 8:15): ತಿನ್ನುವುದು ಮತ್ತು ಕುಡಿಯುವುದಕ್ಕಿಂತ ಮನುಷ್ಯನಿಗೆ ಹೆಚ್ಚಿನದು ಬೇರೇನಿಲ್ಲ. ಇವುಗಳಲ್ಲಿ ಮನುಷ್ಯನು ತೃಪ್ತಿಪಡುವುದು ದೇವರಿಂದ ಬಂದ ವರವಾಗಿದೆ. ಕಷ್ಟಪಡುವುದು, ದುಡಿಯುವುದು, ತಿನ್ನುವುದು ಮತ್ತು ಕುಡಿಯುವುದು ಆಕಾಶದ ಕೆಳಗಿನ ಮನುಷ್ಯನ ಜೀವನವನ್ನು ಸಾರಾಂಶಗೊಳಿಸುತ್ತವೆ. ಇದು ಮೂಲತಃ ಲೌಕಿಕ ಮತ್ತು ಭೌತಿಕ ಜೀವಿತವಾಗಿದೆ.

   ಈ. ಮನುಷ್ಯ ಪಾಲು (3:22, 5:17–18, 9:5): ಇದು ಮನುಷ್ಯನ ಇತಿಮಿತಿ ಮತ್ತು ಅಸಹಾಯಕತೆಯನ್ನು ಸೂಚಿಸುತ್ತದೆ.

   ಉ. ಒಂದೇ ಗತಿ (ನೋಡಿ 2:14–15, 13:19, 7:2, 9:2–3): ಇದನ್ನು ಜ್ಞಾನಿ ಮತ್ತು ಮೂರ್ಖ, ಮನುಷ್ಯರು ಮತ್ತು ಪ್ರಾಣಿಗಳು, ನೀತಿವಂತನು ಮತ್ತು ದುಷ್ಟನು, ಒಳ್ಳೇದು ಮತ್ತು ಕೆಟ್ಟದು, ಶುದ್ಧ ಮತ್ತು ಅಶುದ್ಧಗಳ ಬಗ್ಗೆ ಉಪಯೋಗಿಸಲಾಗಿದೆ. ಅಲ್ಲದೆ ಮರಣವು ಎಲ್ಲಾ ಮನುಷ್ಯರ ಅಂತ್ಯವಾಗಿದೆ ಎಂದು ಹೇಳಲಾಗಿದೆ. ಇವೆಲ್ಲವೂ ಈ ಲೋಕದಲ್ಲಿ ಮನುಷ್ಯ ಜೀವನದ ಎಲ್ಲಾ ಕ್ಷೇತ್ರಗಳೂ ಸಹ ವ್ಯರ್ಥವಾಗಿವೆ ಮತ್ತು ಗಾಳಿಯನ್ನು ಹಿಂದಟ್ಟುವ ಹಾಗೆ ಎಂಬುದನ್ನು ಸೂಚಿಸುತ್ತವೆ.

   ಊ.ದೇವರ ಅನುಗ್ರಹ/ವರ (ದೇವರ ಅನುಗ್ರಹದಿಂದ ಬಂದದ್ದು) (ಉದಾ. ನೋಡಿ 2:24, 3:13, 5:17–18): ತಿನ್ನುವುದು, ಕುಡಿಯುವುದು, ಜೀವನದಲ್ಲಿ ಸುಖ ಪಡುವುದು ಮತ್ತು ತನ್ನ ಪಾಲನ್ನು ಸ್ವೀಕರಿಸಿ ತನ್ನೆಲ್ಲಾ ಕೆಲಸಗಳಲ್ಲಿ ಸಂತೋಷದಿಂದಿರುವುದು ದೇವರ ವರವಾಗಿದೆ ಎಂಬುದನ್ನು ಈ ಹೇಳಿಕೆ ತೋರಿಸುತ್ತದೆ. ದೇವರೇ ಮನುಷ್ಯನಿಗೆ ಒದಗಿಸುವವನಾಗಿದ್ದಾನೆ.

8. –

9. –

10. ಪ್ರಸಂಗಿಯು ಸಕಾರಾತ್ಮಕ ಮತ್ತು ಆತ್ಮೀಕ ಸಲಹೆಯೊಂದಿಗೆ ಮುಕ್ತಾಯವಾಗುತ್ತದೆ (12:13–14). **"ವ್ಯರ್ಥ"**, **"ಗಾಳಿಯನ್ನು ಹಿಂದಟ್ಟುವ ಹಾಗೆ"** ಮತ್ತು **"ಅನ್ನಪಾನಗಳನ್ನು ತೆಗೆದುಕೊಳ್ಳುವುದು"** ಮುಂತಾದ ಮುಖ್ಯ ಅಂಶಗಳೆಲ್ಲಾ ಕೊನೆಗೂ ಇಸ್ರಾಯೇಲ್ಯರ ನಿಜವಾದ ಜ್ಞಾನದ ಸಾರಾಂಶದಿಂದ ಬದಲಾಗಿದೆ: ದೇವರ ಒಡಂಬಡಿಕೆಯ ಆಜ್ಞೆಗಳನ್ನು ಪಾಲಿಸುವುದರ ಮೂಲಕ ಯೆಹೋವನ ಭಯವು ತೋರಿಬಂದಿದೆ.

ಪ್ರಸಂಗಿ ಅಧ್ಯಾಯ 1 – ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ವಚನ 1 ರಲ್ಲಿ ಬೋಧಕನು ಯೆರೂಸಲೇಮಿನಲ್ಲಿನ ದಾವೀದನ ವಂಶದವನು ಎಂದು ತಿಳಿಸಲಾಗಿದೆ. ವಚನ 12 ರಲ್ಲಿ ಆತನು, ತಾನು ಯೆರೂಸಲೇಮಿನಲ್ಲಿ ಇಸ್ರಾಯೇಲ್ಯರನ್ನು ಆಳುವ ಅರಸನಾಗಿದ್ದೆ ಎಂದು ಹೇಳುತ್ತಾನೆ. ವಚನ 16 ರಲ್ಲಿ ಆತನ ಜ್ಞಾನವು ತನಗಿಂತ ಮೊದಲು ಯೆರೂಸಲೇಮನ್ನು ಆಳಿದವರೆಲ್ಲರನ್ನು ಮೀರಿತ್ತು ಎಂದು ಹೇಳುತ್ತದೆ. ಈ ಮಾಹಿತಿಯು ಆಶ್ಚರ್ಯಕರವಾಗಿದೆ. ಯಾಕೆಂದರೆ ಸೊಲೊಮೋನನಿಗಿಂತ ಮೊದಲು ಯೆರೂಸಲೇಮನ್ನು ಆಳಿದ ಇಸ್ರಾಯೇಲ್ ಅರಸನೆಂದರೆ ದಾವೀದನೊಬ್ಬನೇ. ದಾವೀದನಿಗಿಂತಲೂ ಮೊದಲು ಯೆರೂಸಲೇಮನ್ನು ಆಳಿದ ಇಸ್ರಾಯೇಲ್ಯನಲ್ಲದ ಯೆಬೂಸಿ ಅರಸರನ್ನು ಸೂಚಿಸಿ ಆತನು ಹೇಳಿರಲಾರನು.

2. "ಜೀವನ ಚಕ್ರ"ದ ಕುರಿತಾದ ವಾಕ್ಯಭಾಗದ ಭಾವವು ನಿರಾಶವಾದ (ದುಃಖಭರಿತ)ವಾಗಿದೆ: ಮನುಷ್ಯನು ತಾನು ಪಡುವ ಪ್ರಯಾಸದಿಂದ ಏನು ಲಾಭವನ್ನು ಪಡಲಾರನು (ವಚನ 3). ಮನುಷ್ಯನ ಜೀವನವು ಅಲ್ಪವಾಗಿದೆ (ವಚನ 4). ಎಲ್ಲವೂ ಸಹ ಬೇಸರ ತರಿಸುವಂತದ್ದಾಗಿದೆ (ವಚನ 8). ಮನುಷ್ಯನು ಎಂದಿಗೂ ತೃಪ್ತಿ ಹೊಂದಲಾರನು (ವಚನ 8). ಯಾವುದೂ ಹೊಸತಲ್ಲ (ವಚನ 10). ಸತ್ತವರು ಬೇಗ ಮರೆಯಲ್ಪಡುತ್ತಾರೆ (ವಚನ 11).

3. ಬೋಧಕನು "ಆಕಾಶದ ಕೆಳಗೆ ನಡೆಯುವ ಎಲ್ಲಾ ಕೆಲಸಗಳನ್ನು" ತಿಳಿದುಕೊಳ್ಳುವುದರಲ್ಲಿ ತೊಡಗಿದ್ದನು (ವಚನ 12). ಈ ಅಧ್ಯಯನಕ್ಕಾಗಿ ಆತನು ಬಳಸಿದ ಸಾಧನ ಜ್ಞಾನ (ವಚನ 13). ಆನಂತರ ಆತನು ಜ್ಞಾನ ಮತ್ತು ಮೂರ್ಖತನವನ್ನು ತಿಳಿದುಕೊಳ್ಳಲು ಪ್ರಯತ್ನಿಸಿದನು (ವಚನ 17). ಆಗ ಆತನು ಮೂರು ತೀರ್ಮಾನಕ್ಕೆ ಬಂದನು.

   ಅ. ಈ ಲೋಕದಲ್ಲಿನ ಜೀವನವು ಪ್ರಯಾಸಕರವಾಗಿದೆ (ವಚನ 13).

   ಆ. ಈ ಲೋಕದಲ್ಲಿ ಮನುಷ್ಯನು ಮಾಡುವುದೆಲ್ಲವೂ ವ್ಯರ್ಥವಾಗಿದೆ ಮತ್ತು ಇದನ್ನು ಸರಿ ಮಾಡುವುದು ಅಸಾಧ್ಯ (ವಚನ 14–15).

   ಇ. ಜ್ಞಾನ ಮತ್ತು ತಿಳುವಳಿಕೆಗಳು ಸಂಕಟ ಮತ್ತು ವ್ಯಥೆಯನ್ನು ತರುತ್ತವೆ (ವಚನ 18).

ಪ್ರಸಂಗಿ ಅಧ್ಯಾಯ 1 ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

ಬೋಧಕನ ತೀರ್ಮಾನಗಳು ಭಯಂಕರ ದುಃಖಕರವಾಗಿವೆ ಮತ್ತು ಬಹುಶಃ ಈ ಲೋಕದಲ್ಲಿನ ಹೆಚ್ಚಿನ ಜನರ ಅನುಭವಕ್ಕಿಂತಲೂ ಹೆಚ್ಚಾಗಿ ಸಕಾರಾತ್ಮಕವಾಗಿದೆ. ಆಕಾಶದ ಕೆಳಗೆ ನಡೆಯುವ ಎಲ್ಲಾ ಸಂಗತಿಗಳ ಕುರಿತಾದ ಅಧ್ಯಯನದಿಂದ ಸ್ವತಃ ನನ್ನ ತೀರ್ಮಾನವೇನೆಂದರೆ ದೇವರ ಕುರಿತಾಗಿ ಒಂದು ವೈಯಕ್ತಿಕವಾದ ತಿಳುವಳಿಕೆ ಇಲ್ಲದಿದ್ದರೆ ಈ ಲೋಕದಲ್ಲಿನ ಮನುಷ್ಯನ ಜೀವನ ವ್ಯರ್ಥವಾದುದ್ದಾಗಿದೆ.

ಪ್ರಸಂಗಿ ಅಧ್ಯಾಯ 2 – ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ವಚನ 1 ರಲ್ಲಿ ಬೋಧಕನು ತನ್ನೊಂದಿಗೇ ಮಾತಾಡಿಕೊಳ್ಳುತ್ತಾನೆ.

2. ಶಿಕ್ಷಕನು ಸುಖವನ್ನು ಈ ರೀತಿಯಲ್ಲಿ ಹಿಂಬಾಲಿಸುತ್ತಾನೆ:

   ಅ. ನಗೆಯ ಮೂಲಕ, ವಚನ 2

   ಆ. ದ್ರಾಕ್ಷಾರಸ ಮತ್ತು ಹುಚ್ಚುತನದ ಮದ, ವಚನ 3

3. ಬೋಧಕನು ತನ್ನ ಮೂರ್ಖತನದ ಬೆನ್ನಟ್ಟುವಿಕೆಯಲ್ಲಿ ಸಹ ಜ್ಞಾನದಿಂದಲೇ ನಡೆಸಲ್ಪಟ್ಟನು (ವಚನ 3). ಹಾಗಾಗಿ ಆತನು ತನ್ನ ಬುದ್ಧಿಹೀನತೆಯು ಮಿತಿಮೀರಿ ಹೋಗಲು ಅಥವಾ ಅದು ಆತನ ಜೀವನವನ್ನು ನಿಯಂತ್ರಿಸಲು ಆತನು ಬಿಡಲಿಲ್ಲ. ಬದಲಾಗಿ ಆತನು ತನ್ನ ಬುದ್ಧಿಹೀನತೆಯ ಅವಲಂಬನೆಯನ್ನು ಮಿತಿಯಲ್ಲಿಡಲು ಜ್ಞಾನವನ್ನು ಉಪಯೋಗಿಸುತ್ತಾನೆ.

4. ಶಿಕ್ಷಕ ವೈಭವ ಮತ್ತು ಸಂಪತ್ತನ್ನು ಬೆನ್ನಟ್ಟುವಲ್ಲಿ ಜ್ಞಾನವು ವಹಿಸುವ ಪಾತ್ರವನ್ನು ಹೀಗೆ ವ್ಯಾಖ್ಯಾನಿಸಬಹುದು (ವಚನ 4–9):

   ಅ. ತನ್ನ ದೊಡ್ಡ ದೊಡ್ಡ ಯೋಜನೆಗಳನ್ನು ಕಾರ್ಯಗತಗೊಳಿಸಲು ಆತನು ಜ್ಞಾನವನ್ನು ಉಪಯೋಗಿಸಿದ್ದಿರಬಹುದು.

   ಆ. ತನ್ನ ಸಂಪತ್ತನ್ನು ಹೆಚ್ಚಿಸಿಕೊಳ್ಳಲು ಆತನು ಜ್ಞಾನವನ್ನು ಉಪಯೋಗಿಸಿರಲೇಬೇಕು (ಆಳು, ಕುರಿ, ದನ, ಬೆಳ್ಳಿ–ಬಂಗಾರ, ಗಾಯಕರು ಮತ್ತು ಉಪಪತ್ನಿಯರು).

   ಇ. ತನ್ನ ಹಿರಿಮೆಯನ್ನು ಸ್ಥಾಪಿಸಿಕೊಳ್ಳುವಲ್ಲಿ ಆತನು ಜ್ಞಾನವನ್ನು ಬಳಸಿರಬಹುದು.

5. ಜ್ಞಾನ, ಹುಚ್ಚುತನ ಮತ್ತು ಮೂರ್ಖತನದ ವಿಷಯವಾಗಿ ಶಿಕ್ಷಕನು **"ಇದೂ ವ್ಯರ್ಥವಲ್ಲವೇ"** ಎಂಬ ತೀರ್ಮಾನಕ್ಕೆ ಬರುತ್ತಾನೆ.

6. ಜ್ಞಾನಿ ಮತ್ತು ಮೂರ್ಖನು ಇಬ್ಬರೂ ಸಹ ಒಂದೇ ವರ್ಗಕ್ಕೆ ಸೇರಿದವರಾಗಿದ್ದಾರೆ, ಹೇಗೆಂದರೆ – ಇವರಿಬ್ಬರ ಅಂತ್ಯ ಸಹ ಒಂದೇ ಆಗಿದೆ. ಇಬ್ಬರೂ ಸಹ ಸತ್ತು ಮರೆತು ಹೋಗುವರು (ವಚನ 16).

7. ಪ್ರಯಾಸವೂ ವ್ಯರ್ಥವಾಗಿದೆ, ಯಾಕೆಂದರೆ ನಮ್ಮ ಪ್ರಯಾಸದಿಂದ ನಾವು ಸಂಪಾದಿಸಿದ್ದನ್ನು ಮುಂದೆ ಬೇರೆ ಯಾರೋ ಅನುಭವಿಸುವರು (ವಚನ 18). ನಾವು ದುಡಿದದ್ದನ್ನು ಮತ್ತು ಸಂಪಾದಿಸಿದ್ದನ್ನು ನಮಗಾಗಿ ಇಟ್ಟುಕೊಳ್ಳಲಾಗುವುದಿಲ್ಲ. ಬದಲಾಗಿ ಏನೂ ಪ್ರಯಾಸಪಡದೇ ಇರುವ ಯಾರೋ ಬಂದು ಅದನ್ನು ತೆಗೆದುಕೊಳ್ಳುವರು (ವಚನ 21).

8. ಕೆಲಸ ಸಹ ವ್ಯರ್ಥ ಎಂಬ ತೀರ್ಮಾನಕ್ಕೆ ಶಿಕ್ಷಕನು ಬರುತ್ತಾನೆ. ಪರಿಣಾಮವಾಗಿ ಮನುಷ್ಯನಿಗೆ ಮಾಡಲು ಇರುವ ಏಕೈಕ ಸಂಗತಿಯೆಂದರೆ ಅನ್ನಪಾನಗಳನ್ನು ತೆಗೆದುಕೊಳ್ಳುವುದು (ತಿನ್ನುವುದು ಮತ್ತು ಕುಡಿಯುವುದು), ವಚನ 24.

ಪ್ರಸಂಗಿ ಅಧ್ಯಾಯ 2 ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ಈ ಅಧ್ಯಾಯದಲ್ಲಿ ಶಿಕ್ಷಕನು (ಬೋಧಕ) ಮನುಷ್ಯನ ಬಗ್ಗೆ ಈ ಸಂಗತಿಗಳನ್ನು ವ್ಯಕ್ತಪಡಿಸುತ್ತಾನೆ:

   ಅ. ಮನುಷ್ಯನಿಗೆ ಜೀವನದಲ್ಲಿ ಯಾವುದೇ ಉದ್ದೇಶವಿಲ್ಲ. ಆತನು ಬಯಸುವುದು ಮತ್ತು ಸಂಪಾದಿಸುವುದೆಲ್ಲವೂ ವ್ಯರ್ಥವಾಗಿದೆ.

   ಆ. ಹಾಗಾಗಿ ಮನುಷ್ಯನ ಜೀವಿತವು ದೇವರಿಂದ ಬಂದದ್ದಾಗಿದೆ (ದೇವರ ಅನುಗ್ರಹ) ಎಂದು ತಿಳಿದು ಜೀವಿಸಬೇಕಿದೆ ಅಷ್ಟೇ (ತಿಂದು, ಕುಡಿದು, ಕೆಲಸದಿಂದ ತೃಪ್ತನಾಗುವುದು).

2. ವಚನ 24–26 ರಲ್ಲಿ ಶಿಕ್ಷಕನು ದೇವರ ಬಗ್ಗೆ ಈ ಚಿತ್ರಣ ಮತ್ತು ತಿಳುವಳಿಕೆಯನ್ನು ವ್ಯಕ್ತಪಡಿಸುತ್ತಾನೆ:

   ಅ. ಈ ಲೋಕದಲ್ಲಿ ನಮ್ಮ ಅಸ್ತಿತ್ವವು ಸಂಪೂರ್ಣವಾಗಿ ದೇವರ ಮೇಲೆ ಅವಲಂಬಿತವಾಗಿದೆ, ವಚನ 24–25.

ಆ. ದೇವರು ಸಾರ್ವಭೌಮನಾಗಿದ್ದಾನೆ. ತಾನು ಮೆಚ್ಚುವವನಿಗೆ ಆತನು ಜ್ಞಾನ, ತಿಳುವಳಿಕೆ ಮತ್ತು ಸಂತೋಷವನ್ನು ದಯಪಾಲಿಸುತ್ತಾನೆ ಮತ್ತು ಪಾಪಿಯಿಂದ ಸಂಪತ್ತನ್ನು ತೆಗೆದುಕೊಂಡು, ಅದನ್ನು ತಾನು ಮೆಚ್ಚುವವನಿಗೆ ಕೊಡುತ್ತಾನೆ.

3. –

4. ಈ ಅಧ್ಯಾಯದ ಮನೋಭಾವವನ್ನು ತೀರಾ ನಿರಾಶದಾಯಕವಾಗಿ ವರ್ಣಿಸಬಹುದು. ಮನುಷ್ಯನ ಎಲ್ಲಾ ಸಾಧನೆಗಳೂ ಸಹ ವ್ಯರ್ಥವಾಗಿವೆ. ಮನುಷ್ಯನ ಕೊನೆಯು ಮರಣವೇ ಆಗಿದೆ. ಜ್ಞಾನಿಗಳಿಗೂ ಮತ್ತು ಮೂಢರಿಗೂ ಸಹ ಅದೇ ಗತಿ ಕಾದಿರುತ್ತದೆ.

ಪ್ರಸಂಗಿ ಅಧ್ಯಾಯ 3 – ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಈ ಪಠ್ಯದಲ್ಲಿ 14 ರೀತಿಯ ಸಮಯಗಳಿವೆ. ಅವು ಹುಟ್ಟಿನಿಂದ ಸಾವಿನವರೆಗೂ ಇರುವ ಮನುಷ್ಯನ ಎಲ್ಲಾ ಚಟುವಟಿಕೆಗಳನ್ನು ಒಳಗೊಂಡಿವೆ. ಅವುಗಳಲ್ಲಿ ಕೆಲವು ದೈನಂದಿನ ಚಟುವಟಿಕೆಗಳಾಗಿವೆ. ಉಳಿದವು ಮನುಷ್ಯನ ಜೀವನದ ಅತೀ ಪ್ರಾಮುಖ್ಯವಾದ ಗಳಿಗೆಯ ಸನ್ನಿವೇಶಗಳಾಗಿವೆ.

2. ಈ ಚಿತ್ರಣದಲ್ಲಿ ಶಿಕ್ಷಕನು ಮನುಷ್ಯನ ಪ್ರಯಾಸದ ಈ ಚಿತ್ರಣವನ್ನು ಚಿತ್ರಿಸುತ್ತಾನೆ (ವಚನ 9–13, 22):

   ಅ. ಪರಿಶ್ರಮವು ದೇವರಿಂದ ಮನುಷ್ಯನಿಗೆ ಕೊಡಲ್ಪಟ್ಟದ್ದಾಗಿದೆ.

   ಆ. ನಮ್ಮ ಪರಿಶ್ರಮದಲ್ಲಿ ನಾವು ತೃಪ್ತಿಯನ್ನು ಕಾಣುವಾಗ ಅದೂ ಸಹ ದೇವರ ಅನುಗ್ರಹವಾಗಿದೆ.

   ಇ. **"ಪ್ರಯಾಸ, ಶ್ರಮ ಮತ್ತು ಕೆಲಸ"** ಇವೆಲ್ಲವೂ ಈ ಲೋಕದಲ್ಲಿ ಮನುಷ್ಯನಿಗೆ ಬಂದ ಪಾಲಾಗಿವೆ (ವಚನ 22).

3. ವಚನ 11 ಒಂದೊಂದು ವಸ್ತುವನ್ನು ದೇವರು ಸಮಯಕ್ಕೆ ತಕ್ಕಹಾಗೆ ಅಂದವಾಗಿ ನಿರ್ಮಿಸಿದ್ದಾನೆ ಎಂಬ ಹೇಳಿಕೆಯಿಂದ ಪ್ರಾರಂಭವಾಗುತ್ತದೆ. ಈ ಭೂಮಿಯ ಮೇಲೆ ಮನುಷ್ಯನ ಸಮಯ ಸಹ ಅಲ್ಪವಾಗಿದೆ. ಇದಕ್ಕೆ ತದ್ವಿರುದ್ಧವಾಗಿ ಶಿಕ್ಷಕನು ಜೀವನವನ್ನು ಅರ್ಥೈಸಿಕೊಳ್ಳುವ ಮನುಷ್ಯನ ಸಾಮರ್ಥ್ಯವನ್ನು ವಿಭಿನ್ನವಾಗಿ ತಿಳಿಸಿದ್ದಾನೆ. ಮನುಷ್ಯರಿಗೆ ನಿತ್ಯತ್ವ, ಅನಂತಕಾಲದ ಒಂದು ಕಲ್ಪನೆಯಿದೆ. ಆದರೆ ಈ ತಿಳುವಳಿಕೆ ಸಹ ಮಿತಿಯುಳ್ಳದ್ದಾಗಿದೆ. ಈ ಲೋಕದಲ್ಲಿ ಮನುಷ್ಯನು ದೇವರನ್ನು ಮತ್ತು ಆತನ ಕಾರ್ಯಗಳನ್ನು ಸಂಪೂರ್ಣವಾಗಿ ತಿಳಿಯಲಾರನು.

4. ಈ ಲೋಕದಲ್ಲಿ ನ್ಯಾಯದ ಬಗ್ಗೆ ಶಿಕ್ಷಕನ ತೀರ್ಮಾನಗಳು (ವಚನ 16–17):

   ಈ ಲೋಕದಲ್ಲಿ ದುಷ್ಟತನವು ನ್ಯಾಯಸ್ಥಾನವನ್ನು ಅಧರ್ಮ (ದುಷ್ಟತನವು), ಅನೀತಿ ಆಕ್ರಮಿಸಿದೆ. ಆದರೆ ಸಮಾಧಾನಕರ ಅಂಶವೆಂದರೆ ಕೊನೆಯಲ್ಲಿ ದೇವರು ನೀತಿವಂತರಿಗೂ ಮತ್ತು ದುಷ್ಟರಿಗೂ ನ್ಯಾಯ ತೀರಿಸುತ್ತಾನೆ.

5. ಮನುಷ್ಯ ಮತ್ತು ಪ್ರಾಣಿಗಳ ಬಗ್ಗೆ ಶಿಕ್ಷಕನ ತೀರ್ಮಾನ (ವಚನ 18–21):

   ಮನುಷ್ಯರಿಗೂ ಮತ್ತು ಪ್ರಾಣಿಗಳಿಗೂ ಯಾವುದೇ ವ್ಯತ್ಯಾಸವುಂಟೆಂದು ತಿಳಿದವರಾರು? ಅವೆಲ್ಲವುಗಳಿಗೂ ಒಂದೇ ಉಸಿರು (ಪ್ರಾಣ) ಅಥವಾ ಆತ್ಮವಿದೆ (ವಚನ 19, 21). ಅವೆಲ್ಲವೂ ಮಣ್ಣಿನಿಂದ ಆದವುಗಳು ಮತ್ತು ತಿರುಗಿ ಮಣ್ಣಿಗೇ ಸೇರುವವು. ಸಾವಿನ ನಂತರ ಮನುಷ್ಯರಿಗೂ ಮತ್ತು ಪ್ರಾಣಿಗಳಿಗೂ ವ್ಯತ್ಯಾಸವಿದೆಯೆಂದು ಯಾರಿಗೆ ಗೊತ್ತು?

6. ಈ ಅಧ್ಯಾಯದ ಕೊನೆಯಲ್ಲಿ ಶಿಕ್ಷಕನ ತೀರ್ಮಾನವೇನೆಂದರೆ – ಈ ಲೋಕದಲ್ಲಿ ಮನುಷ್ಯನು ತನ್ನ ಜೀವಿತದಲ್ಲಿ ಮುಂದೆ ಏನಾಗುತ್ತದೆಂದು ಅವನು ತಿಳಿಯಲಾರದವನಾಗಿರುವುದರಿಂದ ತನ್ನ ಪಾಲಿಗೆ ಬಂದ ಕಾರ್ಯಗಳಲ್ಲಿ ತೃಪ್ತನಾಗಿರಬೇಕು (ಉಲ್ಲಾಸಪಡಬೇಕಿದೆ).

ಪ್ರಸಂಗಿ ಅಧ್ಯಾಯ 3 ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ಮೇಲ್ಕಂಡ ವಚನ 11 ರ ಟಿಪ್ಪಣಿ ನೋಡಿರಿ.

2. ಮನುಷ್ಯ ಜೀವನದ ಕುರಿತಾಗಿ ತನ್ನ ಅನ್ವೇಷಣೆಯಲ್ಲಿ ಶಿಕ್ಷಕನು ಬಹುದೂರ ಬಂದಿದ್ದಾನೆಂದು ನಾನೆಣಿಸುವುದಿಲ್ಲ. ಆತನ ತೀರ್ಮಾನ ಇನ್ನೂ ಸಹ **"ಪ್ರತಿಯೊಂದೂ ವ್ಯರ್ಥ"** ಎಂಬುದಾಗಿದೆ. ಈ ಲೋಕದಲ್ಲಿ ಮನುಷ್ಯನು ಮನುಷ್ಯ ಮತ್ತು ಪ್ರಾಣಿಯ ನಡುವಿನ ನಿಜವಾದ ವ್ಯತ್ಯಾಸವನ್ನು ಕಾಣಲಾರನು. ಇಲ್ಲಿ ನನಗೆ ಕಾಣುವ ಕೆಲ ಉತ್ತಮ ಅಂಶವೆಂದರೆ:

   ಅ. ವಚನ 11: ಇಲ್ಲಿ ಶಿಕ್ಷಕನು ಜೀವನದ ಕುರಿತಾಗಿ ಎಲ್ಲವನ್ನು ತಿಳಿದುಕೊಳ್ಳಬೇಕೆಂಬ ತನ್ನ ಆಶೆ, ಅಲ್ಲದೆ ಆ ರೀತಿ ಮಾಡಲು ತನಗಿರುವ ಸಾಮರ್ಥ್ಯದ ಇತಿಮಿತಿಗಳೆರಡೂ ಸಹ ದೇವರಿಂದಲೇ ನೇಮಿಸಲ್ಪಟ್ಟಿವೆ ಎಂಬುದನ್ನು ತಿಳಿದುಕೊಳ್ಳುತ್ತಾನೆ.

   ಆ. ವಚನ 17: ಶಿಕ್ಷಕನು ದೇವರ ನ್ಯಾಯತೀರ್ಪು ಖಂಡಿತವಾಗಿ ನ್ಯಾಯವನ್ನು ತರುತ್ತದೆ ಎಂಬುದಾಗಿ ನಿರೀಕ್ಷಿಸುತ್ತಾನೆ.

ಪ್ರಸಂಗಿ 5:8–6:12 – ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಸಂಸ್ಥಾನ (ನ್ಯಾಯಸ್ಥಾನದಲ್ಲಿ) ಬಡವರು ಹಿಂಸೆಗೊಳಗಾಗಿದ್ದಾರೆ ಮತ್ತು ನ್ಯಾಯ ವಂಚಿತರಾಗಿದ್ದಾರೆ. ಬಡವರು ಆಡಳಿತಕ್ಕೆ ವಿರುದ್ಧವಾಗಿ ಹೋರಾಡಲಾಗದು. ಅಲ್ಲದೆ ಶಿಕ್ಷಕನು ರಾಜನ ಪಾತ್ರದ ಬಗ್ಗೆ ಹೇಳುತ್ತಾನೆ. ಬಡವರಿಂದ ರಾಜನಿಗೂ ಸೇವೆಯಾಗುತ್ತದೆ, ಯಾಕೆಂದರೆ ಬಡವನ ಹೊಲಗದ್ದೆಗಳು ಸೇರಿ ಎಲ್ಲವುಗಳ ಮೇಲೆ ತೆರಿಗೆ ಹಾಕಲಾಗುತ್ತದೆ.

2. ಹಣದ ಕುರಿತಾಗಿ ಶಿಕ್ಷಕನು 3 ಅಂಶಗಳನ್ನು ತಿಳಿಸುತ್ತಾನೆ:

   ಅ. ಹಣವು ತೃಪ್ತಿಯನ್ನು ತರಲಾರದು. ಮನುಷ್ಯನು ಯಾವಾಗಲೂ ಹೆಚ್ಚು ಬೇಕೆಂದು ಆಶಿಸುವನು (5:10).

   ಆ. ಹಣವು ಅನುಭವಿಸುವವರನ್ನು (ವ್ಯಯ ಮಾಡುವವರನ್ನು) ಆಕರ್ಶಿಸುತ್ತದೆ.

   ಇ. ಹಣವು ಚಿಂತೆಯನ್ನು ತರುತ್ತದೆ. ಈ ಚಿಂತೆಯು ಶ್ರೀಮಂತನಿಗೆ ರಾತ್ರಿಯಲ್ಲಿ ನಿದ್ರೆ ಬರಿಸುವುದಿಲ್ಲ. ಆತನ ಹಣವು ಆತನಿಗೆ ಅಪಾಯಕಾರಿಯಾಗಬಲ್ಲದು. ಒಬ್ಬ ಕೂಲಿಯವನು ಹಗಲೆಲ್ಲಾ ಕಷ್ಟಪಟ್ಟು ದುಡಿದರೂ ಸುಖವಾಗಿ ನಿದ್ರಿಸುವನು (5:12).

3. 5:13–17 ರಲ್ಲಿ ಶಿಕ್ಷಕನು ಹೇಳುವ ಕಥೆಯು ಒಬ್ಬ ಆಸ್ತಿವಂತನ ಕುರಿತಾಗಿದೆ. ಇಲ್ಲಿ ಒಬ್ಬ ಶ್ರೀಮಂತನಿದ್ದಾನೆ. ಆಸ್ತಿಯನ್ನು ಕಾಪಾಡುವುದರಲ್ಲಿ ತೊಡಗಿದ್ದಾನೆ. ಆದರೆ ಆತನು ತನ್ನ ಅವ್ಯವಹಾರದಿಂದ ಹೆಸರನ್ನು ಹಾಳುಮಾಡಿಕೊಳ್ಳುತ್ತಾನೆ ಅಥವಾ ಆರೋಗ್ಯ ಕಳಕೊಂಡಿರಬಹುದು. ಫಕ್ಕನೆ ಅವನು ಎಲ್ಲವನ್ನು ಕಳಕೊಳ್ಳುತ್ತಾನೆ. ಮಗನಿಗೆ ಕೊಡಲು ಆತನಲ್ಲಿ ಏನೂ ಇರುವುದಿಲ್ಲ. ಬೆತ್ತಲೆಯಾಗಿ ಹುಟ್ಟಿದಂತೆ, ಬೆತ್ತಲೆಯಾಗಿಯೇ ಏನೂ ಒಯ್ಯದೆ ಸಾಯುವನು. ಆತನು ದುಡಿದದ್ದೆಲ್ಲಾ ವ್ಯರ್ಥವೇ. ಇದೊಂದು ದುರ್ದೆಶೆ ಎಂದು ಶಿಕ್ಷಕನು ಮುಗಿಸುತ್ತಾನೆ.

4. ಧನಿಕರನ್ನು ಸಹ ಸೇರಿಸಿ, ಈ ಲೋಕದಲ್ಲಿ ಮನುಷ್ಯನ ಜೀವಿತವು ಹೇಗೆ ವ್ಯರ್ಥವಾಗಿದೆ ಎಂಬುದಕ್ಕೆ 3 ಉದಾಹರಣೆಗಳನ್ನು ಕೊಟ್ಟ ನಂತರ ಶಿಕ್ಷಕನು ಈ ತೀರ್ಮಾನಕ್ಕೆ ಬರುತ್ತಾನೆ: ಈ ಲೋಕದಲ್ಲಿನ ತನ್ನ ಅಲ್ಪಾವಧಿಯ ಜೀವಿತದಲ್ಲಿ ಮನುಷ್ಯನ ಪಾಲು ಏನೆಂದರೆ, ದುಡಿಯುವುದು ಮತ್ತು ಆತನಿಗೆ ಕೊಟ್ಟ ಎಲ್ಲಾ ಆಶೀರ್ವಾದಗಳಲ್ಲಿ ಅಂದರೆ ಅನ್ನಪಾನ, ಸಂಪತ್ತುಗಳಲ್ಲಿ ಸುಖಪಡುವುದಾಗಿದೆ. ಪ್ರತಿಯೊಂದು ಸಹ ದೇವರ ಅನುಗ್ರಹವಾಗಿದೆ.

5. 6:1–6 ರಲ್ಲಿ ಇನ್ನೆರಡು ಕಥೆಗಳನ್ನು ತಿಳಿಸುತ್ತಾನೆ. ಮೊದಲನೇಯದು ಒಬ್ಬ ಐಶ್ವರ್ಯವಂತನು ತನ್ನ ಸಂಪತ್ತನ್ನು ಅನುಭವಿಸಲಾಗದೇ ಯಾವುದೇ ಬಾಧ್ಯಸ್ಥನಿಲ್ಲದೇ ಸಾಯುವನು (ವಚನ 1–2). ಎರಡನೇಯದು ಒಬ್ಬ ಐಶ್ವರ್ಯವಂತನು ಅನೇಕ ಮಕ್ಕಳಿದ್ದರೂ ಯಾವುದೇ ಸುಖ, ತೃಪ್ತಿ, ಉತ್ತರಕ್ರಿಯೆ ಇಲ್ಲದೆ ಸಾಯುವವರ ಕುರಿತಾಗಿದೆ (ವಚನ 3–6).

6. ಎರಡನೇಯ ಕಥೆಯಲ್ಲಿ (ವಚನ 3) ಅತಿಶಯೋಕ್ತಿಗೆ ಎರಡು ಉದಾಹರಣೆಗಳಿವೆ:

   ಅ. **"ನೂರಾರು ಮಕ್ಕಳು"** (ವಚನ 3): ಇದು ಅನೇಕ ಮಕ್ಕಳು ಎಂಬುದಾಗಿ ಅರ್ಥೈಸುತ್ತದೆ. ಆ ದಿನಗಳಲ್ಲಿ ಒಬ್ಬ ವ್ಯಕ್ತಿಯು ಅನೇಕ ಮಕ್ಕಳನ್ನು ಪಡೆಯುವುದು ಒಂದು ಸಕಾರಾತ್ಮಕವಾದ ಅಂಶವಾಗಿತ್ತು. ಇದು ದೇವರ ಆಶೀರ್ವಾದದ ಸಂಕೇತವಾಗಿತ್ತು. ಅನೇಕ ಮಕ್ಕಳನ್ನು ಪಡೆದವನು ಧನಿಕನಾಗಿದ್ದನು.

   ಆ. **"ಸಾವಿರದ ಮೇಲೆ ಸಾವಿರ ವರುಷ"** (ವಚನ 6): ಇದರ ಅರ್ಥ ಅನೇಕಾನೇಕ ವರುಷ. ಆ ದಿನಗಳಲ್ಲಿ ಒಬ್ಬನು ಬಹು ದಿವಸ ಬದುಕುವುದು ಸಕಾರಾತ್ಮಕ ಸಂಗತಿಯಾಗಿತ್ತು. ಇದೂ ಸಹ ದೇವರ ಆಶೀರ್ವಾದದ ಸಂಕೇತವಾಗಿತ್ತು. ಬಹುದಿವಸ ಬದುಕುವವನು ಧನಿಕನೆಂಬುದಾಗಿ ಪರಿಗಣಿಲ್ಪಡುತ್ತಿದ್ದನು.

7. ಎರಡನೇಯ ಕಥೆಯಲ್ಲಿ ಸಹ ತದ್ವಿರುದ್ಧವಾದ ಇಬ್ಬರು ವ್ಯಕ್ತಿಗಳನ್ನು ಕಾಣುತ್ತೇವೆ (6:3–6):

   ಅ. ಒಬ್ಬ ಐಶ್ವರ್ಯವಂತನು ಅನೇಕ ಮಕ್ಕಳನ್ನು ಹೊಂದಿದ್ದು, ವೃದ್ಧಾಪ್ಯದಲ್ಲಿ ಸಾಯುತ್ತಾನೆ, ಆದರೆ ಆತನು ತನ್ನ ಜೀವನದಲ್ಲಿ ಸಂತೋಷವಿಲ್ಲದೆ, ಸುಖತೃಪ್ತಿಯಿಲ್ಲದೆ, ಉತ್ತರಕ್ರಿಯೆಯಿಲ್ಲದೆ ಸಾಯುವನು. ಇನ್ನೊಂದಡೆ ಗರ್ಭಸ್ರಾವದ ಪಿಂಡವು ಇವನಿಗೆ ತದ್ವಿರುದ್ಧವಾಗಿದೆ.

   ಆ. ಶಿಕ್ಷಕನು ಹೇಳುವ ಅಂಶವೇನೆಂದರೆ, ಮರಣವು ಎಲ್ಲರಿಗೂ ಕಾದಿದೆ. ಎಲ್ಲರೂ ಸಹ ಒಂದೇ ಸ್ಥಳಕ್ಕೆ ಹೋಗುತ್ತಾರೆ (ವಚನ 6). ಈ ಲೋಕದಲ್ಲಿ ದೇವರಿಲ್ಲದ ಜೀವಿತವು ಸಂಪೂರ್ಣವಾಗಿ ಕತ್ತಲೆಮಯವಾಗಿದೆ ಎಂಬುದನ್ನು ತನ್ನ

ಓದುಗರು ತಿಳಿದುಕೊಳ್ಳಬೇಕೆಂದು ಆತನು ಬಯಸುತ್ತಾನೆ. ಆತ್ಮೀಕ ದೃಷ್ಟಿಕೋನದಲ್ಲಿ ಇದು ನಿಜವಾದುದ್ದಾಗಿದೆ. ಯಾಕೆಂದರೆ ದೇವರನ್ನು ನಂಬದ ಅನೇಕ ಜನರು ಜೀವನವನ್ನು ಸಕಾರಾತ್ಮಕವಾಗಿ ಪರಿಗಣಿಸುವುದಿಲ್ಲ. ಹಾಗಾಗಿ ಈ ಎರಡನೇಯ ಕಥೆಯು ಅತಿಶಯೋಕ್ತಿಗೆ ಉದಾಹರಣೆಯಾಗಿದ್ದು, ಜನರು ಯೋಚನೆ ಮಾಡಬೇಕೆಂದು ಉದ್ದೇಶಪೂರ್ವಕವಾಗಿ ದೀರ್ಘವಾಗಿ ವಿವರಿಸಲಾಗಿದೆ.

ಪ್ರಸಂಗಿ 5:8–6:12 ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

ಈ ಪಾಠದ ಉಳಿದ ಭಾಗವು ಆಕಾಶದ ಕೆಳಗಿನ ಜೀವನ, ಈ ಲೋಕದಲ್ಲಿನ ಜೀವನದ ಬಗ್ಗೆ ಈ ಹಿಂದೆ ಹೇಳಿದ ಅನೇಕ ಸಂಗತಿಗಳ ಸಾರಾಂಶವಾಗಿ ಅರ್ಥೈಸಿಕೊಳ್ಳಬೇಕಾಗಿದೆ (6:7–12). ಈ ವಚನಗಳಿಂದ ಮಾಡಬಹುದಾದ ಪ್ರಶ್ನೆಗಳ ಪಟ್ಟಿ ಇಂತಿವೆ:

1. ಮನುಷ್ಯನು ಯಾಕೆ ಎಂದೆಂದೂ ತೃಪ್ತಿ ಹೊಂದಲಾರನು (ವಚನ 7)?
2. ಜೀವನವು ಬರೀ ಅನ್ನಪಾನವನ್ನಷ್ಟೇ ಒಳಗೊಂಡಿದೆಯಾ (ವಚನ 7)?
3. ಜ್ಞಾನಿಗೂ ಮತ್ತು ಮೂಢನಿಗೂ ವ್ಯತ್ಯಾಸವಿದೆಯಾ (ವಚನ 8)?
4. ಬಗೆಬಗೆಯಾಗಿ ಆಶಿಸುವುದಕ್ಕಿಂತ ಕಣ್ಣೆದುರಿಗೆ ಇರುವುದನ್ನು ಅನುಭವಿಸುವುದೇ ಉತ್ತಮವಾ (ವಚನ 9)?
5. ಮನುಷ್ಯನು ಈ ಲೋಕದಲ್ಲಿ ಏನನ್ನಾದರೂ ಬದಲಿಸಬಲ್ಲನಾ (ವಚನ 10–11)?
6. ಈ ಲೋಕದಲ್ಲಿನ ಜೀವಿತದ ಬಗ್ಗೆ ನಮಗೇನು ಗೊತ್ತು? ಮತ್ತು ಈ ಜೀವನ ಮುಗಿದ ಮೇಲೆ ಏನಾಗುತ್ತದೆ (ವಚನ 12)?

ಪ್ರಸಂಗಿ ಅಧ್ಯಾಯ 9 – ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಶಿಕ್ಷಕನು – ಜ್ಞಾನಿಯು ಗ್ರಹಿಸಬಹುದೆಂದರೂ ಗ್ರಹಿಸಲಾರನು (8:17) ಎಂಬುದನ್ನು ಪರಾಮರ್ಶಿಸುತ್ತಾನೆ.
2. ವಚನ 1 ರಲ್ಲಿ ಈ ಲೋಕದಲ್ಲಿನ ಜೀವನದ ಬಗ್ಗೆ ಶಿಕ್ಷಕನು ಹೇಳುವ ಎರಡು ಸಂಗತಿಗಳು:

   ಅ. ಎಲ್ಲವೂ ದೇವರ ಕೈಯಲ್ಲಿದೆ. ಹಾಗಾಗಿ ಜ್ಞಾನಿಗಳ ಮತ್ತು ನೀತಿವಂತರ ಭವಿಷ್ಯ ಸಹ ದೇವರ ಕೈಯಲ್ಲಿದೆ.

   ಆ. ಆದರೆ ಭವಿಷ್ಯ ಒಳ್ಳೆಯದೋ ಅಥವಾ ಕೆಟ್ಟದ್ದೋ ಎಂಬುದನ್ನು ಯಾರೂ ತಿಳಿಯರು.
3. ಅಧ್ಯಾಯದ ಉಳಿದ ಭಾಗದಲ್ಲಿ ಆಕಾಶದ ಕೆಳಗೆ ಏನಾಗುತ್ತಿದೆ ಎಂಬುದರ ಬಗ್ಗೆ ತಿಳಿಸುವ 3 ಅಂಶಗಳು:

   ಅ. ಮರಣ (ವಚನ 2–10)

   ಆ. ಅನಿಶ್ಚಿತತೆ (ವಚನ 11–12)

   ಇ. ಹಿಂದಿನದು ಮರೆತುಬಿಡುವುದು (ವಚನ 13–18)
4. ವಚನ 2–3 ರಲ್ಲಿ ಶಿಕ್ಷಕನು ತಿಳಿಸುವ ಸಂಗತಿಯೇನಂದರೆ – ಎಲ್ಲಾ ಜನರು ಅಂದರೆ ಒಳ್ಳೆಯವರು ಮತ್ತು ಕೆಟ್ಟವರು, ಶುದ್ಧರಿಗೂ ಮತ್ತು ಅಶುದ್ಧರಿಗೂ ಒಂದೇ ಗತಿ. ಅದು ಮರಣ. 2:14 ರಲ್ಲಿ ಸಹ ಶಿಕ್ಷಕನು – **"ಜ್ಞಾನಿಗಳಿಗೂ ಮತ್ತು ಮೂಢರಿಗೂ ಒಂದೇ ಗತಿಯಾಗುವುದು"** ಎಂಬ ಇದೇ ರೀತಿಯ ಹೇಳಿಕೆಯನ್ನು ಕೊಡುತ್ತಾನೆ.
5. ವಚನ 11 ರಲ್ಲಿ ಈ ಲೋಕದಲ್ಲಿನ ಅನಿಶ್ಚಿತತೆಯ ಬಗ್ಗೆ ಶಿಕ್ಷಕನು 5 ಉದಾಹರಣೆಗಳನ್ನು ಕೊಡುತ್ತಾನೆ, ಅವೆಂದರೆ:

   ಅ. ಯಾವಾಗಲೂ ವೇಗಿಗಳಿಗೆ ಓಟದಲ್ಲಿ ಗೆಲುವಿಲ್ಲ.

   ಆ. ಯಾವಾಗಲೂ ಬಲಿಷ್ಠರಿಗೆ ಯುದ್ಧದಲ್ಲಿ ಜಯವಾಗದು.

   ಇ. ಯಾವಾಗಲೂ ಜ್ಞಾನಿಗಳಿಗೆ ಅನ್ನ ಸಿಗದು.

   ಈ. ಯಾವಾಗಲೂ ವಿವೇಕಿಗಳಿಗೆ ಧನ (ಸಂಪತ್ತು) ಲಭಿಸುವುದಿಲ್ಲ.

   ಉ. ಯಾವಾಗಲೂ ಪ್ರವೀಣರಿಗೆ (ವಿಧ್ಯಾವಂತರಿಗೆ) ಯಶಸ್ಸು ದೊರೆಯುವುದಿಲ್ಲ.
6. ವಚನ 12 ರಲ್ಲಿ ಮನುಷ್ಯನ ಭವಿಷ್ಯವನ್ನು ತಿಳಿಸಲು ಶಿಕ್ಷಕನು ಬಳಸುವ ಉಪಮೆಗಳು:

   ಅ. ಮೀನುಗಳು ಫಕ್ಕನೆ ಕೆಟ್ಟ ಬಲೆಗೆ ಬೀಳುವಂತೆ

   ಆ. ಪಕ್ಷಿಗಳು ತಟ್ಟನೆ ಜಾಲಕ್ಕೆ ಸಿಕ್ಕಿಬೀಳುವಂತೆ
7. ಬಡ ಜ್ಞಾನಿಯ ಕಥೆಯು ಜನರು ಹಿಂದಿನದನ್ನು ಮರೆತುಬಿಡುತ್ತಾರೆ ಎನ್ನುವ ವಾಸ್ತವಾಂಶವನ್ನು ಈ ರೀತಿ ತಿಳಿಸುತ್ತದೆ (ವಚನ 13–15): ಆತನು ತನ್ನ ಜ್ಞಾನದಿಂದ ಇಡೀ ಪಟ್ಟಣವನ್ನು ವೈರಿಯ ಹಸ್ತದಿಂದ ರಕ್ಷಿಸಿದನು. ಆದರೆ ಬಹುಬೇಗನೆ ಆ ಪಟ್ಟಣದ ಜನರು ಆತನು ಮಾಡಿದ್ದನ್ನು ಮರೆತುಬಿಟ್ಟರು.
8. ಸೂರ್ಯನ ಕೆಳಗಿನ ಜ್ಞಾನದ ಬಗ್ಗೆ ವಚನ 16–18 ರಲ್ಲಿ ನಾವು ಇದನ್ನು ಕಲಿಯುತ್ತೇವೆ:

   ಅ. ಬಲಕ್ಕಿಂತ ಜ್ಞಾನವು ಶ್ರೇಷ್ಠವೆಂಬುದು ಸತ್ಯವಾದುದ್ದಾಗಿದೆ.

   ಆ. ಹುಚ್ಚರೊಡೆಯನ ಕೂಗಿಗಿಂತ ಜ್ಞಾನಿಯ ಮಾತಿಗೆ ಕಿವಿಗೊಡುವುದು ಉತ್ತಮವಾಗಿದೆ.

   ಇ. ಯುದ್ಧಾಯುಧಗಳಿಗಿಂತ ಜ್ಞಾನವು ಶ್ರೇಷ್ಠವಾಗಿದೆ.

ಪ್ರಸಂಗಿ ಅಧ್ಯಾಯ 9 ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. **"ಸತ್ತ ಸಿಂಹಕ್ಕಿಂತ ಬದುಕಿರುವ ನಾಯಿಯೇ ಲೇಸು"** (ವಚನ 4): ಈ ಹೇಳಿಕೆಯನ್ನು ಶಿಕ್ಷಕನು – ಈ ಲೋಕದಲ್ಲಿನ ಜನರು ಜೀವನವನ್ನು ಯಾವ ರೀತಿಯಲ್ಲಿ ಪರಿಗಣಿಸುತ್ತಾರೆ ಎನ್ನುವ ವಾಸ್ತವಾಂಶವನ್ನು ಸೂಚಿಸುತ್ತಾನೆ. ಸಾಮಾನ್ಯ (ಸರಳ) ಜೀವಿತವು (ಬದುಕಿರುವ ನಾಯಿ) ಸತ್ತಂತ ಜೀವಿತಕ್ಕಿಂತ ಲೇಸಾಗಿದೆ (ಸಿಂಹ). ನಾಯಿಯು ಒಂದು ಸರಳ ಮತ್ತು ತಿರಸ್ಕರಿಸಲ್ಪಟ್ಟ ಪ್ರಾಣಿಯಾಗಿದೆ (ಆದರೆ ಅದು ಜೀವಂತವಾಗಿದೆ). ಸಿಂಹವು ಬಹು ಪ್ರಸಿದ್ಧ ಮತ್ತು ಆಕರ್ಷಣೀಯ ಪ್ರಾಣಿಯಾಗಿದೆ (ಆದರೆ ಅದು ಸತ್ತರೆ ಏನೂ ಅಲ್ಲದಂತೆ). ನಾವು ಬದುಕಿರುವಾಗ ಒಂದು ನಿರೀಕ್ಷೆಯಿದೆ. ಆದರೆ ನಾವು ಒಂದು ಬಾರಿ ಸತ್ತ ಮೇಲೆ ಯಾವುದೇ ನಿರೀಕ್ಷೆಯಿಲ್ಲ (ವಚನ 5). ಸತ್ತವರು ಮರೆಯಲ್ಪಡುತ್ತಾರೆ ಮತ್ತು ತಿರುಗಿ ಜೀವಕ್ಕೆ ಹಿಂದಿರುಗಲಾರರು (ವಚನ 6).

2. ವಚನ 7–10 ರಲ್ಲಿನ ಬುದ್ಧಿವಾದವನ್ನು ನಾನು ಈ ರೀತಿಯಾಗಿ ಅರ್ಥೈಸಿಕೊಳ್ಳುವೆ: ಈ ಲೋಕದಲ್ಲಿ ಮನುಷ್ಯನು ಮರಣದ ನೆರಳಿನಡಿಯಲ್ಲಿ ಜೀವಿಸುವವನಾಗಿದ್ದು, ಅದರ ಬಗ್ಗೆ ಏನನ್ನು ತಿಳಿಯದವನಾಗಿದ್ದಾನೆ. ಹಾಗಾಗಿ ಆತನು ಈ ಲೋಕದಲ್ಲಿ ದೇವರು ತನಗೆ ಕೊಟ್ಟ ಜೀವಮಾನದಲ್ಲಿ ಆನಂದಿಸಬೇಕಿದೆ (ಹೋಲಿಸಿ 5:18–20): ತಿನ್ನಬೇಕು, ಕುಡಿಯಬೇಕು, ಒಳ್ಳೇ ಬಟ್ಟೆ ಧರಿಸಬೇಕು, ಸ್ನಾನ ಮಾಡಬೇಕು, ತಲೆಗೆ ಎಣ್ಣೆ ಹಾಕಿಕೊಳ್ಳಬೇಕು, ಹೆಂಡತಿ (ಕುಟುಂಬ) ಯೊಂದಿಗೆ ಆನಂದಿಸಬೇಕು ಮತ್ತು ಒಂದು ಸರಳ ಮತ್ತು ಸಂತೋಷಮಯ ಜೀವನವನ್ನು ಜೀವಿಸಬೇಕಿದೆ.

ಪ್ರಸಂಗಿ 11:7–12:8 – ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಈ ವಾಕ್ಯಭಾಗವನ್ನು ಈ ರೀತಿ ರಚಿಸಬಹುದು:

   ಅ. ಮಾನವ ಜೀವನ, 11:7–8

   ಆ. ಯೌವನ, 11:9–10

   ಇ. ವೃದ್ಧಾಪ್ಯ, 12:1–5

   ಈ. ಮರಣ, 12:6–7

   ಉ. ಬೋಧಕನ ಮುಕ್ತಾಯ (ತೀರ್ಮಾನ), 12:8

2. ಯೌವನಸ್ಥನಿಗೆ ಶಿಕ್ಷಕನು ಕೊಡುವ ಉಪದೇಶ, 11:7–10:

   ಅ. ಸಾಧ್ಯವಾದಷ್ಟು ಜೀವನದಲ್ಲಿ ಆನಂದಿಸು, ವಚನ 8.

   ಆ. ಆದರೆ ಇದಕ್ಕೂ ಅಂತ್ಯವಿದೆ ಎಂಬುದನ್ನು ಮರೆಯಬೇಡ (ಅಂಧಕಾರದ ದಿನಗಳು), ವಚನ 8.

   ಇ. ಮಾನವ ಜೀವನವನ್ನು ದೇವರ ನ್ಯಾಯತೀರ್ಪಿನ ದೃಷ್ಟಿಕೋನದಡಿಯಲ್ಲಿ ಜೀವಿಸಬೇಕು (ವಚನ 9).

   ಈ. ದೇಹದಿಂದ ಕರಕರೆ, ಶ್ರಮೆ ತೊಲಗಿಸಿ, ಆನಂದಿಸು (ವಚನ 10).

   ಉ. ಬಾಲ್ಯ ಮತ್ತು ಪ್ರಾಯ ಸಹ ವ್ಯರ್ಥವೆಂಬುದನ್ನು ಯೌವನಸ್ಥನು ಜ್ಞಾಪಿಸಿಕೊಳ್ಳಬೇಕು (ವಚನ 10).

3. ವೃದ್ಧಾಪ್ಯಕ್ಕಾಗಿ ಶಿಕ್ಷಕನು ಈ ರೂಪಾಲಂಕಾರಗಳನ್ನು ಉಪಯೋಗಿಸುತ್ತಾನೆ (12:2):

   ಅ. ಆಕಾಶಕಾಯಗಳು ಮೊಬ್ಬಾಗುವವು: ಸೂರ್ಯ, ಚಂದ್ರ ಮತ್ತು ನಕ್ಷತ್ರಗಳು

   ಆ. ಮೋಡಗಳು

4. 12:3–4 ರಲ್ಲಿ ವೃದ್ಧಾಪ್ಯಕ್ಕಾಗಿ ಶಿಕ್ಷಕನು ಬಳಸುವ ರೂಪಾಲಂಕಾರಗಳು:

   ಅ. ಮನೆಗಾವಲಿನವರು ನಡುಗುವರು: ಬಹುಶಃ ದೇಹ ಅಥವಾ ಕಾಲುಗಳನ್ನು ಸೂಚಿಸುವುದು.

   ಆ. ಅರೆಯುವವರು ಕೊಂಚವಾದದ್ದರಿಂದ ಕೆಲಸವನ್ನು ನಿಲ್ಲಿಸಿಬಿಡುವರು: ಹಲ್ಲು ಬಿದ್ದುಹೋಗುತ್ತದೆ ಮತ್ತು ಆಹಾರ ಜಿಗಿಯಲು ಕಷ್ಟವಾಗುತ್ತದೆ.

   ಇ. ಕಿಟಿಕಿಗಳಿಂದ ನೋಡುವವರು ಮಂಕಾಗುವರು: ಕಣ್ಣುಗಳು ಮಂದವಾಗುವವು.

   ಈ. ಬೀದಿಯ ಬಾಗಿಲುಗಳು ಮುಚ್ಚಿರುವವು: ಕಿವಿಗಳು ತಮ್ಮ ಕೇಳುವ ಶಕ್ತಿಯನ್ನು ಕಳಕೊಳ್ಳುವವು.

5. ವಚನ 12:4–5 ರಲ್ಲಿ ವೃದ್ಧಾಪ್ಯವನ್ನು ಶಿಕ್ಷಕನು ಈ ರೀತಿಯಾಗಿ ವರ್ಣಿಸುತ್ತಾನೆ:

   ಅ. ಗಾಯಕಿಯರೆಲ್ಲ ಕುಗ್ಗುವರು: ವೃದ್ಧರು ನಿಧಾನವಾಗಿ, ಮೆಲ್ಲನೆ ಮಾತನಾಡುವರು, ಅವರ ಸ್ವರವು ಬಲಹೀನವಾಗುತ್ತದೆ.

   ಆ. ವೃದ್ಧರು ದಾರಿಯಲ್ಲಿ ನಡಯುವಾಗ ದಿನ್ನೆಗೆ ಹೆದರುವರು.

   ಇ. ಬಾದಾಮಿ ಮರವು ಹೂಬಿಡುವುದು: ಬಾದಾಮಿ ಮರವು ಬಿಳಿಯ ಹೂಬಿಡುವಂತೆ ವೃದ್ಧರಿಗೆ ಬಿಳಿಯ ಕೂದಲು ಬರುವುದು.

   ಈ. ಮಿಡತೆಯು ಕೂಡ ಭಾರವಾಗುವುದು: ವೃದ್ಧರು ನಿಧಾನವಾಗಿ ನಡೆಯುವರು.

   ಉ. ಆಶೆಯು ಕುಂದುವದು: ವೃದ್ಧರ ಲೈಂಗಿಕ ಆಶೆಯು (ಆಹಾರದ ಹಸಿವು) ಕುಂಠಿತಗೊಳ್ಳುತ್ತದೆ.

   ಊ. ಕೊನೆಗೆ ಸಾವು ಬರುತ್ತದೆ.

6. 12:6 ರಲ್ಲಿ ಮರಣಕ್ಕೆ ಶಿಕ್ಷಕನು ಉಪಯೋಗಿಸುವ ರೂಪಾಲಂಕಾರಗಳು:

   ಅ. ತೂಗಾಡುವ ದೀಪದ ಬೆಳ್ಳಿಯ ತಂತಿ ಕಿತ್ತು ಹೋಗುವುದು.

   ಆ. ಮಡಿಕೆಯು ಬುಗ್ಗೆಯ ಹತ್ತಿರ ಒಡೆಯುವುದು.

   ಇ. ಬಾವಿಯ ರಾಟೆ ಮುರಿಯುವುದು.

ಪ್ರಸಂಗಿ 11:7–12:8 ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ಆದಿಕಾಂಡದ ಪ್ರತಿಧ್ವನಿಯಾಗಿ 12:7ನ್ನು ನಾನು ಈ ರೀತಿಯಾಗಿ ಅರ್ಥೈಸಿಕೊಳ್ಳುವೆನು:

   - ಯೆಹೋವ ದೇವರು ನೆಲದ ಮಣ್ಣಿನಿಂದ ಮನುಷ್ಯನನ್ನು ರೂಪಿಸಿ ಅವನ ಮೂಗಿನಲ್ಲಿ ಜೀವಶ್ವಾಸವನ್ನು ಊದಿದನು; ಆಗ ಮನುಷ್ಯನು ಬದುಕುವ ಪ್ರಾಣಿಯಾದನು (ಆದಿ. 2:7).

   - ನೀನು ಮಣ್ಣೇ; ಮಣ್ಣಿಗೆ ಸೇರತಕ್ಕವನಾಗಿದ್ದೀ (ಆದಿ. 3:19).

   ಇಬ್ರಿಯದಲ್ಲಿ ಉಸಿರು ಮತ್ತು ಆತ್ಮಕ್ಕೆ ರುವಾಕ್ ಎಂಬ ಪದ ಬಳಸಲಾಗಿದೆ. ಹಾಗಾಗಿ ರುವಾಕ್ ಎಂದರೆ ಆತ್ಮ, ನಿತ್ಯತ್ವಕ್ಕೂ ಬದುಕುವ ಮನುಷ್ಯನ ಒಂದು ಭಾಗವನ್ನು ಸೂಚಿಸುತ್ತದೆಯೋ ಅಥವಾ **"ಉಸಿರು"** ಜೀವವನ್ನು (ಪ್ರಾಣ) ಸೂಚಿಸುತ್ತದೋ ಎಂಬುದನ್ನು ಆಯಾ ಸಂದರ್ಭವು ತೀರ್ಮಾನಿಸುವುದು. 12:7 ರಲ್ಲಿ ರುವಾಕ್ ಎಂದರೆ ಪ್ರಾಣ (ಜೀವ) ಎಂಬುದಾಗಿದೆ. ಜೀವವನ್ನು ಕೊಡುವ ದೇವರು ಮರಣದ ಸಮಯದಲ್ಲಿ ಒಬ್ಬ ವ್ಯಕ್ತಿಯ ಪ್ರಾಣವನ್ನು ತೆಗೆದುಕೊಳ್ಳುತ್ತಾನೆ. ಆದರೆ ಆತನ ದೇಹವು ಹೂಣಲ್ಪಟ್ಟು ಮಣ್ಣಾಗುವುದು.

ಪ್ರಸಂಗಿ 12:9–14 – ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಮುಕ್ತಾಯದ ವಚನಗಳಲ್ಲಿ ಶಿಕ್ಷಕನು ಈ ರೀತಿಯಾಗಿ ವರ್ಣಿಸಲ್ಪಟ್ಟಿದ್ದಾನೆ:

   ಅ. ಆತನು ಜ್ಞಾನಿಯಾಗಿದ್ದನು.

   ಆ. ಆತನು ಬೋಧಕನಾಗಿದ್ದು, ಅನೇಕರಿಗೆ ತಿಳುವಳಿಕೆಯನ್ನು ಬೋಧಿಸುತ್ತಾ ಬಂದನು.

   ಇ. ಆತನು ಜ್ಞಾನೋಕ್ತಿಗಳನ್ನು ಬರೆದನು.

   ಈ. ಆತನು ಬರೆದದ್ದೆಲ್ಲವು ಯಥಾರ್ಥವಾಗಿಯೂ ಸತ್ಯವಾಗಿಯೂ ಅವೆ.

2. ಜ್ಞಾನಿಗಳ ನುಡಿಗಳ ಪ್ರಭಾವವನ್ನು ವಿವರಿಸಲು ಬಳಸಲಾದ ಉಪಮೆಗಳು:

   ಅ. **"ಮುಳ್ಳುಗೋಲುಗಳಂತೆ"**: ಕುರಿಗಳು ಸರಿಯಾದ ಮಾರ್ಗದಲ್ಲಿ ಹೋಗುವಂತೆ ಮಾಡಲು ಮುಳ್ಳುಗೋಲುಗಳನ್ನು ಬಳಸಲಾಗುತ್ತದೆ. ಹಾಗಾಗಿ ಜ್ಞಾನಿಗಳ ನುಡಿಗಳು ನಾವು ಸರಿಯಾದ ದಾರಿಯಲ್ಲಿ ನಡೆಯುವಂತೆ ಮಾಡುತ್ತವೆಂಬುದನ್ನು ತಿಳಿಸಲು ಈ ಉಪಮೆಯನ್ನು ಬಳಸಲಾಗಿದೆ.

   ಆ. **"ಬಿಗಿಯಾಗಿ ಬಡಿದ ಮೊಳೆಗಳು"**: ಈ ರೀತಿಯ ಮೊಳೆಗಳು ಗಟ್ಟಿಯಾಗಿ ಆ ಸ್ಥಳದಲ್ಲಿ ಹಿಡಿದಿರುತ್ತವೆ. ಹಾಗಾಗಿ ಜ್ಞಾನಿಗಳ ನುಡಿಗಳು ನಮ್ಮ ಜೀವಿತದಲ್ಲಿ ಆಳವಾದ ಪ್ರಭಾವ ಬೀರುತ್ತವೆಂಬುದನ್ನು ತಿಳಿಸಲು ಈ ಉಪಮೆ ಬಳಸಲಾಗಿದೆ.

3. ಪ್ರಸಂಗಿ ಪುಸ್ತಕದ ಮುಕ್ತಾಯವು ಎಚ್ಚರಿಕೆ ಮತ್ತು ಎಚ್ಚರಿಕೆಗಾಗಿನ ಎರಡು ಕಾರಣಗಳಲ್ಲಿ ಸಾರಾಂಶಗೊಂಡಿದೆ:

   ಅ. ಎಚ್ಚರಿಕೆ (ಹಿತವಚನ): ದೇವರಿಗೆ ಭಯಪಟ್ಟು ಆತನ ಆಜ್ಞೆಗಳನ್ನು ಕೈಗೊಳ್ಳು.

   ಆ. ಇದಕ್ಕೆ ಮೊದಲ ಕಾರಣ: ಇದು ಮನುಷ್ಯರೆಲ್ಲರ ಕರ್ತವ್ಯ.

   ಇ. ಎರಡನೇ ಕಾರಣ: ದೇವರು ನ್ಯಾಯಾಧಿಪತಿಯಾಗಿದ್ದಾನೆ.

ಪ್ರಸಂಗಿ 12:9–14 ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ಈ ವಾಕ್ಯಭಾಗವು ಹಿಂದಿನ ಪಠ್ಯಕ್ಕಿಂತ ವಿಭಿನ್ನವಾಗಿದೆ:

   ಇದು ಶಿಕ್ಷಕನ ಬಗ್ಗೆ ಮೂರನೇ ವ್ಯಕ್ತಿಯಾಗಿ (ತೃತೀಯ ಪುರುಷ) ಹೇಳುತ್ತದೆ. ಇಲ್ಲಿ ವೈಯಕ್ತಿಕವಾಗಿ **"ಅವನು"** ಎಂಬ ಸರ್ವನಾಮ ಬಳಸಲಾಗಿದೆ. ಹಿಂದಿನ ಪಠ್ಯವು **"ನಾನು"** ಎಂಬ ಸರ್ವನಾಮವನ್ನು ಬಳಸಿ ಪ್ರಥಮ ಪುರುಷದಲ್ಲಿ ಬರೆಯಲಾಗಿದೆ. ಇದು ಇಲ್ಲಿ ಎರಡು ವಿಭಿನ್ನವಾದ ಗ್ರಂಥಕರ್ತರು ಇದ್ದಾರೆಂದು ಅರ್ಥವಲ್ಲ. ಇಲ್ಲಿ ಒಬ್ಬನೇ ವ್ಯಕ್ತಿ (ಗ್ರಂಥಕರ್ತ) ಎರಡು ವಿಭಿನ್ನವಾದ ಪಾತ್ರ ವಹಿಸಿದ್ದಾನೆ. ಸಂಪಾದಕನ ಪಾತ್ರವು – ಪುಸ್ತಕದ ಪ್ರಾರಂಭ (1:1) ಮತ್ತು ಅಂತ್ಯ (12:9–14) ವನ್ನು ಬರೆಯುವುದಾಗಿದ್ದರೆ, ಶಿಕ್ಷಕನ ಪಾತ್ರವು – ಈ ಲೋಕದಲ್ಲಿ ಜೀವಿತದ ಬಗ್ಗೆ ಅನ್ವೇಷಣೆ ಮಾಡುವುದಾಗಿದೆ.

ಪ್ರಸಂಗಿ ಪ್ರಶ್ನೆಪತ್ರಿಕೆ – ಟಿಪ್ಪಣಿಗಳು

ಪ್ರಶ್ನೆ 2 ಕ್ಕೆ ಟಿಪ್ಪಣಿಗಳು

ಸಾಮಾನ್ಯ ಓದುಗರಿಗೆ ಪ್ರಸಂಗಿ ಪುಸ್ತಕವು ಒಂದು ಅಪಾಯಕಾರಿ ಪುಸ್ತಕವಾಗಿದೆ. ಪ್ರಾಯೋಗಿಕವಾಗಿ ಇಡೀ ಪುಸ್ತಕವು ಈ ಲೋಕದಲ್ಲಿನ ಮನುಷ್ಯನ ಜೀವಿತವನ್ನು **"ದೇವರಿಲ್ಲದ ಜೀವಿತ"**ದ ದೃಷ್ಟಿಕೋನದಿಂದ ಚರ್ಚಿಸುತ್ತದೆ. ಪರಿಣಾಮವಾಗಿ, ಈ ಪುಸ್ತಕದಿಂದ ಒಂದು ವಾಕ್ಯಭಾಗ ಅಥವಾ ವಚನವನ್ನು ತೆಗೆದುಕೊಂಡು **"ದೇವರ ವಾಕ್ಯವು ಈ ರೀತಿ ಹೇಳುತ್ತದೆ"** ಎಂಬುದಾಗಿ ನಾವು ಹೇಳಲು ಸಾಧ್ಯವಿಲ್ಲ. ಇದರಲ್ಲಿನ ಸತ್ಯವೇಧಾರಿತ ಜ್ಞಾನದ ಬೋಧನೆಗಳಲ್ಲಿ ದೇವರ ಮಾತಾಗಿದ್ದರೂ, ಈ ಪುಸ್ತಕದಲ್ಲಿನ ಕೆಲವು ವಚನಗಳು ಮಾತ್ರ **"ದೇವರು ಹೇಳುವುದಾಗಿದೆ"**. **"ಒಬ್ಬನೇ ಕರ್ತನಿಂದ ಬಂದಿವೆ"** (12:11). ಈ ಪುಸ್ತಕದಲ್ಲಿನ ಹೆಚ್ಚಿನ ವಚನಗಳು ತಮ್ಮ ಜೀವನದಲ್ಲಿ ದೇವರ ಪ್ರಸನ್ನತೆಯನ್ನೇ ಅರಿಯದ ಜನರ ಜೀವ ಮತ್ತು ಮರಣದ ಬಗ್ಗೆ ಹೇಳುವುದಾಗಿದೆ.

ಆದರೆ ಅನುಭವವಿಲ್ಲದ ಬೋಧಕರಿಗೆ ಪ್ರಸಂಗಿಯು ಅಪಾಯಕಾರಿ ಪುಸ್ತಕವಾಗಿದೆ. ಹಾಗಾಗಿ ಇಡೀ ಸತ್ಯವೇದದ ಬೋಧನೆಗಳ ಬೆಳಕಿನಡಿಯಲ್ಲಿ ಈ ಪುಸ್ತಕದ ಬಗ್ಗೆ ಸರಿಯಾದ ಒಂದು ತಿಳುವಳಿಕೆಯನ್ನು ಹೊಂದುವವರೆಗೂ ಪ್ರಸಂಗಿಯಿಂದ ಬೋಧಿಸಬೇಡಿರಿ (ಪ್ರಸಂಗಿಸಬೇಡಿರಿ).

ಹಳೇ ಒಡಂಬಡಿಕೆಯ ಎಲ್ಲಾ ಜ್ಞಾನದ ಪಠ್ಯಗಳೊಂದಿಗೂ ಸಹ ಇದೇ ರೀತಿಯ ಸಮಸ್ಯೆಯಿದೆ. ಅವನ್ನು ಪ್ರಾಚೀನ ಇಸ್ರಾಯೇಲಿನೊಂದಿಗಿನ ದೇವರ ಒಡಂಬಡಿಕೆಯ ಬೆಳಕಿನಡಿಯಲ್ಲಿ ಅವನ್ನು ಅರ್ಥೈಸಿಕೊಳ್ಳಬೇಕಿದೆ.

ಪರಮಗೀತ – ಉತ್ತರಗಳು

ಪ್ರೇಮಿಗಳು ಪರಸ್ಪರ ಹಾತೊರೆಯುವುದು, (1:2–2:17) –ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಇಲ್ಲಿ ಮಾತನಾಡುವವರ ಪಟ್ಟಿ (ನಿಮ್ಮ ಭಾಷಾಂತರದಲ್ಲಿ ಕೊಂಚ ವಿಭಿನ್ನವಾಗಿರಬಹುದು):

   ಅ. ಕುರಿಕಾಯುವ ಹುಡುಗಿ, 1:2–4ಅ

   ಆ. ಸ್ನೇಹಿತರು, 1:4

   ಇ. ಕುರಿಕಾಯುವ ಹುಡುಗಿ, 1:5–7

   ಈ. ಕುರಿಕಾಯುವ ಹುಡುಗ (ಕುರುಬ), 1:8–10

   ಉ. ಸ್ನೇಹಿತರು, 1:11

   ಊ. ಕುರಿಕಾಯುವ ಹುಡುಗಿ, 1:12–14

   ಋ. ಕುರಿಕಾಯುವ ಹುಡುಗ, 1:15

   ಎ. ಕುರಿಕಾಯುವ ಹುಡುಗಿ, 1:16–2:1

   ಏ. ಕುರಿಕಾಯುವ ಹುಡುಗ, 2:2

   ಐ. ಕುರಿಕಾಯುವ ಹುಡುಗಿ, 2:3–7

2. 1:16–17 ರಲ್ಲಿ ಕುರಿಕಾಯುವವಳು ತಮ್ಮ ಸಂಧಿಸುವ ಸ್ಥಳವನ್ನು ಈ ರೀತಿ ವರ್ಣಿಸಿದ್ದಾಳೆ: ಹಸಿರಾದ ಚಿಗುರು ಅವರ ಮಂಚವಾಗಿದೆ. ದೇವದಾರು ಮರಗಳು ಮನೆಯ ಗೋಡೆಗಳಂತೆಯೂ ತುರಾಯಿ ಮರಗಳು ಜಂತೆಗಳಂತೆಯೂ ಇವೆ.

3. 2:2 ರಲ್ಲಿ ಕುರಿಕಾಯುವವನು ತನ್ನ ಪ್ರಿಯತಮೆಯನ್ನು ಈ ರೀತಿಯಾಗಿ ವರ್ಣಿಸಿದ್ದಾನೆ: ಆಕೆಯು ಮುಳ್ಳುಗಿಡಗಳ ಮಧ್ಯದಲ್ಲಿ ತಾವರೆಯಂತೆ, ಆಕೆಯ ಸೌಂದರ್ಯವು ಇತರ ಸ್ತ್ರೀಯರ ಮಧ್ಯೆ ಅವನಿಗೆ ಅತ್ಯಮೂಲ್ಯವಾಗಿ ಕಾಣುತ್ತದೆ.

4. 2:5 ರಲ್ಲಿ ಕುರಿಕಾಯುವವಳು ತನ್ನ ಪ್ರೀತಿಯನ್ನು ಈ ರೀತಿಯಾಗಿ ವರ್ಣಿಸುತ್ತಾಳೆ: ಪ್ರೀತಿಯು ಆಕೆಯ ಇಡೀ ದೇಹವನ್ನು ಅಸ್ವಸ್ಥಗೊಳಿಸುತ್ತದೆ. ಆಕೆಯು ಬಲಹೀನಗೊಂಡಿದ್ದಾಳೆ ಮತ್ತು ಅಸ್ವಸ್ಥಳಾಗಿದ್ದಾಳೆ. ಹಾಗಾಗಿ ಆಕೆಯು ತನ್ನನ್ನು ಒಣದ್ರಾಕ್ಷೇಯಿಂದ ಉಪಚರಿಸಬೇಕೆಂದು ಮತ್ತು ಸೇಬು ಹಣ್ಣಿನಿಂದ ಆದರಿಸಬೇಕೆಂದು ಕೇಳಿಕೊಳ್ಳುತ್ತಾಳೆ.

ಪ್ರೇಮಿಗಳು ಪರಸ್ಪರ ಹಾತೊರೆಯುವುದು ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ಈ ವಾಕ್ಯಭಾಗದಿಂದ ಸ್ತ್ರೀಯ ಹಿನ್ನಲೆಯ ಬಗ್ಗೆ ನಾವು ಕಲಿಯುವ ಸಂಗತಿಗಳೆಂದರೆ:

   ಅ. ಆಕೆ ಒಬ್ಬ ಕೃಷಿ ಹಿನ್ನಲೆಯವಳಾಗಿದ್ದು ವರುಷಗಳ ಕಾಲ ಬಿಸಿಲಿನಲ್ಲಿಯೂ ತನ್ನ ತಂದೆಯ ದ್ರಾಕ್ಷೇತೋಟದಲ್ಲಿ ಕೆಲಸ ಮಾಡುತ್ತಿದ್ದಾಳೆ. ಅದರಿಂದ ಆಕೆಯ ಚರ್ಮದ ಬಣ್ಣ ಕಪ್ಪಾಗಿದೆ. ಆಕೆಯು ತನ್ನ ಸೌಂದರ್ಯದ ಬಗ್ಗೆ ಕಾಳಜಿವಹಿಸಲಾಗುತ್ತಿಲ್ಲ (1:5–6).

   ಆ. ಆಕೆಯು ಒಬ್ಬ ಕುರಿಕಾಯುವವಳಾಗಿದ್ದು, ಆಕೆಗೆ ತನ್ನದೇ ಆದ ಕುರಿಗಳಿವೆ (1:8).

2. 1:9–10 ರಲ್ಲಿ ಕುರುಬನು ತನ್ನ ಪ್ರಿಯತಮೆಯನ್ನು ಈ ರೀತಿಯಾಗಿ ವರ್ಣಿಸುತ್ತಾನೆ:

   ಅ. ಆಕೆಯು ಅತೀ ಮನೋಹರಳಾಗಿದ್ದಾಳೆ ಮತ್ತು ಬಹು ಅಮೂಲ್ಯಳಾಗಿದ್ದಾಳೆ.

   ಆ. ಆಕೆಯು ಅಂದವಾಗಿದ್ದಾಳೆ. ಆಕೆಯ ವೈಶಿಷ್ಟ್ಯತೆಯನ್ನು ಕುರುಬನು ಫರೋಹನ ಸುಂದರ ರಥಗಳ ಕುದರೆಗಳಿಗೆ ಹೋಲಿಸಿದ್ದಾನೆ.

3. ಕುರಿಕಾಯುವವಳು ತನ್ನ ಪ್ರಿಯತಮನನ್ನು ಈ ರೀತಿಯಾಗಿ ವರ್ಣಿಸುತ್ತಾಳೆ, 1:13–14:

   ಅ. ಆಕೆಯು ಆತನನ್ನು ತನ್ನ ಸ್ತನಗಳ ನಡುವೆ ಇಟ್ಟುಕೊಳ್ಳುವ ಪರಿಮಳ ದ್ರವ್ಯದ ಚೀಲಕ್ಕೆ ಹೋಲಿಸುತ್ತಾಳೆ. ಹಾಗೆಯೇ ಆತನು ಆಕೆಗೆ ಅಷ್ಟು ಪ್ರಿಯ ಮತ್ತು ಆಕೆಯ ಹೃದಯಕ್ಕೆ ಹತ್ತಿರವಾಗಿದ್ದಾನೆ. ಅವರ ಪ್ರೀತಿಯು ಬಹು ನಿಕಟವಾದದ್ದು ಮತ್ತು ಸುಂದರವಾದದ್ದು.

   ಆ. ಅಲ್ಲದೆ ಆಕೆಯು ಆತನನ್ನು ಏನ್ಗೆದಿ ತೋಟದಲ್ಲಿ ಅರಳುವ ಗೋರಂಟೆಯ ಪೂಗೊಂಚಲಿಗೆ ಹೋಲಿಸುತ್ತಾಳೆ. ಹಾಗಾಗಿ ಆಕೆಯ ಪ್ರಿಯಕರ ಮತ್ತು ಅವರ ಸಂಬಂಧವು ಸುಂದರ (ಹೂವುಗಳು), ಮನೋಹರ (ಸುವಾಸನೆ), ಸಮೃದ್ಧ (ಏನ್ಗೆದಿ ಒಯಸಿಸ್‌ನಲ್ಲಿ ನೀರಿನ ಒರತೆಯಂತೆ) ವಾಗಿ ವರ್ಣಿಸಲ್ಪಟ್ಟಿದೆ.

4. 1:5 ರಲ್ಲಿ ಕುರುಬನು ತನ್ನ ಪ್ರಿಯತಮೆಯನ್ನು ಈ ರೀತಿಯಾಗಿ ವರ್ಣಿಸುತ್ತಾನೆ: ಆಕೆಯು ಚಲುವೆಯಾಗಿದ್ದಾಳೆ, ಆಕೆಯ ಕಣ್ಣುಗಳು ಪ್ರೀತಿಯಿಂದ ತುಂಬಿದ್ದು, ಸುಂದರವಾಗಿವೆ. ಇದನ್ನು **"ಪಾರಿವಾಳದ"** ರೂಪಾಲಂಕಾರದಿಂದ ತಿಳಿಸಲಾಗಿದೆ. ಪಾರಿವಾಳವು ಪ್ರಾಚೀನ ಪ್ಯಾಲೆಸ್ತೇನಿನಲ್ಲಿ ಪ್ರೀತಿ ಮತ್ತು ಸೌಂದರ್ಯದ ಸಂಕೇತವಾಗಿತ್ತು.

5. 2:3 ರಲ್ಲಿ ಕುರಿಕಾಯುವವಳು ತನ್ನ ಪ್ರಿಯತಮನನ್ನು ಈ ರೀತಿಯಾಗಿ ವರ್ಣಿಸುತ್ತಾಳೆ: ಆಕೆಯು ಆತನನ್ನು ಉದ್ಯಾನದ ಮರಗಳ ನಡುವಿನ ಸೇಬುಮರಕ್ಕೆ ಹೋಲಿಸುತ್ತಾಳೆ. ಒಂದು ಸೇಬುಮರವು ಉದ್ಯಾನದ ಮರಕ್ಕಿಂತ ಅತೀ ಪ್ರಾಮುಖ್ಯವಾಗಿತ್ತು. ಇದು ಸೂರ್ಯನ ಬಿಸಿಲಿನಿಂದ ನೆರಳನ್ನು ಕೊಡುತ್ತಿತ್ತು ಮತ್ತು ಇದು ಹಸಿದವರ ದಣಿವನ್ನಾರಿಸುತ್ತಿತ್ತು. ಆನಂತರ ಆಕೆಯು ರೂಪಾಲಂಕಾರವಾಗಿ ತನ್ನ ಪ್ರಿಯತಮನ ಜೊತೆಯಲ್ಲಿ ಸಿಗುವ ಸಂತೋಷವನ್ನು ವರ್ಣಿಸುತ್ತಾಳೆ. ಆತನ ಜೊತೆಯಿರುವುದು ಎಲೆಗಳಿಂದ ಕೂಡಿದ ಸೇಬುಮರದ ನೆರಳಿನಲ್ಲಿ ಕೂತುಕೊಂಡು, ಸಿಹಿಯಾದ ಹಣ್ಣನ್ನು ತಿನ್ನುವಂತೆ ಇರುತ್ತದೆ.

ಕುರಿಕಾಯುವವಳ ಕನಸುಗಳು, 3:1–6:3 – ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಸ್ತ್ರೀಯು ತನ್ನ ಕನಸಿನಲ್ಲಿ ತನ್ನ ಪ್ರಿಯತಮನನ್ನು ಹುಡುಕುತ್ತಿರುತ್ತಾಳೆ, ಆಕೆಯು ಆತನನ್ನು ಕಂಡುಕೊಂಡು ನಂತರ ತನ್ನ ತಾಯಿಯ ಮಲಗುವ ಕೋಣೆಗೆ ಕರೆತರುತ್ತಾಳೆ (3:1–4).

2. ಸ್ತ್ರೀ ದೇಹದ ಈ ಭಾಗಗಳು ವರ್ಣಿಸಲ್ಪಟ್ಟಿವೆ (4:1–5):

   ಅ. ಆಕೆಯ ಕಣ್ಣುಗಳು, ವಚನ 1. ಅವು ಪಾರಿವಾಳದಂತಿವೆ.

   ಆ. ಆಕೆಯ ಕೂದಲು, ವಚನ 1. ಅವು ಮಲಗಿರುವ ಆಡುಮಂದೆಯಂತಿದೆ.

   ಇ. ಆಕೆಯ ಹಲ್ಲು, ವಚನ 2. ಅವು ಕುರಿಯ ಮಂದೆಯಂತಿದೆ.

   ಈ. ಆಕೆಯ ತುಟಿ, ವಚನ 3. ಕೆಂಪುದಾರದಂತಿದೆ.

   ಉ. ಆಕೆಯ ಬಾಯಿ, ವಚನ 3. ರಮ್ಯವಾಗಿದೆ.

   ಊ. ಆಕೆಯ ಕೆನ್ನೆ, ವಚನ 3. ದಾಳಿಂಬೆಯ ತಿರುಳಿನಂತಿದೆ.

   ಋ. ಆಕೆಯ ಕಂಠ, ವಚನ 4. ದಾವೀದನ ಬುರುಜಿನಂತಿದೆ.

   ಎ. ಆಕೆಯ ಸ್ತನಗಳು, ವಚನ 5. ಅವು ಎರಳೆಯ ಅವಳಿ ಮರಿಗಳಂತಿವೆ.

3. 4:12–16 ರಲ್ಲಿ ಉದ್ಯಾನವು ಈ ರೀತಿಯಾಗಿ ವರ್ಣಿಸಲ್ಪಟ್ಟಿದೆ:

   ಅದು ಅಗುಳಿ ಹಾಕಿದ ಉದ್ಯಾನವಾಗಿದೆ. ಅದು ಬೇಲಿಯೊಳಗಿನ ಬುಗ್ಗೆಯನ್ನು ಒಳಗೊಂಡಿದೆ. ಮುಚ್ಚಿ ಮುದ್ರಿಸಿದ ಬಾವಿಯಿದೆ. ಇದು ಬಗೆಬಗೆಯ ಹಣ್ಣುಗಳನ್ನು ಕೊಡುವ ಮತ್ತು ಸುಂದರವಾದ ಸುವಾಸನೆಯನ್ನು ಹರಡುವ ಮರಗಳಿಂದ ಕೂಡಿದೆ. ಹಾಗಾಗಿ ದಣಿವಾರಿಸಿಕೊಳ್ಳಲು ಮತ್ತು ಸಂತೋಷಪಡಲು ಇದೊಂದು ಸುಂದರವಾದ ಸ್ಥಳವಾಗಿದೆ, ಆದರೆ ಇದು ಮುಚ್ಚಿ ಮುದ್ರಿಸಲ್ಪಟ್ಟಿದೆ, ಎಲ್ಲರಿಗೂ ಮುಕ್ತವಾಗಿಲ್ಲ.

4. 5:2–7 ರಲ್ಲಿ ಸ್ತ್ರೀಯ ದುಃಸ್ವಪ್ನ ಇಂತಿದೆ: ಕನಸಿನಲ್ಲಿ ಆಕೆಯು ತನ್ನ ಪ್ರಿಯನು ಬಾಗಿಲು ಬಡಿಯುವುದನ್ನು ಕೇಳಿಸಿಕೊಳ್ಳುತ್ತಾಳೆ. ಆತನು ಆಕೆಯೊಂದಿಗಿರಲು ಬಯಸುತ್ತಾನೆ. ಪ್ರಾರಂಭದಲ್ಲಿ ಆಕೆಯು ಎದ್ದು ಬಾಗಿಲ ಅಗುಳಿಯನ್ನು ತೆರೆದಾಗ ಆತನು ಹೋಗಿರುತ್ತಾನೆ. ಹಾಗಾಗಿ ಆಕೆಯು ಮಧ್ಯರಾತ್ರಿಯಲ್ಲಿ ಮನೆಯಿಂದ ಹೊರಬಂದು ತನ್ನ ಪ್ರಿಯನನ್ನು ಹುಡುಕುತ್ತಾಳೆ. ಆದರೆ ಆತನು ಸಿಗುವುದಿಲ್ಲ. ಬದಲಾಗಿ ರಾತ್ರಿ ಕಾವಲುಗಾರರಿಂದ ಆಕೆಯು ದೋಚಲ್ಪಟ್ಟು ಹೊಡೆಸಿಕೊಳ್ಳುತ್ತಾಳೆ.

5. ಕನಸಿನಲ್ಲಿ ಸ್ತ್ರೀಯು ತನ್ನ ಪ್ರಿಯತಮನ ಸೌಂದರ್ಯವನ್ನು ವರ್ಣಿಸುತ್ತಾಳೆ. ಆತನ ದೇಹದ ಈ ಭಾಗಗಳನ್ನು ಆಕೆ ವರ್ಣಿಸುತ್ತಾಳೆ (5:10–16):

   ಅ. ಆತನ ತಲೆ, ಚೊಕ್ಕ ಬಂಗಾರದಂತಿದೆ (ವಚನ 11).

   ಆ. ಆತನ ಕೂದಲು, ಕಾಗೆಯಂತೆ ಕಪ್ಪಾಗಿದೆ (ವಚನ 11).

   ಇ. ಆತನ ಕಣ್ಣುಗಳು, ಪಾರಿವಾಳಗಳಂತಿವೆ (ವಚನ 12).

   ಈ. ಆತನ ಕೆನ್ನೆಗಳು, ಸುಗಂದ ಸಸ್ಯಗಳ ದಿಬ್ಬಗಳಂತಿವೆ (ವಚನ 13).

   ಉ. ಆತನ ತುಟಿಗಳು, ಕೆಂದಾವರೆಗಳಂತಿವೆ (ವಚನ 14).

   ಊ. ಆತನ ಕೈಗಳು, ಬಂಗಾರದ ಸಲಾಕಿಯಂತಿವೆ (ವಚನ 14).

   ಋ. ಆತನ ಮೈ, ದಂತಫಲಕದಂತಿದೆ (ವಚನ 14)

   ಎ. ಆತನ ಕಾಲುಗಳು, ಚಂದ್ರಕಾಂತ ಸ್ತಂಭಗಳಂತಿವೆ (ವಚನ 15).

   ಏ. ಆತನ ನುಡಿ, ಇಂಪಾಗಿದೆ (ವಚನ 16).

6. ಸ್ತ್ರೀಯ ಕನಸು ಒಂದು ಹೇಳಿಕೆ ಮತ್ತು ಘೋಷಣೆಯೊಂದಿಗೆ ಮುಕ್ತಾಯವಾಗುತ್ತದೆ (6:2–3):

   ಅ. ಪ್ರಿಯತಮನು ತಮ್ಮ ಪ್ರೀತಿಯನ್ನು ಆನಂದಿಸಲು (ನೆಲದಾವರೆಗಳನ್ನು ಕೊಯ್ಯಲು) ಆಕೆಯ ಬಳಿಗೆ (ತನ್ನ ತೋಟಕ್ಕೆ) ಬಂದಿದ್ದಾನೆ.

   ಆ. ಪ್ರೇಮಿಗಳು ಪರಸ್ಪರ ತಮ್ಮ ಪ್ರೀತಿಗೆ ಸಮರ್ಪಿಸಲ್ಪಟ್ಟವರಾಗಿದ್ದಾರೆ.

ಕುರಿಕಾಯುವವಳ ಕನಸುಗಳು ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ಸ್ತ್ರೀಯ ಕನಸಿನಲ್ಲಿ ಅರಸನಾದ ಸೊಲೊಮೋನನ ವಿವಾಹಮಹೋತ್ಸವದ ಅತ್ಯದ್ಭುತ, ಭವ್ಯತೆ ಅಂಶಕ್ಕೆ ಹೆಚ್ಚು ಒತ್ತು ಕೊಡಲಾಗಿದೆ (3:6–11). ಆ ಭವ್ಯತೆಯು ಕೆಳಕಂಡ ವರ್ಣನೆಗಳ ಮೂಲಕ ತೋರಿಬರುತ್ತದೆ:

   ಅ. ಬೆಲಬಾಳುವ ಸುಗಂಧದ್ರವ್ಯಗಳು

   ಆ. ಅರವತ್ತು ಶೂರರ ದಂಡು

   ಇ. ಲೆಬನೋನಿನ ಮರದಿಂದ ಮಾಡಿದ ಪಾಲಕಿ ಮತ್ತು ಅದಕ್ಕೆ ಬೆಲೆಬಾಳುವ ಅಲಂಕಾರ

   ಈ. ಸೊಲೊಮೋನನು ಕೂರಲು ಐಷಾರಾಮಿ ಆಸನ

   ಉ. ಸೊಲೊಮೋನನ ಕಿರೀಟ

2. ತನ್ನ ಪ್ರಿಯತಮೆಯ ಸೌಂದರ್ಯದ ಕುರಿತಾದ ಪ್ರಿಯತಮನ ವರ್ಣನೆಯು, ಪರಮಗೀತವು ಬರೆಯಲ್ಪಟ್ಟು ಪ್ರಾಚೀನ ಮಧ್ಯಪೂರ್ವ ಸಂಸ್ಕೃತಿಗಳ ಮೌಲ್ಯಗಳನ್ನು ಪ್ರತಿಬಿಂಬಿಸುತ್ತದೆ. ಇದರಲ್ಲಿ ಕೆಲ ಚಿತ್ರಣಗಳು ಸಾಮಾನ್ಯವಾಗಿದ್ದು ಯಾವ ಸಂಸ್ಕೃತಿಗಳಲ್ಲಿ ಸಹ ಅದನ್ನು ಬಳಸಬಹುದಾಗಿದೆ (ಉದಾ: **"**ನಿನ್ನ ತುಟಿಗಳು ಜೇನುಗರೆಯುತ್ತವೆ**"** ವಚನ 11). ಆದರೆ ಇದರಲ್ಲಿನ ಕೆಲವು ಉಪಮೆಗಳನ್ನು ದಕ್ಷಿಣಭಾರತದ ಪ್ರೇಮಿಯು ಉಪಯೋಗಿಸುವಂತಿಲ್ಲ. ಅದು ಭಾರತೀಯ ಸಂಸ್ಕೃತಿಯಲ್ಲಿ ಅಪರಿಚಯವೆನಿಸುತ್ತದೆ ಉದಾಹರಣೆಗೆ:

   ಅ. ನಿನ್ನ ಕೂದಲು ಆಡುಮಂದೆಯಂತಿದೆ (ವಚನ 1): ಸುಂದರವಾದ ಕೂದಲಿಗೆ ರೇಷ್ಮೆಯ ಉಪಮೆಯನ್ನು ನಾವು ಬಳಸಬಹುದು.

   ಆ. ನಿನ್ನ ಹಲ್ಲು ಉಣ್ಣೆಕತ್ತರಿಸಿದ ಕುರಿಯ ಮಂದೆಯಂತಿದೆ (ವಚನ 2): ಸುಂದರವಾದ ಹಲ್ಲಿಗೆ ನಾವು ಹವಳವನ್ನು ಉಪಮೆಯಾಗಿ ಬಳಸುತ್ತೇವೆ.

   ಇ. ನಿನ್ನ ವಸ್ತ್ರಗಳ ಸುವಾಸನೆ ಲೆಬನೋನಿನ ಪರಿಮಳದಂತಿದೆ (ವಚನ 11): ಲೆಬನೋನಿನ ಪರಿಮಳ ಹೇಗಿದೆಯೆಂದು ನಮಗೆ ಗೊತ್ತಿಲ್ಲ, ಬದಲಾಗಿ ಇದಕ್ಕೆ ನಾವು ಬೆಲೆಬಾಳುವ ಸುಗಂಧದ್ರವ್ಯದ ಹೆಸರನ್ನು ಬಳಸಬಹುದು.

   ಈ ಉದಾಹರಣೆಗಳಿಂದ ನಾವು ಕಲಿಯುವುದೇನಂದರೆ – ಇಬ್ರಿಯ ಕಾವ್ಯ ಅಥವಾ ಸಾಹಿತ್ಯದ ಚಿತ್ರಣವು ದೃಶ್ಯ (ಅಥವಾ ಶಾರೀರಿಕ) ಅಂಶಗಳನ್ನು ಸೂಚಿಸುವುದರ ಕುರಿತಾದದ್ದಲ್ಲ. ಬದಲಾಗಿ ಇದು ಪ್ರಾಚೀನ ಪ್ಯಾಲೆಸ್ತೇನ್ ಸಂಸ್ಕೃತಿಯ ಮೌಲ್ಯಗಳನ್ನು ಪ್ರತಿಬಿಂಬಿಸುತ್ತದೆ:

   - ಹೆಣ್ಣಿನ ಸುಂದರವಾದ ಕೂದಲನ್ನು ಪ್ಯಾಲೆಸ್ತೇನಿನ ಕುರುಬನು ಬೆಟ್ಟ ಪ್ರದೇಶದಲ್ಲಿ ಓಡಾಡುವ ತನ್ನ ಕಟ್ಟುಮಸ್ತಾದ ಕುರಿಗಳಿಂದ ಸಿಗುವ ಸಂತೋಷಕ್ಕೆ ಹೋಲಿಸಲಾಗಿದೆ.

   - ಹೆಣ್ಣಿನ ಸುಂದರವಾದ ಹಲ್ಲನ್ನು ತೊಳೆದು, ಉಣ್ಣೆ ಕತ್ತರಿಸಿದ ತನ್ನ ಕುರಿಮರಿಯನ್ನು ನೋಡುವಾಗ ಪ್ಯಾಲೆಸ್ತೇನ್ ಕುರುಬನಿಗಾಗುವ ಆನಂದಕ್ಕೆ ಹೋಲಿಸಲಾಗಿದೆ.

   - ಆಕೆಯ ಸುಂದರವಾದ ಕಂಠ (ಕತ್ತು)ವನ್ನು ಯೆರೂಸಲೇಮ್ ಪಟ್ಟಣದ ಗೋಡೆಯ ಮೇಲೆ ಸುಂದರವಾಗಿ ಅಲಂಕರಿಸಲ್ಪಟ್ಟ ದಾವೀದನ ಬುರುಜಿಗೆ ಹೋಲಿಸಲಾಗಿದೆ.

   - ಆಕೆಯ ವಸ್ತ್ರಗಳ ಸುವಾಸನೆಯನ್ನು ಮರಗಳಿಂದ ತುಂಬಿದ ಲೆಬನೋನಿನ ಪರ್ವತಗಳಿಗೆ ಹೋಲಿಸಲಾಗಿದೆ.

3. 4:12 ರಲ್ಲಿ ಪ್ರಿಯತಮೆಯ ಕುರಿತಾದ ಪ್ರೇಮಿಯ ವರ್ಣನೆಯನ್ನು ನಾವು ಹೀಗೆ ಅರ್ಥೈಸಿಕೊಳ್ಳಬಹುದು:

ಅ. ಇಲ್ಲಿನ ಉದ್ಯಾನ ಮತ್ತು ಬಾವಿಯ ರೂಪಾಲಂಕಾರಗಳು ಸ್ತ್ರೀಯ ಕುರಿತಾಗಿವೆ. ಪ್ರಾಚೀನ ಮಧ್ಯಪೂರ್ವ ಕಾವ್ಯಗಳಲ್ಲಿ ಈ ರೂಪಾಲಂಕಾರಗಳು ಲೈಂಗಿಕ ಕಲಾಮೀಮಾಂಸೆ (ಅರ್ಥ)ವನ್ನು ಒಳಗೊಂಡಿವೆ.

ಆ. ಆದರೆ ಉದ್ಯಾನಕ್ಕೆ ಅಗುಳಿ ಹಾಕಲಾಗಿದೆ, ಬುಗ್ಗೆ ಮತ್ತು ಬಾವಿಯನ್ನು ಮುಚ್ಚಿ ಮುದ್ರಿಸಲಾಗಿದೆ. ಇದರರ್ಥ ಇಲ್ಲಿಯವರೆಗೆ ಸ್ತ್ರೀ ಮತ್ತು ಆಕೆಯ ಲೈಂಗಿಕತೆಯು ಆಕೆಯ ಪ್ರಿಯತಮನಿಗೆ ಲಭ್ಯವಿಲ್ಲ.

4. ನನ್ನ ನಲ್ಲನು ಬಿಳುಪು ಕೆಂಪು ಬಣ್ಣದವನು (ವಚನ 10):

ಅ. ಬಿಳುಕೆಂಪು ಪುರುಷನ ಯೌವನ ಮತ್ತು ಒಳ್ಳೆಯ ಆರೋಗ್ಯದ ಸಂಕೇತವಾಗಿದೆ (1 ಸಮು. 16:12 ರಲ್ಲಿ ದಾವೀದನ ವರ್ಣನೆ ಹೋಲಿಸಿ).

ಆ. ಅವನ ಕೆನ್ನೆಗಳು ಸುಗಂಧಸಸ್ಯಗಳು ಬೆಳೆಯುವ ದಿಬ್ಬಗಳಂತಿವೆ (ವಚನ 13). ಇದು ಬಹುಶಃ ಪುರುಷನ ಗಡ್ಡವು ಸುಗಂಧ ತೈಲವನ್ನು ತೊಟ್ಟಿಕ್ಕುವುದನ್ನು ಸೂಚಿಸುತ್ತದೆ.

ಇ. ಅವನ ತುಟಿಗಳು ಕೆಂದಾವರೆಗಳು (ವಚನ 13)

ಈ. ಅವನ ಕೈಗಳು, ದೇಹ ಮತ್ತು ಕಾಲನ್ನು ಅಮೂಲ್ಯ ವಸ್ತುಗಳಾದ ಬಂಗಾರ ಮತ್ತು ಅಪರಂಜಿಗಳಿಗೆ ಹೋಲಿಸಲಾಗಿದೆ, ವಚನ 14–15.

ಈ ರೀತಿಯ ಉಪಮೆಗಳನ್ನು ನಾವು ನಮ್ಮ ಕಾವ್ಯಗಳಲ್ಲಿ ಬಳಸದೇ ಇರಬಹುದು. ನಮಗೆಲ್ಲವೂ ಇವು ಅಪರಿಚಿತವಾಗಿವೆ.

ಪ್ರೇಮಿಗಳು ಪುನಃ ಒಬ್ಬರಿಗೊಬ್ಬರು ಹಾತೊರೆಯುವುದು, 6:4–8:4 – ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. 6:4 ರಲ್ಲಿ ಪ್ರೇಮಿಯು ತನ್ನ ಪ್ರಿಯಳನ್ನು ತಿರ್ಚ ಮತ್ತು ಯೆರೂಸಲೇಮೆಂಬ ಎರಡು ಪಟ್ಟಣಗಳ ಸೌಂದರ್ಯಕ್ಕೆ ಹೋಲಿಸಿದ್ದಾನೆ.
2. 6:10 ರ ಟಿಪ್ಪಣಿ ನೋಡಿರಿ.
3. 7:1–7 ರಲ್ಲಿ ಪ್ರೇಮಿಯು ತನ್ನ ಪ್ರಿಯತಮೆಯ ಸೌಂದರ್ಯವನ್ನು ಹೀಗೆ ವರ್ಣಿಸುತ್ತಾನೆ:

   ಅ. ಪಾದರಕ್ಷೆಗಳಲ್ಲಿನ ಆಕೆಯ ಪಾದಗಳು ಸುಂದರವಾಗಿವೆ (ವಚನ 1).

   ಆ. ಆಕೆಯ ತೊಡೆಗಳು ಆಭರಣಗಳಂತಿವೆ (ವಚನ 1).

   ಇ. ಆಕೆಯ ಹೊಕ್ಕಳು ದ್ರಾಕ್ಷಾರಸದಿಂದ ತುಂಬಿದ ಬಟ್ಟಲಿನಂತಿದೆ (ವಚನ 2).

   ಈ. ಆಕೆಯ ಹೊಟ್ಟೆ (ಸೊಂಟ) ಗೋದಿಯ ರಾಶಿಯಂತಿದೆ (ವಚನ 2).

   ಉ. ಆಕೆಯ ಸ್ತನಗಳು (ಎದೆ) ಎರಡು ಅವಳಿ ಮರಗಳಂತಿವೆ (ವಚನ 3).

   ಊ. ಆಕೆಯ ಕಂಠ (ಕತ್ತು) ದಂತದ ಗೋಪುರದಂತಿದೆ (ವಚನ 4).

   ಋ. ಆಕೆಯ ಕಣ್ಣುಗಳು ಹೆಷ್ಬೋನಿನ ಕೊಳಗಳಂತಿವೆ (ವಚನ 4).

   ಎ. ಆಕೆಯ ಮೂಗು ಲೆಬನೋನಿನ ಬುರುಜಿನಂತಿದೆ (ವಚನ 4).

   ಏ. ಆಕೆಯ ತಲೆ ಕರ್ಮೆಲ್ ಬೆಟ್ಟದಂತಿದೆ (ವಚನ 5).

   ಐ. ಆಕೆಯ ಕೂದಲು ದೂಮ್ರವರ್ಣದ್ದು (ವಚನ 5).

   ಒ. ಆಕೆಯ ನೀಳವಾದ ಆಕಾರ ಖರ್ಜೂರ ವೃಕ್ಷದಂತಿದೆ (ವಚನ 7).

   ಓ. ಆಕೆಯ ಸ್ತನಗಳು ಖರ್ಜೂರ ವೃಕ್ಷದ ಗೊಂಚಲುಗಳಂತಿವೆ (ವಚನ 7).

   ಪರಮಗೀತದಲ್ಲಿ ಬಳಸಲಾದ ರೂಪಾಲಂಕಾರ ಮತ್ತು ಉಪಮೆಗಳ ಬಗ್ಗೆ ನಾವು ಕಾಣುವ ಪ್ರಾಮುಖ್ಯ ಅಂಶವೆಂದರೆ:

   - ಚಿತ್ರಣವು ಪ್ರಾಚೀನ ಮಧ್ಯಪೂರ್ವದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ಆದರೆ ಇಂದು ದಕ್ಷಿಣ ಭಾರತದಲ್ಲಿರುವ ನಾವು, ನಾವು ಪ್ರೀತಿಸುವ ಹುಡುಗಿಯನ್ನು ವರ್ಣಿಸಲು ಬೇರೆ ರೀತಿಯ ರೂಪಾಲಂಕಾರಗಳನ್ನು ಬಳಸುತ್ತೇವೆ.

   - ಈ ರೀತಿಯ ಹೋಲಿಕೆಗಳು ನಿಜವಾಗಲೂ ಹೆಣ್ಣಿನ ದೇಹದ ಭಾಗಗಳು ಹೀಗೆಯೇ ಕಾಣುತ್ತವೆ ಎಂದರ್ಥವಲ್ಲ, ಆದರೆ ಇವು ಅವುಗಳ (ದೇಹದ ಭಾಗಗಳ) ವೈಶಿಷ್ಟ್ಯ ಮತ್ತು ಪ್ರಾಮುಖ್ಯತೆಯನ್ನು ಪ್ರತಿನಿಧಿಸುತ್ತವೆ. ಉದಾಹರಣೆ: ಆಕೆಯ ಕಾಲುಗಳು ಆಭರಣದಂತೆ ಕಾಣುತ್ತಿಲ್ಲ ಆದರೆ ಅವು ಆಕೆಯ ಪ್ರಿಯತಮನಿಗೆ ಆಭರಣಗಳಿಗಿಂತಲೂ ಅಮೂಲ್ಯವಾಗಿವೆ.
4. ಸ್ತ್ರೀಯು ತನ್ನ ಪ್ರಿಯತಮನನ್ನು ವನಗಳ ಬಳಿಗೆ ಕರೆತರಲು ಬಯಸುತ್ತಾಳೆ (7:11–13).
5. 8:1 ರ ಟಿಪ್ಪಣಿ ನೋಡಿರಿ.

ಪ್ರೇಮಿಗಳು ಪುನಃ ಒಬ್ಬರಿಗೊಬ್ಬರು ಹಾತೊರೆಯುವುದು ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. 6:8–9 ರಲ್ಲಿ ಪ್ರೇಮಿಯು ತನ್ನ ಪ್ರಿಯತಮಳ ಬಗ್ಗೆ ಈ ಅಂಶವನ್ನು ತಿಳಿಸುತ್ತಾನೆ: ಆಕೆಯು ಉಳಿದ ಎಲ್ಲಾ ಸ್ತ್ರೀಯರನ್ನು (ರಾಣಿ ಮತ್ತು ಉಪಪತ್ನಿಯರು) ಮೀರಿಸಿದವಳಾಗಿದ್ದಾಳೆ. ಅವರೆಲ್ಲರೂ ಆಕೆಯನ್ನು ಹೊಗಳುತ್ತಾರೆ. ಇದು ಆಕೆಯ ವಿಶೇಷತೆಯನ್ನು ತೋರಿಸುತ್ತದೆ.

2. 7:8–9 ಅನ್ನು ನಾವು ಈ ರೀತಿ ಅರ್ಥೈಸಿಕೊಳ್ಳುತ್ತೇವೆ: ಪ್ರೇಮಿಯು ತನ್ನ ಪ್ರಿಯತಮೆಯ ಸೌಂದರ್ಯವನ್ನು ಹೊಗಳುವಾಗ, ಕೊನೆಯಲ್ಲಿ ಆತನು ತಮ್ಮ ಪ್ರೀತಿಯು ಲೈಂಗಿಕವಾಗಿ ಸಹ ನೆರವೇರಲಿ ಎಂಬ ಆಸೆ ವ್ಯಕ್ತಪಡಿಸುತ್ತಾನೆ. ಪ್ರೇಯಸಿಯು ತನ್ನ ನಲ್ಲನಿಗೆ ತನ್ನ ಪ್ರೀತಿಯ ದ್ರಾಕ್ಷಾರಸವನ್ನು ಕೊಡುತ್ತೇನೆ ಎನ್ನುವುದರ ಮೂಲಕ ಪ್ರತಿಕ್ರಿಯಿಸುತ್ತಾಳೆ. ಆಕೆಯು ಆತನನ್ನು ವನಗಳಿಗೆ ಆಹ್ವಾನಿಸುತ್ತಾಳೆ (7:10–13). ಅವರು ತಮ್ಮ ಪ್ರೀತಿಯು ನೆರವೇರಿದ ನಂತರ ಮದುವೆಯಾದ ಜೋಡಿಯಾಗಿ ಹಿಂತಿರುಗುತ್ತಾರೆ (8:5).

ಪ್ರೇಮಿಗಳು ಮದುವೆಯಲ್ಲಿ ಒಂದಾಗುವುದು, 8:5–14 – ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ವಚನ 5 ರ ಟಿಪ್ಪಣಿ ನೋಡಿರಿ.
2. 8:6–7 ರಲ್ಲಿ ಪ್ರೀತಿಯು ಈ ರೀತಿ ವರ್ಣಿಸಲ್ಪಟ್ಟಿದೆ:

   ಅ. ಅದು ಮರಣದಷ್ಟು ಬಲವಾಗಿದೆ (ವಚನ 6).

   ಆ. ಅದರ ಮತ್ಸರವು ಪಾತಾಳದಷ್ಟು ಕ್ರೂರವಾಗಿದೆ (ವಚನ 6).

   ಇ. ಅದರ ಜ್ವಾಲೆ ಬೆಂಕಿಯುರಿಯಂತಿದೆ (ವಚನ 6).

   ಈ. ಇದನ್ನು ನಂದಿಸಲಾಗುವುದಿಲ್ಲ (ವಚನ 7).

   ಉ. ಇದನ್ನು ಮುಣುಗಿಸಲಾಗುವುದಿಲ್ಲ (ವಚನ 7).

   ಊ. ಇದು ಎಲ್ಲಾ ಸಂಪತ್ತಿಗಿಂತಲೂ ಬೆಲೆಯುಳ್ಳದ್ದಾಗಿದೆ (ವಚನ 7).

   ಋ. ಇದನ್ನು ಹಣಕ್ಕೆ ಕೊಡಲಾಗುವುದಿಲ್ಲ (ವಚನ 7).
3. 8:10 ರಲ್ಲಿ ಹೆಣ್ಣು ತನ್ನನ್ನು ಒಂದು ಕೋಟೆ ಎಂಬುದಾಗಿ ವರ್ಣಿಸಿಕೊಂಡಿದ್ದಾಳೆ. ಆಕೆಯ ಸ್ತನಗಳು ಅದರ ಬುರುಜಿನಂತಿವೆ. ಹಾಗಾಗಿ ಆಕೆಯು ಒಬ್ಬ ಬೆಳೆದು ನಿಂತ ಅಂದರೆ ಯೌವನಸ್ಥ ಹೆಣ್ಣಾಗಿದ್ದಾಳೆ ಮತ್ತು ಆಕೆಯ ಪ್ರಿಯತಮನಿಗೆ ಆಕರ್ಷಣೀಯವಾಗಿದ್ದಾಳೆ ಎಂಬುದನ್ನು ಇದರಿಂದ ತಿಳಿಯಬಹುದು.
4. 8:11 ರಲ್ಲಿ ಬಾಲ್ಹಾಮೋನಿನಲ್ಲಿ ಸೊಲೊಮೋನನಿಗೆ ದ್ರಾಕ್ಷೇತೋಟವಿತ್ತೆಂದು ನಾವು ಕಲಿತ್ತಿದ್ದೇವೆ (ಇಂದು ಈ ಸ್ಥಳ ಅನಾಮಧೇಯವಾಗಿದೆ). ಆತನ ದ್ರಾಕ್ಷೇತೋಟಗಳು ವಿಶಾಲವಾಗಿಯೂ ಲಾಭಕರವಾಗಿಯೂ ಇದ್ದಿರಬಹುದು.

ಪ್ರೇಮಿಗಳು ಮದುವೆಯಲ್ಲಿ ಒಂದಾಗುವುದು ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. 8:6 ರಲ್ಲಿನ **"ಮುದ್ರೆ"**ಯ ರೂಪಾಲಂಕಾರವನ್ನು ನಾವು ಈ ರೀತಿಯಾಗಿ ವಿವರಿಸಬಹುದು:

   ಅ. ಕುರಿಕಾಯುವವನು ಮತ್ತು ಆತನ ಹೆಂಡತಿಯು ಪರಸ್ಪರ ಮುದ್ರೆಯಷ್ಟು ನಿಕಟವಾಗಿದ್ದಾರೆ.

   ಆ. ಆತನು ಆಕೆಯನ್ನು ಪ್ರೀತಿಯ ಮುದ್ರೆಯನ್ನಾಗಿ ಇಟ್ಟುಕೊಂಡಿದ್ದಾನೆ. ಅವರ ಪ್ರೀತಿಯು ಸದಾಕಾಲವೂ ಬಲವಾಗಿ ಮುದ್ರಿಸಲ್ಪಟ್ಟಿದೆ. ಹಾಗಾಗಿ ಅವರ ಪ್ರೀತಿಯನ್ನು ನಾಶಗೊಳಿಸಲು ಯಾವುದರಿಂದಲೂ ಸಾಧ್ಯವಿಲ್ಲ.

   ಇ. ಮುದ್ರೆಯು ಯಾವಾಗಲೂ ಅದರ ಮಾಲೀಕನೊಂದಿಗೆ ಇರುತ್ತದೆ. ಅದು ಆತನ ಕುತ್ತಿಗೆಗೆ ಕಟ್ಟಲ್ಪಟ್ಟಿರುತ್ತದೆ ಅಥವಾ ಆತನ ಕೈಗೆ ಕಟ್ಟಲ್ಪಟ್ಟಿರುತ್ತದೆ. ಅದೇ ರೀತಿಯಾಗಿ ಆತನ ಹೆಂಡತಿಯೂ ಯಾವಾಗಲೂ ಆತನೊಂದಿಗಿರುತ್ತಾಳೆ.
2. 8:6–7 ರಲ್ಲಿ ವೈವಾಹಿಕ ಪ್ರೀತಿಯ ಬಗೆಗಿನ ನಾಲ್ಕು ಜ್ಞಾನದ ಹೇಳಿಕೆಗಳು:

   ಅ. ವೈವಾಹಿಕ ಪ್ರೀತಿಯು ಮರಣದಷ್ಟು ಬಲವಾಗಿರುತ್ತದೆ.

   ಆ. ವೈವಾಹಿಕ ಪ್ರೀತಿಯ ಆವೇಶವು ಮರಣಕ್ಕೂ ಮಣಿಯದಾಗಿದೆ.

   ಇ. ವೈವಾಹಿಕ ಪ್ರೀತಿಯು ಬೆಂಕಿಯ ಜ್ವಾಲೆಯಂತೆ ಉರಿಯುತ್ತದೆ.

   ಈ. ವೈವಾಹಿಕ ಪ್ರೀತಿಯ ಬೆಲೆಯು ಎಲ್ಲವನ್ನು ಮೀರಿದ್ದಾಗಿದೆ.
3. 8:8–9 ಅನ್ನು ನಾವು ಈ ರೀತಿ ಅರ್ಥೈಸಿಕೊಳ್ಳಬಹುದು:

   ಅ. ಇಲ್ಲಿ ಸ್ತ್ರೀಯ (ಹೆಣ್ಣಿನ) ಸ್ನೇಹಿತೆಯರು ಮಾತನಾಡುತ್ತಾರೆ. ಅವರು ಆಕೆಯನ್ನು ತಂಗಿಯೆಂದು ಕರೆಯುತ್ತಾರೆ.

   ಆ. ಅವಳು ಇನ್ನೂ ಸಣ್ಣವಳೆಂದು ಅವರು ವರ್ಣಿಸುತ್ತಾರೆ. ಆಕೆಯು ಇನ್ನೂ ಸ್ತನ ಬಾರದ ಹುಡುಗಿಯಾಗಿದ್ದಾಳೆ.

ಇ. ಅವಳನ್ನು ಕೇಳತಕ್ಕ ಸಮಯವು ಆಕೆಯ ವಿವಾಹದ ದಿನವಾಗಿದೆ.

ಈ. ವಚನ 9 ಎರಡು ರೂಪಾಲಂಕಾರಗಳನ್ನು ಒಳಗೊಂಡಿದೆ. ಅವೆರಡರ ಅರ್ಥವೂ ಒಂದೇ ಆಗಿದೆ:

- ಬುರುಜು – ನೈತಿಕತೆಯನ್ನು ಸೂಚಿಸುತ್ತದೆ.
- ಬಾಗಿಲು ಸಹ ನೈತಿಕತೆಯನ್ನು ಸೂಚಿಸುತ್ತದೆ.

4. 8:12 ರಲ್ಲಿ ಸ್ತ್ರೀಯು ತನ್ನನ್ನು ಸೊಲೊಮೋನನೊಂದಿಗೆ ಹೋಲಿಸಿಕೊಳ್ಳುತ್ತಾಳೆ:

ಅ. ಆತನು ಅಗರ್ಭ ಶ್ರೀಮಂತನಾಗಿದ್ದಾನೆ, ತನ್ನದೇ ಆದ ದ್ರಾಕ್ಷೇತೋಟವಿದೆ. ಆದರೆ ಆಕೆಗೆ ಕೇವಲ ಸಣ್ಣದಾದ ದ್ರಾಕ್ಷೇತೋಟವಿದೆ (ಇದು ಆಕೆಯ ದೇಹ ಮತ್ತು ಆಕೆಯ ಲೈಂಗಿಕತೆಯನ್ನು ಸೂಚಿಸುತ್ತದೆ)

ಆ. ಬೇರೆಯವರು ತನ್ನ ದ್ರಾಕ್ಷೇತೋಟವನ್ನು ನೋಡಿಕೊಳ್ಳುವವರ ವಿಷಯದಲ್ಲಿ ಆತನು ಸ್ವಚ್ಛಂದವಾಗಿದ್ದಾನೆ. ಆದರೆ ಯಾರು ತನ್ನ ದ್ರಾಕ್ಷೇತೋಟಕ್ಕೆ ಬರುತ್ತಾರೆ ಎನ್ನುವುದರ ವಿಷಯದಲ್ಲಿ ಆಕೆಯು ಬಹು ಜಾಗೃತೆಯಿಂದಿರುತ್ತಾಳೆ (ಆಕೆಯ ದೇಹವು ಕೇವಲ ಅವಳ ಗಂಡನಿಗಷ್ಟೇ ಮೀಸಲಾಗಿದೆ).

ಪ್ರಲಾಪಗಳು – ಉತ್ತರಗಳು

ಪ್ರಲಾಪಗಳು ಅಧ್ಯಾಯ 1 – ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಅಧ್ಯಾಯ 1 ರಲ್ಲಿ ಎರಡು ಜನರು ಮಾತನಾಡುತ್ತಾರೆ:

   ಅ. ಮೊದಲ ಭಾಗದಲ್ಲಿ (ವಚನ 1–11) ನಿರೂಪಕ (ಕವಿ) ಮಾತನಾಡುತ್ತಾನೆ.

   ಆ. ಎರಡನೇ ಭಾಗದಲ್ಲಿ (ವಚನ 11 ಕೊನೇಭಾಗ) ಯೆರೂಸಲೇಮು ಮಾತನಾಡುತ್ತದೆ (ಇದು ದುಃಖದಲ್ಲಿರುವ ಒಬ್ಬ ವಿಧವೆಯಾಗಿ ವ್ಯಕ್ತೀಕರಿಸಲ್ಪಟ್ಟಿದೆ). ಆದರೆ ವಚನ 17 ರಲ್ಲಿ ನಿರೂಪಕನ ಸ್ವರ ಕೇಳಬಹುದು.

2. ಯೆರೂಸಲೇಮಿನ ಹಿಂದಿನ ಮತ್ತು ಈಗಿನ ಸನ್ನಿವೇಶಗಳ ನಡುವಿನ ತದ್ವಿರುದ್ಧತೆಯನ್ನು ಕವಿಯು ಈ ರೀತಿ ವರ್ಣಿಸುತ್ತಾನೆ (ವಚನ 1):

   ಅ. ಆಕೆಯು ಜನಭರಿತವಾಗಿದ್ದಳು. ಆದರೆ ಈಗ ಒಂಟಿಯಾಗಿದ್ದಾಳೆ.

   ಆ. ಜನಾಂಗಗಳ ಮಧ್ಯದಲ್ಲಿ ಆಕೆಯು ಪ್ರಸಿದ್ಧಳಾಗಿದ್ದಳು, ಆದರೆ ಈಗ ಬಿಟ್ಟಿಯಾಗಿದ್ದಾಳೆ.

3. ಕವಿಯ ಪ್ರಕಾರ ಯೆರೂಸಲೇಮಿನ ಪ್ರಸ್ತುತ ಸನ್ನಿವೇಶದ ಹಿಂದೆ ದೇವರಿದ್ದಾನೆ (ವಚನ 5).

4. ಕವಿಯ ಪ್ರಕಾರ ಯೆರೂಸಲೇಮಿನ ಪ್ರಸ್ತುತ ಪರಿಸ್ಥಿತಿಗೆ ಕಾರಣ ಅದರ ಪಾಪವಾಗಿದೆ (ವಚನ 5).

5. ವಚನ 6 ರಲ್ಲಿ ತಿಳಿಸಲಾದ ಯೆರೂಸಲೇಮಿನ ಪಾಪದ ಪರಿಣಾಮಗಳು:

   ಅ. ಆಕೆಯು ತನ್ನ ವೈಭವವನ್ನು ಕಳೆದುಕೊಂಡಿದ್ದಾಳೆ.

   ಆ. ಆಕೆಯ ಪ್ರಧಾನರು ಆಕೆಯೊಂದಿಗೆ ಇಲ್ಲ, ಅವರು ಬಿಟ್ಟು ಓಡಿಹೋಗಿದ್ದಾರೆ.

6. ವಚನ 8 ರಲ್ಲಿ ತಿಳಿಸಲಾದ ಯೆರೂಸಲೇಮಿನ ಪಾಪದ ಪರಿಣಾಮಗಳು:

   ಅ. ಆಕೆಯು ಅಶುದ್ಧಳಾಗಿದ್ದಾಳೆ.

   ಆ. ಹಿಂದೆ ಆಕೆಯನ್ನು ಸನ್ಮಾನಿಸುತ್ತಿದ್ದವರು ಈಗ ಹೀನೈಸುತ್ತಾರೆ.

   ಇ. ತನ್ನ ಪ್ರಸ್ತುತ ಪರಿಸ್ಥಿತಿಗಾಗಿ ಆಕೆಯು ನರಳಾಡುತ್ತಾಳೆ.

7. ವಚನ 10–11 ರಲ್ಲಿ ತಿಳಿಸಲಾದ ಯೆರೂಸಲೇಮಿನ ಪಾಪದ ಪರಿಣಾಮಗಳು:

   ಅ. ಆಕೆಯು ತನ್ನ ನಿಧಿಗಳನ್ನೆಲ್ಲಾ ಕಳಕೊಂಡಿದ್ದಾಳೆ.

   ಆ. ಆಕೆಯ ದೇವಾಲಯವು ಅನ್ಯರಿಂದ ಅಪವಿತ್ರವಾಗಿದೆ.

   ಇ. ಪಟ್ಟಣದಲ್ಲಿ ಭೀಕರ ಬರಗಾಲವಿದೆ.

8. ವಚನ 13–14 ರಲ್ಲಿ ತಿಳಿಸಲಾದ ಯೆರೂಸಲೇಮಿನ ಪಾಪದ ಪರಿಣಾಮಗಳು:

   ಅ. ದೇವರ ನ್ಯಾಯತೀರ್ಪು (ಬೆಂಕಿ).

   ಆ. ದೇವರ ನ್ಯಾಯತೀರ್ಪಿನ ಪರಿಣಾಮ: ಆಕೆ ಬಳಲಿ ಹೋಗಿದ್ದಾಳೆ.

   ಇ. ಆಕೆಯು ಸ್ವತಃ ತನ್ನ ಪಾಪಗಳಿಗೇ ದಾಸಳಾಗಿದ್ದಾಳೆ.

   ಈ. ದೇವರು ಆಕೆಯನ್ನು ಅವಳ ವೈರಿಗಳ ಕೈಗೊಪ್ಪಿಸಿದ್ದಾನೆ.

9. ವಚನ 18 ರಲ್ಲಿ ಯೆರೂಸಲೇಮು – ದೇವರು ನೀತಿವಂತನೂ ನ್ಯಾಯಸ್ವರೂಪನೆಂಬುದಾಗಿ ಹೇಳುತ್ತಾಳೆ.

10. ಯೆರೂಸಲೇಮಿನ ನರಳಾಟಕ್ಕೆ ಅದರ ವೈರಿಗಳು ಎರಡು ರೀತಿಯಲ್ಲಿ ಪ್ರತಿಕ್ರಿಯಿಸುತ್ತಾರೆ (ವಚನ 21):

ಅ. ಅವರು ಆಕೆಯನ್ನು ಸಂತೈಸರು.

ಆ. ಯೆರೂಸಲೇಮು ದೇವರಿಂದ ಶಿಕ್ಷಿಸಲ್ಪಟ್ಟದ್ದಕ್ಕಾಗಿ ಅವರು ಉಲ್ಲಾಸಪಡುತ್ತಾರೆ.

ll. ತನ್ನ ವೈರಿಗಳಿಗಾಗಿ ಯೆರೂಸಲೇಮಿನ ಪ್ರಾರ್ಥನೆ (21–22): ದೇವರು ತನ್ನನ್ನು ಶಿಕ್ಷಿಸಿದಂತೆ ಅವರನ್ನು ಶಿಕ್ಷಿಸಬೇಕೆಂದು ಬೇಡಿಕೊಳ್ಳುತ್ತಾಳೆ.

ಪ್ರಲಾಪಗಳು ಅಧ್ಯಾಯ 1 ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ಈ ಅಧ್ಯಾಯದಲ್ಲಿ ಕಂಡುಬರುವ ವ್ಯಕ್ತೀಕರಣ ಉದಾ:

ಅ. ಯೆರೂಸಲೇಮು ಸಂಸ್ಥಾನಗಳಲ್ಲಿ ಶಿರೋಮಣಿ (ರಾಜಕುಮಾರಿ) ಯಾಗಿದ್ದಳು (ವಚನ 1).

ಆ. ಯೆರೂಸಲೇಮು ಬಿಟ್ಟಿಯಾಳಾದಳು (ವಚನ 1).

ಇ. ಯೆರೂಸಲೇಮು ಅಳುತ್ತಾಳೆ (ವಚನ 2), ವಾಸಮಾಡುತ್ತಾಳೆ (ವಚನ 3), ನರಳಾಡುತ್ತಾಳೆ (ವಚನ 8).

ಈ. ಚೀಯೋನಿನ ದಾರಿಗಳು ಬಣಬಣ ಎನ್ನುತ್ತಿವೆ (ವಚನ 4).

ಉ. ನಗರಿ ಶೋಕಿಸುತ್ತದೆ (ವಚನ 4).

ಊ. ಚೀಯೋನು ಕೈಚಾಚಿ ಅಂಗಲಾಚುತ್ತಾಳೆ (ವಚನ 17).

2. ಈ ಅಧ್ಯಾಯದಲ್ಲಿ ಕವಿಯು ಬಳಸುವ ಚಿತ್ರಣ (ಉಪಮೆ ಮತ್ತು ರೂಪಾಲಂಕಾರಗಳು):

ಅ. ಉಪಮೆಗಳು:

- ಯೆರೂಸಲೇಮು ವಿಧವೆಯಂತಿದ್ದಾಳೆ (ವಚನ 1). ಯಾಕೆಂದರೆ ಆಕೆಯು ತನ್ನ ಮಕ್ಕಳನ್ನು ಕಳೆದುಕೊಂಡಿದ್ದಾಳೆ.
- ಯೆರೂಸಲೇಮಿನ ಪ್ರಧಾನರು ಮೇವಿಲ್ಲದ ಜಿಂಕೆಗಳಂತಿದ್ದಾರೆ (ವಚನ 6).

ಆ. ರೂಪಾಲಂಕಾರಗಳು:

- ಯೆರೂಸಲೇಮಿನ ಪ್ರಿಯ (ನಲ್ಲ) ರೆಲ್ಲ ಆಕೆಯ ಹಿಂದಿನ ಮಿತ್ರರೇ ಆಗಿದ್ದಾರೆ (ವಚನ 2)
- ಯೆರೂಸಲೇಮು ಅನ್ಯರ ದೇಶದಲ್ಲಿ ವಾಸವಾಗಿದ್ದಾಳೆ.
- ಯೆರೂಸಲೇಮಿನ ಅಶುದ್ಧತೆ, ನೆರಿಗೆ, ಹೊಲಸು ಇವೆಲ್ಲವೂ ಆಕೆಯ ಪಾಪಗಳಾಗಿವೆ (ವಚನ 8–9).
- ದೇವರ ಅತಿರೋಷದ ದಿನವು ನ್ಯಾಯತೀರ್ಪಿನ ದಿನವಾಗಿದೆ (ವಚನ 12).
- ಸಹಾಯ ಮತ್ತು ಸಂತೈಸುವಿಕೆಗಾಗಿ ಚೀಯೋನು ಕೈಚಾಚಿ ಅಂಗಲಾಚುತ್ತಾಳೆ (ವಚನ 17).
- ಯೆರೂಸಲೇಮು ಹೊಲೆಯಾಗಿ ಬಿದ್ದಿದೆ (ವಚನ 17) – ಇದರರ್ಥ ತನ್ನ ನೆರೆಯ ಜನಾಂಗಗಳಿಂದ ತಿರಸ್ಕರಿಸಲ್ಪಟ್ಟಿದೆ.

3. ವಚನ 20 ರಲ್ಲಿ ಯೆರೂಸಲೇಮಿನ ಸನ್ನಿವೇಶವು ಈ ರೀತಿ ವರ್ಣಿಸಲ್ಪಟ್ಟಿದೆ:

ಅ. ತನ್ನ ದ್ರೋಹದ ನಿಮಿತ್ತ ಮಾನಸಿಕವಾಗಿ ಆಕೆ ಸಂಕಟಪಡುತ್ತಾಳೆ.

ಆ. ಆಕೆ ದೈಹಿಕವಾಗಿ ಸಹ ಸಮಸ್ಯೆಗಳನ್ನು ಎದುರಿಸುತ್ತಿದ್ದಾಳೆ.

4. ಯೆರೂಸಲೇಮಿನ ಭಾವನೆಗಳನ್ನು ಈ ರೀತಿ ಹೇಳಬಹುದು:

ಅ. ಮಿತ್ರರು ಮತ್ತು ಸ್ನೇಹಿತರ ದ್ರೋಹದಿಂದ ಆಕೆ ಒಂಟಿತನವನ್ನು ಎದುರಿಸುತ್ತಿದ್ದಾಳೆ.

ಆ. ಅಲ್ಲದೆ ಆಕೆ ಸೇಡಿನ ಮನೋಭಾವನೆಯುಳ್ಳವಳಾಗಿದ್ದು ತನ್ನನ್ನು ತಿರಸ್ಕರಿಸಿದವರನ್ನು ಶಿಕ್ಷಿಸಬೇಕೆಂದು ದೇವರನ್ನು ಬೇಡುತ್ತಾಳೆ.

ಇ. ಕಡೆಯದಾಗಿ ತನ್ನ ಪಾಪ ಮತ್ತು ದ್ರೋಹದ ನಿಮಿತ್ತವೇ ದೇವರು ತನ್ನನ್ನು ಶಿಕ್ಷಿಸಿದ್ದಾನೆಂಬುದನ್ನು ತಿಳಿದುಕೊಳ್ಳುತ್ತಾಳೆ.

ಪ್ರಲಾಪಗಳು ಅಧ್ಯಾಯ 2 – ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಅಧ್ಯಾಯ 2ರಲ್ಲಿ ಮೂರು ಭಾಗಗಳಲ್ಲಿ ಮಾತನಾಡುವವರು ಇವರಾಗಿದ್ದಾರೆ:

   ಅ. ಅಧ್ಯಾಯದ ಮೊದಲ ಭಾಗದಲ್ಲಿ ಯೆರೂಸಲೇಮಿನಲ್ಲಿನ ಸ್ಥಿತಿಗತಿಗಳ ಬಗ್ಗೆ ನಿರೂಪಕ (ಸ್ವತಃ ಕವಿ) ಮಾತನಾಡುತ್ತಾನೆ, ವಚನ 1–10

   ಆ. ಕವಿಯು ಪ್ರಥಮ ಪುರುಷನಾಗಿ ಮಾತನಾಡುತ್ತಾ ಯೆರೂಸಲೇಮನ್ನು ಮತ್ತು ಅದರ ನಿವಾಸಿಗಳನ್ನು ಸಂಭೋಧಿಸುತ್ತಾನೆ, ವಚನ 11–19

   ಇ. ಅಧ್ಯಾಯದ ಮೂರನೇ ಭಾಗದಲ್ಲಿ ಕವಿಯು ದೇವರಿಗೆ ಪ್ರಾರ್ಥಿಸುತ್ತಾನೆ, ವಚನ 19–22

2. ಅ. ಆತನು ಅದರ ಹಿಂದಿನ ಮಹಿಮೆಯನ್ನು ತೆಗೆದುಹಾಕಿದ್ದಾನೆ.

   ಆ. ಆತನು ದೇವಾಲಯ ಮತ್ತು ಮಂಜೂಷಕ್ಕೂ ಸಹ ಕರುಣೆ ತೋರಲಿಲ್ಲ.

   ಇ. ದೇಶ ಮತ್ತು ಅದರ ಪಟ್ಟಣಗಳನ್ನು ಆತನು ಸಂಪೂರ್ಣವಾಗಿ ಹಾಳುಮಾಡಿದ್ದಾನೆ.

   ಈ. ರಾಜರನ್ನು ಮತ್ತು ಅದರ ಸರದಾರರನ್ನು ನೀಚಸ್ಥಿತಿಗೆ ತಂದಿದ್ದಾನೆ.

   ಉ. ಇಸ್ರಾಯೇಲ್ಯರ ಮೇಲಿದ್ದ ತನ್ನ ಹಸ್ತವನ್ನು ಹಿಂತೆಗೆದಿದ್ದಾನೆ.

   ಹೀಗೆ ಅನೇಕ ರೀತಿಯಲ್ಲಿ ದೇವರ ಕೋಪವು ಇಸ್ರಾಯೇಲ್ಯರಿಗೆ ವಿರುದ್ಧವಾಗಿ ಉರಿದಿದೆ.

3. ವಚನ 4–5 ರಲ್ಲಿ ದೇವರನ್ನು ಇಸ್ರಾಯೇಲಿನ ವೈರಿಯನ್ನಾಗಿ ವರ್ಣಿಸಲಾಗಿದೆ:

   ಅ. ಆತನು ಅವರಿಗೆ ವಿರೋಧವಾಗಿ ಬಿಲ್ಲನ್ನು ಹಿಡಿದಿದ್ದಾನೆ.

   ಆ. ಆತನ ಬಲಿಷ್ಠವಾದ ಬಲಗೈ ಅವರಿಗೆ ವಿರುದ್ಧವಾಗಿ ಹೋರಾಡಲು ಸಿದ್ಧವಾಗಿದೆ.

   ಇ. ಪ್ರಜೆಯನ್ನೆಲ್ಲಾ ಆತನು ಸಂಹರಿಸಿದ್ದಾನೆ.

4. ವಚನ 6–9 ರ ಪ್ರಕಾರ ದೇವರು ಯೆರೂಸಲೇಮು ಮತ್ತು ಅದರ ಜನಗಳಿಗೆ ಈ ರೀತಿ ಮಾಡಿದ್ದಾನೆ:

   ಅ. ಯೆರೂಸಲೇಮಿನ ದೇವಾಲಯವನ್ನು ಆತನು ನಾಶಪಡಿಸಿದ್ದಾನೆ.

   ಆ. ಮಹೋತ್ಸವ ಮತ್ತು ಸಬ್ಬತ್ ದಿನಗಳಿಗೆ ಅಂತ್ಯ ಹಾಕಿದ್ದಾನೆ.

   ಇ. ರಾಜರನ್ನು ಯಾಜಕರನ್ನು ಧಿಕ್ಕರಿಸಿದ್ದಾನೆ.

   ಈ. ಯಜ್ಞವೇದಿಯನ್ನು ತಿರಸ್ಕರಿಸಿದ್ದಾನೆ.

   ಉ. ಶತ್ರುಗಳು ಯೆರೂಸಲೇಮಿನ ದೇವಾಲಯವನ್ನು ನುಗ್ಗಿ ಹಾಳುಮಾಡಲು ಅನುಮತಿಸಿದ್ದಾನೆ.

   ಊ. ಚೀಯೋನ್ ನಗರಿಯ ಭದ್ರವಾದ ಕೋಟೆಗಳನ್ನು ನಾಶಮಾಡಿದ್ದಾನೆ.

   ಋ. ಅರಸರು ಮತ್ತು ಸರದಾರರನ್ನು ಸೆರೆಯಾಗಿ ಕಳುಹಿಸಿದ್ದಾನೆ.

   ಎ. ಧರ್ಮೋಪದೇಶಕ್ಕೂ ಅಂತ್ಯ ಹಾಡಿದ್ದಾನೆ.

   ಏ. ಪ್ರವಾದಿಗಳಿಗೆ ತನ್ನ ಚಿತ್ತವನ್ನು ಪ್ರಕಟಿಸುತ್ತಿಲ್ಲ.

5. ವಚನ 10 ರಿಂದ ಯೆರೂಸಲೇಮು ಗೋಳಾಟದಲ್ಲಿದೆ ಎಂಬುದನ್ನು ನಾವು ತಿಳಿದುಕೊಳ್ಳಬಹುದು:

   ಅ. ಅದರ ಹಿರಿಯರು (ನಾಯಕರುಗಳು) ಕೇವಲ ಮೌನವಾಗಿ ಕುಳಿತಿರುವುದಷ್ಟೇ ಅಲ್ಲದೆ ತಮ್ಮ ತಲೆಯ ಮೇಲೆ ದೂಳನ್ನು ಸುರಿದುಕೊಂಡು, ಗೋಣಿತಟ್ಟನ್ನು ಸುತ್ತಿಕೊಂಡಿದ್ದಾರೆ.

   ಆ. ಯುವತಿಯರು ತಲೆಗಳನ್ನು ಬೊಗ್ಗಿಸಿದ್ದಾರೆ.

6. ವಚನ 14 ರಿಂದ ನಾವು ಪ್ರವಾದಿಗಳು ತಮ್ಮ ಸುಳ್ಳುಪ್ರವಾದನೆಗಳಿಂದ ಮತ್ತು ಜನರನ್ನು ದಿಕ್ಕುತಪ್ಪಿಸುವುದರ ಮೂಲಕ ಪಾಪವನ್ನು ಹೆಚ್ಚಿಸಿದ್ದಾರೆ ಎಂಬುದನ್ನು ನಾವು ಕಲಿಯಬಹುದು.
7. ವಚನ 17 ರಲ್ಲಿ ದೇವರನ್ನು ಈ ರೀತಿಯಾಗಿ ವರ್ಣಿಸಲಾಗಿದೆ:
   ಅ. ದೇವರು ತನ್ನ ಸಂಕಲ್ಪವನ್ನು ಸಿದ್ಧಿಗೆ ತರುವವನಾಗಿದ್ದು, ಪ್ರವಾದಿಗಳ ಮೂಲಕ ನುಡಿದ ಮಾತನ್ನು ನೆರವೇರಿಸುವವನಾಗಿದ್ದಾನೆ.
   ಆ. ಕ್ರಿ.ಪೂ. 587 ರಲ್ಲಿ ಕರುಣೆಯಿಲ್ಲದ ಬಾಬೆಲಿನಿನ ಸೆರೆಯ ಮೂಲಕ ಆತನ ಮಾತು ನೆರವೇರಿದೆ.
8. ವಚನ 20–21 ರಲ್ಲಿ ದೇವರಿಗೆ ಯೆರೂಸಲೇಮಿನ ಪರಿಸ್ಥಿತಿಯನ್ನು ಕವಿಯು ಈ ರೀತಿಯಾಗಿ ವರ್ಣಿಸುತ್ತಾನೆ:
   ಅ. ಹೆಂಗಸರು ಹಸಿದು ತಮ್ಮ ಮಕ್ಕಳನ್ನೇ ತಿನ್ನುತ್ತಾರೆ.
   ಆ. ಯಾಜಕರು ಮತ್ತು ಪ್ರವಾದಿಗಳು ಪವಿತ್ರಾಲಯದಲ್ಲಿ ಹತರಾಗಿದ್ದಾರೆ.
   ಇ. ಯುವಕರು, ವೃದ್ಧರು ಬೀದಿಗಳಲ್ಲಿ ಬಿದ್ದಿದ್ದಾರೆ. ತರುಣ ತರುಣಿಯರು ಹತರಾಗಿದ್ದಾರೆ.

ಪ್ರಲಾಪಗಳು ಅಧ್ಯಾಯ 2 ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ಅಧ್ಯಾಯದ ಮೊದಲನೆಯ ಭಾಗವನ್ನು ಈ ರೀತಿ ರಚಿಸಬಹುದು:
   ಅ. ಯೆರೂಸಲೇಮು ಮತ್ತು ಅದರ ನಿವಾಸಿಗಳ ಮೇಲೆ ದೇವರ ಕರುಣೆಯಿಲ್ಲದ ಆಕ್ರಮಣ, ವಚನ 1–3
   ಆ. ವೈರಿಯಂತೆ ಯೆರೂಸಲೇಮನ್ನು ನೋಡುವುದು, ವಚನ 4–5
   ಇ. ಯೆರೂಸಲೇಮಿನ ದೇವಾಲಯವನ್ನು ನಾಶಪಡಿಸುವುದು, ವಚನ 6–7
   ಈ. ಯೆರೂಸಲೇಮಿನ ಭದ್ರಕೋಟೆಗಳನ್ನು ನಾಶಪಡಿಸುವುದು, ವಚನ 8–9
   ಉ. ಯೆರೂಸಲೇಮಿನ ಹಿರಿಯರನ್ನು ನಾಶಗೊಳಿಸುವುದು, ವಚನ 9–10
2. ಅಧ್ಯಾಯದ ಎರಡನೇ ಭಾಗವನ್ನು (ವಚನ 11–19) ಈ ರೀತಿಯಾಗಿ ರಚನೆ ಮಾಡಬಹುದು:
   ಅ. ಯೆರೂಸಲೇಮಿನ ಮಕ್ಕಳ ಗತಿ, ವಚನ 11–12
   ಆ. ಸುಳ್ಳುಪ್ರವಾದಿಗಳಲ್ಲಿನ ಯೆರೂಸಲೇಮಿನ ವ್ಯರ್ಥ ಭರವಸೆ, ವಚನ 13–14
   ಇ. ಯೆರೂಸಲೇಮನ್ನು ಮೂದಲಿಸುವುದು, ವಚನ 15–16
   ಈ. ಯೆರೂಸಲೇಮಿಗೆ ಕವಿಯ ಸಲಹೆ: ಸಹಾಯಕ್ಕಾಗಿ ಯೆಹೋವನನ್ನು ಕೂಗಿಕೊ, ವಚನ 17–19
3. ಅಧ್ಯಾಯ 2 ರಲ್ಲಿ ಕಂಡುಬರುವ ಉಪಮೆ, ರೂಪಾಲಂಕಾರ ಮತ್ತು ವ್ಯಕ್ತೀಕರಣಗಳು ಇಂತಿವೆ:
   ಅ. ಉಪಮೆಗಳು:
      - ಯೆರೂಸಲೇಮಿನ ಮೇಲಿನ ದೇವರ ನ್ಯಾಯತೀರ್ಪನ್ನು ಅಗ್ನಿಜ್ವಾಲೆಗೆ ಹೋಲಿಸಲಾಗಿದೆ (ವಚನ 3, 4).
      - ದೇವರನ್ನು ಇಸ್ರಾಯೇಲಿನ ವೈರಿಗೆ ಹೋಲಿಸಲಾಗಿದೆ (ವಚನ 5).
      - ಹಸಿದ ಮಕ್ಕಳ ಪರಿಸ್ಥಿತಿಯನ್ನು ಗಾಯಗೊಂಡು ಬಳಲುವ ಸೈನಿಕರಿಗೆ ಹೋಲಿಸಲಾಗಿದೆ (ವಚನ 12).
      - ಯೆರೂಸಲೇಮಿನ ಜನರ ಕಣ್ಣೀರನ್ನು ಹರಿಯುವ ತೊರೆಗೆ ಹೋಲಿಸಲಾಗಿದೆ (ವಚನ 18).
   ಆ. ರೂಪಾಲಂಕಾರಗಳು:
      - ದೇವರು ಯೆರೂಸಲೇಮ್ ಮಹಿಮೆಯನ್ನು ತೆಗೆದುಹಾಕಿದ್ದನ್ನು ಒಂದು ಬೀಳುತ್ತಿರುವ ನಕ್ಷತ್ರವೆಂಬುದಾಗಿ ಚಿತ್ರಿಸಲಾಗಿದೆ (ವಚನ 1).
      - ಇಸ್ರಾಯೇಲಿನ ನಾಶನವನ್ನು ದೇಶವನ್ನು ನುಂಗಿಬಿಡುವುದೆಂಬುದಾಗಿ ಚಿತ್ರಿಸಲಾಗಿದೆ (ವಚನ 5).

ಇ. ವ್ಯಕ್ತೀಕರಣಗಳು:

- ಪಟ್ಟಣವು ಒಬ್ಬ ಹೆಣ್ಣು ಎಂಬಂತೆ ಚಿತ್ರಿಸಲಾಗಿದೆ: ಚೀಯೋನ್ ಪುರಿ (ವಚನ 1, 4, 8, 10, 13, 18). ಯೆರೂಸಲೇಮ್ ಯುವತಿಯೇ (ವಚನ 13, 15).
- ಪೌಳಿಗೋಡೆಯೂ, ಕೋಟೆಯೂ ಮೊರೆಯುವುದು ಮನುಷ್ಯನ ಭಾವನೆಯನ್ನು ವ್ಯಕ್ತಪಡಿಸುವಂತಿವೆ (ವಚನ 8).

4. ಅ. ವಚನ 2: ಇದು ಒಂದು ಸಮಾನಾಂತರ ಸಮಾನಾಂತರತೆಯನ್ನು ಒಳಗೊಂಡಿದೆ.

ಆ. ವಚನ 4: ವಿರೋಧಿಯಂತೆ

ಇ. ವಚನ 5: ಅರಿಚಾಟ, ಕಿರಿಚಾಟ

ಈ. ವಚನ 6 (ಮೊದಲ ಭಾಗ): ಒಂದು ಸಮಾನಾಂತರ ಸಮಾನಾಂತರತೆಯನ್ನು ಒಳಗೊಂಡಿದೆ.

ಉ. ಸಂಬೋಧನೆ: ಚೀಯೋನ್ ಕನ್ಯೆಯೇ (ವಚನ 13), ಚೀಯೋನ್ ನಗರಿಯ ಕೋಟೆಯವರೇ (ವಚನ 18).

ಊ. ವಚನ 20 ರಲ್ಲಿ ಒಂದು ಅಲಂಕಾರಿಕ ಪ್ರಶ್ನೆಯನ್ನು ಕಾಣಬಹುದು.

ಪ್ರಲಾಪಗಳು ಅಧ್ಯಾಯ 3 – ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ವಚನ 1–18 ರಲ್ಲಿ ಕವಿಯು ತನ್ನ ಪರಿಸ್ಥಿತಿಯನ್ನು ಈ ರೀತಿ ವರ್ಣಿಸುತ್ತಾನೆ:

   ಅ. ದೇವರು ತನಗೆ ವಿರೋಧವಾಗಿದ್ದಾನೆ ಮತ್ತು ತನ್ನ ಪ್ರಸ್ತುತ ಸಮಸ್ಯೆಗಳಿಗೆ ದೇವರೇ ಕಾರಣವಾಗಿದ್ದಾನೆಂದು ಆತನು ಭಾವಿಸುತ್ತಾನೆ.

   ಆ. ದೇವರು ಆತನ ವೈರಿಯಾಗಿ ಪರಿಣಮಿಸಿದ್ದಾನೆ.

   ಇ. ಆತನ ಪರಿಸ್ಥಿತಿಯ ನಿಮಿತ್ತ ಸ್ವಂತ ಜನರೇ ಆತನನ್ನು ನೋಡಿ ಹಾಸ್ಯ ಮಾಡುತ್ತಾರೆ.

   ಈ. ಆತನು ಈ ಹಿಂದೆ ಇದ್ದಂತ ಎಲ್ಲವನ್ನೂ ಸಹ ಕಳಕೊಂಡಿದ್ದಾನೆ, ಅದರೊಂದಿಗೆ ಆತನಿಗಿದ್ದ ನಿರೀಕ್ಷೆ ಸಹ ಸಂಪೂರ್ಣವಾಗಿ ಹಾಳಾಗಿದೆ.

2. ದೇವರ ಪ್ರೀತಿ ಮತ್ತು ಕರುಣೆ ಬಗ್ಗೆ ಕವಿಯು ಈ ಪ್ರಮುಖ ಹೇಳಿಕೆಯನ್ನು ಕೊಡುತ್ತಾನೆ (22–23): **"ಅವು ನಿಂತುಹೋಗವು".**

3. ವಚನ 24 ರಲ್ಲಿ ದೇವರೊಂದಿಗಿನ ತನ್ನ ಸಂಬಂಧವನ್ನು ಒಂದು ರೂಪಾಲಂಕಾರದೊಂದಿಗೆ ವರ್ಣಿಸುತ್ತಾನೆ: ದೇವರು ಆತನ ಪಾಲಾಗಿದ್ದಾನೆ. ಇದರರ್ಥ ಆತನ ನಿರೀಕ್ಷೆಯು ಕೇವಲ ದೇವರಲ್ಲಿಯೇ ಇರುವುದಾಗಿದೆ. ಹಾಗಾಗಿ ಆತನು ದೇವರ ಮಧ್ಯಪ್ರವೇಶಕ್ಕಾಗಿ ನಿರೀಕ್ಷಿಸಿ ಕಾಯುತ್ತಾನೆ.

4. ವಚನ 25 ರಲ್ಲಿ ದೇವರು ಮಹೋಪಕಾರಿಯಾಗಿದ್ದಾನೆ ಎಂದು ಕವಿಯು ಹೇಳುತ್ತಾನೆ. ಹಾಗಾಗಿ ಆತನಿಗಾಗಿ ಮತ್ತು ಆತನ ರಕ್ಷಣೆಗಾಗಿ ನಿರೀಕ್ಷಿಸುವವರೆಲ್ಲರೂ ಆತನ ಒಳ್ಳೇತನವನ್ನು ಅನುಭವಿಸುವರು.

5. ಕವಿಯು ದೇವರ ರಕ್ಷಣಾಕಾರ್ಯಕ್ಕಾಗಿ ಕಾಯುತ್ತಾನೆ (ವಚನ 26). ದೇವರ ಮಧ್ಯಪ್ರವೇಶಕ್ಕಾಗಿ ಶಾಂತನಾಗಿ ಕಾಯುವುದು ಉತ್ತಮವಾಗಿದೆ ಯಾಕೆಂದರೆ ದೇವರ ಒಳ್ಳೇತನವು ಆತನ ಗುಣಸ್ವಭಾವದ ಕೇಂದ್ರವಾಗಿದೆ.

6. ವಚನ 31–33 ರಲ್ಲಿ ದೇವರ ಬಗ್ಗೆ ಕವಿಯು ಈ ಸಂಗತಿಗಳನ್ನು ಹೇಳುತ್ತಾನೆ:

   ಅ. ದೇವರು ಯಾರನ್ನೂ ವ್ಯರ್ಥಪಡಿಸಲು ಬಯಸುವುದಿಲ್ಲ.

   ಆ. ಆದರೆ ಕೆಲವೊಮ್ಮೆ ಹಾಗೆ ಮಾಡುತ್ತಾನೆ (ಇದಕ್ಕೆ ಕಾರಣ ಆತನ ನೀತಿವಂತಿಕೆ. ದೇವರು ಪಾಪಿಗಳನ್ನು ಶಿಕ್ಷಿಸುವ ನ್ಯಾಯಾಧಿಪತಿಯಾಗಿದ್ದಾನೆ. ಆತನ ನ್ಯಾಯತೀರ್ಪು ಪಾಪಿಗಳಿಗೆ ನೋವನ್ನು ವ್ಯಥೆಯನ್ನು ತರುತ್ತದೆ).

   ಇ. ಆದರೂ ದೇವರು ಕನಿಕರವುಳ್ಳವನಾಗಿದ್ದಾನೆ.

   ಈ. ಹಾಗಾಗಿ ಬಾಧೆಗೊಂಡ ಒಬ್ಬ ವ್ಯಕ್ತಿಯು ತನ್ನ ಪಾಪಗಳಿಗಾಗಿ ಪಾಶ್ಚಾತ್ತಾಪಪಟ್ಟು ಬಿಡುಗಡೆ ಮತ್ತು ಸಹಾಯಕ್ಕಾಗಿ ದೇವರೆಡೆಗೆ ತಿರುಗಿಕೊಂಡಾಗ ಖಂಡಿತವಾಗಿ ದೇವರು ಅವನನ್ನು ಕನಿಕರಿಸಿ ಬಿಡುಗಡೆಗೊಳಿಸುವನು.

7. ವಚನ 38 ರಲ್ಲಿ ಕವಿಯು ದೇವರ ಬಗ್ಗೆ ಈ ರೀತಿ ಹೇಳುತ್ತಾನೆ: ದೇವರು ನ್ಯಾಯಾಧಿಪತಿಯೂ ವಿಮೋಚಕನೂ ಆಗಿದ್ದಾನೆ. ಹಾಗಾಗಿ ಆತನ ಬಾಯಿಂದ ನ್ಯಾಯತೀರ್ಪು ಮತ್ತು ರಕ್ಷಣೆಗಳೆರಡೂ ಬರುತ್ತವೆ.

8. ವಚನ 39 ರ ಪ್ರಕಾರ ನಮ್ಮ ಮನೋಭಾವನೆ ಹೀಗಿರಬೇಕು: ನಮ್ಮ ಪಾಪಗಳೇ ನಮಗೆ ಬಾಧೆಯನ್ನು ತಂದಿರುವಾಗ ದೇವರ ಬಗ್ಗೆ ಗುಣುಗುಟ್ಟುವುದು ಸರಿಯಲ್ಲ.

9. ವಚನ 40–42 ರಲ್ಲಿ ಜನರಿಗೆ ಕವಿಯ ಬೋಧನೆ/ಆಜ್ಞೆ:

   ಅ. ಅವರು ತಮ್ಮ ಜೀವಿತವನ್ನು ಪರೀಕ್ಷಿಸಿಕೊಳ್ಳಬೇಕು. ಆಗ ಅವರು ತಾವು ಪಾಪ ಮಾಡಿದ್ದೇವೆ ಎಂಬುದನ್ನು ತಿಳಿದುಕೊಳ್ಳುವರು.

   ಆ. ಅವರು ದೇವರ ಕಡೆಗೆ ತಿರುಗಿಕೊಂಡು, ಆತನ ಕ್ಷಮಾಪಣೆಯನ್ನು ಕೇಳಿಕೊಳ್ಳಬೇಕು.

   ಇ. ಈ ರೀತಿ ಮಾಡುವವರೆಗೂ ದೇವರು ಅವರನ್ನು ಕ್ಷಮಿಸುವುದಿಲ್ಲ.

10. ವಚನ 55–56 ರಲ್ಲಿ ಕವಿಯು ದೇವರಲ್ಲಿ ಇದನ್ನು ಕೇಳಿಕೊಳ್ಳುತ್ತಾನೆ:

ಅ. ದೇವರು ತನ್ನ ಧ್ವನಿಯನ್ನು ಕೇಳಿ, ತನ್ನ ಪ್ರಾರ್ಥನೆಗೆ ಸದುತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತಾನೆ.

ಆ. ತನಗೆ ಕಷ್ಟಕೊಟ್ಟ ತನ್ನ ವೈರಿಗಳನ್ನು ಶಿಕ್ಷಿಸಬೇಕೆಂದು ದೇವರನ್ನು ಕೇಳಿಕೊಳ್ಳುತ್ತಾನೆ. ದೇವರು ಅವರನ್ನು ನಾಶಮಾಡಬೇಕೆಂದು ಆತನು ಅಪೇಕ್ಷಿಸುತ್ತಾನೆ.

ಪ್ರಲಾಪಗಳು ಅಧ್ಯಾಯ 3 ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ಈ ಪ್ರಲಾಪದಲ್ಲಿ ಸರ್ವನಾಮಗಳ ಬಳಕೆ:

   ಅ. ಈ ಪ್ರಲಾಪದ ಮೊದಲ ಭಾಗ (ವಚನ 1–24) ಮತ್ತು ಕಡೇ ಭಾಗ (ವಚನ 48–66) ದಲ್ಲಿ ಕವಿಯು ತನಗಾಗಿಯೇ ಮಾತನಾಡುವಂತೆ ಕಾಣುತ್ತದೆ. ಇಲ್ಲಿ ಆತನು ಪ್ರಥಮ ಪುರುಷ ಏಕವಚನದ ಸರ್ವನಾಮಗಳನ್ನು ಬಳಸುವುದರಿಂದ (ನಾನೇ, ನನ್ನನ್ನು, ನನ್ನ) ತಿಳಿದುಕೊಳ್ಳಬಹುದು.

   ಆ. ಇನ್ನೊಂದು ಭಾಗದಲ್ಲಿ (ವಚನ 40–41) ಕವಿಯು ಜನರೊಂದಿಗೆ ಮಾತನಾಡುತ್ತಾನೆ. ಇಲ್ಲಿ ಆತನು ಜನರು ದೇವರಿಗೆ ವಿರುದ್ಧವಾಗಿ ಮಾಡಿದ ಪಾಪಗಳಿಗಾಗಿ ಪಾಶ್ಚಾತ್ತಾಪಪಟ್ಟು ದೇವರೆಡೆಗೆ ತಿರುಗಿಕೊಳ್ಳಬೇಕೆಂದು ಆಜ್ಞಾಪಿಸುತ್ತಾನೆ (ನಾವು, ನಮ್ಮ). ಪ್ರಥಮ ಪುರುಷ ಬಹುವಚನದ ಸರ್ವನಾಮಗಳ ಬಳಕೆಯಿಂದ ನಾವು ಇದನ್ನು ತಿಳಿದುಕೊಳ್ಳಬಹುದು.

   ಇ. ಇನ್ನೊಂದು ಭಾಗದಲ್ಲಿ (ವಚನ 42–46) ಹೇಗೆ ಪ್ರಾರ್ಥಿಸಬೇಕು ಎಂಬುದನ್ನು ಜನರಿಗೆ ತೋರಿಸುತ್ತಾನೆ. ಪುನಃ ಇಲ್ಲಿ ಆತನು ಪ್ರಥಮ ಪುರುಷ ಏಕವಚನದ ಸರ್ವನಾಮಗಳನ್ನು ಉಪಯೋಗಿಸುತ್ತಾನೆ.

   ಈ. ದೇವರ ಬಗ್ಗೆ ಹೇಳುವುದರಿಂದ ಕವಿಯು ತನ್ನ ಪ್ರಲಾಪವನ್ನು ಆರಂಭಿಸುತ್ತಾನೆ (ವಚನ 1–41). ತೃತೀಯ ಪುರುಷ ಏಕವಚನದ ಸರ್ವನಾಮದ ಬಳಕೆಯಿಂದ ಇದನ್ನು ನಾವು ಕಲಿಯಬಹುದು (ಆತನು, ಆತನ, ತನ್ನ).

2. ವಚನ 1–8 ರಲ್ಲಿ ತನ್ನ ಪರಿಸ್ಥಿತಿಯನ್ನು ವರ್ಣಿಸಲು ಕವಿಯು ಬಹಳಷ್ಟು ಚಿತ್ರಣಗಳನ್ನು ಉಪಯೋಗಿಸುತ್ತಾನೆ. ಇದಕ್ಕೆ ಕೆಲವು ಉದಾಹರಣೆಗಳು ಇಂತಿವೆ:

   ಅ. ರೂಪಾಲಂಕಾರಗಳು:

   - ಯೆಹೋವನ ರೌದ್ರದಂಡ (ವಚನ 1)
   - "ನನ್ನ ಚರ್ಮಮಾಂಸಗಳನ್ನು ಕುಂದಿಸಿ, ನನ್ನ ಎಲುಬುಗಳನ್ನು ಮುರಿದಿದ್ದಾನೆ" (ವಚನ 4): ಕವಿಯು ಈ ರೀತಿ ಭಾವಿಸುತ್ತಾನೆ.
   - ನಾನು ಆಚೆಹೋಗದಂತೆ ನನ್ನ ಸುತ್ತಲೂ ಗೋಡೆ ಕಟ್ಟಿ ನನಗೆ ಭಾರೀ ಬೇಡಿಹಾಕಿಸಿದ್ದಾನೆ (ವಚನ 7).
   - ತನ್ನ ಬಿಲ್ಲನ್ನು ಬೊಗ್ಗಿಸಿ ಬಾಣಕ್ಕೆ ನನ್ನನ್ನು ಗುರಿಮಾಡಿಕೊಂಡಿದ್ದಾನೆ (ವಚನ 12) (ಭಾವನಾತ್ಮಕವಾಗಿ).
   - "ನನ್ನ ಹಲ್ಲುಗಳನ್ನು ನುರುಜುಗಲ್ಲಿನಿಂದ ಮುರಿದುಬಿಟ್ಟು" (ವಚನ 16): ದೇವರ ಶಿಕ್ಷೆಯನ್ನು ಕವಿಯು ಈ ರೀತಿ ಭಾವಿಸುತ್ತಾನೆ.

   ಆ. ಉಪಮೆಗಳು:

   - ಬಹುಕಾಲ ಹಿಂದೆ ಸತ್ತವರಂತಿದ್ದೇನೆ (ವಚನ 6): ದೇವರ ನ್ಯಾಯತೀರ್ಪಿನ ಕಾರ್ಗತ್ತಲೆಯ ಅನುಭವವನ್ನು ಸತ್ತವರೊಂದಿಗೆ ಹೋಲಿಸಲಾಗಿದೆ.
   - ನನಗೆ ಹೊಂಚುಹಾಕುತ್ತಿರುವ ಕರಡಿಯಂತಿದ್ದಾನೆ. ಗುಪ್ತಸ್ಥಳಗಳಲ್ಲಿ ಅಡಗಿಕೊಂಡಿರುವ ಸಿಂಹದ ಹಾಗಿದ್ದಾನೆ.

3. ವಚನ 21–26 ರ ದೈವಶಾಸ್ತ್ರ: ದೇವರು ನಂಬಿಗಸ್ತನಾಗಿದ್ದಾನೆ, ಹಾಗಾಗಿ ನಾವು ಆತನ ಕೃಪೆ ಮತ್ತು ಕರುಣೆಗಳಿಗಾಗಿ ನಿರೀಕ್ಷಿಸಬಹುದು. ಅವು ಎಂದಿಗೂ ನಿಂತು ಹೋಗುವುದಿಲ್ಲ. ದೇವರು ಮಹೋಪಕಾರಿಯಾಗಿದ್ದಾನೆ. ಹಾಗಾಗಿ ನಾವು ಆತನಲ್ಲಿ ಭರವಸವಿಡಬಹುದು. ಆತನ ರಕ್ಷಣೆಗಾಗಿ ಆತನಲ್ಲಿ ಕಾಯಬಹುದು.

4. ವಚನ 43–54 ರಲ್ಲಿ ವ್ಯಕ್ತಗೊಂಡ ಕವಿಯ ಭಾವನೆಗಳ ಸಾರಾಂಶ:

   ಅ. ದೇವರು ಆತನೊಂದಿಗೆ ಕೋಪಗೊಂಡಿದ್ದಾನೆ ಮತ್ತು ಆತನ ಪ್ರಾರ್ಥನೆಗಳಿಗೆ ಉತ್ತರಿಸಲು ತಿರಸ್ಕರಿಸುತ್ತಾನೆ.

ಆ. ತನ್ನ ಜನರನ್ನು ಆತನು ಒಂದು ಮೂದಲಿಕೆಯ ವಸ್ತುವಂತೆ ಮಾಡಿದ್ದಾನೆ.

ಇ. ದೇವರು ಮಧ್ಯಪ್ರವೇಶಿಸುವರೆಗೂ ಆತನು ಸಾಂತ್ವನಗೊಳಿಸಲಾರದವರಂತೆ ಇರುವನು.

ಈ. ಆತನ ಜನರು ಬಾಧೆಪಡುತ್ತಿದ್ದಾರೆ.

ಉ. ವೈರಿಗಳು ಆತನನ್ನು ಕಾರಣವಿಲ್ಲದೆ ಹಿಂಸಿಸುತ್ತಾರೆ.

ಪ್ರಲಾಪಗಳು ಅಧ್ಯಾಯ 4 – ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. ಈ ಅಧ್ಯಾಯದಲ್ಲಿ ಮಾತನಾಡುವವರು ಯೆರೂಸಲೇಮಿನಲ್ಲಿನ ಪರಿಸ್ಥಿತಿಗಳ ಬಗ್ಗೆ ತಿಳಿಸುವ ಒಬ್ಬ ವ್ಯಕ್ತಿಯಾಗಿದ್ದಾರೆ. ಆತನು ತನಗೇ ತಾನೇ ಮಾತಾಡಿಕೊಳ್ಳುವುದಿಲ್ಲ. ಹಾಗಾಗಿ ಇಲ್ಲಿ "ನಾನು, ನನ್ನ" ಎಂಬ ಸರ್ವನಾಮಗಳನ್ನು ಕಾಣಲಾಗುವುದಿಲ್ಲ. ಒಂದು ಭಾಗದಲ್ಲಿ ಈತನು (ವಚನ 17–20) "ನಮ್ಮ, ನಾವು" ಎಂಬ ಪ್ರಥಮ ಪುರುಷ ಬಹುವಚನವನ್ನು ಉಪಯೋಗಿಸುತ್ತಾನೆ. ಈತನು ಅರಸನಾದ ಚಿದ್ಕೀಯನೊಂದಿಗೆ ಯೆರೂಸಲೇಮಿನಿಂದ ಪಲಾಯನ ಮಾಡಲು ಪ್ರಯತ್ನಿಸಿ, ಬಾಬೆಲಿನಿನವರ ಕೈಯಲ್ಲಿ ಸೆರೆಸಿಕ್ಕ ಜನರ ಗುಂಪಿಗೆ ಸೇರಿದವನಾಗಿರುವ ಸಾಧ್ಯತೆಯಿದೆ. ಆದರೆ ರಿಬ್ಲದಲ್ಲಿ ನೆಬೂಕದ್ನೆಚ್ಚರನಿಂದ ಕೊಲ್ಲಲ್ಪಟ್ಟ ಶ್ರೀಮಂತರಲ್ಲಿ ಒಬ್ಬನಲ್ಲ (ಯೆರೆಮೀಯ. 39:6).
2. ಈ ಅಧ್ಯಾಯದಲ್ಲಿ ಕವಿಯು ಸ್ಪಷ್ಟವಾಗಿ ಯಾವ ವ್ಯಕ್ತಿಯನ್ನು ಸಂಬೋಧಿಸುವುದಿಲ್ಲ. ಆದರೆ ತನ್ನ ಪದ್ಯದ ಕೊನೆಯಲ್ಲಿ ಈತನು ಎದೋಮ್ ಮತ್ತು ಯೆರೂಸಲೇಮನ್ನು ಸಂಬೋಧಿಸುತ್ತಾನೆ (ವಚನ 21 ಮತ್ತು 22).
3. ಯೆರೂಸಲೇಮಿನಲ್ಲಿನ ಬರವನ್ನು ಕವಿಯು ಹೀಗೆ ವರ್ಣಿಸಿದ್ದಾನೆ (ವಚನ 4–5, 8–10):

   ಅ. ಅಲ್ಲಿ ನೀರಿನ ಕೊರತೆಯಿರುವುದರಿಂದ ಜನರು ಬಾಯಾರಿಕೆಯಿಂದ ಬಳಲುತ್ತಿದ್ದಾರೆ (ವಚನ 4, 8).

   ಆ. ಬರವು ಜನರನ್ನು ಹತಾಶರನ್ನಾಗಿ ಮಾಡುತ್ತದೆ:

   - ಮಕ್ಕಳು ಆಹಾರಕ್ಕಾಗಿ ಅಲೆಯುತ್ತಾರೆ (ವಚನ 4).
   - ಜನರು ಹಸಿವೆಯಿಂದ ಸಾಯುತ್ತಾರೆ (ವಚನ 5, 9).
   - ತಾಯಂದಿರು ತಮ್ಮ ಮಕ್ಕಳನ್ನೇ ತಿನ್ನುತ್ತಾರೆ (ವಚನ 10).
4. ದೇವರು ಯೆರೂಸಲೇಮನ್ನು ಅದರ ಪ್ರವಾದಿಗಳ ಮತ್ತು ಯಾಜಕರ ಪಾಪದ ನಿಮಿತ್ತ ಶಿಕ್ಷಿಸುತ್ತಾನೆ (ವಚನ 13).
5. –
6. ವಚನ 20 ರ ಟಿಪ್ಪಣಿ ನೋಡಿರಿ.
7. ಎದೋಮಿಗಾಗಿ ಕವಿಯ ಸಂದೇಶ (ವಚನ 21): ಈಗ ಎದೋಮ್ಯರು ಯೆರೂಸಲೇಮಿನ ನಾಶನದಲ್ಲಿ ಹರ್ಷಿಸಬಹುದು. ಆದರೆ ಖಂಡಿತವಾಗಿ ದೇವರು ಅವರಿಗೆ ನ್ಯಾಯತೀರಿಸುತ್ತಾನೆ ಮತ್ತು ಅವರಿಗೆ ಅವಮಾನವನ್ನು ಉಂಟುಮಾಡುತ್ತಾನೆ.
8. ಯೆರೂಸಲೇಮಿಗಾಗಿ ಕವಿಯ ಸಂದೇಶ (ವಚನ 22): ಪ್ರಸ್ತುತವಾಗಿ ಇಸ್ರಾಯೇಲಿನ ಮೇಲಿನ ದೇವರ ದಂಡನೆಗೆ ಅಂತ್ಯಬರುವುದು ಮತ್ತು ಆತನು ಅವರನ್ನು ಸೆರೆಯಿಂದ ತಿರುಗಿ ಕರೆತರುವನು.

ಪ್ರಲಾಪಗಳು ಅಧ್ಯಾಯ 4 ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ವಚನ 3 ರಲ್ಲಿ ಕವಿಯು ಹೇಳುವ ಅಂಶವೇನೆಂದರೆ – ಇಸ್ರಾಯೇಲ್ಯರು ನರಿಗಳಿಗಿಂತ ಕೆಟ್ಟವರಾಗಿದ್ದಾರೆ. ಹಳೇ ಒಡಂಬಡಿಕೆಯಲ್ಲಿ ನರಿಯು ಪ್ರತ್ಯೇಕತೆ, ನಾಶನ ಮತ್ತು ಪರಿತ್ಯಾಗದ ಸಂಕೇತವಾಗಿದೆ. ಆದರೆ ನರಿಗಳು ತಮ್ಮ ಮರಿಗಳ ಬಗ್ಗೆ ಕಾಳಜಿ ವಹಿಸುತ್ತವೆ. ಆದರೆ ಇಸ್ರಾಯೇಲ್ಯರು ಹಾಗಿಲ್ಲ. ಅವರು ಕಾಡಿನ ಉಷ್ಟ್ರಪಕ್ಷಿಯಷ್ಟು ಕ್ರೂರರಾಗಿದ್ದಾರೆ, ಯಾಕೆಂದರೆ ಹಗಲಿನಲ್ಲಿ ಅವು ತಮ್ಮ ಮೊಟ್ಟೆಗಳ ಮೇಲೆ ಕೂರುವುದಿಲ್ಲ.
2. ವಚನ 5, 7–8 ಮತ್ತು 10ರಲ್ಲಿ ತಿಳಿಸುವ ಅಂಶವೇನೆಂದರೆ, ಯೆರೂಸಲೇಮಿನವರ ಈ ಹಿಂದಿನ ಸುಖ ಮತ್ತು ಸಂಪತ್ತಿನ ಸ್ಥಾನವನ್ನು ಬಡತನ ಮತ್ತು ಭೀಕರ ಬರವು ಆಕ್ರಮಿಸಿದೆ.
3. ಯೆರೂಸಲೇಮಿನವರ ಮೇಲಿನ ದೇವರ ದಂಡನೆಯು, ಸೊದೋಮಿನ ಮೇಲಿನ ದಂಡನೆಗಿಂತ ಕೆಟ್ಟದ್ದಾಗಿದೆ ಎಂದು ಕವಿ ಹೇಳಿರಬಹುದು, ಯಾಕೆಂದರೆ ಕ್ಷಣಮಾತ್ರದಲ್ಲಿ ಸಾಯುವುದಕ್ಕಿಂತಲೂ ಹಸಿವೆಯಿಂದ ಹತರಾಗುವುದು ಗಂಭೀರವಾದ ಬಾಧೆಯಾಗಿರುತ್ತದೆ.

4. ವಚನ 11 ರಲ್ಲಿ ಕವಿಯು ಹೇಳುವ ಅಂಶವೇನೆಂದರೆ: ದೇವರು ಯೆರೂಸಲೇಮಿಗೆ ನ್ಯಾಯತೀರಿಸಿದ್ದಾನೆ. ಆತನ ರೋಷ ಮತ್ತು ಸಿಟ್ಟು ನ್ಯಾಯತೀರ್ಪಿನ ಲಕ್ಷಣಗಳಾಗಿವೆ.

5. ವಚನ 17–20 ಅನ್ನು ಯೆರೆಮೀಯ. 37:4–10 ಮತ್ತು 39:1–9 ರಲ್ಲಿನ ಐತಿಹಾಸಿಕ ಘಟನೆಗಳೊಂದಿಗೆ ಹೋಲಿಸಿ:

   ಅ. ಈ ವಚನಗಳು ಒಂದೇ ಐತಿಹಾಸಿಕ ಘಟನೆಗಳನ್ನು ಸೂಚಿಸುತ್ತವೆ. ಇದನ್ನು ವರ್ಣಿಸಲು ಯೆರೆಮೀಯನು ಐತಿಹಾಸಿಕ ಕಥಾನಿರೂಪಣೆಗಳನ್ನು ಬಳಸಿದರೆ, ಪ್ರಲಾಪವು ಪದ್ಯವನ್ನು ಬಳಸುತ್ತದೆ.

   ಆ. ಪ್ರಲಾಪದಲ್ಲಿನ ಯೆಹೋವನ ಅಭಿಷಿಕ್ತನು ಅರಸನಾದ ಚಿದ್ಕೀಯನಾಗಿದ್ದಾನೆ. ಬಾಬೆಲಿಯನ್ನರ ಆಕ್ರಮಣದ ವೇಳೆ ಚಿದ್ಕೀಯನು ಯೆರೂಸಲೇಮಿನಿಂದ ಓಡಿ ಹೋಗುತ್ತಾನೆ, ಆದರೆ ಯೆರಿಕೋವಿನ ಬಳಿಯ ಗುಂಡಿಗಳಲ್ಲಿ ಸಿಕ್ಕಿಬಿದ್ದನು.

6. ಪ್ರಲಾಪ 4: 21 ಅನ್ನು ಮತ್ತು ಓಬದ್ಯ ವಚನ 8–10 ರೊಂದಿಗೆ ಹೋಲಿಕೆ:

   ಅ. ಪ್ರಲಾಪ 4:21 ಮತ್ತು ಓಬದ್ಯ ವಚನ 8–10 ಇವೆರಡೂ ಎದೋಮ್ಯರ ಮೇಲಿನ ದೇವರ ನ್ಯಾಯತೀರ್ಪಿನ ಕುರಿತಾದ ಸಮಾನಾಂತರ ಪ್ರವಾದನೆಗಳಾಗಿವೆ.

   ಆ. ಬಾಬೆಲಿಯನ್ನರು ಯೆಹೂದವನ್ನು ಸೆರೆಯಿಡಿದು ಯೆರೂಸಲೇಮನ್ನು ನಾಶ ಮಾಡಿದಾಗ ಬಾಬೆಲಿನಿಯನ್ನರಿಗೆ ಬೆಂಬಲ ಕೊಟ್ಟದ್ದಕ್ಕಾಗಿ ದೇವರು ಎದೋಮ್ಯರನ್ನು ದಂಡಿಸುತ್ತಾನೆ.

   ಇ. ಈ ದಂಡನೆಗೆ ಪ್ರಲಾಪವು **"ಬೆತ್ತಲೆ ಮಾಡು"** ಎಂಬ ಹೇಳಿಕೆಯನ್ನು ಬಳಸುತ್ತದೆ. ಇದು ಓಬೆದ್ಯನ **"ಅವಮಾನವು ಕಲಿಯುವುದು"** ಎಂಬ ಹೇಳಿಕೆಗೆ ಸಮಾನಾರ್ಥವಾಗಿದೆ.

ಪ್ರಲಾಪಗಳು ಅಧ್ಯಾಯ 5 – ಉತ್ತರಗಳು

ಪ್ರಶ್ನೆಗಳಿಗೆ ಉತ್ತರಗಳು

1. 5 ನೇ ಅಧ್ಯಾಯದುದ್ದಕ್ಕೂ ಮಾತನಾಡುವವರು ಕ್ರಿ.ಪೂ. 587 ರಲ್ಲಿ ಯೆರೂಸಲೇಮಿನ ಪತನದ ನಂತರ ಯೆಹೂದದಲ್ಲಿ ಉಳಿದ ಇಸ್ರಾಯೇಲ್ಯರ ಸಮುದಾಯವಾಗಿದೆ. ಇದನ್ನು ಪ್ರಥಮ ಪುರುಷ ಬಹುವಚನದ ಸರ್ವನಾಮಗಳ ಬಳಕೆಯಲ್ಲಿ (ನಾವು, ನಮ್ಮ, ನನಗೆ) ಕಾಣಬಹುದು.

2. ಈ ಪ್ರಲಾಪದುದ್ದಕ್ಕೂ ದೇವರನ್ನು ಸಂಬೋಧಿಸಲಾಗಿದೆ. ಹಾಗಾಗಿ ಇದೊಂದು ಪ್ರಾರ್ಥನೆಯಾಗಿದೆ.

3. ಇಸ್ರಾಯೇಲ್ಯರ ಅಪಮಾನವನ್ನು ಕೀರ್ತನೆಗಾರನು ಈ ರೀತಿಯಾಗಿ ವರ್ಣಿಸುತ್ತಾನೆ (ವಚನ 2–18):

   ಅ. ಅವರ ದೇಶವು ಪರರಿಂದ ಆಳಲ್ಪಡುತ್ತಿದೆ (ವಚನ 2).

   ಆ. ಅವರು ಅನಾಥರಂತೆ ಮತ್ತು ವಿಧವೆಯರಂತೆ ದಿಕ್ಕಿಲ್ಲದವರಾಗಿದ್ದಾರೆ (ವಚನ 3).

   ಇ. ಅವರು ನೀರು, ಸೌದೆ ಮತ್ತು ಆಹಾರದ ಕೊರತೆಯಿಂದ ಬಳಲುತ್ತಿದ್ದಾರೆ (ವಚನ 4, 6, 9).

   ಈ. ಅವರು ತಮ್ಮ ಸುತ್ತಣ ಜನಾಂಗಗಳಿಂದ ದಾಸತ್ವ ಮತ್ತು ಕಷ್ಟಕ್ಕೊಳಗಾಗಿದ್ದಾರೆ (ವಚನ 8).

   ಉ. ಅವರು ಕ್ಷಾಮದಿಂದ ಬಳಲುತ್ತಿದ್ದಾರೆ (ವಚನ 10).

   ಊ. ಅವರಲ್ಲಿನ ಯುವತಿಯರು ಅತ್ಯಚ್ಚಾರಕ್ಕೆ ಈಡಾಗಿದ್ದಾರೆ (ವಚನ 11).

   ಋ. ಅವರ ಮುಖಂಡರನ್ನು ಕೊಲ್ಲಲಾಗಿದೆ (ವಚನ 12).

   ಎ. ಅವರ ಯುವಕರಿಗೆ ಪ್ರಾಣಿಗಳು ಮಾಡುವ ಬೀಸುವ ಕಲ್ಲನ್ನು ಹೊರುವ ಕೆಲಸ ಕೊಡಲಾಗಿದೆ (ವಚನ 13).

   ಏ. ಅವರು ತಮ್ಮ ನ್ಯಾಯಸ್ಥಾನದ ಮತ್ತು ರಾಜಕೀಯ ನಾಯಕತ್ವವನ್ನು ಕಳಕೊಂಡಿದ್ದಾರೆ (ವಚನ 14).

   ಐ. ಅವರು ತಮ್ಮ ಆನಂದವನ್ನು ಕಳಕೊಂಡು ಕಣ್ಣೀರು ಸುರಿಸುತ್ತಾರೆ (ವಚನ 14, 15, 17).

   ಒ. ಅವರ ಪಟ್ಟಣವು ತನ್ನ ಹಿಂದಿನ ಮಹಿಮೆಯನ್ನು ಕಳಕೊಂಡಿದೆ (ವಚನ 15).

4. ವಚನ 7 ರಲ್ಲಿ ಇಸ್ರಾಯೇಲ್ಯರ ಅವಮಾನ ಮತ್ತು ದುಃಖಕರ ಪರಿಸ್ಥಿತಿಗೆ, ಅವರ ಪಿತೃಗಳು ಮಾಡಿದ ಪಾಪವೇ ಕಾರಣವೆಂದು ಹೇಳುತ್ತಾರೆ.

5. ವಚನ 16 ರಲ್ಲಿ ಇಸ್ರಾಯೇಲ್ಯರ ಅವಮಾನ ಮತ್ತು ದುಃಖಕರ ಪರಿಸ್ಥಿತಿಗೆ ಕೊಡುವ ಕಾರಣ: ಅವರು ತಮ್ಮ ಸ್ವಂತ ಪಾಪದ ಪರಿಣಾಮದಿಂದ ಬಾಧೆಪಡುತ್ತಾರೆ.

6. ವಚನ 19 ರಲ್ಲಿ ದೇವರ ಕುರಿತಾಗಿ ಈ ತಿಳುವಳಿಕೆಯನ್ನು ಕೀರ್ತನೆಗಾರನು ವ್ಯಕ್ತಪಡಿಸುತ್ತಾನೆ: ದೇವರ ಸಾರ್ವಭೌಮತೆಯು ಶಾಶ್ವತವಾಗಿದೆ.

7. ವಚನ 21 ರಲ್ಲಿ ಕೀರ್ತನೆಗಾರನು ಎರಡು ಸಂಗತಿಗಳಿಗಾಗಿ ಪ್ರಾರ್ಥಿಸುತ್ತಾನೆ:

   ಅ. ದೇವರು ಇಸ್ರಾಯೇಲ್ಯರನ್ನು ಪುನಃ ತನ್ನ ಕಡೆಗೆ ತಿರುಗಿಸಬೇಕೆಂದು

   ಆ. ಪುನಃ ಇಸ್ರಾಯೇಲ್ಯರು ತಮ್ಮ ಪೂರ್ವಸ್ಥಿತಿಯನ್ನು ಅನುಭವಿಸಲು ದಯೆ ತೋರಿಸಬೇಕೆಂದು ಪ್ರಾರ್ಥಿಸುತ್ತಾನೆ.

ಪ್ರಲಾಪಗಳು ಅಧ್ಯಾಯ 5 ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು

1. ಇಸ್ರಾಯೇಲ್ಯರಿಗೆ ಆದದ್ದನ್ನು ನೆನಪು ಮಾಡಿಕೊಳ್ಳಬೇಕೆಂದು ಕೀರ್ತನೆಗಾರನು ದೇವರನ್ನು ಬೇಡಿಕೊಳ್ಳುತ್ತಾನೆ. "ನೆನಪು ಮಾಡಿಕೊ" ಎಂಬ ಪದದ ಅರ್ಥವು ಮೂರು ರೀತಿಯಲ್ಲಿದೆ:

   ಅ. ದೇವರು ಅವರ ಪ್ರಾರ್ಥನೆಗೆ ಕಿವಿಗೊಡುವುದು

   ಆ. ದೇವರು ಅವರ ಅಪಮಾನಕರ ಪರಿಸ್ಥಿತಿಯನ್ನು ನೋಡುವುದು

ಇ. ದೇವರು ಮಧ್ಯಪ್ರವೇಶಿಸಿ ಅವರನ್ನು ಪುನರ್‌ಸ್ಥಾಪಿಸುವುದು

2. ಇಸ್ರಾಯೇಲ್ಯರ ಪರಿಸ್ಥಿತಿಯನ್ನು ವರ್ಣಿಸಲು ಕೀರ್ತನೆಗಾರನು ಬಹಳಷ್ಟು ಚಿತ್ರಣವನ್ನು ಉಪಯೋಗಿಸುತ್ತಾನೆ:

   ಅ. ರೂಪಾಲಂಕಾರಗಳು:

   - ನಾವು ತಂದೆಯಿಲ್ಲದ ಅನಾಥರು (ವಚನ 3): ಇಸ್ರಾಯೇಲ್ಯರು ಅನಾಥರಂತಾದರು.
   - ದಾಸರು ನಮಗೆ ದಣಿಗಳಾದರು (ವಚನ 8): ಬಾಬೆಲಿನವರನ್ನು ಸೂಚಿಸುವುದು.
   - ಅರಣ್ಯದವರ ಕತ್ತಿ (ವಚನ 9): ಕಳ್ಳರು ಮತ್ತು ದರೋಡೆಕೋರರನ್ನು ಸೂಚಿಸುವುದು.
   - ಕಿರೀಟವು ನಮ್ಮ ತಲೆಯ ಮೇಲಿಂದ ಬಿದ್ದುಹೋಗಿದೆ (ವಚನ 16): ಇದು ಯೆರೂಸಲೇಮಿನ ಹಿಂದಿನ ಮಹಿಮೆಯ ಅಂತ್ಯ ಮತ್ತು ದಾವೀದನ ಮನೆತನದ ಅರಸರ ಆಳ್ವಿಕೆಯ ಅಂತ್ಯವನ್ನು ಸೂಚಿಸುವುದು.

   ಆ. ಉಪಮೆಗಳು:

   - ನಮ್ಮ ತಾಯಿಗಳು ವಿಧವೆಯ ಗತಿಗೆ ಬಂದಿದ್ದಾರೆ (ವಚನ 3).
   - ನಮ್ಮ ಚರ್ಮವು ಬಲೆಯಂತೆ ಸುಡುತ್ತದೆ (ವಚನ 10): ಇದು ಅತಿಶಯೋಕ್ತಿಗೆ ಸಹ ಒಂದು ಉದಾಹರಣೆಯಾಗಿದೆ.

3. ಕವಿಯು ಸಮಾನಾಂತರ ಮತ್ತು ಸಮಾನಾರ್ಥಕ ಹೇಳಿಕೆಗಳನ್ನು ಬಳಸುವುದರಿಂದ ತನ್ನ ಪದ್ಯವನ್ನು ಶ್ರೀಮಂತಗೊಳಿಸುತ್ತಾನೆ:

   ಅ. ವಚನ 1: ಚಿತ್ತಕ್ಕೆ ತಂದುಕೋ, ದೃಷ್ಟಿಸಿ ನೋಡು

   ಆ. ವಚನ 2: ಸ್ವಾಸ್ತ್ಯ, ಮನೆಗಳು, ಪರರ, ಹೆರರ

   ಇ. ವಚನ 3: ತಂದೆಯಿಲ್ಲದವರು, ಅನಾಥರು

   ಈ. ವಚನ 5: ಬಳಲಿಕೆ, ವಿಶ್ರಾಂತಿಯಿಲ್ಲ

   ಉ. ವಚನ 11: ಸತಿಯರು, ಯುವತಿಯರು

   ಊ. ವಚನ 12: ಸರದಾರರು, ವೃದ್ಧರು

   ಋ. ವಚನ 13: ಯುವಕರು, ಮಕ್ಕಳು

   ಎ. ವಚನ 19: ಶಾಶ್ವತವಾಗಿ, ತಲತಲಾಂತರಕ್ಕೂ

   ಏ. ವಚನ 22: ಸಿಟ್ಟುಗೊಳ್ಳು, ತ್ಯಜಿಸಿಬಿಡು

ಕಾವ್ಯ ಮತ್ತು ವ್ಯಾಕರಣದಲ್ಲಿ ಬಳಸುವ ಪದಗಳು

ಒಗಟು ರೂಪದ ಪದ್ಯ: ಒಂದು ಪದ್ಯದ ಪ್ರತೀ ಸಾಲಿನ ಮೊದಲ ಅಕ್ಷರವು ಒಂದು ವಿಶೇಷವಾದ ಪ್ರಾಮುಖ್ಯತೆಯನ್ನು ಹೊಂದಿರುವುದಾಗಿದೆ. ಇಂತಹ ಹಳೇ ಒಡಂಬಡಿಕೆಯ ಪದ್ಯಗಳಲ್ಲಿ ಪ್ರತೀ ಸಾಲು (ಅಥವಾ ವಚನ) ಇಬ್ರಿಯ ವರ್ಣಮಾಲೆಯ ಕ್ರಮವನ್ನು ಅನುಸರಿಸುವ ಒಂದು ವಿಭಿನ್ನವಾದ ಅಕ್ಷರದೊಂದಿಗೆ ಪ್ರಾರಂಭವಾಗುತ್ತದೆ.

ಅನ್ಯೋಕ್ತಿ (ಸಾಂಕೇತಿಕ ನಿರೂಪಣೆ): ಒಂದು ಕಥೆ (ಅಥವಾ ಒಂದು ಪದ್ಯ, ಕವನ ಅಥವಾ ಒಂದು ಚಿತ್ರಣವು). ಒಂದು ಗುಪ್ತವಾದ ಅರ್ಥವನ್ನು ಹೊಂದಿರುವುದೆಂದು ಯೋಚಿಸುವುದು. ಹಾಗಾಗಿ ಸಾಂಕೇತಿಕ ಅರ್ಥವಿವರಣೆಯೆಂದರೆ – ವಾಕ್ಯಭಾಗವನ್ನು ಅಕ್ಷರಶಃ ಅರ್ಥೈಸಿಕೊಳ್ಳದೆ ಅದರ ನಿಜವಾದ ಅರ್ಥವು ಆಳವಾಗಿದೆ ಎನ್ನುವುದು (ಇದು ಆತ್ಮೀಕವಾಗಿರಬಹುದು ಅಥವಾ ರಾಜಕೀಯವಾಗಿರಬಹುದು).

ಆದಿಪ್ರಾಸ: ಪದಗಳ ಅಥವಾ ಹೇಳಿಕೆಗಳ ಪ್ರಾರಂಭದಲ್ಲಿನ ಒಂದೇ ರೀತಿಯ ಶಬ್ದಗಳ ಪುನರಾವರ್ತನೆಯು ನಿಕಟ ಸಂಪರ್ಕದಲ್ಲಿವೆ.

ಮಾನವೀಕರಣ: ದೇವರಿಗಿರುವ ಮಾನವಸ್ವಭಾವದ ಗುಣಲಕ್ಷಣಗಳು

ವಿರೋಧಾತ್ಮಕ ಸಮಾಂತರತೆ: ಸಮಾನಾಂತರತೆಯನ್ನು ನೋಡಿರಿ.

ಸಂಬೋಧನೆ: ಸತ್ತವರನ್ನು ಅಥವಾ ಜೀವವಿಲ್ಲದ ವಸ್ತುಗಳನ್ನು ಅವು ಕೇಳುತ್ತವೋ ಅಥವಾ ಸ್ಪಂದಿಸುತ್ತವೇನೋ ಎಂಬಂತೆ ಕರೆಯುವುದು.

ಕ್ರಮವ್ಯತ್ಯಯ: ಪಠ್ಯವು ಎಕ್ಸ್ ರೀತಿಯಲ್ಲಿ ಜೋಡಣೆಯಾಗಿರುವುದು. ಇದರಲ್ಲಿ ಪಠ್ಯದ ಭಾಗಗಳು ತದ್ವಿರುದ್ಧವಾದ ಕ್ರಮದಲ್ಲಿ ಪುನರಾವರ್ತನೆಯಾಗಿರುತ್ತವೆ.

ಮೇಳ: ಒಂದು ನಾಟಕದ ಪ್ರಮುಖ ನಟನೆಯ ಮೇಲೆ ಒಟ್ಟಾಗಿ ವ್ಯಾಖ್ಯಾನ ಮಾಡುವ ಜನರ ಒಂದು ಗುಂಪು.

ದ್ವಿಪತಿ: ಎರಡು ಸಾಲಿನ ಪದ್ಯ (ಶ್ಲೋಕ).

ಸ್ತುತಿವಾಕ್ಯ (ಸ್ತೋತ್ರ): ದೇವರನ್ನು ಸ್ತುತಿಸುವುದಕ್ಕಾಗಿನ ಆರಾಧನೆಯ ಒಂದು ಸೂತ್ರ.

ಆವರಣ: ಪಠ್ಯದ ಪ್ರಾರಂಭ ಮತ್ತು ಕೊನೆಯಲ್ಲಿ ಬರುವ ಒಂದು ವಚನ ಅಥವಾ ಹೇಳಿಕೆಯಿಂದ ರೂಪುಗೊಂಡಿರುವ ಒಂದು ಪದ್ಯ.

ಪ್ರಕಾರ (ಪ್ರಬೇಧ): ಸಾಹಿತ್ಯ, ಸಂಗೀತ ಅಥವಾ ಕಲೆಗಳ ಒಂದು ವರ್ಗ. ಪಠ್ಯದ ಒಂದು ವಿಧ.

ಹಾಸ್ಯ: ಮನರಂಜಿಸುವ ಅಥವಾ ತಮಾಷೆ ಮಾಡುವ ಗುಣ.

ಅತಿಶಯೋಕ್ತಿ: ಅತಿಯಾಗಿ ಮಾಡಲ್ಪಟ್ಟ ಹೇಳಿಕೆಗಳು. ಇದನ್ನು ಅಕ್ಷರಶಃವಾಗಿ ತೆಗೆದುಕೊಳ್ಳಬೇಕೆಂಬರ್ಥವಲ್ಲ.

ಚಿತ್ರಣ: ದಾರ್ಶನಿಕವಾಗಿ ವಿವರಣಾತ್ಮಕ ಅಥವಾ ಸಾಂಕೇತಿಕ ಭಾಷೆಯಿಂದ ಕೂಡಿದ್ದು (ಅಕ್ಷರಶಃವಲ್ಲಿ ಅಥವಾ ಅಲಂಕಾರಿಕ) ಮಾನವೀಕರಣಕ್ಕೆ ರೂಪಾಲಂಕಾರ, ಲಾಕ್ಷಣಿಕ ಪ್ರಯೋಗ ಮತ್ತು ಸಾಮ್ಯಗಳು, ವ್ಯಕ್ತೀಕರಣ ಮತ್ತು ಉಪಮೆ ಮತ್ತು ಅಖಂಡದಿಂದ ಖಂಡವನ್ನು ಸೂಚಿಸುವ ಅಲಂಕಾರ ಮತ್ತು ಪ್ರಾಣಿ ಚಿತ್ರಣಗಳನ್ನು ನೋಡಿರಿ.

ವ್ಯಂಗ್ಯ: ಅಕ್ಷರಶಃ ಅರ್ಥಕ್ಕೆ ವಿರುದ್ಧವಾದ ಅರ್ಥವನ್ನು ಕಲ್ಪಿಸಲು ಪದಗಳನ್ನು ಉಪಯೋಗಿಸುವುದು.

ಅಕ್ಷರಶಃ ವ್ಯಾಖ್ಯಾನ: ರೂಪಾಲಂಕಾರಗಳನ್ನು ಬಳಸದೆ ಪದಗಳನ್ನು ಅವುಗಳ ಮೂಲ ಭಾವದಲ್ಲಿ ಅರ್ಥೈಸಿಕೊಳ್ಳುವುದು.

ಸಾಹಿತ್ಯದ ವಿಧಾನ: ಪ್ರತ್ಯೇಕ ಪರಿಣಾಮಗಳನ್ನುಂಟು ಮಾಡುವುದಕ್ಕಾಗಿ ಸಾಹಿತ್ಯದ ಪಠ್ಯಗಳಲ್ಲಿ ಬಳಸಲಾದ ವಿಧಾನಗಳು.

ರೂಪಾಲಂಕಾರಗಳು: ಒಂದು ಪದ ಅಥವಾ ಹೇಳಿಕೆಯು ಅಕ್ಷರಶಃವಲ್ಲದ ಅರ್ಥದಲ್ಲಿ ಅನ್ವಯಿತವಾಗಿರುವ ಒಂದು ಅಲಂಕಾರ.

ಮಾಪಕ: ಕಾವ್ಯಗಳಲ್ಲಿನ ಲಯಬದ್ಧವಾದ ರೂಪ.

ಲಾಕ್ಷಣಿಕ ಪ್ರಯೋಗ: ಎರಡು ನಾಮಪದಗಳ ನಡುವಿನ ಸಂಬಂಧದ ನಿಮಿತ್ತ ಒಂದು ನಾಮಪದದ ಬದಲಿಗೆ ಇನ್ನೊಂದು ನಾಮಪದವನ್ನು ಉಪಯೋಗಿಸುವ ಒಂದು ಅಲಂಕಾರ.

ನಿರೂಪಕ: ಪಠ್ಯ (ವಾಕ್ಯಭಾಗದಲ್ಲಿ) ಏನಾಗುತ್ತಿದೆ ಎಂಬುದನ್ನು ವಿವರಿಸುತ್ತಿರುವ ವ್ಯಕ್ತಿ.

ಸಂಖ್ಯಾತ್ಮಕ ಜ್ಞಾನೋಕ್ತಿ: ಸಂಖ್ಯೆಗಳ ಪಟ್ಟಿಯನ್ನು ಒಳಗೊಂಡಿರುವ ಒಂದು ಜ್ಞಾನೋಕ್ತಿ.

ಸಂದರ್ಭ: ಪಠ್ಯದಲ್ಲಿನ ಘಟನೆಗಳು ಸಂಭವಿಸುವ ಸ್ಥಳ.

ಸಾಮ್ಯ: ಒಂದು ನೈತಿಕ ಅಥವಾ ಆತ್ಮೀಕ ಪಾಠವನ್ನು ತಿಳಿಸಲು ಬಳಸಲಾದ ಒಂದು ಸರಳವಾದ ಕಥೆ.

ವಿರೋಧಾಭಾಸ: ಅಸಂಬದ್ಧವಾಗಿ ಅಥವಾ ವಿರೋಧಾತ್ಮಕವಾಗಿ ಕಾಣುವ ಒಂದು ಹೇಳಿಕೆ, ಆದರೆ ಆಳವಾಗಿ ತನಿಖೆ ಮಾಡುವಾಗ (ಅನ್ವೇಷಿಸುವಾಗ) ಇದು ಸತ್ಯವಾಗಿ ಕಂಡಿರಬಹುದು.

ಸಮಾನಾಂತರತೆ: ಇಬ್ರಿಯ ಕಾವ್ಯದಲ್ಲಿ ಅನೇಕ ಬಗೆಯ ಪದ್ಯರೂಪಿ ರಚನೆಗಳನ್ನು ಬಳಸಲಾಗಿದೆ. ಮೂರು ಪ್ರಮುಖ ವಿಧಾನಗಳೆಂದರೆ:

1. "ಸಮಾನಾರ್ಥಕ ಸಮಾನಾಂತರತೆ" (ಹೇಳಿಕೆ ಅಥವಾ ಆಲೋಚನೆಗಳು ಮರುಕಳಿಸುವುದು).
2. "ವಿರೋಧಾತ್ಮಕ ಸಮಾನಾಂತರತೆ" (ತದ್ವಿರುದ್ಧವಾದ ಹೇಳಿಕೆ ಅಥವಾ ಆಲೋಚನೆಗಳು).
3. "ಸಂಯೋಜಿತ ಸಮಾನಾಂತರತೆ" (ಒಂದು ಹೇಳಿಕೆ ಅಥವಾ ಆಲೋಚನೆಯ ವಿವರಣೆ).

ವ್ಯಕ್ತೀಕರಣ: ಅಮಾನವೀಯ ವಸ್ತು (ಸಂಗತಿ) ಗಳಿಗೆ ಮಾನವನ ಗುಣಸ್ವಭಾವವನ್ನು ಕಲ್ಪಿಸುವುದು.

ಪದ್ಯರೂಪಿ ರಚನೆ: ಸಮಾನಾಂತರತೆ ನೋಡಿರಿ.

ಸರ್ವನಾಮ: ನಾಮಪದಗಳ ಬದಲಿಗೆ ಬಳಸಲಾದ ಪದಗಳ ಒಂದು ವರ್ಗ. ವೈಯಕ್ತಿಕ ಸರ್ವನಾಮಗಳೆಂದು ಕರೆಯಲ್ಪಡುವ ಗುಂಪು ಈ ರೀತಿ ವಿಭಾಗಿಸಲ್ಪಟ್ಟಿದೆ–"ಪ್ರಥಮ ಪುರುಷ ಅಥವಾ ನಿರೂಪಕ" (ಸರ್ವನಾಮಗಳು–"ನಾನು", "ನನಗೆ" ಎಂದು ಏಕವಚನದಲ್ಲಿರುವುದು ಮತ್ತು ಬಹುವಚನದಲ್ಲಿ "ನಾವು, ನಮಗೆ" ಎಂಬುದಾಗಿದೆ).

"ದ್ವಿತೀಯ ಪುರುಷ" ಅಥವಾ ಯಾರಿಗೆ ಹೇಳಿರುವುದು (ಏಕವಚನ ಮತ್ತು ಬಹುವಚನದಲ್ಲಿನ "ನೀನು" ಎಂಬ ಸರ್ವನಾಮ) ಮತ್ತು ತೃತೀಯ ಪುರುಷ ಅಥವಾ ವ್ಯಕ್ತಿಯು ಯಾವುದರ ಬಗ್ಗೆ ಹೇಳಿರುವನು (ಇಂತಹ ಸರ್ವನಾಮಗಳೆಂದರೆ–"ಅವನು, ಅವನ, ಅವಳು, ಅವಳ, ಅವು, ಅವುಗಳ, ಇದು ಏಕವಚನ ಮತ್ತು ಬಹುವಚನಗಳಲ್ಲಿವೆ.

ಸರ್ವನಾಮಗಳ ವರ್ಗೀಕರಣವು ಭಾಷೆಗಳನುಸಾರವಾಗಿ ವಿಭಿನ್ನವಾಗಿರುತ್ತದೆ.

ಗದ್ಯ: ಸಾಮಾನ್ಯ ರೂಪದಲ್ಲಿರುವ ಲಿಖಿತ ಅಥವಾ ಆಡುಭಾಷೆ.

ಜ್ಞಾನೋಕ್ತಿ: ಸಾಮಾನ್ಯ ಸತ್ಯ, ಪ್ರಯೋಜನಕಾರಿ ಆಲೋಚನೆ ಅಥವಾ ಒಂದು ಸಲಹೆಯನ್ನು ಪರಿಣಾಮಕಾರಿಯಾಗಿ ವ್ಯಕ್ತಪಡಿಸುವ ಒಂದು ಸಣ್ಣ ಹೇಳಿಕೆಯಾಗಿದೆ.

ಓದುವ ವಿಧಾನ: ಓದುಗನು ಒಂದು ಪಠ್ಯವನ್ನು ಅರ್ಥೈಸಿಕೊಳ್ಳುವ ರೀತಿ.

ಪಲ್ಲವಿ: ಮರುಕಳಿಸಲ್ಪಟ್ಟ ಸಾಲನ್ನು ಒಳಗೊಂಡಿರುವ ಒಂದು ಪದ್ಯರೂಪಿ ರಚನೆ. ಸಾಮಾನ್ಯವಾಗಿ ಇದು ವಚನದ ಕೊನೇಭಾಗದಲ್ಲಿ ಕಂಡುಬರುತ್ತದೆ.

ಅಲಂಕಾರಿಕ ಪ್ರಶ್ನೆ: ಇದು ಉತ್ತರವನ್ನು ಪಡೆಯಲು ಕೇಳುವ ಪ್ರಶ್ನೆಯಲ್ಲ, ಆದರೆ ಒಂದು ಪರಿಣಾಮವನ್ನುಂಟು ಮಾಡುವುದು.

ಪ್ರಾಸ: ಪದ್ಯರೂಪಿ ಸಾಲುಗಳ ಕೊನೆಯಲ್ಲಿನ ಶಬ್ದಗಳ ಪನರಾವರ್ತನೆ.

ಒಗಟು: ಉದ್ದೇಶಪೂರ್ವಕವಾಗಿ ಪದವಿನ್ಯಾಸ ಮಾಡಲ್ಪಟ್ಟ ಒಂದು ಪ್ರಶ್ನೆ ಅಥವಾ ಹೇಳಿಕೆಯು ಇದರ ಅರ್ಥವನ್ನು ಕಂಡುಹಿಡಿಯಲು ಕಷ್ಟಕರವಾಗುತ್ತದೆ.

ಉಪಮೆ: ಒಂದು ವಸ್ತುವನ್ನು, ವಿಭಿನ್ನಬಗೆಯ ಪದವನ್ನು ಬಳಸುವುದರಿಂದ ಇನ್ನೊಂದು ವಸ್ತುವಿಗೆ ಹೋಲಿಸುವ ಒಂದು ಶಬ್ದಲಂಕಾರ.

ಶ್ಲೋಕ: ಪದ್ಯವೊಂದರಲ್ಲಿ ಮೂಲ ಘಟಕವನ್ನು ರೂಪಿಸುವ ಸಾಲುಗಳ ಒಂದು ಗುಂಪು.

ತಲೆಬರಹ: ಕೀರ್ತನೆ ಪುಸ್ತಕದಲ್ಲಿ ಹೆಚ್ಚಿನ ಕೀರ್ತನೆಗಳೊಂದಿಗೆ ಕಂಡುಬರುವ ಸಂಪಾದಕೀಯ ಶೀರ್ಷಿಕೆ.

ಅಖಂಡದಿಂದ ಖಂಡವನ್ನು ಸೂಚಿಸುವ ಅಲಂಕಾರ: ಇದೊಂದು ಶಬ್ದಾಲಂಕಾರವಾಗಿದ್ದು, ಇದರಲ್ಲಿ ಇಡೀ ಅಂಶವು ಒಂದು ಭಾಗದಿಂದ ಪ್ರತಿನಿಧಿಸಲ್ಪಡುತ್ತದೆ ಅಥವಾ ಇಡೀ ಅಂಶವು ಒಂದು ಭಾಗವನ್ನು ಪ್ರತಿನಿಧಿಸುವುದು.

ಸಮಾನಾರ್ಥಕ: ಒಂದು ಪದವು ಹೆಚ್ಚುಕಡಿಮೆ ಇನ್ನೊಂದು ಪದದಂತೆಯೇ ಅರ್ಥೈಸುವುದು.

ವಿಷಯ ವಸ್ತು: ಮುಖ್ಯ ವಿಷಯ.

ಕ್ರಿಯಾಪದ ಕಾಲ: ಕಾಲವನ್ನು ಸೂಚಿಸಲು (ತಿಳಿಸಲು) ಕ್ರಿಯಾಪದದಿಂದ ತೆಗೆಯಲ್ಪಟ್ಟ ರೂಪಗಳು (ಕೆಲವೊಮ್ಮೆ ಮುಂದುವರಿಕೆ ಅಥವಾ ಪೂರ್ಣತೆ).

ಶಬ್ಧಚಮತ್ಕಾರ: ಪದಗಳ ಅರ್ಥ ಮತ್ತು ಅಸ್ಪಷ್ಟತೆಯನ್ನು ಬಹು ಜಾಣ್ಮೆಯಿಂದ ಬಳಸುವುದು.

ಮೃಗಾಲಂಕಾರ ಅಥವಾ ಪ್ರಾಣಿ ಚಿತ್ರಣ: ದೇವರನ್ನು ಒಂದು ಪ್ರಾಣಿಯ ರೂಪದಲ್ಲಿ ಪ್ರಸ್ತುತಪಡಿಸುವುದು ಅಥವಾ ಪ್ರಾಣಿಗಳ ಲಕ್ಷಣವನ್ನು ದೇವರಿಗೆ ಕೊಡುವುದು.

ವಿಷಯಾಂಶಗಳು

ಜ್ಞಾನೋಕ್ತಿಗಳು

ಜ್ಞಾನೋಕ್ತಿಗಳ ಪರಿಚಯ 3
ಪ್ರಸ್ತಾವನೆ: ಉದ್ದೇಶ ಮತ್ತು ವಿಷಯ ವಸ್ತು (1:1–7) 9
ಜ್ಞಾನದ ಮೊದಲ ವೈರಿ (ಅಧ್ಯಾಯ 1, 2, 4) 10
ಜ್ಞಾನದ ಎರಡನೇ ವೈರಿ (ಅಧ್ಯಾಯ 1, 5, 6, 7) 13
ಜ್ಞಾನದ ಮೂರನೇ ಮತ್ತು ನಾಲ್ಕನೇ ವೈರಿಗಳು (ಅಧ್ಯಾಯ 1–7) 15
ಜ್ಞಾನದ ರೂಪುರೇಖೆ (ಅಧ್ಯಾಯ 1–4) 17
ಜ್ಞಾನದ ಪ್ರಯೋಜನಗಳು ಮತ್ತು ದೇವರು ಹಗೆ ಮಾಡುವ ಏಳು ಸಂಗತಿಗಳು (ಅಧ್ಯಾಯ 3, 4, 6) 19
ಜ್ಞಾನವು ವರ್ಣಿಸಲ್ಪಟ್ಟದ್ದು, ಚಿತ್ರಿಸಲ್ಪಟ್ಟದ್ದು (ಅಧ್ಯಾಯ 8) 20
ಜ್ಞಾನ ಮತ್ತು ಮೂಢತನದ ನಡುವಿನ ಆಯ್ಕೆ (ಅಧ್ಯಾಯ 9) 22
ಜ್ಞಾನದ ವಿಧಾನಗಳು 23
ಸೊಲೊಮೋನನ ಜ್ಞಾನೋಕ್ತಿಗಳ ಮುಖ್ಯ ಸಂಗ್ರಹ (10:1–22:16) 29
ಜ್ಞಾನಿಗಳ ಮಾತುಗಳು (22:17–24:34) 32
ಹಿಜ್ಕೀಯನು ಸಂಗ್ರಹಿಸಿದ ಸೊಲೊಮೋನನ ಜ್ಞಾನೋಕ್ತಿಗಳು (25:1–29:27) 34
ಆಗೂರ ಮತ್ತು ಅರಸನಾದ ಲೆಮೂವೇಲನ ಮಾತುಗಳು (30:1–31:9) 37
ಗುಣವತಿಯಾದ ಸತಿ (31:10–31) 39

ಜ್ಞಾನದ ಮೌಲ್ಯಗಳು

ಪೀಠಿಕೆ 41
ಪ್ರೀತಿ ಮತ್ತು ನಂಬಿಗಸ್ತಿಕೆ 42
ನ್ಯಾಯ ಮತ್ತು ನೀತಿ 47
ಕುಟುಂಬ 52
ಕೆಲಸ 56
ಆರೋಗ್ಯ ಮತ್ತು ಭದ್ರತೆ 58
ಭೌತಿಕ ಸೌಕರ್ಯ 61
ನಾಲಿಗೆಯ ಬಳಕೆ 64

ಪ್ರಸಂಗಿ

ಪ್ರಸಂಗಿ ಪುಸ್ತಕದ ಪರಿಚಯ 69
ಪ್ರಸಂಗಿಯ ರಚನೆ 72

ಪ್ರಸಂಗಿ ಪುಸ್ತಕದಲ್ಲಿನ ಮುಖ್ಯ ಹೇಳಿಕೆಗಳು 75
ಪ್ರಸಂಗಿಯಲ್ಲಿ ದೇವರು ಮತ್ತು ಮನುಷ್ಯ 77
ಪ್ರಸಂಗಿ ಓದಿರಿ ಮತ್ತು ಉತ್ತರಿಸಿ 81
ಪ್ರಸಂಗಿ ಅಧ್ಯಾಯ 1 83
ಪ್ರಸಂಗಿ ಅಧ್ಯಾಯ 2 84
ಪ್ರಸಂಗಿ ಅಧ್ಯಾಯ 3 86
ಪ್ರಸಂಗಿ 5:8–6:12 87
ಪ್ರಸಂಗಿ ಅಧ್ಯಾಯ 9 88
ಪ್ರಸಂಗಿ 11:7–12:8 89
ಪ್ರಸಂಗಿ 12:9–14 90
ಪ್ರಸಂಗಿ ಪರೀಕ್ಷೆಯ ಪತ್ರಿಕೆ 91

ಪರಮಗೀತ

ಪರಮಗೀತ ಪುಸ್ತಕದ ಪರಿಚಯ 92
ಪರಮಗೀತವನ್ನು ಅರ್ಥವಿವರಣೆ ಮಾಡುವುದು 96
ಕೆನಾನ್ ಮತ್ತು ದೈವಶಾಸ್ತ್ರ 99
ಕೆಲವು ಸಾಹಿತ್ಯದ ಲಕ್ಷಣಗಳು 101
ಪ್ರೇಮಿಗಳು ಪರಸ್ಪರ ಹಾತೊರೆಯುವುದು, (1:2–2:17) 103
ಕುರಿಕಾಯುವವಳ ಕನಸುಗಳು, 3:1–6:3 105
ಪುನಃ ಪ್ರೇಮಿಗಳು ಪರಸ್ಪರ ಹಾತೊರೆಯುವುದು, 6:4–8:4 108
ಪ್ರೇಮಿಗಳು ಮದುವೆಯಲ್ಲಿ ಒಂದಾಗುವುದು, 8:5–14 110
ಪ್ರಶ್ನೆ ಪತ್ರಿಕೆ: ಪರಮಗೀತ 111

ಪ್ರಲಾಪಗಳು

ಪ್ರಲಾಪಗಳ ಪರಿಚಯ 112
ಪ್ರಲಾಪಗಳು ಅಧ್ಯಾಯ 1 116
ಪ್ರಲಾಪಗಳು ಅಧ್ಯಾಯ 2 118
ಪ್ರಲಾಪಗಳು ಅಧ್ಯಾಯ 3 120
ಪ್ರಲಾಪಗಳು ಅಧ್ಯಾಯ 4 122
ಪ್ರಲಾಪಗಳು ಅಧ್ಯಾಯ 5 124

ಜ್ಞಾನೋಕ್ತಿಗಳು – ಉತ್ತರಗಳು

ಪೀಠಿಕೆ ಪರಿಚಯ – ಉತ್ತರಗಳು 126
ಮುನ್ನುಡಿ: ಉದ್ದೇಶ ಮತ್ತು ವಿಷಯವಸ್ತು (1:1–7) – ಉತ್ತರಗಳು 129
ಜ್ಞಾನದ ಮೊದಲ ವೈರಿ (ಅಧ್ಯಾಯ 1, 2, 4) – ಉತ್ತರಗಳು 131
ಜ್ಞಾನದ ಎರಡನೇ ವೈರಿ (ಅಧ್ಯಾಯ 1, 5, 6, 7) – ಉತ್ತರಗಳು 135
ಜ್ಞಾನದ ಮೂರನೇ ಮತ್ತು ನಾಲ್ಕನೇ ವೈರಿಗಳು (ಅಧ್ಯಾಯ 1–7) – ಉತ್ತರಗಳು 138
ಜ್ಞಾನದ ರೂಪುರೇಖೆಗಳು (ಅಧ್ಯಾಯ 1–4) – ಉತ್ತರಗಳು 140
ಜ್ಞಾನದ ಪ್ರಯೋಜನಗಳು, ದೇವರು ಹಗೆ ಮಾಡುವ ಸಂಗತಿಗಳು (ಅಧ್ಯಾಯ 3, 4, 6) – ಉತ್ತರಗಳು 142
ಜ್ಞಾನವು ವರ್ಣಿಸಲ್ಪಟ್ಟದ್ದು (ಅಧ್ಯಾಯ 8) – ಉತ್ತರಗಳು 144
ಜ್ಞಾನ ಮತ್ತು ಅಜ್ಞಾನದ ನಡುವಿನ ಆಯ್ಕೆ (ಅಧ್ಯಾಯ 9) – ಉತ್ತರಗಳು 147
ಜ್ಞಾನದ ವಿಧಾನಗಳು – ಉತ್ತರಗಳು 148
ಸೊಲೊಮೋನನ ಜ್ಞಾನೋಕ್ತಿಗಳ ಮುಖ್ಯ ಸಂಗ್ರಹ (10:1–22:16) – ಉತ್ತರಗಳು 149
ಜ್ಞಾನಿಗಳ ನುಡಿಗಳು (22:17–24:34) – ಉತ್ತರಗಳು 150
ಹಿಜ್ಕೀಯನು ಸಂಗ್ರಹಿಸಿದ ಜ್ಞಾನೋಕ್ತಿಗಳು (25:1–29:27) – ಉತ್ತರಗಳು 152
ಆಗೂರ ಮತ್ತು ಅರಸನಾದ ಲೆಮೂವೇಲನ ಮಾತುಗಳು (30:1–31:9) – ಉತ್ತರಗಳು 153
ಹಿನ್ನುಡಿ: ಗುಣವತಿಯಾದ ಸತಿ (31:10–31) – ಉತ್ತರಗಳು 156

ಜ್ಞಾನದ ಮೌಲ್ಯಗಳು – ಉತ್ತರಗಳು

ಪ್ರೀತಿ ಮತ್ತು ನಂಬಿಗಸ್ತಿಕೆ – ಉತ್ತರಗಳು 158
ನ್ಯಾಯ ಮತ್ತು ನೀತಿ – ಉತ್ತರಗಳು 160
ಕುಟುಂಬ – ಉತ್ತರಗಳು 163
ಕೆಲಸ – ಉತ್ತರಗಳು 165
ಆರೋಗ್ಯ ಮತ್ತು ಭದ್ರತೆ – ಉತ್ತರಗಳು 166
ಭೌತಿಕ ಸೌಕರ್ಯ – ಉತ್ತರಗಳು 168
ನಾಲಿಗೆಯ ಬಳಕೆ – ಉತ್ತರಗಳು 170

ಪ್ರಸಂಗಿ – ಉತ್ತರಗಳು

ಪ್ರಸಂಗಿ ಓದಿರಿ ಮತ್ತು ಉತ್ತರಿಸಿ ಮೇಲಿನ ಟಿಪ್ಪಣಿಗಳು 172
ಪ್ರಸಂಗಿ ಅಧ್ಯಾಯ 1 – ಉತ್ತರಗಳು 174
ಪ್ರಸಂಗಿ ಅಧ್ಯಾಯ 2 – ಉತ್ತರಗಳು 175
ಪ್ರಸಂಗಿ ಅಧ್ಯಾಯ 3 – ಉತ್ತರಗಳು 177

ಪ್ರಸಂಗಿ 5:8–6:12 – ಉತ್ತರಗಳು 178
ಪ್ರಸಂಗಿ ಅಧ್ಯಾಯ 9 – ಉತ್ತರಗಳು 180
ಪ್ರಸಂಗಿ 11:7–12:8 – ಉತ್ತರಗಳು 182
ಪ್ರಸಂಗಿ 12:9–14 – ಉತ್ತರಗಳು 184
ಪ್ರಸಂಗಿ ಪ್ರಶ್ನೆಪತ್ರಿಕೆ – ಟಿಪ್ಪಣಿಗಳು 185

ಪರಮಗೀತ – ಉತ್ತರಗಳು

ಪ್ರೇಮಿಗಳು ಪರಸ್ಪರ ಹಾತೊರೆಯುವುದು, (1:2–2:17) –ಉತ್ತರಗಳು 186
ಕುರಿಕಾಯುವವಳ ಕನಸುಗಳು, 3:1–6:3 – ಉತ್ತರಗಳು 188
ಪ್ರೇಮಿಗಳು ಪುನಃ ಒಬ್ಬರಿಗೊಬ್ಬರು ಹಾತೊರೆಯುವುದು, 6:4–8:4 – ಉತ್ತರಗಳು 191
ಪ್ರೇಮಿಗಳು ಮದುವೆಯಲ್ಲಿ ಒಂದಾಗುವುದು, 8:5–14 – ಉತ್ತರಗಳು 193

ಪ್ರಲಾಪಗಳು – ಉತ್ತರಗಳು

ಪ್ರಲಾಪಗಳು ಅಧ್ಯಾಯ 1 – ಉತ್ತರಗಳು 195
ಪ್ರಲಾಪಗಳು ಅಧ್ಯಾಯ 2 – ಉತ್ತರಗಳು 198
ಪ್ರಲಾಪಗಳು ಅಧ್ಯಾಯ 3 – ಉತ್ತರಗಳು 201
ಪ್ರಲಾಪಗಳು ಅಧ್ಯಾಯ 4 – ಉತ್ತರಗಳು 204
ಪ್ರಲಾಪಗಳು ಅಧ್ಯಾಯ 5 – ಉತ್ತರಗಳು 206
ಕಾವ್ಯ ಮತ್ತು ವ್ಯಾಕರಣದಲ್ಲಿ ಬಳಸುವ ಪದಗಳು 208